# ತ್ರೈತಾಕಾರ ರಹಸ್ಯ

ಬೆರ್ಮುಡಾ ಟ್ರಯಾಂಗಿಲ್

ಕ್ರಾಪ್ ಸರ್ಕಿಲ್ ಏನು

ಫ್ಲಯಿಂಗ್ ಸಾಸರ್ಸ್ ಏನು

ಏಲಿಯನ್ಸ್ ಯಾರು

ಭೂಕಂಪಗಳು

ಸುನಾಮೀಗಳು

ಆಹಾರ ತಿನ್ನದ ಮನುಷ್ಯ.


ರಚಿತ : ತ್ರಿಮತ ಏಕೈಕ ಗುರುವು

ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, (80) ದಶ ಸಪ್ತಾಧಿಕ ಗ್ರಂಥಕರ್ತ


ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಿತ, ತ್ರೈತ ಸಿದ್ಧಾಂತ ಆದಿಕರ್ತ

ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು



www.thraithashakam.org





# ತ್ರೈತಾಕಾರ ರಹಸ್ಯ

## (ತ್ರೈತಾಕಾರ ಬೆರ್ಮುಡಾ)


ರಚಿತ

**ತ್ರಿಮತ ಏಕೈಕ ಗುರುವು**

ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, (72) ದಶ ಸಪ್ತಾಧಿಕ ಗ್ರಂಥಕರ್ತ

ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಿತ, ತ್ರೈತ ಸಿದ್ಧಾಂತ ಆದಿಕರ್ತ

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

---

ತೆಲುಗುನಿಂದ ಕನ್ನಡಕ್ಕೆ ಅನುವಾದಕರು

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**


---





ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ** (Regd. No : 168/2004)

(Estd. in 1978 - Regd.No.: 168/2004)

ತ ಶಕ : 38 ಪ್ರಥಮ ಮುದ್ರಣ : ಜುಲೈ–2016

ಗಳು : 1000 **ಬೆಲೆ. 90/–**

## ಇಂದೂ ಜ್ಞಾನವೇದಿಕೆ ಪ್ರಚರಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆ-ಉತ್ತರಗಳು.
03. ಧರ್ಮ-ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ-ಅಸತ್ಯವಾ?)
06. ದೆವ್ವಗಳಹಾಗೂ-ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಣಾ ಕಥೆ.
08. ಮಂತ್ರ-ಮಹಿಮೆ (ಸತ್ಯವಾ-ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ- ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ-ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ-ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧ ಬೋಧನೆ.
34. ಸುಪ್ರಸಿದ್ಧಬೋಧನೆ.
35. ಸಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು-963.
38. ಮತ-ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು-ಆಸ್ತಿಕರು.
44. ಹೇತುವಾದ-ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ರಚನೆಗಳು

## ಇಂದೂ ಜ್ಞಾನವೇದಿಕೆ ಪ್ರಚರಣೆಗಳು

54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.
63. ವಾರ್ತಕನು–ವರ್ತಕನು.
64. ದೇವರ ಚಿಹ್ನೆ.
65 ಯಾವುದು ನಿಜವಾದ ಜ್ಞಾನ?
66. ಪ್ರತಿಮೆ x ವಿಗ್ರಹ – ದೈವ x ದೆವ್ವ.
67. ಮರಣದ ನಂತರ ಜೀವನ.
68. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
69. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
70. ಮಧ್ಯಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
71. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು (ಎರಡನೇ ಭಾಗ)
73. ಇಂದೂ ಮತದಲ್ಲಿ ಸಿದ್ಧಾಂತಕರ್ತರು.
74. ಒಂದು ಮಾತು ಮೂರು ಗ್ರಂಥಗಳು.
75. ಲೂ ಎಂದರೇ ಏನು? (ತೆಲುಗು)
76. ಆದಿತ್ಯ.
77. ಗಿಡ ಮೊದಲಾ! ಬೀಜ ಮೊದಲಾ?
78. ಒಬ್ಬನೇ ಇಬ್ಬರು.



04
# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು–
    ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ದ್ವಿತೀಯುಡು.
39. ಎದಮೀದಮುದ್ರ–
    ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
    ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
    ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
    ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
    ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖಿರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
    ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ–
ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
ಮಹೇಂದ್ರಜಾಲ,
ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
(ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–
ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.



# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P
Cell : ಶ್ರೀನಿವಾಸ–09705864675, ಲಕ್ಷ್ಮಿಣಾರಾಯಣಾಚಾರಿ–09440556968.
ವೆಂಕಟೇಶ್–08096816963.

(ಇಂದೂ ಜ್ಞಾನ ವೇದಿಕೆ ಸದಸ್ಯರು)

**ಎ. ರಾಘವೇಂದ್ರ ಶ್ರೇಷ್ಠಿ**
ಶ್ರೀಕೃಷ್ಣಾ ಮೆಡಿಕಲ್ಸ್, ಪಟೇಲ್‌ನಗರ್, 3ನೇ ರಸ್ತೆ, ಹೊಸಪೇಟೆ, ಬಳ್ಳಾರಿ (ಜಿಲ್ಲೆ). K.A
Cell:9611133635, 9731816452, 09440645005

**ಬಸವರಾಜ ಅಂಗಡಿ**
(ಸಾ) (ಪೊ) ಪೋತ್ನಾಳ, (ತಾ) ಮಾನವಿ, ರಾಯಚೂರು (ಜಿ)
Cell : 9632418716

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್, ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ (ತಾ), ರಾಯಚೂರು (ಜಿ)
Cell : 9611183107, 9164886981

**ಶಿವರಾಜ**
(ಸಾ)(ಕಿ) ಕುಕನೂರು (ಪೊ) ಚಿಕ್ಕಸೂಗುರು (ತಾ), ರಾಯಚೂರು (ಜಿ)
Cell : 98443 69516

**ಲೀಲಾವತಿ**
ಮಾರುತಿ ಟೆನ್ಟ್ ರೋಡ್, ಚಾಮರಾಜ ಮೊಹಲ್ಲ, ಮೈಸೂರ್–547097
Cell : 9986369118

**R.S. ವೀರಾಚಾರಿ**
ಕತ್ತರಗುಪ್ಪೆ, ವಾರ್ಡ್.ನೆಂ. –38, ಬೆಂಗಳೂರು–560085
Cell : 9036982829

**T.V. ರಮಣ**
ಕತ್ತರಗುಪ್ಪೆ, ವಾರ್ಡ್.ನೆಂ. –38, ಬೆಂಗಳೂರು–560068
Cell : 08970772028, 07411459912, 07406039453

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ, ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್ ಫೀಲ್ಡ್ ರೋಡ್, ಬೆಂಗಳೂರು–560066
Cell : 9482516023

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲಿಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

## ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಮುನ್ನುಡಿ

**"ತ್ರೈತಾಕಾರ ರಹಸ್ಯ"** ಎಂಬ ಈ ಚಿಕ್ಕ ಗ್ರಂಥದಲ್ಲಿ ಮುಖ್ಯವಾಗಿ **"ಬೆರ್ಮುಡಾ ಟ್ರಯಾಂಗಿಲ್"** ಎಂಬ ಸಮುದ್ರ ಪ್ರಾಂತವನ್ನು ಕುರಿತು ಬರೆಯಲಾಗಿದೆ. ಬೆರ್ಮುಡಾ ದ್ವೀಪ ಪಕ್ಕದಲ್ಲಿರುವುದರಿಂದ, ಆ ಸಮುದ್ರ ಪ್ರಾಂತವನ್ನು "ಬೆರ್ಮುಡಾ ಟ್ರಯಾಂಗಿಲ್" ಎಂದು ಎಲ್ಲರೂ ಕರೆಯುವಾಗ, ಅಲ್ಲಿ ಏನೋ ದೊಡ್ಡ ದೆವ್ವ ಇದೆಯೆಂದು ಕೆಲವರು ಅದನ್ನು "ಡೆವಿಲ್ ಟ್ರಯಾಂಗಿಲ್" ಎಂದು ಸಹ ಕರೆದಿದ್ದಾರೆ. ಇದರ ಬಗ್ಗೆ ಸುಮಾರು 20 ವರ್ಷಗಳ ಕೆಳಗೆ ಒಂದು ವಾರ್ತಾಪತ್ರಿಕೆಯಲ್ಲಿ ಬರೆದ ಪ್ರತ್ಯೇಕ ಶೀರ್ಷಿಕೆಯಲ್ಲಿ ನೋಡಿದ್ದೇನೆ. ಆ ಶೀರ್ಷಿಕೆಯಲ್ಲಿ 1947ರಲ್ಲಿ ಆರು ಅಮೇರಿಕಾ ಯುದ್ಧ ವಿಮಾನಗಳು ಅಟ್ಲಾಂಟಿಕ್ ಸಮುದ್ರದಲ್ಲಿ ಸುಳಿವು ತಿಳಿಯದಂತೆ ಹೋಗಿವೆ ಎಂದು, ಅವುಗಳ ಸುಳಿವು ಇಲ್ಲಿಯವರೆಗೂ ತಿಳಿದಿಲ್ಲವೆಂದು ಬರೆದಿದ್ದಾರೆ. ಅಮೇರಿಕಾದ ಪಕ್ಕದಲ್ಲಿ ತ್ರಿಕೋನಾಕಾರವಿರುವ ಸಮುದ್ರ ಪ್ರಾಂತದಲ್ಲಿ ಪೂರ್ವದಲ್ಲಿಯೂ ಸಹ ಎಷ್ಟೋ ಮಾಯವಾಗಿಹೋಗಿವೆ ಎಂದು ಬರೆದಿದ್ದಾರೆ. ಅಲ್ಲಿಗೆ ನಮಗೆ ಅದು ಒಂದು ವಿಚಿತ್ರವಾಗಿ ತೋಚಿದೆ. ಆ ನಂತರ ಸ್ವಲ್ಪಕಾಲಕ್ಕೆ ಇನ್ನೊಂದು ಕಡೆ ಬೆರ್ಮುಡಾ ಟ್ರಯಾಂಗಿಲ್‌ನ್ನು ಕುರಿತು ಓದಿದ್ದೇನೆ. ಅದರಲ್ಲಿ ಅಲ್ಲಿ ನೌಕೆಗಳು, ವಿಮಾನಗಳು ಮಾಯವಾಗಿಹೋಗುವುದಕ್ಕೆ ಕಾರಣವೇನೆಂದು ಪರಿಶೋಧಿಸುವುದಕ್ಕೆ ಹೋದವರ ಸುಳಿವು ಸಹ ತಿಳಿಯದಂತೆ ಹೋಗಿದೆ ಎಂದು ಬರೆದಿದ್ದಾರೆ. ಆಗ ಅದನ್ನು ಕುರಿತು ಸ್ವಲ್ಪ ಯೋಚಿಸಿದೆನು. ಆಗ ನಮಗೆ ತೋಚಿರುವುದು ಏನೆಂದರೆ! ಸಮುದ್ರದ ಮೇಲೆ ಹೋಗುವ ನೌಕೆಗಳು ಹೋಗಿವೆ ಎಂದರೆ ಅದಕ್ಕೆ ಒಂದು ಅರ್ಥ ಇದೆ. ಆ ಪ್ರಾಂತದಲ್ಲಿ ಆಕಾಶದಲ್ಲಿ ಹೋಗುವ ವಿಮಾನಗಳು ಹೋಗಿವೆಯೆನ್ನುವುದರಲ್ಲಿ ಅರ್ಥವಿಲ್ಲ. ಅಲ್ಲಿ ಮೇಲೆ ಹೋಗುವ ವಿಮಾನಗಳು ಸಹ ಹೋಗಿರುವುದು ವಾಸ್ತವವೆ ಆದರೆ, ಮನುಷ್ಯನಿಗೆ ತಿಳಿಯದ ರಹಸ್ಯ ಇರುತ್ತದೆಂದು ಅಂದುಕೊಂಡಿದ್ದೇವೆ.

ಈ ವಿಷಯದಲ್ಲಿ ನನ್ನನ್ನು ಬಹಳ ಆಕರ್ಷಿಸಿರುವುದು, ಯೋಚಿಸುವುದಕ್ಕೆ ಕಾರಣವಾದುದು ಒಂದು ಇದೆ. ಅದೇ ಟ್ರಯಾಂಗಿಲ್ ಅವರು ಇಂಗ್ಲೀಷ್ ಭಾಷೆಯಲ್ಲಿ ಹೇಳುವ ಹೆಸರನ್ನು ಕನ್ನಡದಲ್ಲಿ "ಮೂರು ಕೋನಗಳೆಂದು" ಹೇಳಬಹುದು. ಆ ಹೆಸರು ನನ್ನನ್ನು ಆಕರ್ಷಿಸುವುದಕ್ಕೆ ಕಾರಣ ಏನೆಂದರೆ! ಇಡೀ ಈ ವಿಶ್ವವೆಲ್ಲವೂ ಮೂರು ಸಂಖ್ಯೆಗಳ ಮೇಲೆ ಆಧಾರಪಟ್ಟಿದೆ. ಪ್ರಪಂಚದಲ್ಲಿ ದೈವಜ್ಞಾನವೆಲ್ಲವೂ ಮೂರು ಸಂಖ್ಯೆಗಳ ಮೇಲೆ ಆಧಾರಪಟ್ಟಿದೆ. ಇದೇನು ಹೊಸಮಾತು! ಇದಕ್ಕೆ ಮೊದಲು ಯಾರು ಮೂರನ್ನು ಕುರಿತು ಹೇಳಲಿಲ್ಲವೆ! ಎಂದು ನೀವು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೆ! ನಾವು ಆಧ್ಯಾತ್ಮಿಕ ವಿದ್ಯೆಯಲ್ಲಿ ಮೂರನ್ನು ಆಧಾರ ಮಾಡಿಕೊಂಡು ತ್ರೈತಸಿದ್ಧಾಂತವನ್ನು ಪ್ರತಿಪಾದಿಸಿದ್ದೇವೆ. ನಮಗಿಂತ ಮೊದಲು ಆದಿಶಂಕರಾಚಾರ್ಯರು ಅದ್ವೈತವನ್ನು ಪ್ರತಿಪಾದಿಸಿದರೂ, ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವನ್ನು ಹೇಳಿದರೂ, ಮಧ್ವಾಚಾರ್ಯರು ದ್ವೈತವನ್ನು ಹೇಳಿದರೂ, ಅವುಗಳೆಲ್ಲವನ್ನು ಅಲ್ಲವೆಂದು ನಾವು **ತ್ರೈತವನ್ನು** ಹೇಳಬೇಕಾಗಿ ಬಂದಿದೆ. ಗತದಲ್ಲಿ ದ್ವೈತವನ್ನು ಹೇಳಿದರೂ, ಅದ್ವೈತವನ್ನು ಹೇಳಿದರೂ ಅವುಗಳನ್ನು ಹೇಳಿದವರ ಸಿದ್ಧಾಂತಗಳಿಗೆ ಬುನಾದಿ ಇಲ್ಲ. ಆದ್ದರಿಂದ ಆಧ್ಯಾತ್ಮಿಕ ವಿದ್ಯೆಯಲ್ಲಿ ಅವು ಸರಿಯಾದವು ಅಲ್ಲವೆಂದು, ಬುನಾದಿ ಇಲ್ಲದ ಭವನಗಳೆಂದು, ಎಂದಾದರು ತಪ್ಪದೇ ಬಿದ್ದುಹೋಗುವುದೆಂದು ತಿಳಿದು ಅವುಗಳನ್ನು ಅಲ್ಲವೆಂದು, ದೇವರೆ ಸ್ವತಃವಾಗಿ ಹೇಳಿದ ಭಗವದ್ಗೀತೆಯಲ್ಲಿನ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿರುವ 16, 17 ಶ್ಲೋಕಗಳನ್ನು ಬುನಾದಿಯಾಗಿ ಮಾಡಿಕೊಂಡು ತ್ರೈತವನ್ನು ತಿಳಿಸಿದ್ದೇವೆ. ನಾವು ತಿಳಿಸಿದ ತ್ರೈತಕ್ಕೆ, ಸಮುದ್ರದಲ್ಲಿನ ತ್ರೈತಕೋನಗಳು ಹತ್ತಿರವಾಗಿವೆ. ಅದರಲ್ಲಿಯೂ ಟ್ರಯಾಂಗಿಲ್‌ನ ವಿಧಾನ ಯಾರಿಗೂ ಅರ್ಥವಾಗಲಿಲ್ಲ ಎಂದರೆ, ಅದು ಏನೋ ನಾವು ಹೇಳಿದ ತ್ರೈತದಿಂದ ಮುಡಿಹಾಕಲ್ಪಟ್ಟಿದೆ ಎಂದು ತಿಳಿಯುತ್ತಿದೆ. ನಾವು ಹೇಳುವ ತ್ರೈತವು ಭಗವದ್ಗೀತೆಯಲ್ಲಿದ್ದರೂ ಅರ್ಥವಾಗದ ಹಾಗೆ, ಪರಿಶೋಧಕರು ಹೇಳುತ್ತಿರುವ ಟ್ರಯಾಂಗಿಲ್

ಸಮುದ್ರದಲ್ಲಿ ಇದ್ದರೂ ಅರ್ಥವಾಗಲಿಲ್ಲ. ಸಮುದ್ರದಲ್ಲಿ ನಿಷೇಧ ಪ್ರಾಂತವಾಗಿದ್ದರು ತ್ರೈತಾಕಾರದ ರಹಸ್ಯ, ತ್ರೈತದ ಮೂಲಕವೇ ತಿಳಿಯುತ್ತದೆಂದು ಕೊಂಡಿದ್ದೇವೆ.

ಸಮುದ್ರದ ಮೇಲೆ ಇರುವ ತ್ರೈತಾಕಾರವನ್ನು ತಿಳಿಯುವುದಕ್ಕೆ ಮೊದಲು ತ್ರೈತ ಎಂದರೆ ಏನೋ ಸ್ವಲ್ಪ ತಿಳಿದವರಿಗೇ ಅರ್ಥವಾಗುತ್ತದೆ. ಆದ್ದರಿಂದ ಇಲ್ಲಿಯವರೆಗೂ ಯಾರಿಗೂ ತಿಳಿಯದ ಮಿಷ್ಟರಿಯಾಗಿ ಉಳಿದು ಹೋಗಿದ್ದ ಬೆರ್ಮುಡಾ ಟ್ರಯಾಂಗಿಲ್‌ನ ರಹಸ್ಯವನ್ನು ನಾವು ಸುಲಭವಾಗಿ ತಿಳಿದುಕೊಳ್ಳ ಬಹುದು ಎಂದುಕೊಂಡಿದ್ದೇವೆ. ನಾನು ಅಂದುಕೊಂಡಂತೆ ತ್ರೈತಸಿದ್ಧಾಂತ ಮಾರ್ಗದಲ್ಲಿಯೇ ನಮ್ಮ ದೃಷ್ಟಿಯನ್ನು ಸಾಗಿಸುವುದರಿಂದ ನಮಗೆ ಟ್ರಯಾಂಗಿಲ್ ವಿಷಯ ಸುಲಭವಾಗಿ ಅವಗಾಹನೆಗೆ ಬಂದಿದೆ. ಅಲ್ಲಿ ಏನಿದೆ, ಏನು ನಡೆಯುತ್ತಿದೆ, ಏಕೆ ನಡೆಯುತ್ತಿದೆ ಸುಲಭವಾಗಿ ತಿಳಿದುಕೊಂಡಿದ್ದೇವೆ. ನಮಗೆ ತಿಳಿದ ವಿಷಯವೆಲ್ಲವನ್ನು ಇತರರೂ ಸಹ ಅರ್ಥ ಮಾಡಿಕೊಳ್ಳುವುದಕ್ಕಾಗಿ, ಒಂದು ಗ್ರಂಥರೂಪದಲ್ಲಿ ಬರೆಯಬೇಕೆಂದುಕೊಂಡಿದ್ದೇವೆ. ಆ ಪ್ರಯತ್ನವೇ **"ತ್ರೈತಾಕಾರ ರಹಸ್ಯ"** ಎನ್ನುವ ಈ ಗ್ರಂಥ. ಇದರಲ್ಲಿ ನಾವು ಹೇಳಿದ ವಿಷಯಗಳೆಲ್ಲವೂ ಆರು ಶಾಸ್ತ್ರಗಳಲ್ಲಿ ಕೊನೆಯದು, ದೊಡ್ಡದಾದ ಬ್ರಹ್ಮವಿದ್ಯಾಶಾಸ್ತ್ರದ ಮೂಲಕ ಶೋಧಿಸಲ್ಪಟ್ಟಿವೆ. ಆಧ್ಯಾತ್ಮಿಕ ವಿದ್ಯೆಯಲ್ಲಿ ಒಂದು ಸಿದ್ಧಾಂತವನ್ನು ಆಧಾರ ಮಾಡಿಕೊಂಡು ಹೇಳಿದ ವಿಷಯಗಳು. ಆದ್ದರಿಂದ ಇದರಲ್ಲಿನ ವಿಷಯಗಳಲ್ಲೆವೂ ಶಾಸ್ತ್ರಬದ್ಧವಾದವುಗಳೆಂದೇ ತಿಳಿಯಬೇಕು. ಯಾವ ಒಂದು ವಿಷಯವೂ ಸಹ ಅಸತ್ಯವಾದುದಾಗಲಿ, ಶಾಸ್ತ್ರೀಯತೆ ಇಲ್ಲದಿರುವುದಾಗಲಿ ಅಲ್ಲವೆ ಅಲ್ಲ. **ಈ ಗ್ರಂಥದಿಂದ ಬೆರ್ಮುಡಾ ಟ್ರಯಾಂಗಿಲ್ ವಿಷಯ ತಿಳಿಯುವುದಲ್ಲದೆ ಇದನ್ನು ಓದಿದ ಪ್ರತಿಯೊಬ್ಬರಿಗೂ ತಮ್ಮಲ್ಲಿನ ಆತ್ಮವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಹುಟ್ಟುತ್ತದೆ. ಆದ್ದರಿಂದ ಅವರು ಸಹ ಆತ್ಮಜ್ಞಾನಿಗಳಾಗಿ ಬದಲಾಗುವುದಕ್ಕೆ ಅವಕಾಶ ಇದೆ.**

ಕೆಲವರಿಗೆ ಈ ಗ್ರಂಥದ ಮೇಲೆ ಕೆಲವು ಅನುಮಾನಗಳು ಬರಬಹುದು. ಅವೇನೆಂದರೆ! ಅಮೇರಿಕಾ ದೇಶದಲ್ಲಿನ ಶಾಸ್ತ್ರಜ್ಞರಿಗೆ ತಿಳಿಯದ ವಿಷಯಗಳನ್ನು ಈತನು ಹೇಳಬಲ್ಲನಾ? ಈತನು ಇಲ್ಲಿ ಕುಳಿತುಕೊಂಡು ಹೇಳಿದ ಮಾತುಗಳು ಸತ್ಯವಾಗುತ್ತವಾ? ಎಂದು ಅಂದುಕೊಳ್ಳಬಹುದು. ಹಾಗೆ ಅನುಮಾನ ಬರುವುದರಲ್ಲಿ ತಪ್ಪಿಲ್ಲ. ಆದರೆ ನಾವು ಹೇಳಿದ ಮಾತುಗಳನ್ನು ಕುರುಡರಂತೆ ತೆಗೆದುಹಾಕದೆ, ಆಲೋಚಿಸಿ ಸತ್ಯವಾ ಅಸತ್ಯವಾ ಎಂದು ನೀವೇ ನಿರ್ಣಯಿಸಿಕೊಳ್ಳಬಹುದು. ಈ ಗ್ರಂಥದಲ್ಲಿ ಕೇವಲ ಟ್ರಯಾಂಗಿಲ್ ಕುರಿತೆ ಅಲ್ಲದೆ, ಅದರೊಂದಿಗೆ ಅನುಸಂಧಾನವಾಗಿರುವ ಭೂಕಂಪಗಳು, ಸುನಾಮಿಗಳು, ಅಗ್ನಿಪರ್ವತಗಳು ಮೊದಲಾದ ಉಪದ್ರವಗಳೆಲ್ಲವನ್ನು ಕುರಿತು ಬರೆಯುವುದು ನಡೆದಿದೆ. ಸಮುದ್ರದ ಮೇಲೆ ಟ್ರಯಾಂಗಿಲ್ ಹತ್ತಿರ ಕಾಣೆಯಾಗಿರುವ ನೌಕೆಗಳು, ವಿಮಾನಗಳ ಹಿಂದೆ ಮೇಘಗಳ ಹಸ್ತವಿದೆ ಎಂದು ಹೇಳಿದ್ದೇವೆ. ಮೇಘಗಳ ಶಕ್ತಿ ಅಪಾರವಾದುದೆಂದು ಸಹ ಹೇಳಿದ್ದೇವೆ. 1940ನೇ ವರ್ಷ, ಒಂದು ಚಿಕ್ಕ ವಿಮಾನವನ್ನು ಮೇಘಗಳು ಟ್ರಯಾಂಗಿಲ್ ಪ್ರದೇಶದಲ್ಲಿ ಸಿಲುಕಿಸಿಕೊಂಡು, ತಾವೇ ಈ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವುದನ್ನು ಪ್ರಪಂಚಕ್ಕೆ ತಿಳಿಯಲು ಆ ವಿಮಾನವನ್ನು ಬಿಟ್ಟುಹಾಕಿವೆ, ಆ ವಿಮಾನವನ್ನು ನಡೆಸಿದ ಪೈಲೆಟ್ ಸ್ವತಃವಾಗಿ ಅಲ್ಲಿ ನಡೆದ ತತಂಗವನ್ನು ಕುರಿತು ಹೇಳಿದ್ದಾನೆ. ಗಂಟೆಗೆ 104 ಕಿಲೋಮೀಟರ್‌ಗಳ ಸ್ಪೀಡಿನಿಂದ ಹೋಗುವ ಹೆಲಿಕ್ಯಾಪ್ಟರ್‌ನಂತಹ ಚಿಕ್ಕ ವಿಮಾನ ಟ್ರಯಾಂಗಲ್ ಪ್ರಾಂತದಲ್ಲಿ ಮೇಘಗಳ ಮಧ್ಯೆ ಸಿಲುಕಿಕೊಂಡು ಹೊರಬಿದ್ದಾಗ 180 ಕಿಲೋಮೀಟರ್‌ಗಳ ದೂರ ತನ್ನ ವಿಮಾನ, ಕೇವಲ ಮೂರು ನಿಮಿಷಗಳಲ್ಲಿ ಹೋಗಿದೆ ಎಂದು, ಆ ವೇಗವನ್ನು ಗಂಟೆಗೆ ನೋಡಿದರೆ 3600 ಕಿಲೋಮೀಟರ್‌ಗಳು ಆಗುತ್ತದೆಂದು, ಅಷ್ಟುವೇಗವಾಗಿ ತನ್ನ ವಿಮಾನ ಹೋಗುವುದಕ್ಕೆ ಅವಕಾಶವೇ ಇಲ್ಲವೆಂದು, ಅದು ಹೇಗೆ ಹೋಗಿದೆಯೋ ತಿಳಿಯದ ವಿಷಯವೆಂದು ಹೇಳುವುದಲ್ಲದೆ, ಆ ಸಮಯದಲ್ಲಿ ದಿಕ್ಸೂಚಿ ಕೆಲಸಮಾಡಲಿಲ್ಲವೆಂದು, ವಿಮಾನದ

ಇಂಜನ್ ಸಹ ನಿಂತುಹೋಗಿದೆ ಎಂದು, ಸ್ವಲ್ಪವೂ ಸಹ ಪೆಟ್ರೋಲ್ ಖರ್ಚು ಆಗಲಿಲ್ಲವೆಂದು ಹೇಳಿರುವುದು ನಡೆದಿದೆ. ಆತನು ಹೇಳಿರುವುದನ್ನು ನೋಡಿದರೆ ತಮ್ಮ ಇರುವಿಕೆಯನ್ನು, ಶಕ್ತಿಯನ್ನು ತಿಳಿಸುವುದಕ್ಕೇ ಮೇಘಗಳು ಆ ವಿಮಾನವನ್ನು ಬಿಟ್ಟಿವೆ ಎಂದು ಅರ್ಥ ವಾಗುವುದಲ್ಲದೆ, ತಮ್ಮ ಕೈಯಲ್ಲಿ ಸಿಕ್ಕಿರುವುದೇನಾದರೂ ಕೆಲವು ಕ್ಷಣಗಳಲ್ಲಿಯೇ ಎಷ್ಟು ದೂರವಾದರು ಮೇಘಗಳು ತೆಗೆದುಕೊಂಡು ಹೋಗಬಲ್ಲವೆಂದು ನಿರೂಪಣೆಯಾಗಿ ತಿಳಿಯುತ್ತಿದೆ. ಈ ವಿಧವಾಗಿ ತ್ರೈತಾಕಾರ ದಲ್ಲಿರುವ ಶಕ್ತಿ ಏನೊ ಯಾರಿಗೂ ತಿಳಿಯದಿದ್ದರು, ಅಲ್ಲಿ ನಡೆದ ಕೆಲಸಗಳಿಗೆ ಭೌತಿಕ ಆಧಾರಗಳು ಸಿಗದಿದ್ದರೂ, ನಾವು ಅಭೌತಿಕವಾದ ಆಧ್ಯಾತ್ಮಿಕ ವಿದ್ಯೆಯಿಂದ, ಆತ್ಮಜ್ಞಾನದಿಂದ ಈ ಗ್ರಂಥದಲ್ಲಿ ಸ್ವಲ್ಪಕ್ಕೆ ಸ್ವಲ್ಪವಾದರು ವಿವರವನ್ನು ಹೇಳಿದ್ದೇವೆ. ಈ ಗ್ರಂಥದಿಂದ ಈಗ ಎಷ್ಟೋ ರಹಸ್ಯಗಳು ತಿಳಿಯುತ್ತಿವೆ ಎಂದು, ಮುಂಬರುವ ಕಾಲದಲ್ಲಿ ಆತ್ಮವನ್ನು ಕುರಿತು ತಿಳಿದುಕೊಳ್ಳುವುದಕ್ಕೆ ಅವಕಾಶ ಉಂಟಾಗುತ್ತದೆಂದು ಅಂದುಕೊಳ್ಳುತ್ತಿದ್ದೇವೆ. ಈ ಗ್ರಂಥವನ್ನು ನಿಮಗೆ ಪರಿಚಯ ಮಾಡುವುದಕ್ಕೆ ಮೊದಲ ಮಾತನ್ನು ಬರೆಯುತ್ತಾ, ನೀವೂ ಸಹ ಆಧ್ಯಾತ್ಮಿಕರಂಗದಲ್ಲಿ ಮುಂದಕ್ಕೆ ಹೋಗಬೇಕೆಂದು, ಅದಕ್ಕೆ ಈ ಗ್ರಂಥವು ನಿಮಗೆ ಎಲ್ಲಾ ರೀತಿಯಲ್ಲೂ ಉಪಯೋಗಪಡುತ್ತದೆಂದು ಅಂದುಕೊಳ್ಳುತ್ತೇವೆ.

ಇಂತಿ,

ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ತ್ರೈತಾಕಾರ ರಹಸ್ಯ-ತ್ರೈತಾಕಾರ ಬೆರ್ಮುಡಾ

'ಇಂದೂ' ಎಂದರೆ ಚಂದ್ರನೆಂದು ಅರ್ಥ. ಚಂದ್ರನು ಜ್ಞಾನಕ್ಕೆ ಅಧಿಪತಿ ಮತ್ತು ಜ್ಞಾನಕ್ಕೆ ಚಿಹ್ನೆ. ಆದ್ದರಿಂದ ಪಾರ್ವತಿ ಪತಿಯಾದ ಶಿವನು ಸಹ ತನ್ನ ಶಿರಸ್ಸಿನಲ್ಲಿ ಅರ್ಧಚಂದ್ರಾಕಾರವನ್ನು ಧರಿಸಿ, ನನ್ನ ತಲೆಯಲ್ಲಿ ಜ್ಞಾನವಿದೆಯೆಂದು ಅಥವಾ ನಾನು ಜ್ಞಾನಿಯೆಂದು ಹೇಳುವುದಕ್ಕೆ ಗುರ್ತಾಗಿ ಚಂದ್ರಾಕಾರವನ್ನು ತೋರಿಸಿದ್ದಾನೆ. ಇಂದೂ ಎಂದರೆ ಜ್ಞಾನ ಎಂಬ ಅರ್ಥವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಭಗವದ್ಗೀತೆ ಅಕ್ಷರ ಪರಬ್ರಹ್ಮ ಯೋಗದಲ್ಲಿ 25ನೇ ಶ್ಲೋಕದಲ್ಲಿ "ಚಾಂದ್ರಮಾಸಂ ಜ್ಯೋತಿ" ಎಂದು ದೈವಜ್ಞಾನವನ್ನು ಉದ್ದೇಶಿಸಿ ಕೃಷ್ಣನು ಹೇಳಿದ್ದಾನೆ. ಆದ್ದರಿಂದ 'ಇಂದೂ' ಎಂಬ ಪದಕ್ಕೆ ಆಧ್ಯಾತ್ಮಿಕರಂಗದಲ್ಲಿ ಜ್ಞಾನ ಎನ್ನುವ ಅರ್ಥವನ್ನು ಹೇಳಿಕೊಳ್ಳುತ್ತಿದ್ದೇವೆ. ಜ್ಞಾನ ಭೂಮಿಯ ಮೇಲೆ ಎರಡು ವಿಧಗಳಾಗಿದೆ. ಒಂದು ಪರಮಾತ್ಮ ಜ್ಞಾನ, ಎರಡನೆಯದು ಪ್ರಪಂಚ ಜ್ಞಾನ. ಯಾವ ವಿಧವಾದ ಜ್ಞಾನಕ್ಕಾಗಲಿ ವಿಜ್ಞಾನ ಎನ್ನುವುದು ಒಂದು ಇದೆ. ಜ್ಞಾನವು ಬುದ್ಧಿಗೆ ತಿಳಿಯುತ್ತದೆ, ವಿಜ್ಞಾನವು ಇಂದ್ರಿಯಗಳಿಗೆ ತಿಳಿಯುತ್ತದೆ. ವಿಜ್ಞಾನವನ್ನು ಇಂದ್ರಿಯಗಳ ಮೂಲಕ ತಿಳಿಯಬಹುದು. ಎಂದರೆ ಕಣ್ಣಿನ ಮೂಲಕ ನೋಡಬಹುದು, ಕಿವಿಯ ಮೂಲಕ ಕೇಳಬಹುದು. ಆದರೆ ವಿಜ್ಞಾನಕ್ಕೆ ಸಂಬಂಧಿಸಿದ ಜ್ಞಾನವನ್ನು ಬುದ್ದಿ ಮೂಲಕ ಮಾತ್ರವೇ ಗ್ರಹಿಸಬಹುದು. ಉದಾಹರಣೆಗೆ ಒಂದು ಅಡಿಗೆಯನ್ನು ಮಾಡುವ ವಿಧಾನವನ್ನು, ಒಬ್ಬರ ಮೂಲಕ ತಿಳಿದುಕೊಳ್ಳುವುದು ಜ್ಞಾನ ಎನ್ನುತ್ತೇವೆ. ಅಡಿಗೆಯ ಜ್ಞಾನವನ್ನು ಬುದ್ಧಿ ಗ್ರಹಿಸಿಕೊಂಡು, ಮತ್ತೆ ಬುದ್ಧಿ ಹೇಳಿದಂತೆ ಅಡಿಗೆಯನ್ನು ಮಾಡುವುದು ವಿಜ್ಞಾನ ಎನ್ನುತ್ತೇವೆ. ಇದರಿಂದ ತಿಳಿದ ಜ್ಞಾನ ಆಚರಣೆಗೆ ಬಂದಾಗ ವಿಜ್ಞಾನ ಆಗುತ್ತದೆ. ವಿಜ್ಞಾನವನ್ನು ಯಾರಾದರೂ ಅನುಭವಿಸಬಹುದು, ಒಬ್ಬ ಅಡಿಗೆಯವನು ತನ್ನ ಜ್ಞಾನದಿಂದ ಮಾಡಿದ ಅಡಿಗೆಯನ್ನು ನೂರು ಜನರಾದರೂ ತಿಂದು ಅನುಭವಿಸಬಹುದು. ತಿನ್ನುವವರಿಗೆಲ್ಲಾ ಅಡಿಗೆಯ ಜ್ಞಾನ ತಿಳಿಯದಿದ್ದರೂ, ಒಬ್ಬನ ಜ್ಞಾನದಿಂದ ಎಷ್ಟು ಜನರಾದರೂ ಅನುಭವಿಸಬಹುದು. ಉದಾಹರಣೆಗೆ ಹೊರಗೆ ಎಲ್ಲರಿಗೂ ಕಾಣಿಸುವ ಸೆಲ್‌ಪೋನ್ ತೆಗೆದುಕೊಳ್ಳೋಣ.

ಅದನ್ನು ಮೊದಲು ಕಂಡುಹಿಡಿದಿದ್ದು ಒಬ್ಬನೇ! ಅದನ್ನುಕಂಡುಹಿಡಿದ ನಂತರ ಆ ಸೆಲ್‌ಪೋನ್ ಜ್ಞಾನದಿಂದ ಸೆಲ್‌ಪೋನ್ ತಯಾರು ಮಾಡಲಾಗಿದೆ. ಕಂಡು ಹಿಡಿದವನಿಂದ ಸೆಲ್‌ಪೋನ್ ಜ್ಞಾನವನ್ನು ತಿಳಿದುಕೊಂಡು ಮತ್ತೆ ಕೆಲವರು ಸಹ, ಒಬ್ಬೊಬ್ಬರು ಒಂದೊಂದು ಕಂಪನಿ ಹೆಸರಿನಿಂದ ಸೆಲ್‌ಪೋನ್‌ಗಳನ್ನು ತಯಾರುಮಾಡಿದ್ದಾರೆ. ಮೊದಲು ಕಂಡುಹಿಡಿದವನು ಒಬ್ಬನೇ, ನಂತರ ತಿಳಿದುಕೊಂಡವರು ಹತ್ತುಜನರು (ಹತ್ತು ಕಂಪನಿಗಳು). ಸೆಲ್‌ಪೋನ್ ಬಳಸುತ್ತಾ ಅನುಭವಿಸುವವರು ಕೆಲವು ಕೋಟಿಜನ. ಪೋನ್ ಬಳಸುವವರಿಗೆಲ್ಲರಿಗೂ ಅದರ ಜ್ಞಾನ ತಿಳಿದಿಲ್ಲವೆಂದು ಜ್ಞಾಪಕ ಇಟ್ಟುಕೊಳ್ಳಬೇಕು. ಮೊದಲು ಕಂಡು ಹಿಡಿದವನು ಹೊರಗೆ ಹೇಳಿದಾಗ ಅದು ಜ್ಞಾನ ಆಗುತ್ತದೆ. ಜ್ಞಾನದ ಪ್ರಕಾರ ಮಾಡಿದಾಗ ತಯಾರಾಗಿರುವುದು, ಅನುಭವಕ್ಕೆ ಬರುವುದು ವಿಜ್ಞಾನವಾಗುತ್ತದೆ. ಈ ಕಾಲದಲ್ಲಿ ಕೆಲವರ ಜ್ಞಾನದಿಂದ ದೇಶವೆಲ್ಲವೂ ವಿಜ್ಞಾನ ಮಯವಾಗಿ ಹೋಗಿದೆ, ಎಷ್ಟೋ ಸುಖಗಳನ್ನು ವಿಜ್ಞಾನದಿಂದ ಎಷ್ಟೋಜನ ಅನುಭವಿ ಸುತ್ತಿದ್ದಾರೆನ್ನುವುದು ಸತ್ಯ.

ಇದೆಲ್ಲವನ್ನೂ ಗಮನಿಸಿದರೆ ಜ್ಞಾನ ಬೇರೆ, ವಿಜ್ಞಾನ ಬೇರೆ ಎಂದು ತಿಳಿಯುತ್ತಿದೆ. ವಿಜ್ಞಾನವನ್ನು ನವೀನವಾಗಿ ಇಂಗ್ಲೀಷ್ ಭಾಷೆಯಲ್ಲಿ ಸೈನ್ಸ್ ಅನ್ನುತ್ತಿದ್ದೇವೆ. ವಿಜ್ಞಾನಕ್ಕೆ ಆಧಾರವಾದ ಜ್ಞಾನವನ್ನು ಇಂಗ್ಲೀಷ್ ಭಾಷೆಯಲ್ಲಿಯೇ ಸೂಪರ್ ಸೈನ್ಸ್ ಎಂದಾಗಲಿ, ಸೂಪರ್‌ನಾಲೆಡ್ಜ್ ಎಂದಾಗಲಿ ಅನ್ನಬಹುದು. ಜ್ಞಾನ ಎರಡು ವಿಧಗಳೆಂದು ಒಂದು ಪ್ರಪಂಚ (ಪ್ರಕೃತಿ) ಜ್ಞಾನವೆಂದು, ಎರಡನೆ ಯದು ಪರಮಾತ್ಮ (ದೇವರ) ಜ್ಞಾನವೆಂದು ಹೇಳಿಕೊಂಡಿದ್ದೇವೆ. ಪ್ರಪಂಚ ಜ್ಞಾನವನ್ನು ಸೂಪರ್ ನಾಲೆಡ್ಜ್ ಎಂದು, ಪರಮಾತ್ಮ ಜ್ಞಾನವನ್ನು ಸೂಪರ್ ಸೈನ್ಸ್ ಎಂದು ಬಿಡಿಬಿಡಿಯಾಗಿ ಹೇಳಿಕೊಳ್ಳಬಹುದು. ದೇವರ ಜ್ಞಾನವನ್ನು ಕೆಲವರು ಸೂಪರ್ ಸೈನ್ಸ್ ಎಂದು ಹೇಳಿದ್ದಾರೆ. ನಾವು ಸಹ ಹಾಗೆಯೇ ಹೇಳಿ ಕೊಳ್ಳೋಣ. ಈಗ ಪ್ರಪಂಚ ಜ್ಞಾನವನ್ನು ಕುರಿತು ವಿವರವಾಗಿ ಹೇಳಿಕೊಳ್ಳುವುದಕ್ಕೆ ಮೊದಲು ಒಂದು ವಿಷಯವನ್ನು ಹೇಳಿಕೊಳ್ಳೋಣ. 'ಕರೂರು' ಎನ್ನುವ

ಒಂದು ಪ್ರಾಂತದಲ್ಲಿ ವಜ್ರಗಳು ದೊರೆಯುತ್ತಿರುತ್ತವೆ. ಆದ್ದರಿಂದ ಆ ಪ್ರಾಂತದಲ್ಲಿರುವ ಕರೂರನ್ನು "ವಜ್ರಕರೂರು" ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ವಜ್ರಕರೂರು ಪ್ರಾಂತದಲ್ಲಿ ಈಗಲೂ ಎಷ್ಟೋಜನರಿಗೆ, ಎಷ್ಟೋ ವಜ್ರಗಳು ದೊರೆತಿವೆ. ಅವುಗಳಲ್ಲಿ ಕೆಲವು ಚಿಕ್ಕವು, ಕೆಲವು ದೊಡ್ಡವು, ಕೆಲವು ಮಧ್ಯ ವಿಧದವುಗಳು ಎಷ್ಟೋ ವಿಧಗಳು ದೊರೆತಿವೆ. ಅವುಗಳ ಆಕಾರವನ್ನು, ಪರಿಮಾಣವನ್ನು ಅನುಸರಿಸಿ ಸಾವಿರ ರೂಪಾಯಿಗಳಿಂದ ಕೋಟಿ ರೂಪಾಯಿ ಗಳವರೆಗು ಬೆಲೆಬಾಳುವ ವಜ್ರಗಳು ಇವೆ. ಆ ವಜ್ರಗಳಲ್ಲೆವೂ ಒಂದು ಬಾರಿ ಸಿಗಲಿಲ್ಲ. ಇವೆಲ್ಲವೂ ಸಿಗುವುದಕ್ಕೆ ಸುಮಾರು ನೂರಾರು ವರ್ಷಗಳು ಆಗಿದೆ ಎಂದುಕೊಳ್ಳೋಣ. ಇದು ಇಲ್ಲಿಗೆ ಮುಗಿಯದೆ ಮುಂಬರುವ ಕಾಲದಲ್ಲಿಯೂ ಸಹ ವಜ್ರಗಳು ಸಿಗಬಹುದು. ನೂರಾರುವರ್ಷಗಳ ಕಾಲದಲ್ಲಿ, ಎಷ್ಟೋ ಜನರಿಗೆ ಎಷ್ಟೋ ವಜ್ರಗಳು, ಅನೇಕ ಪರಿಮಾಣಗಳಲ್ಲಿ ದೊರೆತಿವೆ ಎಂದರೆ, ಆ ವಜ್ರಗಳೆಲ್ಲವೂ ಮೊದಲಿನಿಂದ ಆ ಪ್ರದೇಶದಲ್ಲಿ ಇವೆಯೆಂದು ಯಾರಾದರೂ ಒಪ್ಪಿಕೊಳ್ಳುವುದು ತಪ್ಪದು. ಮೊದಲಿನಿಂದ ಇರುವ ವಜ್ರಗಳು, ಆಗೊಂದು ಆಗೊಂದು ಬೇರೆ ಬೇರೆ ಸೈಜುಗಳಲ್ಲಿ, ಬೇರೆಬೇರೆ ವ್ಯಕ್ತಿಗಳಿಗೆ ಸಿಕ್ಕಿವೆ. ಪ್ರಪಂಚ ಪ್ರಸಿದ್ಧಿಯಾದ 'ಕೋಹಿನೂರ್' ಎನ್ನುವ ವಜ್ರವೂ ಸಹ ಕರ್ನೂಲ್ ಜಿಲ್ಲೆ, ನಲ್ಲಮಲ ಅರಣ್ಯ ಪ್ರಾಂತದಲ್ಲಿ ಸಿಕ್ಕಿವೆ ಎಂದು ತಿಳಿದಿದೆ. ಕೋಹಿನೂರ್ ವಜ್ರಕ್ಕೆ ಮೊದಲು ಹೆಸರು ಇಲ್ಲ. ಆ ವಜ್ರವು 'ಕೋಹಿನೂರ್' ಎನ್ನುವ ಮುಸ್ಲಿಮ್ ವ್ಯಕ್ತಿಗೆ ಸಿಕ್ಕಿದೆ. ಆದ್ದರಿಂದ ಅದರ ಗುರುತಿಗಾಗಿ ಕೋಹಿನೂರ್ ವಜ್ರವೆಂದು ಹೆಸರು ಇಟ್ಟಿದ್ದಾರೆ.

ಭೂಮಿ ಮೇಲೆ ಮೊದಲೆ ಅನೇಕ ವಿಧವಾದ ವಜ್ರಗಳಿರುವಂತೆ, ಅನೇಕ ವಿಧವಾದ ವಿಜ್ಞಾನ ಪರಿಕರಗಳಿಗೆ, ಯಂತ್ರಗಳಿಗೆ ಸಂಬಂಧಿಸಿದ ಜ್ಞಾನ ಭೂಮಿ ಮೇಲೆ ಪ್ರಾರಂಭದಿಂದಲೇ ಇದೆಯೆಂದು ಹೇಳಬಹುದು. ಮೊದಲಿನಿಂದ ಇರುವ ವಜ್ರಗಳಲ್ಲಿ ಯಾವುದೋ ಒಂದು, ಯಾರಿಗೋ ಒಬ್ಬರಿಗೆ, ಯಾವುದೋ ಒಂದು ಕಾಲದಲ್ಲಿ ದೊರಕಿದಂತೆ, ಮೊದಲಿನಿಂದ ಇರುವ ಜ್ಞಾನದಲ್ಲಿ ಯಾವುದೋ ಒಂದು, ಯಾರಿಗೋ ಒಬ್ಬರಿಗೆ, ಯಾವುದೋ ಒಂದು ಕಾಲದಲ್ಲಿ

ತಿಳಿಯುತ್ತಿದೆ. ಒಂದು ಪರಿಮಾಣ ವಜ್ರ, ಮೊದಲು ಹುಡುಕುವ ಒಬ್ಬನಿಗೇ ಲಭಿಸುವಂತೆ, ಒಂದು ವಿಷಯಕ್ಕೆ ಸಂಬಂಧಿಸಿದ ಜ್ಞಾನ, ಮೊದಲು ಪರಿಶೋಧನೆ ಮಾಡುವ ಒಬ್ಬನಿಗೆ ತಿಳಿಯುತ್ತದೆ. ಮೊದಲು ಒಬ್ಬನಿಗೆ ದೊರೆತ ವಜ್ರವನ್ನು ನಂತರ ಎಷ್ಟು ಜನರಾದರೂ ನೋಡಬಹುದು. ಹಾಗೆಯೇ ಮೊದಲು ಒಬ್ಬನಿಗೆ ತಿಳಿದ ಜ್ಞಾನ ನಂತರ ಎಷ್ಟು ಜನರಿಗಾದರೂ ತಿಳಿಯಬಹುದು, ಎಷ್ಟು ಜನರಿಗಾದರೂ ಉಪಯೋಗಪಡಬಹುದು. ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಹುಡುಕುವವನಿಗೆ ವಜ್ರ ಕಾಣಿಸಿದರೆ, ಅದನ್ನು ತೆಗೆದುಕೊಂಡವನು ನನಗೆ ವಜ್ರ ಸಿಕ್ಕಿದೆ ಎನ್ನುತ್ತಾನೆ. ಆದರೆ ಒಂದು ವಿಷಯವನ್ನು ಪರಿಶೋಧಿಸುವವನಿಗೆ, ಆ ವಿಷಯದ ರಹಸ್ಯ ಅಥವಾ ಅಲ್ಲಿಯವರೆಗೂ ತಿಳಿಯದ ವಿಧಾನ ಊಹೆಗೆ ಸಿಕ್ಕಾಗ, ಅದರ ಪ್ರಕಾರ ಮಾಡಿ ನೋಡಿ, ಅದನ್ನು ಸಾಧಿಸಿದಂತೆ ಅಥವಾ ಕಂಡುಹಿಡಿದಂತೆ ಹೇಳಿಕೊಳ್ಳುತ್ತಾನೆ. ತನಗೆ ತಿಳಿದ ವಿಧವಾಗಿ ಮಾಡಿತೋರಿಸಿ, ತಾನು ಕಂಡುಹಿಡಿದಿದ್ದನ್ನು ನಿರೂಪಿಸುತ್ತಾನೆ. ಮೊದಲು ರೇಡಿಯೋ ಇಲ್ಲದ ಕಾಲದಲ್ಲಿ ಕ್ರಿ.ಶ 1866ನೇ ವರ್ಷದಲ್ಲಿ ಮಾರ್ಕೋನಿ ಎಂಬುವಾತನು ರೇಡಿಯೋವನ್ನು ಕಂಡುಹಿಡಿದಿದ್ದಾನೆ. ವಜ್ರ ದೊರೆತಿದೆ ಎಂದರೆ ಮೊದಲೆ ಭೂಮಿ ಮೇಲೆ ಇದ್ದ ಹಾಗೆ! ಹಾಗೆಯೇ ಒಬ್ಬ ವ್ಯಕ್ತಿ ಒಂದು ಪರಿಕರವನ್ನಾಗಲಿ, ಒಂದು ಯಂತ್ರವನ್ನಾಗಲಿ, ಒಂದು ಸಿದ್ಧಾಂತವನ್ನಾಗಲಿ ಕಂಡುಹಿಡಿದಿದ್ದಾನೆಂದರೆ, ಅದು ಮೊದಲೇ ಆತನಿಗೆ ತಿಳಿಯದಂತೆ ಭೂಮಿ ಮೇಲೆ ಇದೆಯೆಂದು ಅರ್ಥವಾಗುತ್ತಿದೆ. **ಭೂಮಿ ಮೇಲೆ ಪ್ರಾರಂಭದಿಂದ ನಮಗೆ ತಿಳಿಯದಂತೆ ಇರುವುದೆ ತಿಳಿಯಲ್ಪಡುತ್ತದೆ. ಆದರೆ ಇಲ್ಲದಿರುವುದು ಏನು ತಿಳಿಯುವುದಿಲ್ಲ**. ಈ ದಿನ ನಾವು ಕಂಡುಹಿಡಿದ ಕಂಪ್ಯೂಟರ್‌ಗಳು, ವಿಮಾನಗಳು, ಸ್ಕೈಲಾಬ್‌ಗಳು, ಅಣುಬಾಂಬುಗಳು, ಸೆಲ್‌ಪೋನ್‌ಗಳು, ಟೆಲಿವಿಜನ್‌ಗಳು ಮೊದಲಾದ ವಸ್ತು ಸಮುದಾಯ ಜ್ಞಾನವೆಲ್ಲವೂ ಮೊದಲಿನಿಂದ ಇರುವುದೆ ಎಂದು ತಿಳಿಯುತ್ತಿದೆ. ಮಾನವನು ಅನುಭವಿಸುವ ಅನೇಕ ಸುಖಗಳಿಗೆ ಉಪಯೋಗವಾಗುವ ಪರಿಕರ ಗಳ ಜ್ಞಾನವನ್ನು ಸೃಷ್ಟಿ ಆದಿಯಲ್ಲಿಯೇ ದೇವರು ತಯಾರು ಮಾಡಿ (ಸೃಷ್ಟಿಸಿ) ಟ್ಟಿದ್ದಾನೆಂದು ಅರ್ಥವಾಗುತ್ತಿದೆ. ಸೃಷ್ಟಿ ಆದಿಯಲ್ಲಿಯೇ

ದೇವರು ಇನ್ನೂ ಇಲ್ಲಿಯವರೆಗೂ ನಾವು ಕಂಡುಹಿಡಿಯದ ಜ್ಞಾನಗಳನ್ನು ಎಷ್ಟನ್ನೋ ತಯಾರು ಮಾಡಿಟ್ಟಿದ್ದಾನೆ. ಈ ನಮ್ಮ ಮಾತುಗಳನ್ನು ಕೆಲವರು ನಾಸ್ತಿಕವಾದಿಗಳು ಒಪ್ಪಿಕೊಳ್ಳುವು ದಿಲ್ಲ. ಅವರು ಹಾಗೆ ಒಪ್ಪಿಕೊಳ್ಳದಿರುವುದರಲ್ಲಿ ಶಾಸ್ತ್ರಬದ್ಧತೆ ಇಲ್ಲ. ನಾವು ಮೊದಲಿನಿಂದ ಇವೆಯೆಂದು, ಅವುಗಳಿಗೆ ಒಬ್ಬ ಸೃಷ್ಟಿಕರ್ತ ಇದ್ದಾನೆಂದು ಹೇಳುವುದಕ್ಕೆ ಶಾಸ್ತ್ರಬದ್ಧತೆ ಇದೆ. ಅವರಿಗೆ ಇಲ್ಲದ ಶಾಸ್ತ್ರಬದ್ಧತೆ ಏನೋ? ನಮ್ಮ ಮಾತುಗಳಿಗಿರುವ ಶಾಸ್ತ್ರಬದ್ಧತೆ ಏನೋ ನಂತರ ತಿಳಿಸುತ್ತೇವೆ. ಮುಖ್ಯವಾಗಿ ನಾವು ತಿಳಿಸುವ ಸೂತ್ರ ಏನೆಂದರೆ! ಒಂದು ವಿಷಯವನ್ನು ಶಾಸ್ತ್ರಬದ್ಧವಾಗಿ ಇದೆಯೆಂದು ನಿರೂಪಿಸಿದಾಗ, ಹಾಗೆಯೇ ಒಂದು ವಿಷಯವನ್ನು ಶಾಸ್ತ್ರಬದ್ಧವಾಗಿ ಇಲ್ಲವೆಂದು ಸಹ ನಿರೂಪಿಸಬೇಕು. ಹಾಗೆ ಅಲ್ಲದೆ ತನಗೆ ತಿಳಿಯದ ವಿಷಯವನ್ನು ಕುರುಡರಂತೆ ಇಲ್ಲ ಎಂಬುವುದು ಶಾಸ್ತ್ರಬದ್ಧತೆ ಅಲ್ಲ.

ಜ್ಞಾನ ಎರಡು ವಿಧಗಳೆಂದು, ಒಂದು ಪ್ರಪಂಚ ಜ್ಞಾನ, ಎರಡನೆಯದು ಪರಮಾತ್ಮ ಜ್ಞಾನವೆಂದು ನಾವು ಮೊದಲೆ ಹೇಳಿದ್ದೇವೆ. ಪ್ರಪಂಚ ಜ್ಞಾನಕ್ಕಾಗಲಿ, ಪರಮಾತ್ಮ ಜ್ಞಾನಕ್ಕಾಗಲಿ ವಿಜ್ಞಾನವಿದೆಯೆಂದು ಸಹ ಹೇಳಿದ್ದೇವೆ. ನಮಗೆ ತಿಳಿಯಲ್ಪಡುತ್ತಿರುವ ವಿಜ್ಞಾನಕ್ಕೆ ಶಾಸ್ತ್ರವು ಆಧಾರ, ಶಾಸ್ತ್ರಕ್ಕೆ ಸಂಬಂಧ ಇಲ್ಲದೆ ಯಾವ ಜ್ಞಾನವಾಗಲಿ, ಯಾವ ವಿಜ್ಞಾನವಾಗಲಿ ಇರುವುದಿಲ್ಲ. ಪ್ರಪಂಚ ಜ್ಞಾನಕ್ಕೆ ಆಧಾರವಾದವು ಐದು ಶಾಸ್ತ್ರಗಳು, ಪರಮಾತ್ಮ ಜ್ಞಾನಕ್ಕೆ ಆಧಾರ ಒಂದು ಶಾಸ್ತ್ರವೆಂದು ಮೊದಲಿನಿಂದ ತಿಳಿಸುತ್ತಿದ್ದೇವೆ. ಪ್ರಪಂಚಕ್ಕೆ ಸಂಬಂಧಿಸಿದ ಐದು ಶಾಸ್ತ್ರಗಳಿಗಿಂತ ಎಷ್ಟೋ ಪವಿತ್ರವಾದುದು ಮತ್ತು ಉತ್ತಮವಾದುದು, ಪರಮಾತ್ಮ ಜ್ಞಾನ ಶಾಸ್ತ್ರವಾದ ಬ್ರಹ್ಮವಿದ್ಯಾಶಾಸ್ತ್ರ. ಮೇಲಿನ ಪ್ಯಾರಾದಲ್ಲಿ ಪ್ರಪಂಚ ಜ್ಞಾನವನ್ನು ಕುರಿತು ಸ್ವಲ್ಪ ಹೇಳಿಕೊಂಡಿದ್ದೇವೆ. ಇಲ್ಲಿಯವರೆಗೂ ತಿಳಿದ ಪ್ರಪಂಚ ಜ್ಞಾನವನ್ನು, ಪ್ರಾಥಮಿಕ ಪಾಠಶಾಲೆಯಿಂದ ವಿಶ್ವವಿದ್ಯಾಲಯದವರೆಗೂ ಇರುವ ಬೋಧಕರು ಬೋಧಿಸುತ್ತಿದ್ದಾರೆ. ಪ್ರಪಂಚ ಜ್ಞಾನ ಬೋಧಕರ ಮೂಲಕ ತಿಳಿಯಲ್ಪಡುತ್ತಿದೆ. ನಮಗೆ ತಿಳಿದಿರುವ ಪ್ರಪಂಚ ಜ್ಞಾನವನ್ನು ವಿಜ್ಞಾನ ರೂಪದಿಂದ ನೋಡುತ್ತಿದ್ದೇವೆ.

ಇದರಿಂದ ಪ್ರಪಂಚ ಜ್ಞಾನದಲ್ಲಿರುವ ವಿಜ್ಞಾನವು ಎಲ್ಲರ ಅನುಭವಕ್ಕೆ ಬರುತ್ತದೆ. ಇನ್ನು ಪರಮಾತ್ಮ ಜ್ಞಾನವನ್ನು ಕುರಿತು ಹೇಳಿಕೊಂಡರೆ ಬೋಧಕನ ಮೂಲಕ ಕೇಳಿದ ದೈವಜ್ಞಾನ, ಒಂದೇಬಾರಿ ಪ್ರಪಂಚ ವಿಜ್ಞಾನ ಕಾಣಿಸುವಂತೆ ಎಲ್ಲರಿಗೂ ವಿಜ್ಞಾನವಾಗಿ ಕಾಣಿಸುವುದಿಲ್ಲ. ಇಲ್ಲಿ ಚೆನ್ನಾಗಿ ಅರ್ಥ ಮಾಡಿಕೊಂಡರೆ ಪ್ರಪಂಚ ಜ್ಞಾನದ ಮೂಲಕ ಒಂದು ಕಂಪ್ಯೂಟರ್‌ನ್ನು ತಯಾರುಮಾಡಿದವನೆ ಅಲ್ಲದೆ, ಅದನ್ನು ತಯಾರು ಮಾಡದವರೂ ಸಹ ಅದರ ಫಲಿತವನ್ನು ಪಡೆಯುತ್ತಿದ್ದಾರಲ್ಲವೆ! ಇಲ್ಲಿ ಪರಮಾತ್ಮ ಜ್ಞಾನದಲ್ಲಿ ಹಾಗಲ್ಲದೆ ಯಾರಾದರೆ ಜ್ಞಾನ ತಿಳಿದು ಅದರ ಪ್ರಕಾರ ಪ್ರವರ್ತಿಸಿದರೆ, ಆ ಜ್ಞಾನದಿಂದ ಬರುವ ಆನಂದವನ್ನು ಅವನೇ ಅನುಭವಿಸುತ್ತಾನೆ. ವಿವರವಾಗಿ ಹೇಳಿದರೆ ದೈವಜ್ಞಾನದಿಂದ ಏರ್ಪಡುವ ವಿಜ್ಞಾನವನ್ನು, ಜ್ಞಾನ ತಿಳಿದವನು ಮಾತ್ರವೇ ಅನುಭವಿಸುತ್ತಿದ್ದಾನೆ. ಪ್ರಪಂಚ ಜ್ಞಾನದ ಮಾದರಿಯಲ್ಲಿ ಒಬ್ಬನು ಕಂಡುಹಿಡಿದರೆ, ಅದರ ವಿಜ್ಞಾನವನ್ನು ಎಲ್ಲರೂ ಅನುಭವಿಸಿದಂತೆ ಅಲ್ಲದೆ, ಪರಮಾತ್ಮ ಜ್ಞಾನದ ವಿಜ್ಞಾನ, ಜ್ಞಾನ ತಿಳಿದವನಿಗೆ ಮಾತ್ರವೇ ಪರಿಮಿತಿ ಆಗುತ್ತದೆ. **ಪರಮಾತ್ಮ ಜ್ಞಾನ, ಪ್ರಪಂಚ ಜ್ಞಾನದಂತೆ ಪ್ರಜೆಗಳಿಂದ ಕಂಡುಹಿಡಿಯದಂತೆ, ದೇವರೆ ತನಗೆ ಸಂಬಂಧಿಸಿದ ಜ್ಞಾನವೆಲ್ಲವನ್ನೂ ಮೊದಲೇ ತಿಳಿಸಿದ್ದಾನೆ.** ಪ್ರಪಂಚ ಜ್ಞಾನವನ್ನು ಮೊದಲು ಯಾರೂ ತಿಳಿಸಲಿಲ್ಲ. ಅದು ಕಾಲ ಕಳೆದಂತೆಲ್ಲ ಮನುಷ್ಯರಿಂದಲೇ ಕಂಡುಹಿಡಿಯಲ್ಪಟ್ಟು, ಆಗಿನಿಂದ ಮಾತ್ರವೇ ತಿಳಿಯಲ್ಪಡುತ್ತಿದೆ. ಈಗ ಪ್ರಪಂಚ ಜ್ಞಾನಕ್ಕೂ, ಪರಮಾತ್ಮ ಜ್ಞಾನಕ್ಕೂ ಇರುವ ವ್ಯತ್ಯಾಸವೇನೋ ತಿಳಿದಿದೆ ಅಲ್ಲವೆ! ಅಷ್ಟೇ ಅಲ್ಲದೆ ಪರಮಾತ್ಮ ಜ್ಞಾನದಲ್ಲಿ ಮತ್ತೊಂದು ವಿಚಿತ್ರ ಇದೆ. ಅದೇನೆಂದರೆ! ಪರಮಾತ್ಮ ಜ್ಞಾನ ಸರಿಯಾಗಿ ತಿಳಿಯದೆಹೋದರೆ, ಎಂದರೆ ಪರಮಾತ್ಮ ಜ್ಞಾನದಲ್ಲಿನ ಅಸಲಾದ ಭಾವನೆಯನ್ನು ತಿಳಿಯದೆಹೋದರೆ, ಅದರ ವಿಜ್ಞಾನ ತಿಳಿಯುವುದಿಲ್ಲ. **ದೈವಜ್ಞಾನವನ್ನು ದೇವರು ತಿಳಿಸಿದ ಭಾವದ ಪ್ರಕಾರ ತಿಳಿಸಿದಾಗ ಮಾತ್ರವೆ, ಅದೂ ತಿಳಿದವನಿಗೆ ಮಾತ್ರವೆ, ಅದರ ವಿಜ್ಞಾನವು ಅನುಭಕ್ಕೆ ಬರುತ್ತಿದೆ.** ಅಷ್ಟೇ ಅಲ್ಲದೆ ಇದರಲ್ಲಿ ಮತ್ತೊಂದು ವಿಧಾನವೂ ಸಹ ಇದೆ. ದೈವಜ್ಞಾನಕ್ಕೆ ಸಂಬಂಧಿಸಿದ ಕೆಲವು ವಿಜ್ಞಾನಗಳು, ದೇವರಿದ್ದಾನೆನ್ನುವುದಕ್ಕೆ ನಿದರ್ಶನವಾಗಿ ಮೊದಲೆ ಎಲ್ಲರಿಗೂ ತಿಳಿದುಬರುತ್ತಿವೆ.

ಹಾಗೆ ಮೊದಲೆ ತಿಳಿಯಲ್ಪಡುತ್ತಿರುವ ದೈವ ವಿಜ್ಞಾನದಿಂದ ಪ್ರಪಂಚ ಜ್ಞಾನಕ್ಕೆ ಯಾವ ಸಂಬಂಧ ಇರುವುದಿಲ್ಲ. ಪ್ರಪಂಚ ಶಾಸ್ತ್ರದಲ್ಲಿನ ಯಾವ ಸಿದ್ಧಾಂತವೂ ಆ ವಿಜ್ಞಾನವನ್ನು ವಿವರಿಸಲಿಲ್ಲ.

ಎಲ್ಲರಿಗೂ ತಿಳಿಯುತ್ತಾ, ಎಲ್ಲರ ಅನುಭವಕ್ಕೆ ಬರುತ್ತಿರುವ ವಿಜ್ಞಾನಕ್ಕೆ, ಪ್ರಪಂಚ ಜ್ಞಾನ ಎಂದಿಗಾದರೂ ಕಾರಣ ಅಲ್ಲದಿರುವಾಗ, ಅದು ದೈವ ಜ್ಞಾನಕ್ಕೆ ಸಂಬಂಧಿಸಿರುವುದೆಂದು ತಿಳಿಯುತ್ತಿದೆ. ಪರಮಾತ್ಮನ ಜ್ಞಾನ ವಿಜ್ಞಾನದ ಮೂಲಕ ಪರಮಾತ್ಮ ಜ್ಞಾನವನ್ನು ತಿಳಿದುಕೊಳ್ಳಬಹುದು. ಹಾಗೆಯೇ ದೇವರು ಮೊದಲೆ ತಿಳಿಸಿದ ಜ್ಞಾನದ ಮೂಲಕ ದೇವರ ವಿಜ್ಞಾವನ್ನು ಅನುಭವಿಸಬಹುದು ಅಥವಾ ತಿಳಿಯಬಹುದು. ಇದರಿಂದ ಮನುಷ್ಯರ ಮೂಲಕ ಅಲ್ಲದೆ, ದೇವರ ಜ್ಞಾನದ ಮೂಲಕ ಮೊದಲೇ ತಯಾರಾದ ವಿಜ್ಞಾನವನ್ನು ವಿಫುಲವಾಗಿ ಅರ್ಥಮಾಡಿ ಕೊಂಡರೆ, ಅದರ ಮೂಲಕ ದೇವರ ಜ್ಞಾನವನ್ನು ತಿಳಿಯಬಹುದು, ಹಾಗೆಯೇ ಮನುಷ್ಯನ ಮೂಲಕ ಅಲ್ಲದೆ ದೇವರು ಮೊದಲೇ ತಿಳಿಸಿರುವ ಜ್ಞಾನದ ಮೂಲಕ ಏರ್ಪಡುವ ವಿಜ್ಞಾನವನ್ನು ತಿಳಿಯಬಹುದು. ಪ್ರಪಂಚ ಜ್ಞಾನ ಮೊದಲು ಇಲ್ಲ. ಆದ್ದರಿಂದ ಮೊದಲು ಪ್ರಪಂಚ ಜ್ಞಾನ ತಿಳಿದ ನಂತರವೇ ಅದರ ವಿಜ್ಞಾನ ಹೊರಬರುತ್ತದೆ. ಇದರಿಂದ ತಿಳಿಯುವುದೇನೆಂದರೆ! ಪ್ರಪಂಚ ಜ್ಞಾನವು ಸ್ಥೂಲವಾದುದು, ಎಲ್ಲರಿಗೂ ಸುಲಭವಾಗಿ ಅರ್ಥವಾಗುತ್ತದೆ. ಅದೇ ವಿಧವಾಗಿ ಪ್ರಪಂಚ ವಿಜ್ಞಾನವೂ ಸಹ ಸ್ಥೂಲವಾದುದೇ ಅದು ಸಹ ಎಲ್ಲರಿಗೂ ಸುಲಭವಾಗಿ ತಿಳಿಯುತ್ತಿದೆ. ಆದರೆ ದೈವವಾಗಲಿ, ದೈವಜ್ಞಾನವಾಗಲಿ ಸ್ಥೂಲವಲ್ಲ. ಹಾಗೆಯೇ ದೇವರ ಜ್ಞಾನದಿಂದ ಉಂಟಾಗುವ ವಿಜ್ಞಾನವೂ ಸಹ ಸ್ಥೂಲವಲ್ಲ. ಆದ್ದರಿಂದ ಪ್ರಪಂಚ ವಿಜ್ಞಾನ ಎಲ್ಲರಿಗೂ ಸುಲಭವಾಗಿ ತಿಳಿಯುತ್ತಿದೆ. ದೈವಜ್ಞಾನದಿಂದ ಉಂಟಾಗುವ ವಿಜ್ಞಾನ ತಿಳಿದುಕೊಂಡ ಮನುಷ್ಯನಿಗೆ ಹೊರತು ಪಕ್ಕದ ಮನುಷ್ಯ ನಿಗೂ ಸಹ ತಿಳಿಯುವುದಿಲ್ಲ. ಆದ ಕಾರಣ ಪ್ರಪಂಚ ಜ್ಞಾನ ವಿಸ್ತರಿಸಿದಂತೆ, ದೈವಜ್ಞಾನ ವಿಸ್ತರಿಸುತ್ತಿಲ್ಲ. ಇದು ಮನುಷ್ಯರಿಗೆಲ್ಲರಿಗೂ ಸಂಬಂಧಿಸಿದ ವಿಷಯ. ಮನುಷ್ಯರು ಈ ದೇಶದಲ್ಲಿಯೇ ಅಲ್ಲದೆ ವಿದೇಶಗಳಲ್ಲಿಯೂ ಸಹ ಇದ್ದಾರೆ.

ಆದ್ದರಿಂದ ದೈವಜ್ಞಾನದ ಮೇಲೆ ಪ್ರಸ್ತುತ ಕಾಲದಲ್ಲಿ, ಯಾವ ದೇಶದವರಿಗಾದರೂ ಸಹ ಪೂರ್ತಿ ಶ್ರದ್ಧೆಯಾಗಲಿ, ಆಸಕ್ತಿಯಾಗಲಿ ಇಲ್ಲದಂತೆ ಹೋಗಿದೆ. ಈಗಿನ ಕಾಲದಲ್ಲಿ ಎಲ್ಲಾ ದೇಶಗಳಲ್ಲಿಯೂ ಯಂತ್ರಗಳ ಕೆಲಸ ಹೆಚ್ಚಾಗಿಹೋಗಿದೆ. ಪ್ರಪಂಚ ಜ್ಞಾನ ಬೆಳೆದುಹೋಗಿದೆ. ಪರಮಾತ್ಮ ಜ್ಞಾನದ ಮೇಲೆ ಪೂರ್ತಿ ಆಸಕ್ತಿ ಇಲ್ಲದಂತೆ ಹೋಗಿದೆ. ಭಯಂಕರ ಮಾರಣಾಯುಧಗಳನ್ನು ತಯಾರು ಮಾಡಿಕೊಂಡ ಮನುಷ್ಯನಲ್ಲಿ ಅಹಮ್, ಅಜ್ಞಾನವೂ ಬೆಳೆದುಹೋಗಿ ಎಲ್ಲದಕ್ಕೂ ನಾನೇ ದೊಡ್ಡವನೆಂದು, ದೇವರೆಂಬುವವನು ಕಲ್ಪನೆ ಮಾತ್ರವೆ ಎಂದು, ತಿಳುವಳಿಕೆ ಇಲ್ಲದವರು, ಶಾಸ್ತ್ರವನ್ನು ತಿಳಿಯದವರೂ, ಮೂಢನಂಬಿಕೆಯಿಂದ ದೇವರಿದ್ದಾನೆಂದು ಅನ್ನುತ್ತಿದ್ದಾರೆಂದು ಹೇಳುತ್ತಾರೆ. ಪ್ರತಿ ದೇಶದಲ್ಲಿಯೂ, ದೇವರಿದ್ದಾನೆ ಎನ್ನುವವರು ಸುಮಾರು ಶೇಕಡ 80 ರಷ್ಟು ಇದ್ದರೂ, ಅವರಲ್ಲಿ ದೇವರ ಜ್ಞಾನ ಎಂದರೆ ಏನೋ ತಿಳಿಯದವರು ಸುಮಾರು ಶೇಕಡ 95 ರಷ್ಟು ಇದ್ದಾರೆ. ದೇವರು ಇಲ್ಲವೆಂದರೆ ಏನೋ ನಷ್ಟ, ಏನೋ ಕಷ್ಟ ಬರುತ್ತದೆಂಬ ಭಯದಿಂದ ಇದ್ದಾನೆನ್ನುವವರು ಬಹಳಜನರು ಇದ್ದಾರೆ.

# ಇಂದೂ ದೇಶ

ಪೂರ್ವಕಾಲಕ್ಕೂ ಈಗಿನಕಾಲಕ್ಕೂ ಹೋಲಿಸಿ ನೋಡಿದರೆ ಇಂದೂ ದೇಶದಲ್ಲಿ ಪೂರ್ವದಲ್ಲಿಯೇ ದೇವರ ಜ್ಞಾನ ಇರುವವರು ಹೆಚ್ಚಾಗಿದ್ದರು. ಪ್ರಪಂಚ ನಾಗರಿಕತೆ ಬೆಳೆದಂತೆಲ್ಲ, ಮನುಷ್ಯರು ಪ್ರಪಂಚ ವಿದ್ಯೆಗಳು ಕಲಿತಂತೆಲ್ಲ ದೇವರ ಜ್ಞಾನದ ಮೇಲೆ ವಿಶ್ವಾಸ ಕಡಿಮೆಯಾಗಿ, ಪ್ರಪಂಚ ಜ್ಞಾನದ ಮೇಲೆ ವಿಶ್ವಾಸ ಬೆಳೆದಿದೆ. ಕೊನೆಗೆ ದೈವಜ್ಞಾನದ ಮೇಲೆ ವಿಶ್ವಾಸ ಬಹಳಷ್ಟು ಕಡಿಮೆಯಾಗಿದೆ. ಈ ದಿನ ನಮ್ಮ ದೇಶದಲ್ಲಿ ಓದು, ವಿದ್ಯಾಭ್ಯಾಸದ ನಂತರ ಉದ್ಯೋಗ, ಉದ್ಯೋಗ ನಂತರ ಸಂಪಾದನೆ ಹೊರತು ಬೇರೆ ಧ್ಯಾಸವಿಲ್ಲದ ಪರಿಸ್ಥಿತಿ ಉಂಟಾಗಿದೆ. ಕೆಲವರಿಗೆ ಭಕ್ತಿ ಇದ್ದರೂ, ಅದು ದೇವರ ಮೇಲೆ ಭಕ್ತಿ

ಯಲ್ಲದೆ, ದೇವತೆಗಳ ಮೇಲೆ ಭಕ್ತಿ ಮಾತ್ರವೇ ಇದೆ. ಆ ಭಕ್ತಿಯೂ ಸಹ ತಮ್ಮ ಕೋರಿಕೆಗಳಿಗೋಸ್ಕರ ಸ್ವಾರ್ಥದಿಂದ ಕೂಡಿಕೊಂಡ ಭಕ್ತಿಯೇ ಹೊರತು ನಿಸ್ವಾರ್ಥಭಕ್ತಿ ಅಲ್ಲ. ಈ ದಿನ ಭಕ್ತಿಯನ್ನೂ ಸಹ ಸ್ವಾರ್ಥ ರಾಜಕೀಯಗಳಿಗೆ ಉಪಯೋಗಿಸಿಕೊಳ್ಳುತ್ತಾ ನಮ್ಮದು ಭಕ್ತಿ ಭಾವನೆ ಎನ್ನುತ್ತಾ, ಮತ ರಕ್ಷಣೆ ಧರ್ಮರಕ್ಷಣೆ ಎನ್ನುವ ಹೆಸರಿನಿಂದ ಗುಂಪುಗಳು, ಸಂಘಗಳು ಏರ್ಪಟ್ಟಿವೆ. ಈ ವಿಧವಾಗಿ ದೈವಜ್ಞಾನ ವಿಷಯದಲ್ಲಿ ಎಷ್ಟೋ ಹಿಂದಕ್ಕೆ ಹೋದ ಇಂದಿನ ಭಾರತದೇಶ ಪೂರ್ವದಲ್ಲಿ ಹೇಗೆ ಇರುತ್ತಿತ್ತು ಎಂದರೆ! ಕೃತಯುಗದ ಚರಿತ್ರೆಗಳು ನಮಗೆ ಸಿಗದೇಹೋದರೂ, ತ್ರೇತಾಯುಗದ ಚರಿತ್ರೆಯನ್ನು ನೋಡಿದರೆ, ಆಧ್ಯಾತ್ಮಿಕ ವಿದ್ಯೆಯಲ್ಲಿ, ದೈವಶಕ್ತಿಯಲ್ಲಿ ಪ್ರಪಂಚ ದೇಶಗಳಿಗೆಲ್ಲದಕ್ಕಿಂತ ಎಷ್ಟೋ ಉನ್ನತ ಸ್ಥಾನದಲ್ಲಿ ಭಾರತದೇಶ ಇತ್ತು. ದೈವಜ್ಞಾನಕ್ಕಾಗಲಿ, ದೈವಶಕ್ತಿಗಾಗಲಿ ಹೆಸರುವಾಸಿ ಯಾದುದು ಅಂದಿನ ಭಾರತದೇಶ.

ಈ ಮಧ್ಯಕಾಲದಲ್ಲಿ ಬೇರೆಯಾದ ಆಫ್ಘನಿಸ್ಥಾನ್, ಪಾಕಿಸ್ಥಾನ್, ಬಂಗ್ಲಾದೇಶ್ ಭಾರತದೇಶದಲ್ಲಿ ಅನುಸಂಧಾನವಾಗಿದ್ದವು. ಅಷ್ಟೇ ಅಲ್ಲದೆ ಶ್ರೀಲಂಕ ಸಹ ಭಾರತ ಭೂಮಿಯಲ್ಲಿ ಸೇರಿಕೊಂಡಿತ್ತು. ತ್ರೇತಾಯುಗ ಕಾಲದಲ್ಲಿ ಲಂಕ, ಭಾರತದೇಶ ಏಕಭೂಮಿಯಾಗಿದ್ದವು. ಈದಿನ ಲಂಕಗೂ, ಭಾರತ ದೇಶಕ್ಕೂ ಮಧ್ಯದಲ್ಲಿರುವ ಸಮುದ್ರ ಅಂದು ಇರಲಿಲ್ಲ. ಆ ಕಾಲದಲ್ಲಿಯೇ ದೊಡ್ಡ ದೊಡ್ಡ ತುಫಾನ್‌ಗಳಿಂದ ಲಂಕೆಗು, ಭಾರತದೇಶಕ್ಕು ಮಧ್ಯದಲ್ಲಿ ಒಂದು ಪರ್ಲಾಂಗ, ಎರಡು ಪರ್ಲಾಂಗಗಳ ದೂರವು ನೀರಿನ ಕುಂಟೆಯಂತೆ ನಿಂತಿರುವ ನೀರು ಇರುತ್ತಿತ್ತು. ಕೆಲವು ಕಡೆ ಅರ್ಧಕಿಲೋಮೀಟರ್‌ಗಿಂತ ಹೆಚ್ಚು ದೂರವಿಲ್ಲದೆ ನೀರು ಇರುತ್ತಿತ್ತು.  ಆ ನೀರು ಪೂರ್ವ ಪಶ್ಚಿಮವಾಗಿ ಸಮುದ್ರದಿಂದ ಕೂಡಿರುತ್ತಿತ್ತು. ಲಂಕೆಗು ಭಾರತದೇಶಕ್ಕು ಮಧ್ಯದಲ್ಲಿ ಈಗಿನಂತೆ ಕೆಲವು ನೂರಾರು ಕಿಲೋಮೀಟರ್‌ಗಳ ದೂರ ಸಮುದ್ರ ಇರುತ್ತಿರಲಿಲ್ಲ. ಕೆಲವು ಸ್ಥಳಗಳಲ್ಲಿ ಲಂಕೆಗು ಭಾರತದೇಶಕ್ಕು ಮಧ್ಯದಲ್ಲಿ ಸ್ವಲ್ಪವೂ ಸಹ ನೀರು ಇರುವುದಿಲ್ಲ. ಅಲ್ಲಿ ಸ್ವಲ್ಪ ಭೂಭಾಗವು ಎರಡು ದೇಶಗಳನ್ನು ಕೂಡಿಸಿತ್ತು. ಆ ದಿನ ಲಂಕ ಭಾರತದೇಶ

ದೊಂದಿಗೆ ಕೂಡಿ ಒಂದೇ ಭೂಭಾಗವಾಗಿದ್ದರೂ, ಲಂಕೆ ಪ್ರತ್ಯೇಕ ರಾಜ್ಯವಾಗಿದ್ದೂ, ಪ್ರತ್ಯೇಕ ರಾಜರಿಂದ ಪರಿಪಾಲಿಸಲ್ಪಟ್ಟಿದೆ. ಹಾಗೆಯೇ ಭಾರತದೇಶ ಉತ್ತರಭಾಗದಲ್ಲಿ ಈ ದಿನ ಬೇರೆಯಾದ ಪಾಕಿಸ್ಥಾನ್, ಆಫ್ಘನಿಸ್ಥಾನ್, ಬಂಗ್ಲಾದೇಶ್ ಎಲ್ಲಾ ಒಂದೇ ಭೂಭಾಗವಾಗಿದ್ದರೂ, ಉತ್ತರ ಭಾಗದಲ್ಲಿ ಕೆಲವರು ದಕ್ಷಿಣ ಭಾಗದಲ್ಲಿ ಕೆಲವರು ಒಂದೇ ಕಾಲದಲ್ಲಿ ಬೇರೆ ಬೇರೆ ರಾಜರು ಪಾಲಿಸಿದಂತೆ ಚರಿತ್ರೆ ಇದೆ. ತ್ರೇತಾಯುಗ ಕಾಲದಲ್ಲಿ ಹಸ್ತಿನಾಪುರವಾದ ಇಂದಿನ ಡಿಲ್ಲಿಯಿಂದ ಉತ್ತರ ಪ್ರಾಂತವನ್ನು ಬೇರೆ ರಾಜರು ಪಾಲಿಸಿದಾಗ, ಅಯೋಧ್ಯಯನ್ನು ರಾಜಧಾನಿಯಾಗಿ ಮಾಡಿಕೊಂಡು ದಕ್ಷಿಣ ದೇಶವನ್ನು ಸ್ವಲ್ಪಕಾಲ ದಶರಥನು, ರಾಮನು ಆತನ ವಂಶದವರು ಪಾಲಿಸಿದಂತೆ ತಿಳಿಯುತ್ತಿದೆ. ಕೃತಯುಗ ಮತ್ತು ತ್ರೇತಾಯುಗದಲ್ಲಿ ಸ್ವಲ್ಪಕಾಲ ಭಾರತದೇಶ ರಾಜರೇ ಲಂಕೆಯನ್ನು ಪಾಲಿಸಿದಾಗ, ರಾಮನು, ಆತನಿಗಿಂತ ಮೊದಲು ಆತನ ನಂತರ ಲಂಕ ಭಾರತದೇಶಕ್ಕೆ ಸಂಬಂಧ ಇಲ್ಲದಂತೆ ಪ್ರತ್ಯೇಕವಾಗಿ ಪಾಲಿಸಲ್ಪಟ್ಟಿದೆ.

ಭಾರತದೇಶ ಏಷಿಯಾ ಖಂಡ ಭೂಭಾಗದಲ್ಲಿ ಇದ್ದರೂ, ಉತ್ತರದಲ್ಲಿ ಹಿಮಾಲಯ ಪರ್ವತಗಳು ಎತ್ತರವಾದ ದೊಡ್ಡ ಗೋಡೆಯಂತೆ ಇದ್ದು ಏಷಿಯಾಖಂಡದಿಂದ ಬೇರೆಮಾಡಿದಂತೆ ಇರುವುದರಿಂದ, ಭಾರತದೇಶಕ್ಕೆ ಸುತ್ತಲೂ ಸಮುದ್ರ ಇರುವುದರಿಂದ, ಈ ದೇಶವನ್ನು ಪ್ರತ್ಯೇಕ ಖಂಡವಾಗಿ ಹೇಳಬಹುದು. ಆದ್ದರಿಂದ ಇದನ್ನು ಭರತಖಂಡವೆಂದು ಕೆಲವರು ಅಂದಿದ್ದಾರೆ. ಭಾರತದೇಶ ಏಷಿಯಾಖಂಡದಲ್ಲಿರುವುದಾಗಿದ್ದರೂ, ಇದನ್ನು ಭೌತಿಕವಾಗಿ ನೋಡಿದರೆ ಪ್ರತ್ಯೇಕವಾದ ಖಂಡವಾಗಿ ಮೇಲಿರುವ ಹಿಮಾಲಯಗಳಂತೆ ಕಾಣಿಸುತ್ತಿದೆ. ಅಷ್ಟೇ ಅಲ್ಲದೆ ಅಭೌತಿಕವಾಗಿ ಕೆಳಗಿರುವ ಶ್ರೀಲಂಕದಿಂದ ಎಷ್ಟೋ ಶಕ್ತಿಯಿಂದ ಕೂಡಿಕೊಂಡ ದೇಶವಾಗಿ ಕಾಣಿಸುತ್ತಿದೆ. ಪ್ರಪಂಚದಲ್ಲಿರುವ ಖಂಡಗಳಲ್ಲಿ ಏಷಿಯಾಖಂಡವು ದೊಡ್ಡದಾಗಿದ್ದು, ಏಷಿಯಾ ಖಂಡದಲ್ಲಿ ಭಾರತದೇಶವು ಭೌತಿಕವಾಗಿ ಪ್ರತ್ಯೇಕವಾದ ಖಂಡವಾಗಿ ಕಾಣಿಸುವುದೆ ಅಲ್ಲದೆ, ಅಭೌತಿಕವಾಗಿ ಆಧ್ಯಾತ್ಮಿಕ ಶಕ್ತಿಯಲ್ಲಿ ವಿಶೇಷತೆ ಹೊಂದಿರುವುದಾಗಿ, ಆಧ್ಯಾತ್ಮಿಕ

ವಿದ್ಯೆಗಾಗಲಿ, ದೈವಶಕ್ತಿಗಾಗಲಿ ತವರು ಮನೆಯಂತಹದಾಗಿದೆ. ದೇವರು ತನ್ನ ಧರ್ಮಗಳನ್ನು ತಿಳಿಸುವ ಪ್ರಯುಕ್ತ ಭಾರತ ದೇಶದೊಳಗೆ ಇದಕ್ಕೂ ಮೊದಲೆ ಐದುಬಾರಿ ಬಂದುಹೋದರೂ ಆರನೇ ಬಾರಿಯೂ ಸಹ ಭರತಖಂಡದಲ್ಲಿ ಹುಟ್ಟುವುದರಿಂದ ಭಾರತದೇಶಕ್ಕೆ ಒಂದು ಪ್ರತ್ಯೇಕತೆ ಇದೆ. ತನ್ನ ಆರನೇ ಜನ್ಮದಲ್ಲಿ ಪ್ರತ್ಯೇಕವಾಗಿ ಧರ್ಮಗಳೆಲ್ಲವನ್ನು ಬೋಧಿಸುವುದರಿಂದ ಭಾರತದೇಶಕ್ಕೆ ವಿಶೇಷವಾದ ಪ್ರತ್ಯೇಕತೆ ಇದೆಯೆಂದು ಹೇಳಬಹುದು. ಪ್ರಪಂಚದಲ್ಲಿ ಈದಿನ ಇರುವ 194 ದೇಶಗಳಲ್ಲಿ ಒಂದು ಭಾರತ ದೇಶದಲ್ಲಿಯೇ ವಿಶ್ವಕ್ಕೆಲ್ಲವೂ ದೇವರಾದ ಪರಮಾತ್ಮ, ಆರುಬಾರಿ ಭಗವಂತನಾಗಿ ಜನ್ಮಿಸುವುದಕ್ಕೆ ಕಾರಣ ಇದೆಯೆಂದೇ ಹೇಳಬಹುದು.

# ಇಂದೂ ಮಹಾಸಮುದ್ರ

ವಿಶ್ವವೆಲ್ಲವನ್ನೂ ಸೃಷ್ಟಿಸಿದ ಸೃಷ್ಟಿಕರ್ತ ಪರಮಾತ್ಮ ಒಬ್ಬನೇ. ಪರಮಾತ್ಮನನ್ನು ದೇವರು ಎನ್ನುತ್ತೇವೆ. ದೇವರು ಶಕ್ತಿಮಯನು, ನಿರಾಕಾರನು, ಧರ್ಮಯುತನು. ಅಂತಹ ದೇವರ್ಯಾರೊ, ಎಂತಹವನೋ ಯಾರಿಗೂ ತಿಳಿದಿಲ್ಲ. ಅಷ್ಟು ದೊಡ್ಡವನು ಭೂಮಿ ಮೇಲೆ ಅವತರಿಸುವುದಕ್ಕೆ ಸೂಚನೆಯಾಗಿ ದೈವಶಕ್ತಿ (ಆತ್ಮಶಕ್ತಿ) ಭೂಮಂಡಲದ ಮೇಲೆ ಮೊದಲೆ ಸ್ವಲ್ಪ ತಿಷ್ಟೆಹಾಕಿರುತ್ತದೆ. ಭೂಮಂಡಲದ ಮೇಲೆ ಸುಮಾರು 73% ರಷ್ಟು ನೀರು, 27% ರಷ್ಟು ಭೂಮಿ ಇದೆ. ಭಾರತದೇಶಕ್ಕೆ ಕೆಳಗಿನ ಭಾಗದಲ್ಲಿ ಲಂಕಾ, ಲಂಕ ಸುತ್ತಲೂ ನೀರು ಇದೆ, ಭಾರತದೇಶಕ್ಕೆ ಮೂರು ಕಡೆ ನೀರು ಇದೆ, ಲಂಕ ಸುತ್ತಲೂ ಸುಮಾರು ಸಮುದ್ರವಿರುವಂತೆ, ಆ ನೀರಿಗೆ ಅತೀ ಸಮೀಪದಲ್ಲಿ ಭಾರತದೇಶ ಇರುವಂತೆ, ಪ್ರಪಂಚ ಭೂಪಟದಲ್ಲಿ ನೋಡಬಹುದು. ಭಾರತ ಭೂಭಾಗಕ್ಕು, ಲಂಕ ಭೂಭಾಗಕ್ಕು ಮಧ್ಯದಲ್ಲಿ ನೀರಿರುವುದರಿಂದ ಭರತಖಂಡದಲ್ಲಿ ಲಂಕ ಪ್ರತ್ಯೇಕವಾದ ಚಿಕ್ಕ ಖಂಡವಾಗಿ ಕಾಣಿಸುತ್ತಿದೆ. ಏಷಿಯಾಖಂಡದಲ್ಲಿ ಭಾರತ ಭೂಭಾಗ ಪ್ರತ್ಯೇಕವಾದ ಖಂಡವಾಗಿ ಕಾಣಿಸಿದಾಗ, ಭಾರತ ಖಂಡದಲ್ಲಿನ ಲಂಕ, ಭಾರತ ಭೂಭಾಗದಿಂದ

ಪ್ರಕ್ಕದಲ್ಲಿರುವಂತೆ ಕಾಣಿಸುತ್ತಿದೆ. ಹಾಗೆ ಕಾಣಿಸುವುದಕ್ಕೆ ಸಮುದ್ರವೇ ಮುಖ್ಯ ಕಾರಣ.

ಸಮುದ್ರ ಭೂಮಂಡಲದಲ್ಲಿ ಅಖಂಡವಾಗಿ ಒಂದೇ ಇದ್ದರೂ ಭೂಮಿ ಮಾತ್ರ ಖಂಡ ಖಂಡಗಳಾಗಿ ಇದೆ. ಭೂಮಿ ಖಂಡಗಳಾಗಿರುವುದು, ಆ ಖಂಡಗಳಿಗೆ ಹೆಸರುಗಳು ಇರುವುದು ಕೆಲವರಿಗೆ ತಿಳಿದಿದೆ. ಆದರೆ ಸಮುದ್ರ ಭೂಮಿಯಂತೆ ಖಂಡಗಳಾಗಿ ಇಲ್ಲದಿದ್ದರೂ ಸಮುದ್ರಕ್ಕೂ ಸಹ ಪ್ರಾಂತಗಳಾಗಿ ಹೆಸರುಗಳು ಇಡುವುದು ನಡೆದಿದೆ. ಭಾರತ ಖಂಡಕ್ಕೆ ಕೆಳಗೆ, ಲಂಕಗೆ ನಾಲ್ಕುಕಡೆಯಲ್ಲಿರುವ ಸಮುದ್ರಕ್ಕೆ **"ಇಂದೂ ಮಹಾ ಸಮುದ್ರ"** ವಾಗಿ ಹೆಸರು ಇಡುವುದು ನಡೆದಿದೆ. ಸುಮಾರು 70 ರಷ್ಟು ನೀರು, ಶೇಕಡ 30 ರಷ್ಟು ಭೂಮಿ ಇದ್ದರೂ, ಅದರಲ್ಲಿ ಭಾರತದೇಶ ಕೆಳಗಿನ ಭಾಗದಲ್ಲಿರುವ ಸಮುದ್ರಕ್ಕೆ, **'ಇಂದೂಮಹಾಸಮುದ್ರ'** ಎಂದು ಕೃತಯುಗದಲ್ಲಿಯೇ ಹೆಸರು ಇಟ್ಟಿದ್ದಾರೆ. ಸೃಷ್ಟಿ ಆದಿಯಿಂದ ಕಾಲ ಕಳೆಯುತ್ತಾ ಬಂದು, ಮೊದಲ ಯುಗವಾದ ಕೃತಯುಗದಲ್ಲಿಯೇ, ಭಾರತದೇಶಕ್ಕು ಕೆಳಗಿರುವ ಸಮುದ್ರಕ್ಕು ಇಂದೂ ಮಹಾಸಮುದ್ರ ಎಂದು ಹೆಸರು ಇಡುವುದು ನಡೆದಿದೆ. ಭಾರತದೇಶಕ್ಕೆ ದಕ್ಷಿಣದ ಕಡೆ ಕೆಳಗಿನ ಭಾಗದಲ್ಲಿ ಇಂದೂಮಹಾಸಮುದ್ರ ಇರುವುದರಿಂದ ಭಾರತದೇಶಕ್ಕೆ ಇಂದೂ ದೇಶವೆಂದು ಹೆಸರು ಬಂದಿದೆ. ಆದರೆ ಕಾಲಕ್ರಮವಾಗಿ ಇಂದೂದೇಶ ವೆಂಬ ಹೆಸರು ಇಲ್ಲದಂತೆಹೋಗಿ ಹಿಂದೂದೇಶ ಎಂದು ಕರೆಯುವುದು ನಡೆಯುತ್ತಿದೆ. ಕಾಲಕ್ರಮವಾಗಿ ಧರ್ಮಗಳು ಅಧರ್ಮಗಳಾಗಿ ಬದಲಾಗಿ ಹೋಗುತ್ತವೆಂದು ದೇವರು ಹೇಳಿದಂತೆ ಅರ್ಥದಿಂದ ಕೂಡಿಕೊಂಡ ಹೆಸರು ಹೋಗಿ, ಅರ್ಥವಿಲ್ಲದ ಹೆಸರುಬಂದು ಭಾರತದೇಶಕ್ಕೆ ತಗಲಿಕೊಂಡಿದೆ. ದಕ್ಷಿಣದ ಕಡೆ ಇರುವ ಇಂದೂ ಮಹಾಸಮುದ್ರದಿಂದ ಉಂಟಾದ ದೊಡ್ಡ ಹೆಸರನ್ನು ಬಿಟ್ಟು, ಉತ್ತರದ ಕಡೆ ಯಾವ ಪ್ರಾಮುಖ್ಯತೆ ಇಲ್ಲದ ಸಿಂಧೂನದಿಯ ಹೆಸ ರನ್ನಿಡಿದುಕೊಂಡು, ಅದರಿಂದ ನಮ್ಮ ದೇಶಕ್ಕೆ ಹಿಂದೂದೇಶವೆಂದು ಹೆಸರು ಬಂದಿದೆ ಎಂದು ಕೆಲವರು ಹೇಳಿಕೊಳ್ಳುವುದು ತಿಳುವಳಿಕೆ ಇಲ್ಲದ ಕೆಲಸ

ಅಲ್ಲವೆ! ಸಿಂಧೂನದಿ ಪ್ರವಹಿಸುವುದರಿಂದ ಹಿಂದೂದೇಶವೆಂದು ಎನ್ನುತ್ತಿದ್ದೇವೆಂದು, ಕೆಲವರು ಹಿಂದೂಗಳು ಹೇಳಿಕೊಳ್ಳುವುದು ಎಷ್ಟರಮಟ್ಟಿಗೆ ಸಮಂಜಸವೋ ಸ್ವಲ್ಪ ಯೋಚಿಸಿರಿ. ಇದರಿಂದ ಎಷ್ಟೋ ಪ್ರಶ್ನೆಗಳು ಉತ್ಪನ್ನವಾಗುತ್ತವೆ. ಸಿಂಧೂನದಿಯಿಂದ ಬಂದಿರುವ ಹೆಸರಾದರೆ ಸಿಂಧೂದೇಶವೆಂದು ಕರೆಯಬೇಕಾಗಲಿ, ಹಿಂದೂದೇಶವೆಂದು ಏಕೆ ಕರೆಯಬೇಕು? ಒಂದುವೇಳೆ ಕಾಲಕ್ರಮದಲ್ಲಿ ತಿಳಿಯದವರು ಹಿಂದೂದೇಶವೆಂದು ಕರೆದರೂ ಹಾಗೆ ಅಲ್ಲ, ಸಿಂಧೂದೇಶವೆಂದು ಕರೆಯಬೇಕೆಂದು ಹೇಳಬಹುದಲ್ಲವೆ? ಸಿಂಧೂನದಿಯಿಂದ ಬಂದಿರುವ ಹೆಸರಾದರೆ ಸ್ವತಃ ಇತಿಹಾಸ ತಿಳಿದವರು, ಹಿಂದೂ ಎಂಬ ಹೆಸರನ್ನು ತೆಗೆದುಹಾಕಿ 'ಸಿಂಧೂ' ಎಂಬ ಹೆಸರನ್ನು ಇಡಬಹುದು ಅಲ್ಲವೆ!

ಸಿಂಧೂನದಿಯಿಂದ ಹಿಂದೂದೇಶ ಎಂದು ಎನ್ನುವುದಕ್ಕೆ ಏನಾದರೂ ಕಾರಣ ಇದೆಯಾ? ಯಾವ ದೊಡ್ಡತನ ಇಲ್ಲದ ಸಾಮಾನ್ಯವಾದ ಒಂದುನದಿಯ ಹೆಸರನ್ನನುಸರಿಸಿ, ಇಷ್ಟು ದೊಡ್ಡ ದೇಶಕ್ಕೆ ಅದರ ಹೆಸರನ್ನು ಇಟ್ಟುಕೊಳ್ಳುವುದಕ್ಕಿಂತ, ಈ ದೇಶದಲ್ಲಿಯೇ ಪ್ರವಹಿಸುತ್ತಾ, ಪವಿತ್ರವಾದುದಾಗಿ ಹೆಸರುವಾಸಿಯಾದ ಗಂಗಾನದಿ ಎಂಬ ಹೆಸರಿನಿಂದ ಗಂಗಾದೇಶವೆಂದು ಹೆಸರು ಇಟ್ಟುಕೊಳ್ಳಬಾರದ? ಭಾರತ ದೇಶದಲ್ಲಿ ದೊಡ್ಡನದಿಯಾಗಿ ಹೆಸರುವಾಸಿಯಾದ ಬ್ರಹ್ಮಪುತ್ರಾನದಿಯ ಹೆಸರನ್ನು ಅನುಸರಿಸಿ ಬ್ರಹ್ಮಪುತ್ರ ದೇಶವೆಂದು ಕರೆದುಕೊಳ್ಳಬಾರದ? ಭಾರತದೇಶದಲ್ಲಿ ಅಲ್ಲದೇ ಪಾಕಿಸ್ಥಾನ್ ದೇಶದಲ್ಲಿ ಪ್ರವಹಿಸುವ ಸಿಂಧೂನದಿಗೆ ಗೌರವವಾಗಿ ಪಾಕಿಸ್ಥಾನ್ ದೇಶದಲ್ಲಿ ಪ್ರತ್ಯೇಕವಾದ ಸಿಂಧೂರಾಷ್ಟ್ರ ಇದೆ. ಪಾಕಿಸ್ಥಾನದಲ್ಲಿ ಈ ನದಿ ಹರಿಯುವುದರಿಂದ ಅದರ ಹೆಸರನ್ನು ಅವರು ಒಂದು ರಾಷ್ಟ್ರಕ್ಕೆ ಇಟ್ಟುಕೊಳ್ಳುವುದರಲ್ಲಿ ಒಂದು ಅರ್ಥ ಇದೆ. ಭಾರತದೇಶದವರು ಸಿಂಧೂನದಿ ಹೆಸರು ಹೇಳಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ಹಿಂದೂಮತವನ್ನು ನಾವು ರಕ್ಷಿಸುತ್ತಿದ್ದೇವೆಂದು ಹೇಳಿಕೊಳ್ಳುತ್ತಾ ಕೆಲವು ಸಂಘಗಳನ್ನು ಸ್ಥಾಪಿಸಿಕೊಂಡು, ನಮ್ಮಂತಹವರನ್ನು ಹೇಳನವಾಗಿ ಮಾತನಾಡುವ ಹಿಂದುಗಳನ್ನು ನಾವು ಪ್ರಶ್ನಿಸುವುದೇನೆಂದರೆ **ಭಾರತದೇಶದ ಪೂರ್ವದ ಇತಿಹಾಸ ನಿಮಗೆ ತಿಳಿದಿದೆಯಾ?**

**ಭಾರತದೇಶವು ಜ್ಞಾನಶಕ್ತಿಯಲ್ಲಿಯೂ, ಆಧ್ಯಾತ್ಮಿಕ ವಿದ್ಯೆಯಲ್ಲಿಯೂ ಎಲ್ಲಾ ದೇಶಗಳಿಗಿಂತ ಪ್ರಥಮಸ್ಥಾನದಲ್ಲಿರುವ ಚರಿತ್ರೆ ನಿಮಗೆ ತಿಳಿದಿದೆಯಾ? ಭಾರತದೇಶ ದಲ್ಲಿಯೇ ದೇವರು ಭಗವಂತನಾಗಿ ಬಂದು ತಿಳಿಸಿದ ಇಂದೂಧರ್ಮ ಗಳಲ್ಲಿ ಯಾವ ಒಂದು ಧರ್ಮವಾದರು ನಿಮಗೆ ತಿಳಿದಿದೆಯಾ? 'ಇಂದೂ' ಎನ್ನುವ ಪದ ಎಷ್ಟು ಅರ್ಥದಿಂದ ಕೂಡಿಕೊಂಡಿದೆಯೋ ತಿಳಿದಿದೆಯಾ?** ಎಂದು ಕೇಳುತ್ತಿದ್ದೇವೆ. ದೈವಜ್ಞಾನ ಸ್ವಲ್ಪವೂ ತಿಳಿಯದವರು ತಾವು ಇಂದೂಗಳೆಂದು ಹೇಳಿಕೊಳ್ಳಬಾರದು. ಅಷ್ಟೇ ಅಲ್ಲದೆ ದೈವಜ್ಞಾನಕ್ಕೆ ಸಂಬಂಧ ಇಲ್ಲದವರು ಇಂದೂಗಳೇ ಅಲ್ಲವೆನ್ನುವಂತೆ, ಈದಿನ ದೈವಜ್ಞಾನವಾಗಲಿ, ದೈವಧರ್ಮ ಗಳನ್ನಾಗಲಿ ಏನೂ ತಿಳಿಯದವರು ನಾವು ಇಂದೂಗಳೆಂದು ಹೇಳಿಕೊಳ್ಳದೆ ಇನ್ನೊಂದು ಹೆಸರಿನಿಂದ ಹಿಂದೂಗಳೆಂದು ಹೇಳಿಕೊಳ್ಳುತ್ತಿದ್ದಾರೆ.

ದೈವಜ್ಞಾನಕ್ಕೆ ಮತ್ತೊಂದು ಹೆಸರು 'ಇಂದೂ'. ಭಾರತದೇಶ ಪ್ರಪಂಚ ದೇಶಗಳಲ್ಲಿ ದೈವಜ್ಞಾನದಲ್ಲಿ ಅಗ್ರಸ್ಥಾನದಲ್ಲಿರುವ ದೇಶ. ಆದ್ದರಿಂದ ಭಾರತದೇಶಕ್ಕೆ **"ಇಂದೂ ದೇಶ"** ಎಂಬ ಹೆಸರು ಬಂದಿದೆ. ಇಂದೂದೇಶ ಎನ್ನುವ ಶಬ್ದಕ್ಕೆ ಜ್ಞಾನ ದೇಶ ಎಂದು ಅರ್ಥವಿದೆ. ದೈವಜ್ಞಾನ ಇರುವವರು ಹೆಚ್ಚಾಗಿರುವುದರಿಂದ, ಭಾರತದೇಶಕ್ಕೆ ಇಂದೂ ದೇಶ ಎಂಬ ಹೆಸರು ಬರುವುದಕ್ಕೆ ಮುಖ್ಯ ಕಾರಣ ವಾಗಿದೆ. ಕೆಲವರು ಅಜ್ಞಾನಿಗಳು, ಸಿಂಧೂ ನಾಗರಿಕತೆ ಇರುವವರು ಹಿಂದೂಗಳು ಎನ್ನುವುದನ್ನು ನೋಡಿದರೆ ಅವರ ಮಾತಿನ ಪ್ರಕಾರ ಸಿಂಧೂನದಿ ಪರಿವಾಹಕ ಪ್ರಾಂತದಲ್ಲಿನ ಪಾಕಿಸ್ಥಾನ್ ದೇಶದವರು ಸಹ ಹಿಂದುಗಳೇ ಆಗಬೇಕು. ಆದರೆ ಹಾಗೆ ಎಲ್ಲಿಯೂ ಇಲ್ಲವೆ? ಆದ ಕಾರಣ ಚರಿತ್ರೆ ಇಲ್ಲದ ಮತ್ತು ಅರ್ಥವಿಲ್ಲದ ಹಿಂದೂ ಎನ್ನುವ ಮಾತನ್ನು ಬಿಟ್ಟು, ಚರಿತ್ರೆ ಇರುವ ಮತ್ತು ಅರ್ಥದಿಂದ ಕೂಡಿಕೊಂಡ 'ಇಂದೂ' ಎಂಬ ಮಾತಿನಿಂದ, ನಮ್ಮ ದೇಶವನ್ನು ಎಂದರೆ ಭಾರತ ದೇಶವನ್ನು ಇಂದೂದೇಶವಾಗಿ ಹೇಳಿಕೊಳ್ಳೋಣ.

# ಜ್ಞಾನ ಸಮುದ್ರ

ಭಾರತದೇಶವನ್ನು ಇಂದೂ ದೇಶವೆಂದು ಹೆಮ್ಮೆಯಿಂದ ಹೇಳಿಕೊಳ್ಳು ವುದಕ್ಕೆ ಮುಖ್ಯಕಾರಣ ಇಂದೂ ಮಹಾಸಮುದ್ರ. ಅಂತ್ಯ ಇಲ್ಲದ ಅನಂತವಾದ ವಿಶ್ವದಲ್ಲಿ ಅರ್ಥವೇ ಇಲ್ಲದ, ಆಕಾರವಿಲ್ಲದ ದೇವರು ಅಣುಅಣುವಿನಲ್ಲಿ ವ್ಯಾಪಿಸಿದ್ದಾನೆ. ಆತನ ಶಕ್ತಿ ಎಲ್ಲಾಕಡೆಯೂ ಇದ್ದರೂ ಭೂಮಂಡಲದಲ್ಲಿ ಒಂದುಕಡೆ ಸ್ವಲ್ಪ ಅಧಿಕ ಶಕ್ತಿ ಕೇಂದ್ರೀಕೃತವಾಗಿದೆ. ಒಂದು ಭೂಮಂಡಲದಲ್ಲಿಯೇ ಅಲ್ಲದೆ ಅನೇಕ ಗೋಳಗಳಲ್ಲಿಯೂ, ಅನೇಕ ಗ್ರಹಗಳಲ್ಲಿಯೂ, ಅನೇಕ ನಕ್ಷತ್ರ ಗಳಲ್ಲಿಯೂ ಕೆಲವು ಪ್ರಾಂತಗಳಲ್ಲಿ ಸ್ವಲ್ಪ ಅಧಿಕಶಕ್ತಿ ನೆಲೆ ಇರುವುದು ನಡೆಯುತ್ತಿದೆ. ಅಂತಹ ವಿಧಾನ ಭೂಗೋಳದಲ್ಲಿಯೂ ಸಹ ಇದೆ. ಭೂಮಂಡಲ ಎಷ್ಟೋ ವಿಸ್ತೀರ್ಣ ಇರುವುದಾಗಿದೆ. ಅದರಲ್ಲಿ ಕೆಲವು ಲಕ್ಷ ಚದರ ಕಿಲೋಮೀಟರ್‌ಗಳ ವಿಸ್ತೀರ್ಣದಲ್ಲಿ ಶಕ್ತಿ ವ್ಯಾಪಿಸಿದೆ. ತ್ರೇತಾಯುಗ ಕಾಲದಲ್ಲಿ ಭಾರತ ದೇಶಕ್ಕೆ, ಕೆಳಗಡೆ ಎಂದರೆ ಪೂರ್ತಿಯಾಗಿ ದಕ್ಷಿಣ ಭಾಗದಲ್ಲಿ ಶ್ರೀಲಂಕಗೆ ಸುಮಾರು ಸುತ್ತಲೂ ಇರುವ ಸಮುದ್ರದಲ್ಲಿ ಆ ಶಕ್ತಿ ಒಳಗೊಂಡಿರುತ್ತಿತ್ತು. **ದೈವ ಧರ್ಮಗಳಿಂದ ಕೂಡಿಕೊಂಡವನು, ಧರ್ಮಗಳು ಜ್ಞಾನದಿಂದ ಕೂಡಿಕೊಂಡಿವೆ. ಜ್ಞಾನ ತಿಳಿದರೆ ಧರ್ಮಗಳು ತಿಳಿಯುತ್ತವೆ. ಧರ್ಮಗಳು ತಿಳಿದರೆ ಕೊನೆಗೆ ದೇವರು ತಿಳಿಯುತ್ತಾನೆ.** ಆದ ಕಾರಣ ದೈವಶಕ್ತಿಯನ್ನು ಜ್ಞಾನಶಕ್ತಿ ಎಂದೂ ಸಹ ದೊಡ್ಡವರು ಹೇಳಿದ್ದಾರೆ. ಜ್ಞಾನಶಕ್ತಿ ಲಂಕ ಹತ್ತಿರ, ಭಾರತದೇಶದ ಕೆಳಗೆ ಸಮುದ್ರ ದಲ್ಲಿರುವುದರಿಂದ ಆ ಸಮುದ್ರಕ್ಕೆ **ಇಂದೂ ಮಹಾಸಮುದ್ರ** ಎಂಬ ಹೆಸರು ಬಂದಿದೆ. ಕೃತಯುಗದಲ್ಲಿಯೇ ದೈವಜ್ಞಾನವನ್ನು ತಿಳಿದ ಯೋಗಿಗಳು **ಜ್ಞಾನ ಸಮುದ್ರವೆಂದು** ಆ ಸಮುದ್ರಕ್ಕೆ ಹೆಸರು ಇಡುವುದು ನಡೆದಿದೆ. ಜ್ಞಾನ ಎನ್ನುವ ಪದಕ್ಕೆ 'ಇಂದೂ' ಎನ್ನುವ ಪದ ಸಮಾನ, ಆದ ಕಾರಣ ಆ ಕಾಲದಲ್ಲಿನ ಯೋಗಿಗಳೂ, ಜ್ಞಾನಿಗಳೂ ಎಲ್ಲರೂ ಜ್ಞಾನಸಮುದ್ರವನ್ನು ಇಂದೂಸಮುದ್ರ ಎಂದಿದ್ದಾರೆ. ಜ್ಞಾನಶಕ್ತಿ ದೊಡ್ಡದಾದ್ದರಿಂದ ಆ ವಿಷಯವು ಎಲ್ಲರಿಗೂ ಅರ್ಥವಾಗುವಂತೆ ಇಂದೂ ಸಮುದ್ರಕ್ಕೆ **ಮಹಾ** ಎನ್ನುವ ಶಬ್ದವನ್ನು ಸೇರಿಸಿ ಇಂದೂ ಮಹಾಸಮುದ್ರ ಎಂದಿದ್ದಾರೆ. ಮಹಾ ಎನ್ನುವ ಶಬ್ದ ಕೃತಯುಗದಲ್ಲಿಯೇ ಯೋಗಿಗಳಾದವರಿಂದ

ಇಂದೂ ಸಮುದ್ರಕ್ಕೆ ಇಡಲಾಗಿದೆ. ಆಗಿನಿಂದ ಇಂದೂ ಸಮುದ್ರ ಇಂದೂ ಮಹಾಸಮುದ್ರವಾಗಿ ಇರುವುದಲ್ಲದೆ, ತನ್ನ ಶಕ್ತಿಯಿಂದ ಭಾರತ ದೇಶವನ್ನು, ಲಂಕವನ್ನು ಉತ್ತೇಜಪಡಿಸಿ ಸ್ವಲ್ಪ ಶಕ್ತಿಯನ್ನು ಆ ದೇಶಗಳಿಗೂ ಸಹ ಕೊಟ್ಟಿದೆ. ಆದ ಕಾರಣ ಆಗಿನಿಂದ ಇಂದೂ ಮಹಾಸಮುದ್ರದಿಂದ ಲಂಕ ಭೂಭಾಗ ದಲ್ಲಿಯೂ, ಭಾರತ ಭೂಭಾಗದಲ್ಲಿಯೂ ದೈವಜ್ಞಾನ ಪ್ರಜ್ವಲಿಸಿದೆ. ಭೂಗೋಳದಲ್ಲಿ ಎಲ್ಲಾ ದೇಶಗಳಿಗಿಂತ ಲಂಕ ಮತ್ತು ಭಾರತ ದೇಶವು ದೈವಶಕ್ತಿಯಲ್ಲಿ, ಆಧ್ಯಾತ್ಮಿಕ ರಂಗದಲ್ಲಿ ಆಗಿನಿಂದ ಅಗ್ರಗಾಮಿಯಾಗಿವೆ. ಇಲ್ಲಿ ಕೆಲವರಿಗೆ ಒಂದು ಪ್ರಶ್ನೆ ಬರಬಹುದು. ಅದು ಏನೆಂದರೆ! ದೈವ ಶಕ್ತಿ ಸ್ವಲ್ಪ ದಕ್ಷಿಣ ಸಮುದ್ರದಲ್ಲಿ ಇರುವುದರಿಂದ, ಆ ಸಮುದ್ರ ಇಂದೂ ಮಹಾಸಮುದ್ರವಾಗಿದೆ ಎಂದು, ಆ ಸಮುದ್ರದಿಂದಲೇ ಭಾರತದೇಶಕ್ಕೆ ಇಂದೂ ದೇಶವೆಂದು ಹೆಸರು ಬಂದಿದೆಯೆಂದು ಹೇಳಿದ್ದಾರೆ. ಈಗಲೇನೋ ಲಂಕ ಸಹ ಭಾರತ ದೇಶದೊಂದಿಗೆ ದೈವಜ್ಞಾನ ದೇಶವಾಗಿದೆ ಎನ್ನುತ್ತಿದ್ದಾರೆ, ದೈವಶಕ್ತಿಯನ್ನು ಹೊಂದಿದ ಭಾರತದೇಶ ಇಂದೂ ದೇಶವಾದಾಗ ಜ್ಞಾನಶಕ್ತಿಯಿಂದ ಲಂಕಗೆ ಯಾವ ಗುರುತು ಬಂದಿದೆ ಎಂದು ಕೇಳಬಹುದು. ಅದಕ್ಕೆ ಉತ್ತರವನ್ನು. ಕೆಳಗೆ ನೋಡಬಹುದು.

## ಶ್ರೀಲಂಕ

ಇಂದೂ ಮಹಾಸಮುದ್ರದಿಂದ ಭಾರತದೇಶಕ್ಕೆ ಲಭಿಸಿದ ಲಾಭಕ್ಕಿಂತ ಎರಡರಷ್ಟು ಹೆಚ್ಚಿನ ಲಾಭ, ಲಂಕಗೆ ಲಭಿಸಿದೆ ಎಂದು ಹೇಳಬಹುದು. ಇಂದೂ ಮಹಾಸಮುದ್ರಕ್ಕೆ ಹತ್ತಿರವಾಗಿರುವ ದೇಶವು ಲಂಕವೇ. ಭಾರತದೇಶದಲ್ಲಿ ಎಷ್ಟೋಜನ ಹೆಸರುವಾಸಿ ಹೊಂದಿದ ಜ್ಞಾನಿಗಳು ಹುಟ್ಟಿದ್ದಾರೆ. ದೈವಜ್ಞಾನಕ್ಕೆ ತವರುಮನೆ ಎಂದು ಭಾರತದೇಶಕ್ಕೆ ಹೆಸರು ಬಂದಿದೆ. ಭಾರತದೇಶ ಜ್ಞಾನಿಗಳಿಗೆ ನಿಲಯವಾದ ದೇಶ, ಆದ್ದರಿಂದ ಇಂದೂ ದೇಶ ಎಂದು ಕರೆಯುವುದು ನಡೆದಿದೆ. ಆದರೆ ಭಾರತದೇಶಕ್ಕಿಂತ ಲಂಕವೇ ಹೆಚ್ಚಿನ ಲಾಭ ಹೊಂದಿದೆ

ಎಂದು ಹೇಳುವುದಕ್ಕೆ ಆಧಾರಗಳು ಇವೆ. ಅವು ಏನೆಂದರೆ! ವಿಶ್ವದಲ್ಲಿ ಆಧ್ಯಾತ್ಮಿಕರೀತ್ಯಾ ಜ್ಞಾನದ ನಂತರ ದೊಡ್ಡದು ಮೋಕ್ಷ. ಜ್ಞಾನ ದೇವರ ವಿಷಯವನ್ನು ಮಾತ್ರವೆ ತಿಳಿಸಿದರೆ, ಮೋಕ್ಷವು ನೇರವಾಗಿ ದೇವರಲ್ಲಿ ಐಕ್ಯಮಾಡುತ್ತದೆ. ಆದ್ದರಿಂದ ದೇವರ ವಿಷಯವನ್ನು ತಿಳಿದ ಜ್ಞಾನಿಗಿಂತ ದೇವರಲ್ಲಿ ಐಕ್ಯವಾಗುವುದಕ್ಕೆ ಪ್ರಯತ್ನ ಮಾಡುವ ಯೋಗಿಯೇ ದೊಡ್ಡವನು ಎಂದು ಭಗವದ್ಗೀತೆಯಲ್ಲಿಯೂ ಸಹ **"ಆತ್ಮ ಸಂಯಮ ಯೋಗ"** ಎನ್ನುವ ಅಧ್ಯಾಯದಲ್ಲಿ 46ನೇ ಶ್ಲೋಕದಲ್ಲಿ ಭಗವಂತನೇ ಹೇಳಿದ್ದಾನೆ.

**ಶ್ಲೋ॥** ***"ತಪಸ್ವಿಭ್ಯೋಧಿಕೋ ಯೋಗೀ ಜ್ಞಾನಿಭ್ಯೋಪಿ ಮತೋಧಿಕಃ ।***
***ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನಾ!"***

ಮೇಲಿನ ಶ್ಲೋಕದಲ್ಲಿ ತಪಸ್ವಿಗಳಿಗಿಂತ, ಜ್ಞಾನಿಗಳಿಗಿಂತ, ಕರ್ಮಗಳು ಮಾಡುವವರಿಗಿಂತ ಯೋಗಿ ದೊಡ್ಡವನು. ಆದ್ದರಿಂದ ನೀನು ಯೋಗಿಯಾಗಿ ಬದಲಾಗೆಂದು ಸ್ವತಃ ಭಗವಂತನೆ ಅರ್ಜುನನಿಗೆ ಹೇಳಿದ್ದಾನೆ. ಭಾರತದೇಶಕ್ಕೆ ಜ್ಞಾನ ಲಭಿಸಿದೆ, ಆದ್ದರಿಂದ ಇಂದೂ ದೇಶವಾಗಿ ಕರೆಯಲಾಗಿ, ಲಂಕಗೆ ಜ್ಞಾನಕ್ಕಿಂತ ದೊಡ್ಡದಾದ ಮೋಕ್ಷವೇ ಲಭಿಸಿದೆ ಎಂದು ಹೇಳಬಹುದು. ಭಾರತದೇಶದಲ್ಲಿ ಜ್ಞಾನಿಗಳು ಹುಟ್ಟಿದಂತೆ ಹೊರಗೆ ತಿಳಿಯಲಾಗಿದ್ದು, ಲಂಕದಲ್ಲಿ ಹುಟ್ಟಿದವನು ಮೋಕ್ಷವನ್ನು ಹೊಂದಿದಂತೆ ತಿಳಿದುಬಂದಿದೆ. ದೈವಜ್ಞಾನಕ್ಕೆ ಅಧಿಪತಿ ಚಂದ್ರನು ಎಂದು ಜ್ಯೋತಿಷ್ಯಶಾಸ್ತ್ರದ ಪ್ರಕಾರ ಹೇಳಬಹುದು. ಆದ್ದರಿಂದ ಜ್ಞಾನ ಚಿಹ್ನೆಯಾಗಿ ಚಂದ್ರನನ್ನು ತೋರಿಸಬಹುದು. ತ್ರಿಮೂರ್ತಿಗಳಲ್ಲಿ ಒಬ್ಬರಾದ ಶಿವನು ತಾನು ಜ್ಞಾನಿಯೆಂದು ಚಿಹ್ನೆಯಾಗಿ ಅರ್ಧಚಂದ್ರಾಕಾರವನ್ನು ತನ್ನ ತಲೆಮೇಲೆ ಅಲಂಕರಿಸಿಕೊಂಡು ತೋರಿಸಿದ್ದಾನೆ. ಅಷ್ಟೇ ಅಲ್ಲದೆ ಎಲ್ಲಿಯಾದರೂ ಜ್ಞಾನಕ್ಕೆ ಗುರುತಾಗಿ ಚಂದ್ರನ ಹೆಸರನ್ನು ಬಳಸುತ್ತಿದ್ದೇವೆ. ಚಂದ್ರನ ಇನ್ನೊಂದು ಹೆಸರು ಇಂದೂ. ಆದ್ದರಿಂದ ಜ್ಞಾನ ಚಿಹ್ನೆಯಾಗಿ **"ಇಂದೂ"** ಎನ್ನುವ ಹೆಸರನ್ನು ಭಾರತ ದೇಶಕ್ಕೆ ಕೃತಯುಗದಲ್ಲಿಯೇ ಹಿರಿಯರು ಇಡುವುದು ನಡೆದಿದೆ. **ಜ್ಞಾನಕ್ಕೆ**

**“ಇಂದೂ” ಎಂಬ ಶಬ್ದವನ್ನು ಗುರುತಾಗಿ ಹೇಳಿದಾಗ, ಮೋಕ್ಷಕ್ಕೆ “ಶ್ರೀ” ಎಂಬ ಶಬ್ದವನ್ನು ಗುರುತಾಗಿ ಹೇಳುವುದು ನಡೆದಿದೆ.** ಇದರ ಪ್ರಕಾರ ಇಂದೂ ಮಹಾಸಮುದ್ರಕ್ಕೆ ಬಹಳ ಹತ್ತಿರವಾಗಿರುವ ಲಂಕಗೆ **“ಶ್ರೀ”** ಎಂಬ ಶಬ್ದವನ್ನು ಸೇರಿಸಿ **ಶ್ರೀಲಂಕ** ಎಂದು ಹೇಳಿದ್ದಾರೆ. ಇಂದೂಮಹಾಸಮುದ್ರಕ್ಕೆ ಸಮೀಪದಲ್ಲಿ ಎರಡನೇ ಸ್ಥಾನದಲ್ಲಿರುವ ನಮ್ಮ ದೇಶಕ್ಕೆ **“ಇಂದೂ ದೇಶ”** ಎಂದು ಹೆಸರು ಬಂದರೆ, ಮೊದಲ ಸ್ಥಾನದಲ್ಲಿರುವ ಲಂಕಗೆ **“ಶ್ರೀಲಂಕ”** ಎಂದು ಹೆಸರು ಬಂದಿರುವುದು ನಾವೂ ಗುರುತಿಸಬಹುದು.

ಪ್ರಪಂಚ ಒಟ್ಟಾರೆ ಶ್ರೀ ಎಂಬ ಅಕ್ಷರವನ್ನು ಮೊದಲು ಹೊಂದಿರುವ ದೇಶ ಒಂದೇ ಒಂದು! ಅದೇ ಶ್ರೀಲಂಕ. ಅದೇ ವಿಧವಾಗಿ ಪ್ರಪಂಚದಲ್ಲಿ ಜ್ಞಾನ ಚಿಹ್ನೆಯಾದ ಶಬ್ದ ಹೊಂದಿರುವ ಒಂದೇ ಒಂದು ದೇಶ ಇಂದೂದೇಶ. ನಮ್ಮ ಪಕ್ಕದಲ್ಲಿರುವ ಶ್ರೀಲಂಕ ಇಂದಿಗೂ ತನ್ನ ಹೆಸರನ್ನು ಹಾಗೆಯೇ ಇಟ್ಟುಕೊಂಡು ಶ್ರೀಲಂಕವಾಗಿಯೇ ಇರುವಾಗ, ಭಾರತದೇಶ ಮಾತ್ರ ಅಜ್ಞಾನದಲ್ಲಿ ಸಿಲುಕಿಕೊಂಡು, ಮಾಯಾ ಪ್ರಭಾವ ಹೆಚ್ಚಾಗಿಹೋಗಿ **ಇಂದೂ ದೇಶ ಈಗ ಹಿಂದೂದೇಶವಾಗಿ ಕರೆಯಲ್ಪಡುತ್ತಿದೆ.** ಮತವನ್ನು ಉದ್ಧರಿಸುತ್ತೇವೆಂದು ಹೇಳುವ ಹಿಂದೂಧರ್ಮ ಪೋಷಕರು, ವಿಶ್ವಹಿಂದೂ ಧರ್ಮರಕ್ಷಕರು ಎನ್ನುವವರೂ ಸಹ ಪೂರ್ತಿ ಅಜ್ಞಾನಿಗಳಾಗಿ ಹೋಗಿ, ಮತ ಎಂಬ ಮಾಯೆಯಲ್ಲಿ ಬಿದ್ದು ಹೋದವರಾಗಿ, ಚರಿತ್ರೆ ತಿಳಿಯದವರಾಗಿಹೋಗಿ, ಇಂದೂ ಧರ್ಮಗಳೆಂದರೆ ಜ್ಞಾನಧರ್ಮಗಳೆಂದು ತಿಳಿಯದೆ, ಒಂದು ಕಡೆ ನಾವು ಇಂದೂಗಳೆಂದು, ಹಿಂದುಗಳು ಅಲ್ಲವೆಂದು, ಮಧ್ಯದಲ್ಲಿ ಇಂದೂ ಎಂಬ ಶಬ್ದ ಹಿಂದೂ ಎಂಬ ಶಬ್ದವಾಗಿ ಬದಲಾಗಿದೆಯೆಂದು ನಾವು ಹೇಳುತ್ತಿದ್ದರೂ, ನಮ್ಮನ್ನೂ ಸಹ ಸ್ವಲ್ಪವೂ ಗೌವರವಿಸದೆ “ನೀವೇ ತಪ್ಪಾಗಿ ಇಂದೂ ಎನ್ನುತ್ತಿದ್ದೀರಾ. ಹಿಂದೂ ಎಂದು ಸರಿಮಾಡಿಕೊಂಡು ಬರೆದುಕೊಳ್ಳಿ ಎಂದು ಎಚ್ಚರಿಸಿ ಹೇಳುತ್ತಿದ್ದಾರೆ. ಗುಂತಕಲ್ಲು, ಮಹಾನಂದಿ ಮೊದಲಾದ ಕಡೆಯಲ್ಲಿಯೂ ನಿಮ್ಮದು ಪರ ಮತವೆಂದು ಇತರ ಮತಸ್ಥರಿಗೆ ಜಮಕಟ್ಟಿ ಮಾತನಾಡುತ್ತಿದ್ದಾರೆ.

ಈಗ ನಾವು ಮಾತನಾಡುಕೊಳ್ಳಬೇಕಾಗಿರುವುದು ಶ್ರೀಲಂಕವನ್ನು ಕುರಿತು. ಶ್ರೀಲಂಕದಲ್ಲಿ ತ್ರೇತಾಯುಗದಲ್ಲಿ ರಾವಣಬ್ರಹ್ಮ ಹುಟ್ಟಿದ್ದಾನೆ. ಆತನ ಚರಿತ್ರೆ ಇಂದಿಗೂ ನಮ್ಮ ಹತ್ತಿರ ರಾಮಾಯಣ ರೂಪದಲ್ಲಿ ಇದ್ದರೂ, ಇಂದೂ ಎನ್ನುವ ಶಬ್ದವನ್ನು ಹಿಂದೂ ಶಬ್ದವಾಗಿ ಬದಲಾಯಿಸಿದ ಮನುಷ್ಯರು ಎಷ್ಟೋ ದೊಡ್ಡ ಜ್ಞಾನಿಯೆಂದು, ತ್ರಿಕಾಲ ಜ್ಞಾನಿ ಎಂದು, ಯೋಗಿ ಎಂದು, ಬ್ರಹ್ಮ ಎಂದು ಹೆಸರುವಾಸಿಯಾದ ರಾವಣಬ್ರಹ್ಮನನ್ನೇ ನೀಚವಾಗಿ ವರ್ಣಿಸಿ ಬರೆದುಕೊಂಡಿದ್ದಾರೆ. ಮೋಕ್ಷಕ್ಕೆ ಗುರುತಾಗಿರುವ ಶ್ರೀಲಂಕದಲ್ಲಿ, ಮೋಕ್ಷವನ್ನು ಹೊಂದುವುದಕ್ಕೆ ಯೋಗ್ಯವಾದ ದೊಡ್ಡ ಯೋಗಿಯಾಗಿ ಹುಟ್ಟಿದ ರಾವಣಬ್ರಹ್ಮನನ್ನು, ಕೇವಲ ಒಂದು ಅಜ್ಞಾನಿಯಾಗಿ ಹೇಳಿಕೊಳ್ಳುವುದು ನೋಡಿದರೆ, ಪೂರ್ವದಲ್ಲಿ ಇಂದೂ ದೇಶವೆಂದು ಹೆಸರುವಾಸಿಯಾದ ದೇಶವೇನಾ ಇದು ಎಂದು ಅನುಮಾನ ಬಾರದೆ ತಪ್ಪುವುದಿಲ್ಲ. ಈ ದಿನ ಭಾರತದೇಶದಲ್ಲಿ ಎಷ್ಟೋ ಅಜ್ಞಾನ ಬೆಳೆದುಹೋಗಿ, ಈ ದೇಶ ಹಿಂದೂ ದೇಶವಾಗಿ ಬದಲಾವಣೆಯಾದರೂ, ಆ ದಿನ ದೊಡ್ಡವರು ಇಟ್ಟಿರುವ ಇಂದೂ ಅನ್ನುವ ಹೆಸರಿಗೆ ತಕ್ಕಂತೆ ಇಂದಿಗೂ ಎಲ್ಲಿಯೋ ಒಂದು ಕಡೆ ಅಸಲಾದ ಜ್ಞಾನ ಬೆಳಕಿಗೆ ಬರುತ್ತಾ, ಯಾರಿಗೂ ತಿಳಿಯದ ಜ್ಞಾನ ರಹಸ್ಯಗಳನ್ನು ತಿಳಿಸುತ್ತಾ, ಭಾರತದೇಶ ನಿಜವಾಗಿಯೂ ಇಂದೂದೇಶವೆಂದು (ಜ್ಞಾನದೇಶವೆಂದು) ನಿರೂಪಿಸಿಕೊಳ್ಳುತ್ತಿದೆ. **ಭಾರತದೇಶ ನಿಜವಾದ ಇಂದೂ ದೇಶವಾಗಿ, ಪ್ರಪಂಚ ದೇಶಗಳ ಮುಂದೆ ನಿರೂಪಿಸಲ್ಪಡುವುದಕ್ಕೆ, ಪ್ರಪಂಚ ದೇಶಗಳಲ್ಲಿ ಯಾರಿಗೂ ಅಂತ್ಯಸಿಗದೆ ತ್ರೈತಾಕಾರ ರಹಸ್ಯ (ಬೆರ್ಮುಡಾ ಟ್ರಯಾಂಗಿಲ್) ಅನ್ನುವ ಚಿಕ್ಕ ಗ್ರಂಥವು ನಮ್ಮಿಂದ ಬರೆಯಲ್ಪಟ್ಟಿದೆ.**

ಪ್ರಸ್ತುತ ಅಸಲು ವಿಷಯಕ್ಕೆ ಬಂದರೆ, ಶ್ರೀಲಂಕ ಎನ್ನುವ ಶಬ್ದದ ಹೆಸರಿನಲ್ಲಿ 'ಶ್ರೀ' ಮೋಕ್ಷ ಚಿಹ್ನೆಯಾಗಿ ಬಿರುದಾಗಿ ಲಂಕಗೆ ಬಂದು ಶ್ರೀಲಂಕ ಆಗಿದೆ. ಅದೇ ವಿಧವಾಗಿ ಜ್ಞಾನ ಚಿಹ್ನೆಯಾದ ಇಂದೂ ಶಬ್ದ ಭಾರತದೇಶಕ್ಕೆ ಬಂದು ಇಂದೂದೇಶವಾಗಿದೆ. ಇಂದೂ ದೇಶಕ್ಕಿಂತ ಇಂದೂ ಮಹಾಸಮುದ್ರಕ್ಕೆ

ಶ್ರೀಲಂಕವೇ ಹತ್ತಿರದಲ್ಲಿರುವುದರಿಂದ, ಶ್ರೀಲಂಕ ಎನ್ನುವ ಶಬ್ದದಲ್ಲಿ ಇಂದೂಗಿಂತ ವಿಶೇಷವಾದ ಶ್ರೀ ಇರುವುದೆ ಅಲ್ಲದೆ, "ಲಂ" ಎನ್ನುವ ಒಂದು ಬೀಜಾಕ್ಷರವೂ ಸಹ ಇದೆ. ಮೊದಲ ಅಕ್ಷರ ಪಕ್ಕದಲ್ಲಿ ಸೊನ್ನೆ ಇರುವ ಕೆಲವು ಶಬ್ದಗಳನ್ನು ಬೀಜಾಕ್ಷರಗಳನ್ನುತ್ತಿದ್ದೇವೆ. ಬೀಜಾಕ್ಷರಗಳನ್ನುವ ಮಾತಿನಲ್ಲಿ ಬೀಜ ಅನ್ನುವ ಮಾತು ಇದೆ. ಬೀಜ ಎನ್ನುವುದನ್ನನುಸರಿಸಿ ಅದರಲ್ಲಿ ಏನೋ ಹುಟ್ಟುತ್ತಿದೆಯೆಂದು ಅರ್ಥವಾಗುತ್ತದೆ. ಈ ಮಾತಿನ ಪ್ರಕಾರ "ಲಂ" ಎನ್ನುವ ಶಬ್ದದಲ್ಲಿಯೂ ಸಹ ಏನೋ ಒಂದು ಹುಟ್ಟುತ್ತಿದೆ. ಅದು ಏನೆಂದರೆ! "ಲಂ" ಎನ್ನುವುದು ಶಕ್ತಿ ಬೀಜವಾಗಿದೆ. ಪ್ರಪಂಚಶಕ್ತಿ, ಪರಮಾತ್ಮಶಕ್ತಿ ಎನ್ನುವ ಎರಡು ಶಕ್ತಿಗಳು ವಿಶ್ವದಲ್ಲಿ ಇವೆ. ಪ್ರಪಂಚಶಕ್ತಿಗೆ ಒಂದು ಬೀಜಾಕ್ಷರವನ್ನೂ ಪರಮಾತ್ಮಶಕ್ತಿಗೆ ಒಂದು ಬೀಜಾಕ್ಷರವನ್ನೂ, ದೊಡ್ಡವರು ನಿರ್ಣಯಿಸುವುದು ನಡೆದಿದೆ. ಅವರ ನಿರ್ಣಯದ ಪ್ರಕಾರ ಪ್ರಪಂಚಶಕ್ತಿಗೆ "ಹ್ರೀಂ" ಎನ್ನುವ ಶಬ್ದ ಬೀಜಾಕ್ಷರ ಇರುವಾಗ, ಪರಮಾತ್ಮ ಶಕ್ತಿಗೆ "ಲಂ" ಎನ್ನುವ ಶಬ್ದವು ಬೀಜಾಕ್ಷರವಾಗಿದೆ. "ಓಂ" ಆಗಲಿ ಅಥವಾ "ಶ್ರೀ" ಆಗಲಿ ಪರಮಾತ್ಮನಿಗೆ ಸೂಚನೆಯಾಗಿರುವ ಅಕ್ಷರಗಳು. ಇಲ್ಲಿಯವರೆಗೂ "ಶ್ರೀ"ಕಾರದಿಂದ ಕೂಡಿಕೊಂಡ ಬೀಜಾಕ್ಷರವಾಗಲಿ, 'ಓಂ' ಕಾರದಿಂದ ಕೂಡಿಕೊಂಡ ಬೀಜಾಕ್ಷರವಾಗಲಿ ಯಾವ ದೇಶದ ಹೆಸರಿನಲ್ಲಿಯೂ ಇಲ್ಲ. ಒಂದೇ ಒಂದು ಶ್ರೀಲಂಕಕ್ಕೆ ಹೊರತು ಅಂತಹ ಶಬ್ದವು ಯಾವ ದೇಶಕ್ಕಾಗಲಿ ಇಲ್ಲ. ಪಕ್ಕದಲ್ಲಿಯೇ ಇರುವ ಭಾರತದೇಶಕ್ಕೂ ಸಹ ಅಂತಹ ಬೀಜಾಕ್ಷರಗಳ ಶಬ್ದವು ಇಲ್ಲ. ಆದ್ದರಿಂದ ಹೆಸರಿನಲ್ಲಾಗಲಿ, ಅರ್ಥದಲ್ಲಾಗಲಿ, ಶಕ್ತಿಯಲ್ಲಾಗಲಿ ಇಂದೂದೇಶಕ್ಕಿಂತ ಎಷ್ಟೋ ಪಟ್ಟು ಶ್ರೀಲಂಕವೇ ದೊಡ್ಡದೆಂದು ಹೇಳಬಹುದು.

ಶ್ರೀಲಂಕ ಎಂಬ ಪದದಲ್ಲಿ "ಶ್ರೀ" ಅಕ್ಷರಕ್ಕೆ "ಲಂ" ಅಕ್ಷರಕ್ಕೆ ಅರ್ಥವನ್ನು ತಿಳಿದುಕೊಂಡಿದ್ದೇವೆ. ಕೊನೆಯಲ್ಲಿರುವ "ಕ" ಎನ್ನುವ ಅಕ್ಷರಕ್ಕೆ ಅರ್ಥ ಏನು ಇಲ್ಲ. ಕೆಲವು ಪದಗಳಲ್ಲಿ ಮುಕ್ತಾಯದ ಅಕ್ಷರಗಳಿಗೆ ಅರ್ಥ ಇರುವುದಿಲ್ಲ. ಆ ಅಕ್ಷರಗಳನ್ನು ಪದವನ್ನು ಮುಗಿಸುವುದಕ್ಕೆ ಮಾತ್ರವೇ ಉಪಯೋಗಿಸುವುದು ನಡೆಯುತ್ತಿದೆ. ಉದಾಹರಣೆಗೆ "ಶಾಪ"ವು ಎನ್ನುವ ಪದದಲ್ಲಿ ಶಾಪ ಎನ್ನುವ

ಅಕ್ಷರಗಳಿಗೆ ಅರ್ಥವನ್ನು ಹೇಳಿಕೊಂಡಿದ್ದೇವೆ. **ರಾಮ** ಎನ್ನುವ ಶಬ್ದ ಎಷ್ಟೋ ಪವಿತ್ರವಾದುದು, ದೊಡ್ಡದೆಂದು ಸಹ ಹೇಳಿಕೊಂಡಿದ್ದೇವೆ. ಹಾಗೆಯೇ ಇಲ್ಲಿ **ರಾವಣ** ಶಬ್ದವನ್ನು ಬಿಡಿಸಿದರೆ **ರ** ಮತ್ತು **ವಣ** ಎಂದು ತಿಳಿಯುತ್ತಿದೆ. **ವಣ** ಎಂದರೆ ಅರಣ್ಯ ಎಂದು, ವೃಕ್ಷಗಳ ಸಮುದಾಯವೆಂದು ಅರ್ಥ ಬರುತ್ತದೆ. **"ರ"** ಎಂದರೆ ನಾಶವನ್ನು ಸೂಚಿಸುವುದೆಂದು ಮೊದಲೇ ಹೇಳಿಕೊಂಡಿದ್ದೇವೆ. **"ರಂ"** ಎನ್ನುವುದು ನಾಶಕ್ಕೆ ಸಂಬಂಧಿಸಿದ ಬೀಜಾಕ್ಷರ. **ರಂ** ನಿಂದ **ಮ** ಕಾರವನ್ನು ತೆಗೆದುಹಾಕಿದರೆ **ರ** ಉಳಿದುಹೋಗುತ್ತದೆ. **ರ** ಸಹ **ರಂ** ಅರ್ಥವನ್ನೇ ಕೊಡುತ್ತಿದೆ. ಆದ್ದರಿಂದ **ರಂ ಅಥವಾ ರ** ಎರಡೂ ನಾಶ ಎನ್ನುವ ಅರ್ಥಕೊಡುವವೇ ಆಗಿರುವುದರಿಂದ, ರಾವಣ ಹೆಸರಿನಲ್ಲಿ ವಣವನ್ನು ನಾಶ ಮಾಡುವವನೆಂದು ಅರ್ಥ ಬರುತ್ತಿದೆ. ಮಾಯ ಎನ್ನುವ ಅರಣ್ಯದಲ್ಲಿ ಗುಣಗಳು ಎನ್ನುವ ವೃಕ್ಷಗಳನ್ನು, ನಾಶ ಮಾಡುವವನು ಎಂಬ ಅರ್ಥದಿಂದ ರಾವಣ ಹೆಸರಿದೆ ಎಂದು ತಿಳಿಯುತ್ತಿದೆ. ಆ ಕಾಲದಲ್ಲಿ ಮಾಯ ಎನ್ನುವ ಅರಣ್ಯವನ್ನು ಸಮೂಲವಾಗಿ ನಾಶ ಮಾಡುವುದರಲ್ಲಿ, ಎಲ್ಲರಿಗಿಂತ ದೊಡ್ಡವನು ಆಗಿರುವುರಿಂದ ಆತನಿಗೆ ರಾವಣಬ್ರಹ್ಮ ಎಂದು ಆ ದಿನ ಹೆಸರು ಇಡಲಾಗಿದೆ. ರಾವಣಬ್ರಹ್ಮ ದೊಡ್ಡ ಆಧ್ಯಾತ್ಮಿಕತಜ್ಞ, ಆದ ಕಾರಣ ಆತನನ್ನು ತ್ರಿಕಾಲ ಜ್ಞಾನಿ ಎಂದೂ ಸಹ ಸಂಬೋಧಿಸಲಾಗಿದೆ. ತ್ರೇತಾಯುಗದಲ್ಲಿ ಇಂದೂ ಮಹಾಸಮುದ್ರ ದೈವಶಕ್ತಿಯಿಂದ ಕೂಡಿಕೊಂಡಿರುವುದೆಂದು, ತಿಳಿದ ಒಬ್ಬನೇ ಒಬ್ಬ ವ್ಯಕ್ತಿ ರಾವಣಬ್ರಹ್ಮ. ಆದ್ದರಿಂದ ಯಾವಾಗಲೂ ಆತನು ಸಮುದ್ರ ಸ್ನಾನ ಮಾಡುತ್ತಿದ್ದನು. ಇಂದೂ ಮಹಾಸಮುದ್ರ ದಲ್ಲಿ ಸ್ನಾನ ಮಾಡುವುದರಿಂದ, ದೈವಶಕ್ತಿ ಅವನ ತಲೆಯಲ್ಲಿ ಸೇರುತ್ತದೆಂದು ಆ ದಿನವೇ ರಾವಣ ಬ್ರಹ್ಮನಿಗೆ ತಿಳಿದಿದೆ. ಆ ದಿನ ಅಷ್ಟು ಶಕ್ತಿ ಇಂದೂ ಮಹಾ ಸಮುದ್ರದಲ್ಲಿ ಇತ್ತು. ಆದರೆ ಈ ದಿನ ಆ ಶಕ್ತಿ ಅಲ್ಲಿಲ್ಲ. ಅದನ್ನು ಕುರಿತು ನಂತರ ಹೇಳಿಕೊಳ್ಳೋಣ.

ತ್ರೇತಾಯುಗ (ತ್ರೈತಾಯೋಗ) ದಲ್ಲಿ ರಾವಣಬ್ರಹ್ಮ ಹುಟ್ಟಿ, ಆತನು ಮೋಕ್ಷವನ್ನು ಸೇರಿಕೊಂಡಿದ್ದಾನೆ. ಶ್ರೀಲಂಕ ಎನ್ನುವ ಹೆಸರಿನಲ್ಲಿನ ಅರ್ಥವನ್ನು

ಸಾರ್ಥಕ ಮಾಡಿದ್ದಾನೆ. ಇಂದೂದೇಶ ಎನ್ನುವ ಹೆಸರು ಸಾರ್ಥಕವಾಗುವುದಕ್ಕೆ ಇಂದೂದೇಶದಲ್ಲಿ ಇಂದೂಗಳು (ಜ್ಞಾನಿಗಳು) ಹೇಗೆ ಉದ್ಭವಿಸಿದ್ದಾರೊ, ಹಾಗೆಯೇ ಶ್ರೀಲಂಕ ಎನ್ನುವ ಹೆಸರು ಸಾರ್ಥಕವಾಗುವುದಕ್ಕೆ ರಾವಣಬ್ರಹ್ಮ ಜ್ಞಾನಿಗಿಂತ ಮೀರಿದ ಯೋಗಿಯಾಗಿ, ಕೊನೆಗೆ ಮೋಕ್ಷವನ್ನು ಹೊಂದಿದ್ದಾನೆ. ರಾವಣಬ್ರಹ್ಮ ಜ್ಞಾನಿಯನ್ನು ಮೀರಿದ ಯೋಗಿ ಎಂದು ಈದಿನ ಯಾರಿಗೂ ತಿಳಿದಿಲ್ಲ. ಆತನನ್ನು ಒಬ್ಬ ಅಜ್ಞಾನಿಯಾಗಿಯೇ ಪ್ರಚಾರ ಮಾಡಲಾಗಿದೆ. ಎಷ್ಟೋ ದೊಡ್ಡ ವ್ಯಕ್ತಿಯಾದ ರಾವಣಬ್ರಹ್ಮನ ಔನ್ನತ್ಯವನ್ನು ಗುರುತಿಸದಿರುವುದು, ನಮ್ಮ ದುರದೃಷ್ಟವೇಯಾಗಲಿ ಬೇರೆಯಲ್ಲ. ಭಾರತದೇಶ ಇಂದೂದೇಶವಾದರೂ (ಜ್ಞಾನದೇಶವಾದರೂ) ಮಾಯಾ ಪ್ರಭಾವದಿಂದ, ಅರ್ಥವಿರುವ ಇಂದೂಗಳು ಅರ್ಥವಿಲ್ಲದ ಹಿಂದೂಗಳು ಆದಂತೆ ದೊಡ್ಡವ್ಯಕ್ತಿಯಾದ ರಾವಣಬ್ರಹ್ಮನನ್ನು ನೀಚನಾಗಿ ಲೆಕ್ಕಿಸಿಕೊಂಡಿದ್ದೇವೆ. ಭಗವಂತನು ಭಗವದ್ಗೀತೆಯಲ್ಲಿ, ಧರ್ಮಗಳು ಕಾಲಕ್ರಮದಲ್ಲಿ ಅಧರ್ಮಗಳಾಗಿ ಬದಲಾಗುತ್ತವೆಂದು ಹೇಳಿದಂತೆ, ಪೂರ್ವದಲ್ಲಿ ಧರ್ಮಯುತರಾಗಿರುವ ಇಂದೂಗಳು, ಈ ದಿನ ಅಧರ್ಮಯುತರಾದ ಹಿಂದೂಗಳಾಗಿ ಬದಲಾವಣೆಯಾಗಿದ್ದಾರೆ. ಧರ್ಮಗಳು ಅಧರ್ಮಗಳಾಗಿ ಬದಲಾದಾಗ, ಮತ್ತೆ ನಾನು ಉದ್ಭವಿಸಿ ಧರ್ಮಗಳನ್ನು ನೆಲೆಗೊಳಿಸುತ್ತೇನೆಂದು ದೇವರು ಹೇಳಿದ್ದಾನೆ. ಆದ್ದರಿಂದ ಎಂದಿಗಾದರೂ ದೇವರು ಭಗವಂತನಾಗಿ ಬಂದು ಭಾರತದೇಶದಲ್ಲಿನ ನಮ್ಮನ್ನು, ಪುನಃ ಇಂದೂಗಳಾಗಿ ತಯಾರು ಮಾಡುತ್ತಾನೆಂದು ಆಶಿಸೋಣ. ಈಗಿರುವ ಅಜ್ಞಾನದ ಪ್ರಕಾರ ದ್ರಾವಿಡರು, ಆರ್ಯರು ಎನ್ನುವ ಪ್ರಾಂತೀಯತತ್ವ ಬೇಧವನ್ನು ಹೊಂದಿರುವ ಆರ್ಯಕವಿಗಳು, ರಾವಣನನ್ನು ಕೆಟ್ಟವನಾಗಿ ಚಿತ್ರಿಸಿ ಬರೆದಿರುವುದರಿಂದ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ಗ್ರಹಿಸಲಾರದ ಪ್ರಜೆಗಳು ಸತ್ಯವನ್ನು ತಿಳಿದುಕೊಳ್ಳದೆ, ರಾವಣನನ್ನು ಕೆಟ್ಟವನನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಎಷ್ಟೋ ವಿಷಯಗಳಲ್ಲಿ ಆತನನ್ನು ನಾವು ತಪ್ಪಾಗಿ ಅರ್ಥಮಾಡಿಕೊಳ್ಳುವುದರಿಂದ, ರಾವಣಬ್ರಹ್ಮ ಎಲ್ಲರ ದೃಷ್ಟಿಯಲ್ಲಿ ಕೆಟ್ಟವನಾಗಿ, ಆತನನ್ನು ನಾವು ಕೆಟ್ಟದಾಗಿ ಅರ್ಥಮಾಡಿಕೊಂಡಿದ್ದೇವೆ ಎನ್ನುವುದಕ್ಕೆ ಒಂದು ವಿಷಯವನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ.

**ಸುರ** ಎಂದರೆ ಪೂರ್ವದಲ್ಲಿ ದೇವತೆಗಳು ಕುಡಿಯುವ **ಮತ್ತುಪಾನೀಯ** ಎಂದು ಎಲ್ಲರಿಗೂ ತಿಳಿಯದಿದ್ದರೂ ಕೆಲವರಿಗಾದರೂ ತಿಳಿದಿದೆ. ಆ ದಿನ ದೇವತೆಗಳು ಕುಡಿಯುವ ಸುರವನ್ನೆ ಈ ದಿನ ಬ್ರಾಂದಿ, ವಿಸ್ಕಿ ಎನ್ನುತ್ತಿದ್ದೇವೆ. ಆ ದಿನ ಸುರ ಎನ್ನುವುದನ್ನು ಕುಡಿಯುವುದರಿಂದ ಕುಡಿಯುವವರೆಲ್ಲರನ್ನೂ ಅಂದರೆ ಸುರಪಾನ ಮಾಡುವವರೆಲ್ಲರನ್ನು ಸುರರು ಎಂದಿದ್ದಾರೆ. ಸುರರು ಎಂದರೆ ದೇವತೆಗಳೆಂದು ಕೆಲವರಿಗೆ ತಿಳಿಯದಿದ್ದರೂ, ಬಹಳಜನರಿಗೆ ಚೆನ್ನಾಗಿ ಗೊತ್ತು. ಸುರವನ್ನು ಕುಡಿಯುವವರು ಸುರರು ಆದಾಗ, ಸುರವನ್ನು ಕುಡಿಯದವರೆಲ್ಲರೂ ಅಸುರರಾಗುತ್ತಾರೆ. ಆ ದಿನ ರಾವಣಬ್ರಹ್ಮನನ್ನು ಅಸುರ ನೆಂದು ಪ್ರಕಟಿಸಿದವರೆ, ದೇವತೆಗಳನ್ನು ಸುರರೆಂದು ಹೇಳುವುದು ನಡೆದಿದೆ. ಈ ಲೆಕ್ಕ ಪ್ರಕಾರ ಅಸುರನಾದ ರಾವಣನು ದೊಡ್ಡವನಾ? ಸುರರಾದ ದೇವತೆಗಳು ದೊಡ್ಡವರಾ? ನೀವೇ ಹೇಳಿರಿ. ಇನ್ನೊಂದು ವಿಷಯವನ್ನು ಹೇಳುತ್ತೇನೆ ನೋಡಿರಿ. ಒಬ್ಬನು ಚೆನ್ನಾಗಿ ಮತ್ತುಪಾನೀಯಗಳನ್ನು (ಬ್ರಾಂದಿಯನ್ನು) ಕುಡಿಯುವವನನ್ನು ನೋಡಿ ಯಾವ ಕತ್ತೆ ಹೀಗೆ ಕುಡಿಯುವುದಿಲ್ಲ ಕಣೋ' ಎಂದನಂತೆ. ಆಗ ಕುಡಿದವನು "ಕರೆಕ್ಟಾಗಿ" ಹೇಳಿದ್ದೀಯಾ ಕಣೋ ನಾನು ಮನುಷ್ಯನಾದ್ದರಿಂದ ಕುಡಿಯುತ್ತಿದ್ದೇನೆ. ನೀನು ಕತ್ತೆ ಯಾದ್ದರಿಂದ ಕುಡಿಯಲಿಲ್ಲ" ಎಂದು ಹೇಳಿದನಂತೆ. ಮೊದಲು ಹೇಳಿದವನ ಉದ್ದೇಶದಲ್ಲಿ ಕುಡಿದವನು ಕತ್ತೆಗಿಂತ ಹೀನ ಎಂಬ ಭಾವನೆ ಇರುವಾಗ, ಕುಡಿದವನ ಉದ್ದೇಶದಲ್ಲಿ ಕುಡಿಯದವನು ಕತ್ತೆಗೆ ಸಮಾನವೆಂದು ಅಂದಕೊಂಡನು. ಅದೇ ವಿಧವಾಗಿ ರಾವಣಬ್ರಹ್ಮ ಅಸುರನು ಎಂದರೆ, ಆತನು ಮತ್ತುಪಾನೀಯ ಕುಡಿಯದವನೆಂದು ಅರ್ಥವನ್ನು ತೆಗೆದುಕೊಳ್ಳದೆ, ಆತನನ್ನು ರಾಕ್ಷಸನೆಂದು ಹೇಳಿಕೊಂಡಿದ್ದೇವೆ. ತ್ರಿಕಾಲಜ್ಞಾನಿ, ರಾವಣಬ್ರಹ್ಮ, ಉತ್ತಮಯೋಗಿ ಆದವನನ್ನು ರಾಕ್ಷಸನನ್ನಾಗಿ ಹೇಳಿಕೊಳ್ಳುವುದನ್ನು ನೋಡಿದರೆ ಆತನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲವೆಂದು ತಿಳಿಯುತ್ತಿದೆ.

ರಾವಣಬ್ರಹ್ಮ ಅರಣ್ಯದಲ್ಲಿನ ಸೀತೆಯನ್ನು ತೆಗೆದುಕೊಂಡು ಹೋಗಿರುವ ಮಾತು ವಾಸ್ತವವೇ, ಆ ಒಂದು ಸಂಘಟನೆಯನ್ನು ಆಧಾರ ಮಾಡಿಕೊಂಡು

ರಚಯಿತರೆಲ್ಲರೂ ರಾವಣನನ್ನು ಎಷ್ಟೋ ದುಷ್ಟನನ್ನಾಗಿ, ಅಜ್ಞಾನಿಯಾಗಿ ಚಿತ್ರಿಸಿ ತೋರಿಸಿದ್ದಾರೆ. ಆ ದಿನ ಆತನು ಸೀತೆಯ ಮೇಲೆ ದುರುದ್ದೇಶದಿಂದ ಸೀತೆಯನ್ನು ತೆಗೆದುಕೊಂಡು ಹೋಗಲಿಲ್ಲ. ಸುಮಾರು ಹತ್ತು ತಿಂಗಳಕಾಲ ಸೀತೆ ರಾವಣನ ಸಂರಕ್ಷಣೆಯಲ್ಲಿಯೇ ಇದ್ದಾಳೆ. ಸೀತೆ ತನ್ನ ಹತ್ತಿರ ಇರುವಷ್ಟು ಕಾಲ ಸೀತೆಯನ್ನು ಸ್ವಂತ ಮಗಳಂತೆ ರಾವಣಬ್ರಹ್ಮ ನೋಡಿಕೊಳ್ಳುವುದು ನಡೆದಿದೆ. ಆಕೆಯ ಸೇವೆಗೆ ಹತ್ತುಜನ ಹೆಣ್ಣುಮಕ್ಕಳನ್ನು ಏರ್ಪಾಟು ಮಾಡಿಟ್ಟಿದ್ದಾನೆ. ವಾರಕ್ಕೆ ಒಂದುಸಲ ಸೀತೆಯ ಹತ್ತಿರಕ್ಕೆ ಪತ್ನಿ ಸಮೇತವಾಗಿ ಹೋಗಿ, ಆಕೆಗೆ ಯಾವ ಲೋಪವಿಲ್ಲದಂತೆ ವಿಚಾರಿಸಿ ಬರುತ್ತಿದ್ದನು. ಆಕೆಯನ್ನು ಹಾಗೆ ತರುವುದಕ್ಕೆ ಕಾರಣವನ್ನು ಸಹ ಸೀತೆಗೆ ವಿವರಿಸಿ ಹೇಳಿದ್ದಾನೆ. ತನ್ನ ಮರಣ ರಾಮನ ಕೈಯಲ್ಲಿದೆ ಎಂದು, ಮೊದಲೇ ತನ್ನ ಹೆಂಡತಿ ಮಂಡೋದರಿ ದೇವಿಗೆ ಹೇಳಿದ ಮಾತನ್ನೇ ಸೀತೆಗೂ ಸಹ ಹೇಳಿದ್ದಾನೆ. ತನ್ನ ಮರಣ ಲಂಕದಲ್ಲಿಯೇ ನಡೆಯುತ್ತದೆಂದು, ಸೀತೆ ಕಾರಣದಿಂದಲೇ ರಾಮನು ಲಂಕಗೆ ಬರಬೇಕಾಗಿದೆ ಎಂದು, ರಾವಣನು ಮೊದಲೆ ಸೀತೆಗೆ ಹೇಳಿದ್ದಾನೆ. ರಾಮನು ಎಂತಹ ಮನಸ್ಥತ್ವ ಇರುವವನೋ ನಡೆಯುವಂತಹ ಕಾಲದಲ್ಲಿ ನಿನಗೆ ತಿಳಿಯುತ್ತದೆಂದೂ ಸಹ ಸೀತೆಗೆ ಹೇಳಿದ್ದಾನೆ. ತ್ರಿಕಾಲಜ್ಞಾನಿಯಾದ ರಾವಣಬ್ರಹ್ಮ, ತನ್ನ ಮರಣ ಯಾವಾಗ ನಡೆಯುತ್ತದೋ ಸಹ ಮೊದಲೆ ಸೀತೆಗೆ ಹೇಳಿದ್ದಾನೆ. ಸೀತೆಗೆ ರಾವಣಬ್ರಹ್ಮ ಕೆಟ್ಟವನೆಂಬ ಉದ್ದೇಶ ಎಂದಿಗೂ ಇಲ್ಲ. ರಾವಣಬ್ರಹ್ಮ ದೊಡ್ಡ ಜ್ಞಾನಿ, ದೊಡ್ಡ ಯೋಗಿ ಎಂದು ಸೀತೆ ಗುರುತಿಸಿದ್ದಾಳೆ. ಆದ್ದರಿಂದಲೇ ಆತನನ್ನು ಕುರಿತು ಸೀತೆ ಕೆಟ್ಟದಾಗಿ ಎಂದಿಗೂ ಮಾತನಾಡಲಿಲ್ಲ.

ರಾವಣಬ್ರಹ್ಮನ ಜನ್ಮವನ್ನು ಕುರಿತು ಆಳವಾಗಿ ಅಧ್ಯಯನ ಮಾಡಿದರೆ ಇಲ್ಲಿಯವರೆಗೂ ಯಾರಿಗೂ ತಿಳಿಯದ ಒಂದು ರಹಸ್ಯ ತಿಳಿಯುತ್ತದೆ. ನಾನು ಹೇಳುವ ಈ ವಿಷಯವನ್ನು ಕೆಲವರು ನಂಬಬಹುದು, ಕೆಲವರು ನಂಬದಿರಬಹುದು. ರಹಸ್ಯ ಎಂದರೆ ತಿಳಿಯದಿರುವುದೆಂದು ಅರ್ಥ ಅಲ್ಲವೆ! ರಾವಣನ ಜನ್ಮ ರಹಸ್ಯವಾದುದಾದಾಗ, ಅದನ್ನು ಕುರಿತು ಕೆಲವರಿಗಾದರೂ

ತಿಳಿಯ ದಂತೆಯೇ ಇರಬೇಕು. ಆಗಲೇ ರಹಸ್ಯವೆಂಬ ಮಾತಿಗೆ ಅರ್ಥವೂ, ಸಾರ್ಥಕವೂ ಇರುತ್ತದೆ. ಆದ್ದರಿಂದಲೇ ನಾನು ವಿವರಿಸಿ ಹೇಳಿದರೂ ಅದು ಕೆಲವರಿಗೆ ಮಾತ್ರವೇ ತಿಳಿಯುತ್ತದೆ. ಎಲ್ಲರಿಗೂ ತಿಳಿಯುವುದಿಲ್ಲ. ಶ್ರೀಲಂಕಗೆ ಸುತ್ತಲೂ ಇರುವ ಸಮುದ್ರದಲ್ಲಿ ಸ್ವಲ್ಪ ದೈವಶಕ್ತಿ ಇದೆಯೆಂದು ಮೊದಲೇ ಹೇಳಿಕೊಂಡಿದ್ದೇವವೆ ಅಲ್ಲವೆ! **ಆ ದೈವಶಕ್ತಿ ಭೂಮಿ ಮೇಲೆ ದೈವ ಜ್ಞಾನ ಎಂದರೆ ಏನೋ? ಯೋಗ ಎಂದರೆ ಏನೊ? ಕೊನೆಗೆ ಮೋಕ್ಷ ಎಂದರೆ ಏನೊ? ಒಂದು ನಮೂನೆಯನ್ನು ತೋರಿಸಬೇಕೆಂದುಕೊಂಡಿದೆ. ಭೂಮಿ ಮೇಲೆ ಪ್ರಜೆಗಳಿಗೆ ಜ್ಞಾನ, ಯೋಗ, ಮೋಕ್ಷಗಳಿಗೆ ಆಧಾರವಾಗಿ ಒಬ್ಬ ವ್ಯಕ್ತಿಯನ್ನು ಹುಟ್ಟಿಸಿ, ಆತನನ್ನು ನೋಡುವುದರ ಮೂಲಕ ಎಲ್ಲರಿಗೂ ಪ್ರತ್ಯಕ್ಷ ಪ್ರಮಾಣವನ್ನು ತೋರಿಸಿದಂತಾ ಗುತ್ತದೆಂದು ಯೋಚಿಸಿದ ಶಕ್ತಿ, ತಾನೇ ಸ್ವತಃ ರಾವಣಬ್ರಹ್ಮನಾಗಿ ಹುಟ್ಟಿದೆ. ಹಾಗೆ ಒಬ್ಬ ವ್ಯಕ್ತಿಯಾಗಿ ಹತ್ತಿರದಲ್ಲಿರುವ ಲಂಕದಲ್ಲಿಯೇ ಹುಟ್ಟುವುದು ನಡೆದಿದೆ. ಶಕ್ತಿ ವ್ಯಕ್ತಿಯಾಗಿ ಹುಟ್ಟಿ ರಾವಣ, ರಾವಣಬ್ರಹ್ಮ ಎಂದು ಹೆಸರುವಾಸಿಯಾಗಿದೆ. ಹಾಗೆ ಬ್ರಹ್ಮನಾಗಿ ಕರೆಯಲ್ಪಟ್ಟ ಶಕ್ತಿ ನಿಜಜೀವನದಲ್ಲಿ ಜ್ಞಾನವನ್ನು, ಯೋಗವನ್ನು ರಾವಣ ನಿಂದ ತೋರಿಸಿದೆ. ಕೊನೆಯಲ್ಲಿ ಬ್ರಹ್ಮವಿದ್ಯೆ ಹೇಳಿದ ನಿಯಮಗಳ ಪ್ರಕಾರ ಮರಣಿಸಿ ಮೋಕ್ಷವನ್ನು ಹೊಂದಿ, ಈ ವಿಧವಾಗಿಯೇ ಯಾವ ಮಾನವನಾದರು ಮೋಕ್ಷ ಪಡೆಯಬೇಕು ಎಂದು ತೋರಿಸಿದೆ.** ಇದರಿಂದ ರಾವಣಬ್ರಹ್ಮ ಎಂದರೆ ಸಾಧಾರಣ ವ್ಯಕ್ತಿ ಅಲ್ಲವೆಂದು, ಆತನು ಒಂದು ಶಕ್ತಿ ಎಂದು, ಜ್ಞಾನ, ಯೋಗ, ಮೋಕ್ಷಗಳನ್ನು ಜೀವನದಲ್ಲಿ ತಾರ್ಕಾಣವಾಗಿ ತೋರಿಸಿದ ವ್ಯಕ್ತಿಯಾಗಿ ಕಾಣಿಸಿದ ಶಕ್ತಿಯೆಂದು ಅರ್ಥವಾಗುತ್ತಿದೆ. ರಾವಣಬ್ರಹ್ಮನಾಗಿ ಹುಟ್ಟಿದ ವ್ಯಕ್ತಿ ಎಷ್ಟು ದೊಡ್ಡವನೋ ಇದರಿಂದ ಸ್ಪಷ್ಟವಾಗಿ ಅರ್ಥವಾಗುತ್ತಿದೆ. ಅಷ್ಟು ದೊಡ್ಡ ವ್ಯಕ್ತಿಯನ್ನು ನೀಚನನ್ನಾಗಿ, ದುಷ್ಟನನ್ನಾಗಿ ಪ್ರಚಾರ ಮಾಡಿದವರು ಪೂರ್ತಿ ಅಜ್ಞಾನಿಗಳೇ ಎಂದು ಹೇಳಬಹುದು.

ರಾವಣಬ್ರಹ್ಮನನ್ನು ಹತ್ತು ತಲೆ ಇರುವವನೆಂದು, ದಶಕಂಠನೆಂದು ಬಹಳಜನ ಎನ್ನುವುದು ಕೇಳಿದ್ದೇವೆ. ಇದರಲ್ಲಿ ದಶಕಂಠನು ಎಂಬ ಮಾತು

ವಾಸ್ತವ ಅಲ್ಲ. ಹತ್ತು ತಲೆಗಳು ಎನ್ನುವಮಾತು ವಾಸ್ತವವೆಂದು ಹೇಳಬಹುದು. ಈ ಮಾತು ಸಹ ಒಂದು ಭಾವನೆ ಪ್ರಕಾರವೇ ವಾಸ್ತವ. ಸ್ಥೂಲವಾಗಿ ಹತ್ತು ತಲೆಗಳಿವೆ ಎಂಬುವುದು ಅವಾಸ್ತವ. ರಾವಣಬ್ರಹ್ಮ ಮಹಾಮೇಧಾವಿ. ಅಂತಹ ಮೇಧಾವಿಗಳನ್ನು ಹತ್ತು ಜನರನ್ನು ಸೇರಿಸಿದರೆ ಎಷ್ಟು ಮೇಧಾಶಕ್ತಿ ಇರುತ್ತದೋ ಅಷ್ಟು ಮೇಧಸ್ಸು ಇರುವವನು ರಾವಣಬ್ರಹ್ಮ. ಆದ್ದರಿಂದ ಆತನಿಗೆ ಹತ್ತು ತಲೆಗಳಿವೆ ಎಂದಿದ್ದಾರೆ. ಇದರಿಂದ ಸ್ಥೂಲವಾಗಿ ಕಾಣಿಸುವಂತೆ ಆತನಿಗೆ ಹತ್ತು ತಲೆಗಳು ಇಲ್ಲವೆಂದು, ಸೂಕ್ಷ್ಮವಾಗಿ ಹತ್ತು ತಲೆಗಳ ತಿಳುವಳಿಕೆ ಆತನಿಗೆ ಇದೆಯೆಂದು ಅರ್ಥಮಾಡಿಕೊಳ್ಳಬೇಕು. ಇದನ್ನನುಸರಿಸಿ ಹತ್ತು ತಲೆಗಳಿವೆ ಎನ್ನುವುದರಲ್ಲಿ ಸೂಕ್ಷ್ಮ ಭಾವದ ಪ್ರಕಾರ ಸರಿಹೋಗುತ್ತದೆ. ಇನ್ನು ಹೋದರೆ ದಶಕಂಠನು ಎಂಬ ಮಾತು ಪೂರ್ತಿ ಅಸತ್ಯವಾಗುತ್ತದೆ. ಏಕೆಂದರೆ ತಲೆಗಳೇ ಇಲ್ಲದಿರುವಾಗ ಕಂಠಗಳು ಹೇಗಿರುತ್ತವೆ? ಆದ್ದರಿಂದ ಹತ್ತು ಕಂಠಗಳು ಎನ್ನುವ ಮಾತು ಪೂರ್ತಿ ಅವಾಸ್ತವವೇ ಆಗುತ್ತದೆ. ಸೂಕ್ಷ್ಮವಾಗಿ ರಾವಣನು ಹತ್ತು ತಲೆಗಳಿರುವವನು ಆಗಬಹುದು. ಆದರೆ ಸ್ಥೂಲವಾಗಿ ಆಗಲಿ, ಸೂಕ್ಷ್ಮವಾಗಾಗಲಿ ಹತ್ತು ಕಂಠಗಳಿವೆ ಎಂಬುವುದು ಅಸತ್ಯ.

# ಸಮುದ್ರದ ಮೇಲೆ ಶಕ್ತಿ

ಇಂದೂ ಮಹಾಸಮುದ್ರದಲ್ಲಿ ದೈವಶಕ್ತಿ ಸ್ವಲ್ಪ ಅಧಿಕವಾಗಿ ಇದೆಯೆಂದು, ಆ ದೈವಶಕ್ತಿಯಿಂದಲೇ ಭಾರತದೇಶಕ್ಕೆ ಇಂದೂ ದೇಶವೆಂದು, ಅದರ ಕೆಳಗಿರುವ ದೇಶಕ್ಕೆ ಶ್ರೀಲಂಕ ಎನ್ನುವ ಹೆಸರುಗಳು ಬಂದಿವೆ ಎಂದೂ ಸಹ ಹೇಳಿ ಕೊಂಡಿದ್ದೇವೆ. ಈಗ ಯಾರಾದರೂ ಕೆಲವು ಪ್ರಶ್ನೆಗಳು ಕೇಳಬಹುದು. ಅದೇನೆಂದರೆ! ಇಲ್ಲಿಯವರೆಗೂ ಸಮುದ್ರವನ್ನು ಪರಿಶೋಧಿಸುವ ಶಾಸ್ತ್ರಜ್ಞರಾಗಲಿ, ಖಗೋಳ ಶಾಸ್ತ್ರಜ್ಞರಾಗಲಿ, ಇನ್ನೂ ಇತರೆ ಪರಿಶೋಧಕರಾಗಲಿ ಯಾರೂ ಇಂದೂ ಮಹಾ ಸಮುದ್ರದಲ್ಲಿ ಯಾವುದೋ ಒಂದು ಶಕ್ತಿ ಇದೆಯೆಂದು


ಹೇಳಲಿಲ್ಲವೆ! ಯಾರೂ ಹೇಳದಿರುವುದನ್ನು ನೀವು ಹೇಗೆ ಹೇಳುತ್ತಿದ್ದೀರಾ? ನೀವು ಹೇಳುವುದಕ್ಕೆ ಏನಾದರೂ ಆಧಾರ ಇದೆಯಾ? ಎಂದು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೆ! ನಾನು ದೈವಶಕ್ತಿ ಅಲ್ಲಿದೆ ಎಂದು ಹೇಳಿದ್ದೇನೆ. ದೈವಶಕ್ತಿಯನ್ನು ತೋರಿಸುವುದಕ್ಕಾಗಲಿ, ನಿರೂಪಿಸುವುದಕ್ಕಾಗಲಿ ಆಧಾರ ಇರುವುದಿಲ್ಲ. ಏಕೆಂದರೆ ದೈವಶಕ್ತಿ ಭೌತಿಕವಾದುದು ಅಲ್ಲ. ಆದ್ದರಿಂದ ಭೌತಿಕವಾಗಿ ತೋರಿಸುವುದಕ್ಕೆ ಸಾಧ್ಯ ಇರುವುದಿಲ್ಲ. ಅಭೌತಿಕವಾದ ದೈವಶಕ್ತಿಯನ್ನು ಅಭೌತಿಕವಾದ ಬುದ್ಧಿಯಿಂದ ಮಾತ್ರವೇ ಗ್ರಹಿಸಬಹುದು. ಹಾಗೆ ಗ್ರಹಿಸುವುದು ಸಹ ಅವರವರ ಬುದ್ಧಿ ಗ್ರಹಿತಶಕ್ತಿಯ ಮೇಲೆ ಇರುತ್ತದೆ. ಪೂರ್ವಕಾಲದಲ್ಲಿ ಇಂದೂ ಮಹಾಸಮುದ್ರದಲ್ಲಿ ದೈವಶಕ್ತಿ ಇತ್ತೆಂದು, ಈಗ ಅಲ್ಲಿ ಆ ಶಕ್ತಿ ಇಲ್ಲವೆಂದೂ ಸಹ ಹೇಳುತ್ತಿದ್ದೇವೆ. ಈಗ ಮತ್ತೊಂದು ಪ್ರಶ್ನೆಯನ್ನು ಕೆಲವರು ಕೇಳುವುದಕ್ಕೆ ಅವಕಾಶ ಇದೆ. “ನಾವು ಶಕ್ತಿಯನ್ನು ಕುರಿತು ಅದು ಇರುವಂತೆ ನೀವು ಹೇಗೆ ಹೇಳುತ್ತಿದ್ದೀರಾ? ಎಂದು ಕೇಳಿದ ಕೂಡಲೇ, ಇದೆ ಎಂದರೆ ಸಿಕ್ಕಿಕೊಳ್ಳುತ್ತೇವೆಂದುಕೊಂಡು, ಪೂರ್ವದಲ್ಲಿರುವುದು ಈಗ ಇಲ್ಲವೆ ನ್ನುತ್ತಿದ್ದೀರಾ?” ಎಂದು ಹೇಳಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೆ! ಈಗ ಆ ಶಕ್ತಿ ಅಲ್ಲಿ ಇಲ್ಲವೆಂದು ಹೇಳಿದ್ದೇವೆ. ಆದರೆ ಎಲ್ಲಿಯೂ ಇಲ್ಲವೆಂದು ಹೇಳಲಿಲ್ಲವಲ್ಲ! ಗತ ಕಾಲದಲ್ಲಿ ಇಂದೂ ಮಹಾಸಮುದ್ರದಲ್ಲಿರುವ ಶಕ್ತಿ, ತನ್ನ ಸ್ಥಳವನ್ನು ಬದಲಿಸಿಕೊಂಡು ಮತ್ತೊಂದುಕಡೆ ಇದೆಯೆಂದು ಹೇಳುತ್ತಿದ್ದೇನೆ. ನಿಮಗೆ ವಿವರವಾಗಿ ಅರ್ಥವಾಗುವುದಕ್ಕೆ ಸಮುದ್ರದಲ್ಲಿರುವ ಶಕ್ತಿಯನ್ನು ಕುರಿತು ಸ್ವಲ್ಪ ವಿವರವಾಗಿ ಹೇಳುತ್ತಿದ್ದೇವೆ ಕೇಳಿರಿ.

ಮನುಷ್ಯ ಶರೀರವು ಎಲ್ಲಾ ಪ್ರಕೃತಿಗೆ ಸಂಬಂಧಿಸಿರುವುದೆ ಎಂದು ಹೇಳ ಬಹುದು. ಪ್ರಕೃತಿಯಲ್ಲಿನ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವ ಪಂಚಭೂತಗಳಿಂದ ಶರೀರವು ತಯಾರಾಗಿದೆ. ಪಂಚಭೂತ ನಿರ್ಮಿತವಾದ ಶರೀರದಲ್ಲಿ, ಪಂಚಭೂತಗಳಾದ ಪ್ರಕೃತಿಯನ್ನು ಶಾಸಿಸಿ ನಡೆಸುವುದಕ್ಕೆ ಒಂದು ಶಕ್ತಿ ಮನುಷ್ಯನ ಮೆದುಳಿನಲ್ಲಿ ಸ್ಥಾನ ಮಾಡಿಕೊಂಡು

ಇದೆ. ಹಾಗೆ ಮನುಷ್ಯನಲ್ಲಿರುವ ಶಕ್ತಿಯನ್ನು ದೈವಶಕ್ತಿ ಅಥವಾ ಆತ್ಮಶಕ್ತಿ ಎನ್ನುತ್ತಿದ್ದೇವೆ. ಶರೀರದಲ್ಲಿನ ಆತ್ಮವಾಗಲಿ, ಆತ್ಮಶಕ್ತಿಯಾಗಲಿ ಯಾರಿಗೂ ಕಾಣಿಸುವುದಿಲ್ಲ. ಆತ್ಮಶಕ್ತಿಯೇ ಶರೀರವೆಲ್ಲವೂ ವ್ಯಾಪಿಸಿ ಅನೇಕ ಕೆಲಸಗಳು ನಡೆಯುವಂತೆ ಮಾಡುತ್ತಿದೆ. ಶರೀರದಲ್ಲಿ ಆತ್ಮ ಇದ್ದರೇನೆ ಶರೀರವು ಬದುಕುತ್ತದೆ. ಆತ್ಮ ಇಲ್ಲದೆ ಹೋದರೆ ಶರೀರವು ಕೆಲಸ ಮಾಡುವುದಿಲ್ಲ. ಒಂದು ಶರೀರದಲ್ಲಿ ಆತ್ಮಶಕ್ತಿ ಇದ್ದು ಪಂಚಭೂತಗಳು ಶರೀರವನ್ನು ನಡೆಸುವಂತೆ ಒಂದು ಗ್ರಹದಲ್ಲಾಗಲಿ, ಒಂದು ಗೋಳದಲ್ಲಾಗಲಿ ದೈವಶಕ್ತಿ (ಆತ್ಮಶಕ್ತಿ) ಇದ್ದು ಆ ಗೋಳವನ್ನು ನಡೆಸುತ್ತಿದೆ. ಆತ್ಮಶಕ್ತಿ ಇಲ್ಲದ ಚಿಕ್ಕ ಗ್ರಹವಾಗಲಿ, ದೊಡ್ಡ ಗೋಳವಾಗಲಿ, ನಕ್ಷತ್ರವಾಗಲಿ ವಿಶ್ವದಲ್ಲಿ ಏನೂ ಇಲ್ಲ. ವಿಶ್ವವ್ಯಾಪ್ತವಾಗಿ ಎಲ್ಲಾ ಗ್ರಹಗಳಲ್ಲಿಯೂ, ಗೋಳಗಳಲ್ಲಿಯೂ ಆತ್ಮ ತಪ್ಪದೆ ಇರಬೇಕಾಗಿದೆ. ಆತ್ಮಶಕ್ತಿ ಇಲ್ಲದಿದ್ದರೆ ಅದು ಮರಣಿಸಿದ ಮನುಷ್ಯನಿಗೆ ಸಮಾನ. ವಿಶ್ವದಲ್ಲಿ ಆತ್ಮಶಕ್ತಿಯನ್ನು ಕಳೆದುಕೊಂಡ ಗ್ರಹಗಳಾಗಲಿ, ಆತ್ಮಶಕ್ತಿ ಬಿಟ್ಟುಹೋದ ಗೋಳವಾಗಲಿ, ನಕ್ಷತ್ರ ವಾಗಲಿ ಮೃತದೇಹಗಳಿಗೆ ಸಮಾನವೇ ಆಗುತ್ತದೆ. ಮರಣಿಸಿದ ದೇಹವು ಹೇಗೆ ನಶಿಸಿ ಕಾಣಿಸದಂತೆ ಹೋಗುತ್ತದೊ, ಹಾಗೆಯೇ ವಿಶ್ವದಲ್ಲಿಯೂ ಸಹ ಆತ್ಮ ಇಲ್ಲದ ಗೋಳವೂ, ನಕ್ಷತ್ರವೂ ಏನಾದರೂ ಕತ್ತಲ ಗುಹೆಯೊಳಗೆ ಹೋಗಿ ಅದರಲ್ಲಿ ನಶಿಸಿ ಕಾಣಿಸದಂತೆ ಹೋಗುತ್ತಿದೆ. **ಮನುಷ್ಯರಿಗೆ ಸ್ಮಶಾನದಲ್ಲಿನ ಕುಣಿ ಇರುವಂತೆ, ಗೋಳಗಳಿಗೂ, ನಕ್ಷತ್ರಗಳಿಗೂ ಬ್ಲಾಕ್‌ಹೋಲ್ಸ್ ಎನ್ನುವವು ಇವೆ. ಬ್ಲಾಕ್‌ಹೋಲ್ ಎಂದು ಖಗೋಳ ಶಾಸ್ತ್ರಜ್ಞರು ಹೇಳುವವುಗಳನ್ನೇ ನಾವು ಕತ್ತಲ ಗುಹೆಗಳು ಎಂದು ಅನ್ನುತ್ತಿದ್ದೇವೆ.**

ಇದರಿಂದ ಮರಣಿಸಿದ ಮನುಷ್ಯನಿಗೆ ಸ್ಮಶಾನದಲ್ಲಿ ಕುಣಿ, ನಕ್ಷತ್ರಕ್ಕೆ ಆಕಾಶದಲ್ಲಿ ಬ್ಲಾಕ್‌ಹೋಲ್ ಎರಡು ಸಮಾನವೇ ಎಂದು ತಿಳಿಯುತ್ತಿದೆ. ಕುಣಿಯೊಳಗೆ ಹೋಗಿರುವ ಮನುಷ್ಯ ಹೇಗೆ ಕಾಣಿಸದಂತೆ ಮಣ್ಣಿನಲ್ಲಿ ಬೆರೆತುಹೋ ಗುತ್ತಾನೋ, ಹಾಗೆಯೇ ಬ್ಲಾಕ್‌ಹೋಲ್ ಒಳಗೆ ಹೋಗಿರುವ ಗೋಳವೂ ಸಹ ಕಾಣಿಸದಂತೆ ಕತ್ತಲಲ್ಲಿ ಬೆರೆತು ಹೋಗುತ್ತದೆ. ಮನುಷ್ಯನಿಗೆ ಸ್ಮಶಾನ

ಇರುವಂತೆ, ಗೋಳಗಳಿಗೆ ಬ್ಲಾಕ್‌ಹೋಲ್ಸ್ ಇವೆಯೆಂದು ತಿಳಿಯುತ್ತಿದೆ. ಒಬ್ಬ ಮನುಷ್ಯನಲ್ಲಿ ಆತ್ಮಶಕ್ತಿ ಅವನ ತಲೆಯಲ್ಲಿದ್ದು ಜೀವನ ಪರ್ಯಂತ ಅವನ ಶರೀರವನ್ನು ನಡೆಸುತ್ತಿದೆ. ಹಾಗೆಯೇ ಭೂಗೋಳದಲ್ಲಿನ ಸಮುದ್ರಕ್ಕೆ ಶಕ್ತಿಯನ್ನು ಕೊಟ್ಟು ಅದನ್ನು ನಡೆಸುವುದಕ್ಕೆ ಸಮುದ್ರದಲ್ಲಿ ಯಾವುದೋ ಒಂದು ಕಡೆ ಆತ್ಮಶಕ್ತಿ (ದೈವಶಕ್ತಿ) ಇರಬೇಕಾಗಿದ್ದೇ. ಭೂಗೋಳದಲ್ಲಿ ಇಂದೂ ಮಹಾ ಸಮದ್ರದಲ್ಲಿ ಆ ಶಕ್ತಿ ಇದೆಯೆಂದು ನಾವು ಹೇಳುತ್ತಾ ಬರುತ್ತಿದ್ದೇವೆ. ಕೃತಯುಗ, ತ್ರೇತಾಯುಗ, ದ್ವಾಪರಯುಗಗಳ ಕಾಲದಲ್ಲಿ ಇಂದೂ ಮಹಾಸಮುದ್ರದಲ್ಲಿ ತಿಷ್ಟೆಹಾಕಿದ ಶಕ್ತಿ, ಈಗ ಕಲಿಯುಗದಲ್ಲಿ 3112 ವರ್ಷಗಳಿಂದ ಅಲ್ಲಿ ಇಲ್ಲದಂತೆ ಹೋಗಿದೆ. ಕಲಿಯುಗದಲ್ಲಿಯೂ ಸಹ ಎರಡುಸಾವಿರ ವರ್ಷಗಳ ವರೆಗೂ ಇಂದೂ ಮಹಾಸಮುದ್ರದಲ್ಲಿರುವ ಶಕ್ತಿ ಈಗ 3112 ವರ್ಷಗಳಿಂದ ಉತ್ತರ ಅಮೇರಿಕಾ ದಲ್ಲಿನ ಪ್ಲೋರಿಡಾ ರಾಷ್ಟ್ರದ ಪಕ್ಕದ ಸಮುದ್ರದಲ್ಲಿ 20 ಲಕ್ಷಗಳಿಂದ 24 ಲಕ್ಷಗಳ ಚದರ ಕಿಲೋಮೀಟರ್‌ಗಳ ವೈಶಾಲ್ಯದಲ್ಲಿ ತಿಷ್ಟೆಹಾಕಿದೆ ಎಂದು ತಿಳಿಯುತ್ತಿದೆ. ಈಗ ಅಲ್ಲಿಂದಲೇ ಭೂಮಂಡಲದಲ್ಲಿನ ಎಲ್ಲಾ ಪ್ರಾಂತಗಳಿಗೂ ಶಕ್ತಿ ಪ್ರಸಾರವಾಗುತ್ತಿದೆ. ಶರೀರದಲ್ಲಿನ ಆತ್ಮ ಚೈತನ್ಯದಿಂದ ಶರೀರದಲ್ಲಿನ ಎಲ್ಲಾ ಕೆಲಸಗಳು ನಡೆದಂತೆ, ಸಮುದ್ರದಲ್ಲಿನ ಆತ್ಮಚೈತನ್ಯದಿಂದ ಭೂಗೋಳದಲ್ಲಿ ಎಲ್ಲಾ ಕೆಲಸಗಳು ನಡೆಯುತ್ತಿವೆ. ಈಗ ನಮ್ಮಿಂದ ಹೇಳಲಾದ ಸಮುದ್ರದ ಶಕ್ತಿ ರಹಸ್ಯ, ಇಲ್ಲಿಯವರೆಗೂ ಯಾವ ಖಗೋಳಶಾಸ್ತ್ರಜ್ಞನಿಗೆ ತಿಳಿದಿಲ್ಲವೆಂದು ಹೇಳಬಹುದು. ತ್ರೇತಾಯುಗದಲ್ಲಿ **ರಾವಣನಿಗೆ** ತಿಳಿದ ಸಮುದ್ರದಲ್ಲಿನ ಶಕ್ತಿಯನ್ನು ಕುರಿತೇ ನಾವು ಈಗ ಕಲಿಯುಗದಲ್ಲಿ ಹೇಳುತ್ತಿದ್ದೇವೆ. ಆಗಿನ ರಾವಣಬ್ರಹ್ಮ ಕಾಲದಿಂದ, ಈಗಿನ **ಪ್ರಬೋಧಾನಂದ ಯೋಗೀಶ್ವರರ**ವರೆಗೂ ಸಮುದ್ರ ಶಕ್ತಿ ಒಂದರ ಪ್ರಸ್ಥಾವನೆ ಬರಲಿಲ್ಲವೆಂದು ತಿಳಿಯುತ್ತಿದೆ.




# ತ್ರೈತಾಕಾರ ಶಕ್ತಿ-ಬೆರ್ಮುಡಾ ಟ್ರಯಾಂಗಿಲ್

ಎಲ್ಲೋ ಆಕಾಶದಲ್ಲಿರುವ ಸೂರ್ಯನು ತನ್ನ ಕಿರಣಗಳನ್ನು ಭೂಭಾಗದ ಮೇಲೆ ಪ್ರಸಾರಮಾಡಿ, ಈ ಲೋಕವೆಲ್ಲವನ್ನು ಪ್ರಕಾಶಿಸುವಂತೆ ಮಾಡಿದ ಹಾಗೆ, ಶರೀರದಲ್ಲಿ ತಲೆಯಲ್ಲಿರುವ ಆತ್ಮ, ತನ್ನಶಕ್ತಿಯನ್ನು ಶರೀರವೆಲ್ಲ ವ್ಯಾಪಿಸುವಂತೆಮಾಡಿ, ಶರೀರವೆಲ್ಲವನ್ನು ಚೈತನ್ಯ ಮಾಡಿದಂತೆ, ಭೂಮಂಡಲದಲ್ಲಿ ಎಲ್ಲಿಯೋ ಸಮುದ್ರದಲ್ಲಿ ಒಂದುಕಡೆ ಇರುವ ಶಕ್ತಿ, ಭೂಮಂಡಲವೆಲ್ಲವೂ ವ್ಯಾಪಿಸಿ ಪ್ರಕೃತಿ ಭಾಗಗಳಾದ ಪಂಚಭೂತಗಳಿಗೆ ಚೈತನ್ಯವನ್ನು ಕೊಟ್ಟು ಯಾವಾಗ, ಎಲ್ಲಿ ಯಾವ ವಿಧವಾಗಿ ಕೆಲಸ ಮಾಡಿಸಬೇಕೋ, ಆ ವಿಧವಾಗಿಯೇ ಕೆಲಸ ನಡೆಯುವಂತೆ ಮಾಡುತ್ತಿದೆ. ಶರೀರದಲ್ಲಿ ಪಂಚಭೂತಗಳಿಂದ ತಯಾರಾದ ಎಲ್ಲಾ ಭಾಗಗಳಿಗೂ, ತಲೆಯಲ್ಲಿ ಬ್ರಹ್ಮನಾಡಿಯಲ್ಲಿರುವ ಆತ್ಮ, ಶಕ್ತಿಯನ್ನು ಕೊಡುತ್ತಾ ಆ ಶರೀರದಲ್ಲಿನ ಜೀವಿಯ ಕರ್ಮದ ಪ್ರಕಾರ ಕಷ್ಟ ಸುಖಗಳನ್ನು ಉಂಟುಮಾಡುತ್ತಿದೆ ಎಂದು ಆತ್ಮಜ್ಞಾನದಲ್ಲಿ ತಿಳಿದುಕೊಂಡಿದ್ದೇವೆ. ಹಾಗೆಯೇ ಭೂಮಂಡಲವನ್ನು ಒಂದು ಶರೀರವಾಗಿ ತೆಗೆದುಕೊಂಡರೆ ಅದರಲ್ಲಿನ ಆತ್ಮಶಕ್ತಿ ಶರೀರದಲ್ಲಿನ ಪಂಚಭೂತಗಳಿಗೂ ವ್ಯಾಪಿಸಿದಂತೆ, ಸಮುದ್ರದಲ್ಲಿನ ಶಕ್ತಿ ಭೂಮಂಡಲದಲ್ಲಿನ ಎಲ್ಲಾ ಭಾಗಗಳಿಗೂ ವ್ಯಾಪಿಸುತ್ತಿದೆ ಎನ್ನುವುದು ಸಹ ಆತ್ಮಜ್ಞಾನವೆ. ಇದರಿಂದ ಶರೀರದಲ್ಲಿನ ಆಧ್ಯಾತ್ಮಿಕವೂ, ಶರೀರದ ಹೊರಗಿನ ಪ್ರಪಂಚದಲ್ಲಿನ ಆಧ್ಯಾತ್ಮಿಕ ಎಂದು ಎರಡು ವಿಧಗಳ ಆಧ್ಯಾತ್ಮಿಕಗಳು ಇವೆ. ಭೂತಗಳು, ಮಹಾ ಭೂತಗಳೆಂದು ಎರಡು ವಿಧಗಳಿವೆ ಎಂದು ಬಹಳಸಲ ಹೇಳಿಕೊಂಡಿದ್ದೇವೆ. ಭೂತ ಎಂದರೆ ಜೀವಿಯೆಂದೂ ಸಹ ಹೇಳಿಕೊಂಡಿದ್ದೇವೆ. ಮಹಾ ಭೂತಗಳೆಂದರೆ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಯೊಂದರ ಜೀವಾತ್ಮಗಳೆಂದು ಸಹ **"ದೆವ್ವಗಳ-ಭೂತಗಳ ಯಥಾರ್ಥ ಸಂಘಟನೆಗಳು"** ಎನ್ನುವ ಗ್ರಂಥದಲ್ಲಿಯೂ ಸಹ ಹೇಳಿಕೊಂಡಿದ್ದೇವೆ. ಈ ಗ್ರಂಥದಲ್ಲಿ ಇಲ್ಲಿಯ ವರೆಗೂ ಹೇಳಿಕೊಂಡ ಸಮುದ್ರದ ಮೇಲಿರುವ ಶಕ್ತಿ ನೀರು ಎನ್ನುವ ಭೂತವೊಂದರ ಆತ್ಮದೆಂದು ತಿಳಿಯಬೇಕು. ಗಾಳಿ, ಅಗ್ನಿ, ಆಕಾಶ, ಭೂಮಿ

ಎನ್ನುವ ಭೂತಗಳಿಗೂ ಸಹ ಆತ್ಮಗಳು ಇವೆ. ನಾವು ಈಗ ಹೇಳಿಕೊಳ್ಳುತ್ತಿರುವುದು ಒಂದು ನೀರಿನ ಶಕ್ತಿಯನ್ನು ಕುರಿತೆಂದು ಜ್ಞಾಪಕ ಇಟ್ಟುಕೊಳ್ಳಬೇಕು.

ಒಂದುಕಡೆ ಜೀವಿಯಿದ್ದಾನೆಂದರೆ, ಅಲ್ಲಿ ಆ ಜೀವಿಯೊಂದಿಗೆ ಆತ್ಮವೂ ಸಹ ಇರುತ್ತದೆಂಬುವುದು ಬ್ರಹ್ಮವಿದ್ಯಾ ಶಾಸ್ತ್ರಬದ್ಧತೆ. ನಾವು ಏನು ಹೇಳಿಕೊಂಡರು ಶಾಸ್ತ್ರಬದ್ಧವಾಗಿರಬೇಕು. ಶಾಸ್ತ್ರವನ್ನು ಅತಿಕ್ರಮಿಸಿ ಏನು ಹೇಳುತ್ತಿಲ್ಲ. ಜೀವಾತ್ಮ, ಆತ್ಮ ಎರಡು ಜೋಡಿ ಆತ್ಮಗಳು. ಒಂದು ಇದೆ ಎಂದರೆ ಮತ್ತೊಂದು ಇರಲೇಬೇಕು. ಈ ಎರಡು ಆತ್ಮಗಳಿರುವ ಕಡೆ ಮೂರನೆಯದು, ಎರಡಕ್ಕಿಂತ ದೊಡ್ಡದು, ಎರಡಕ್ಕಿಂತ ಉತ್ತಮವಾದುದು ಮತ್ತೊಂದು ಇದೆ, ಅದೇ ಪರಮಾತ್ಮ. ಒಂದು ಜೀವಾತ್ಮ, ಎರಡು ಆತ್ಮ, ಮೂರು ಪರಮಾತ್ಮ ಎಂದು ಹಿಂದೆ ಸಹ ಹೇಳಿಕೊಂಡಿದ್ದೇವೆ. ಈ ಮೂರು ಆತ್ಮಗಳ ವಿಧಾನದಿಂದಲೇ **"ತ್ರೈತ ಸಿದ್ಧಾಂತ"** ಏರ್ಪಟ್ಟಿದೆ ಎಂದು ಸಹ ಹೇಳಿಕೊಂಡಿದ್ದೇವೆ. ಈ ಮೂರು ಆತ್ಮಗಳ ವಿಧಾನವನ್ನು ತಿಳಿದುಕೊಳ್ಳುವುದೇ ಅಸಲಾದ ದೈವಜ್ಞಾನ. ದೈವಜ್ಞಾನದ ಪ್ರಕಾರ ವಿವರಿಸಿ ಕೊಂಡರೆ, ಜೀವಾತ್ಮ ಶರೀರದಲ್ಲಿ ಒಂದು ಸ್ಥಳದಲ್ಲಿ ಇರುವುದಾಗಿದ್ದು, ಆತ್ಮ ಶರೀರವೆಲ್ಲವೂ ವ್ಯಾಪಿಸಿರುವುದಾಗಿದೆ. ಜೀವಾತ್ಮ ಶರೀರವೆಲ್ಲ ಇರುವುದು ಅಲ್ಲವೆಂದು, ಆತ್ಮ ಒಂದುಕಡೆಯಲ್ಲಿಯೇ ಪರಿಮಿತವಲ್ಲವೆಂದು ಇದರಿಂದ ತಿಳಿಯುತ್ತಿದೆ. ಇನ್ನು ಪರಮಾತ್ಮ ವಿಷಯಕ್ಕೆ ಬಂದರೆ, ಅದು ಅಣುವಣುವಿನಲ್ಲೂ ಶರೀರದಲ್ಲಿಯೂ, ಶರೀರದ ಹೊರಗೂ ವ್ಯಾಪಿಸಿದೆ. ಜೀವಾತ್ಮ ಆತ್ಮಗಳೆರಡೂ ಶರೀರದ ಒಳಗೇ ಇರುವಾಗ, ಪರಮಾತ್ಮ ಮಾತ್ರ ಶರೀರದ ಒಳಗೂ, ಶರೀರದ ಹೊರಗೂ ಎಲ್ಲಾಕಡೆ ವ್ಯಾಪಿಸಿದೆ. ಜೀವಾತ್ಮ ಆತ್ಮಗಳು ಒಂದಕ್ಕೊಂದು ಸಂಬಂಧ ಹೊಂದಿರುವಾಗ, ಪರಮಾತ್ಮ ಶರೀರದಲ್ಲಿನ ಎರಡು ಆತ್ಮಗಳೊಂದಿಗೆ ಯಾವ ಸಂಬಂಧವಿಲ್ಲದೆ ಇದೆ. ಜೀವಾತ್ಮ, ಆತ್ಮಗಳು ಎರಡೂ ಜನನದಲ್ಲಿಯೂ, ಮರಣದಲ್ಲಿಯೂ ಜೋಡಿಯಾಗಿ ಪ್ರಯಾಣ ಮಾಡುತ್ತಿವೆ. ಪರಮಾತ್ಮ, ಜೀವಾತ್ಮ ಆತ್ಮಗಳೊಂದಿಗೆ ಯಾವಾಗಲೂ ಸೇರುವುದಿಲ್ಲ. ಪರಮಾತ್ಮ ಎಲ್ಲಾಕಡೆ ವ್ಯಾಪಿಸಿದೆ, ಅದು ಒಂದುಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಮಾಡುವುದಿಲ್ಲ.

ಏಕೆಂದರೆ ಅದು ಅಲ್ಲಿ, ಇಲ್ಲಿ ಎಲ್ಲಾ ಕಡೆಯಲ್ಲಿಯೂ ಇದೆ. ಒಂದು ಶರೀರದಲ್ಲಿ ಮೂರು ಆತ್ಮಗಳಿದ್ದರೂ ಜೀವಾತ್ಮ, ಆತ್ಮ ಎರಡು ಆತ್ಮಗಳು ಜೋಡಿ ಆತ್ಮ ಗಳಾಗಿದ್ದು, ಒಂದು ಪರಮಾತ್ಮ ಮಾತ್ರ ಪ್ರತ್ಯೇಕವಾಗಿ ಇದೆ. ಈ ವಿಧಾನವು ಎಲ್ಲರಲ್ಲಿಯೂ ಇದೆಯೆಂದು, ಈ ವಿಷಯವು ಎಲ್ಲರಿಗೂ ತಿಳಿಯಬೇಕೆಂದು, ನಮ್ಮ ಶರೀರ ನಿರ್ಮಾಣ ಸಮಯದಲ್ಲಿಯೇ ನಮ್ಮ ಹಸ್ತದಲ್ಲಿ ಮುಖ್ಯವಾಗಿ ಮೂರು ರೇಖೆಗಳು ತಯಾರಾಗಿವೆ. ಅದರಲ್ಲಿ ಜೀವಾತ್ಮ, ಆತ್ಮಗಳು ಎರಡೂ ಜೋಡಿ ಆತ್ಮಗಳೆಂದು ತಿಳಿಯುವಂತೆ, ಎರಡು ರೇಖೆಗಳು ಮೊದಲು ಬಿಡಿಬಿಡಿಯಾಗಿ ಹುಟ್ಟಿ, ಕೊನೆಯಲ್ಲಿ ಎರಡು ಕೊನೆಗಳು ಕೂಡಿವೆ. ಪರಮಾತ್ಮ ಪ್ರತ್ಯೇಕವಾದುದು ಎಂದು ತಿಳಿಯುವಂತೆ, ಎರಡು ರೇಖೆಗಳಿಗೆ ಮೇಲೆ ಒಂದು ರೇಖೆ ಪ್ರತ್ಯೇಕವಾಗಿ ಹುಟ್ಟಿದೆ. ನಮ್ಮ ಶರೀರದಲ್ಲಿನ ತ್ರೈತಾತ್ಮಗಳ ವಿಷಯವು ಪ್ರತಿಯೊಬ್ಬರ ಹಸ್ತದಲ್ಲಿಯೂ ಇದೆ.




**ಹಸ್ತ**

ಒಬ್ಬ ಮನುಷ್ಯನ ಶರೀರದಲ್ಲಿನ ಆತ್ಮ ವಿವರ ಇರುವಂತೆ ಒಂದು ಗ್ರಹ ಶರೀರದಲ್ಲಾಗಲಿ, ಒಂದು ಗೋಳದ ಶರೀರದಲ್ಲಾಗಲಿ, ಹಾಗೆ ನಕ್ಷತ್ರದ ಶರೀರದಲ್ಲಾಗಲಿ ಆತ್ಮಗಳಿರುವುದು ಸಹಜ. ಒಂದುಬಾರಿ 3112 ವರ್ಷಗಳ ಪೂರ್ವದಲ್ಲಿ ಇಂದೂ ಮಹಾಸಮುದ್ರದಲ್ಲಿರುವ ಮೂರು ಆತ್ಮಗಳು ಸಹ ಮಾನವನ ಹಸ್ತದಲ್ಲಿ ಮೂರು ರೇಖೆಗಳಾಗಿ ಕಾಣಿಸುವಂತೆ, ಮೂರು ಮೂಲೆಗಳು ಹೊಂದಿರುವ ತ್ರಿಭುಜಾಕಾರವಾಗಿ ತಿಳಿಯುವಂತೆ ಇರುತ್ತಿದ್ದವು. ಇಂದೂ ಮಹಾಸಮುದ್ರದಲ್ಲಿ ತ್ರಿಕೋನಾಕಾರವಾಗಿ ಮೂರು ಆತ್ಮಗಳ ಚಿಹ್ನೆ ಇರುತ್ತಿತ್ತೆಂದು ಆಗ ಯಾರಿಗೂ ಗೊತ್ತಿಲ್ಲ. ಕಲಿಯುಗದಲ್ಲಿ 2000 ವರ್ಷಗಳ ವರೆಗೂ ಇಂದೂ ಮಹಾಸಮುದ್ರದಲ್ಲಿರುವ ತ್ರಿಭುಜಾಕಾರ ಶಕ್ತಿ, ಈಗ 3112 ವರ್ಷಗಳಿಂದ ಉತ್ತರ ಅಮೇರಿಕಾಗೆ ಎಡಗಡೆ ಇರುವ ಸಮುದ್ರದಲ್ಲಿ ತ್ರಿಕೋನಾಕಾರ ಹೊಂದಿ ದೆಯೆಂದು ಹೇಳುತ್ತಿದ್ದೇವೆ. ಸಮುದ್ರದ ಮೇಲೆ ಸುಮಾರು 24 ಲಕ್ಷಗಳ ಚದರ ಕಿಲೋಮೀಟರ್‌ಗಳ ತ್ರಿಭುಜಾಕಾರ ವಿಸ್ತೀರ್ಣದಲ್ಲಿ, ಆತ್ಮಶಕ್ತಿ ವ್ಯಾಪಿಸಿದೆ. ನಾನು ಮೊದಲಿನಿಂದ ಹೇಳುವುದು ಒಂದು ವಿಚಿತ್ರ ಕಥೆಯಂತೆ ನಂಬಲರ್ಹ ವಾಗದಂತೆ ಇರುವುದರಿಂದ, ನನ್ನ ಮಾತು ನಿಜವೆಂದು ತಿಳಿಯುವುದಕ್ಕೆ 1950 ಸೆಪ್ಟೆಂಬರ್ 16ನೇ ತಾರೀಖು ತ್ರಿಭುಜಾಕಾರ ಇರುವ ಸಮುದ್ರ ವಿಸ್ತೀರ್ಣದಲ್ಲಿ ದೊಡ್ಡ ನೌಕೆಯ ಜಾಡು ತಿಳಿಯದಂತೆ ಹೋಗಿದೆ. ಸರಿಯಾಗಿ ಇಂತಹ ಪ್ರಾಂತದಲ್ಲಿಯೇ ಹೋಗಿದೆ ಎಂದು ಆ ದಿನ ಗುರುತಿಸಲ್ಪಟ್ಟಿದ್ದಾರೆ.

ಅದಕ್ಕೂ ಮೊದಲಿನಿಂದ ಆ ಪ್ರಾಂತದಲ್ಲಿ, ಸಮುದ್ರದ ಮೇಲೆ ಶಕ್ತಿ ಇದೆಯೆಂದು ನಮ್ಮ ಮಾತಿಗೆ ಆಧಾರವಾಗಿ 1947ನೇ ವರ್ಷ ಡಿಸೆಂಬರ್ 5ನೇ ತಾರೀಖು ಅಮೇರಿಕಾ ಯುದ್ಧ ವಿಮಾನಗಳು ಒಂದೇಬಾರಿ, ಆರು ಜಾಡು ಇಲ್ಲದೆ ತಿಳಿಯದಂತೆಹೋಗಿವೆ. ಆ ದಿನ ಆರು ವಿಮಾನಗಳು ಹೋದರೂ, ಸಮುದ್ರದ ಮೇಲೆ ತ್ರಿಭುಜಾಕಾರ ಪ್ರಾಂತದಲ್ಲಿ ಯಾವುದೋ ಶಕ್ತಿ ಇದೆಯೆಂದು ತಿಳಿಯದೆಹೋಗಿದ್ದಾರೆ. 1950ರಲ್ಲಿ ಸ್ಟೀಮರ್ ಹೋದಾಗ

ಅಲ್ಲಿ ಏನೋ ತಿಳಿಯದ ಶಕ್ತಿ ಇದೆಯೆಂದು ಪ್ರಜೆಗಳಿಗೆ ತಿಳಿದಿದೆ. ಇಂತಹ ಪ್ರಾಂತದಲ್ಲಿ, ಇಂತಹ ನೌಕೆ ಹೋಗಿದೆ ಎಂದು ತಿಳಿದರೂ, ಅದು ಇಂತಹ ವಿಧವಾಗಿ ಹೋಗಿದೆ ಎಂದು ತಿಳಿದಿಲ್ಲ. ನಂತರ ಕಾಲದಲ್ಲಿಯೂ ಸಹ ತ್ರಿಭುಜಾಕಾರ ಸಮುದ್ರದ ಮೇಲೆ, ತಿಳಿಯದೆ ಹೋಗಿರುವ ಕೆಲವು ನೌಕೆಗಳು, ಕೆಲವು ವಿಮಾನಗಳು ಮಾಯವಾಗಿ ಹೋಗುವುದರಿಂದ ಅಲ್ಲಿ ಏನು ನಡೆಯುತ್ತಿದೆಯೋ, ಯಾರಿಗೂ ಅರ್ಥವಾಗದ ಸ್ಥಿತಿ ಏರ್ಪಟ್ಟಿದೆ. ನಂತರ ಆ ರಹಸ್ಯವನ್ನು ತಿಳಿದುಕೊಳ್ಳುವುದಕ್ಕೆ ಬಹಳಜನರು ಪರಿಶೋಧಕರು, ಶಾಸ್ತ್ರಜ್ಞರು ಪ್ರಯತ್ನ ಮಾಡಿದ್ದಾರೆ. ಅಲ್ಲಿಗೆ ಪರಿಶೋಧನೆಗೋಸ್ಕರವಾಗಿ ಹೋದವರು ಸಹ ಜಾಡು ಸಿಗದಂತೆ ಹೋಗಿರುವುದು ನಡೆದಿದೆ. ಅದರಿಂದ ಉಳಿದವರೆಲ್ಲರೂ ಭಯಪಟ್ಟು ಅಲ್ಲಿ ಪರಿಶೋಧನೆ ಮಾಡಬೇಕೆಂಬ ಪ್ರಯತ್ನವನ್ನು ಬಿಟ್ಟಿದ್ದಾರೆ. ಆಗಿನಿಂದ ಸಮುದ್ರದ ಮೇಲೆ ತ್ರಿಕೋನಾಕಾರವಾಗಿರುವ ಏರಿಯಾವನ್ನೂ ಅಲ್ಪಸ್ವಲ್ಪ ಗುರುತಿಸಿ, ಆ ಪ್ರಾಂತದೊಳಗೆ ಯಾರು ಹೋಗಬಾರದೆಂದು ನಿಷೇಧಿಸಿದ್ದಾರೆ. ಆ ತ್ರಿಭುಜಾಕಾರ ಪ್ರಾಂತವನ್ನು ನಿಷೇಧ ಪ್ರಾಂತವಾಗಿ ಪ್ರಕಟಿಸಿದ್ದಾರೆ. ಆ ಪ್ರಾಂತಕ್ಕೆ "ಬೆರ್ಮುಡಾ ಟ್ರಯಾಂಗಿಲ್" ಎನ್ನುವ ಹೆಸರನ್ನು ಸಹ ಇಟ್ಟಿದ್ದಾರೆ. ಸಮುದ್ರದ ಮೇಲೆ ಬೆರ್ಮುಡಾ ಟ್ರಯಾಂಗಿಲ್ ಒಂದು ಅಪಾಯಕರವಾದ ಪ್ರಾಂತವಾಗಿ ಬಹಳಜನರಿಗೆ ತಿಳಿದುಹೋಗಿದೆ. ಆದರೆ ಆ ಪ್ರಾಂತದಲ್ಲಿ ಏಕೆ ಹಾಗೆ ನಡೆಯುತ್ತಿದೆಯೊ? ಯಾರು ಅಪಾಯಕ್ಕೆ ಗುರಿ ಮಾಡುತ್ತಿದ್ದಾರೊ, ಯಾರಿಗೂ ತಿಳಿಯದ ರಹಸ್ಯವಾಗಿ ಉಳಿದುಹೋಗಿದೆ.

1938ನೇ ವರ್ಷದಲ್ಲಿ 5500 ಟನ್ನುಗಳ ಭಾರವನ್ನು ಹೊತ್ತುಕೊಂಡು ಹೋಗುವ ನೌಕೆಯೊಂದು ಒಂದರಿಂದ ಎರಡು ನಿಮಿಷಗಳಲ್ಲಿ ತಿಳಿಯದಂತೆ ಹೋಗಿದೆ. ಅದು ಮುಳುಗಿಹೋದಂತಾಗಲಿ, ಹೊಡೆದುಹೋದಂತಾಗಲಿ ಯಾವ ಆಧಾರಗಳು ಇಲ್ಲ. ಅಷ್ಟು ದೊಡ್ಡ ನೌಕೆ ಹೋಗುವುದನ್ನು ಕುರಿತು ಪರಿಶೋಧನೆ ಸಾಗಿಸಿದವರು "ಕೊನೆಗೆ ಆ ನೌಕೆ ಏನಾಗಿದೆಯೋ ಆ ಸಮುದ್ರಕ್ಕೆ ಗೊತ್ತು,


ದೇವರಿಗೆ ಗೊತ್ತು, ಉಳಿದವರಿಗೆ ಯಾರಿಗೂ ಗೊತ್ತಿಲ್ಲ" ಎಂದಿದ್ದಾರೆ. ಒಂದು ಯುದ್ಧ ವಿಮಾನ ಆಕಾಶದಲ್ಲಿ ಹೋಗುತ್ತಾ ಸ್ವಲ್ಪ ಆ ಪ್ರಾಂತದ ಮೇಲೆ ಹೋಗಿದೆ. ಹೊರಟಿರುವ ಸ್ಟೇಷನ್‌ನಿಂದ ಆ ವಿಮಾನಕ್ಕೆ ವೈರ್‌ಲೆಸ್ ಕನೆಕ್ಷನ್ ಇರುವುದರಿಂದ, ವಿಮಾನವನ್ನು ನಡೆಸುತ್ತಿರುವ ಪೈಲೆಟ್ ತನ್ನ ಕ್ಯಾಬಿನ್‌ನಲ್ಲಿ ನಡೆಯುವ ವಿಷಯಗಳೆಲ್ಲವನ್ನು ಆಗಿಂದಾಗ್ಗೆ ಕೆಳಗಿನ ಸ್ಟೇಷನ್‌ಗೆ ತಿಳಿಯಪಡಿಸುತ್ತಿದ್ದನು. ಬೆರ್ಮುಡಾ ಟ್ರಯಾಂಗಿಲ್ ಒಳಗೆ ಪ್ರವೇಶಿಸಿದ ಕೂಡಲೇ ವಿಮಾನದ ಡ್ಯಾಷ್‌ಬೋರ್ಡ್‌ನಲ್ಲಿನ ಮೀಟರ್‌ಗಳೆಲ್ಲವೂ ತಮ್ಮ ಇಷ್ಟಬಂದಂತೆ ಮುಳ್ಳುಗಳನ್ನು ತೋರಿಸುವುದು ಪ್ರಾರಂಭಿಸಿದವು. ಆ ಮೀಟರ್‌ಗಳಿಂದ ವಿಮಾನ ಎಷ್ಟು ವೇಗವಾಗಿ ಹೋಗುವುದು ತಿಳಿಯಲಿಲ್ಲ. ಹಾಗೆ ಯಾವ ದಿಕ್ಕಿಗೆ ಹೋಗುವುದು ತಿಳಿಯಲಿಲ್ಲ. ಎಷ್ಟು ಎತ್ತರದಲ್ಲಿ ಹೋಗುತ್ತಿರುವುದು ಸಹ ಮೀಟರ್‌ಗಳು ತೋರಿಸುತ್ತಿಲ್ಲ. ಆಗ ವಿಮಾನವನ್ನು ನಡೆಸುತ್ತಿರುವ ಪೈಲೆಟ್ ಆ ವಿಷಯವನ್ನು ಕೆಳಗಿನ ಸ್ಟೇಷನ್‌ಗೆ ಹೇಳುತ್ತಲೇ ಇದ್ದಾನೆ. ಪೈಲೆಟ್ ನಡೆಸಿದಂತೆ ವಿಮಾನ ಹೋಗುತ್ತಿಲ್ಲ. ಪೈಲೆಟ್ ಅಯೋಮಯ ಸ್ಥಿತಿಯಲ್ಲಿ ಇದ್ದಾನೆ. ಅಷ್ಟರಲ್ಲಿ ವಿಮಾನ ಸುತ್ತಾ ಮೇಘಗಳು ಇರುವಾಗ ಮಧ್ಯದಲ್ಲಿ ಒಂದು ಗುಹೆಯಂತೆ ಕಾಣಿಸುತ್ತಾ ಇದೆ. ವಿಮಾನ ಮೇಘಗಳ ಮಧ್ಯದೊಳಗೆ ಸುರಂಗದೊಳಗೆ ಹೋದಂತೆ ಕಾಣಿಸುತ್ತಿದೆ. ಅಲ್ಲಿಯವರೆಗೂ ಏನು ನಡೆಯುತ್ತಿರುವುದು ಹೇಳುತ್ತಿರುವ ಪೈಲೆಟ್, ನಂತರ ಏನು ನಡೆದಿರುವುದು ಹೇಳಲಿಲ್ಲ. ಅಲ್ಲಿಗೆ ಆ ವಿಮಾನದಿಂದ ರೇಡಿಯೋ ಕನೆಕ್ಷನ್  ಕಿತ್ತುಹೋಗಿದೆ. ನಂತರ ಏನು ನಡೆದಿದೆಯೋ ಏನೊ ಆಗಲಿ ಆ ವಿಮಾನ ಮಾತ್ರ ಗುರುತು ಇಲ್ಲದಂತೆ ಮಾಯವಾಗಿಹೋಗಿದೆ. ಈ ವಿಧವಾಗಿ ಒಂದು ವಿಮಾನ ವಿಷಯದಲ್ಲಿ ಸ್ವಲ್ಪ ಸಮಾಚಾರ ದೊರೆತಿದೆ. ಅಮೇರಿಕಾದವರು ಗುರುತಿಸಿದ ಟ್ರಯಾಂಗಿಲ್ ಏರಿಯಾದಲ್ಲಿಯೇ ಹಾಗೆ ನಡೆಯುತ್ತಿದೆಂದು ತಿಳಿದರೂ, ಕೊನೆಯಲ್ಲಿ ವಿಮಾನಗಳಾಗಲಿ, ನೌಕೆಗಳಾಗಲಿ ಏನಾಗಿವೆಯೋ ಯಾರಿಗೂ ಅರ್ಥವಾಗಲಿಲ್ಲ. ಸೈನ್ಸ್‌ಗೆ ಅರ್ಥವಾಗದ ಮಿಸ್ಟರಿಯಾಗಿ ಬೆರ್ಮುಡಾ ಟ್ರಯಾಂಗಿಲ್ ನಿಂತುಹೋಗಿದೆ. **ಟ್ರಯಾಂಗಿಲ್ ಎಂದರೆ ಮೂರು ಕೋನಗಳೆಂದು**

**ಅರ್ಥ. ಬೆರ್ಮುಡಾ ಎನ್ನುವುದು ಆ ಪ್ರಾಂತದಲ್ಲಿನ ಚಿಕ್ಕದ್ವೀಪ. ಅದರ ಗುರುತಿಗಾಗಿ ಇಟ್ಟಿರುವ ಹೆಸರೆಂದು ತಿಳಿಯುತ್ತಿದೆ.**

ಪೂರ್ವದಲ್ಲಿ ಮೂರು ಯುಗಗಳಿಂದ ಇಂದೂ ಮಹಾಸಮುದ್ರದಲ್ಲಿ ದೈವಶಕ್ತಿ ಅಥವಾ ಆತ್ಮಶಕ್ತಿ ಎನ್ನುವುದು ಮೂರು ಕೋನಗಳ ಆಕಾರದಿಂದಲೇ ಇದೆ. ಅಲ್ಲಿರುವಾಗ ಅದರಶಕ್ತಿ ವಿಷಯವಾಗಲಿ, ಅದರ ಆಕಾರ ವಿಷಯವಾಗಲಿ ಯಾರಿಗೂ ತಿಳಿದಿಲ್ಲ. ಈ ಮಧ್ಯ ಕಾಲದಲ್ಲಿ 60 ವರ್ಷಗಳಿಂದ ಮೂರು ಕೋನಗಳಿರುವ ಪ್ರಾಂತ ಅಟ್ಲಾಂಟಿಕ್ ಮಹಾಸಮುದ್ರದಲ್ಲಿ ಒಂದಿದೆ ಎಂದು ಕೆಲವರಿಗೆ ತಿಳಿದಿದೆ. ಇಂದೂ ಮಹಾಸಮುದ್ರದಲ್ಲಿ ಮೂರು ಕೋನಗಳಿಂದ ತ್ರೈತಾಕಾರವಾಗಿ ಸಮುದ್ರದ ಮೇಲಿರುವ ಶಕ್ತಿ, ಪ್ರಸ್ತುತ ಉತ್ತರ ಅಮೇರಿಕಾ ಪಕ್ಕದಲ್ಲಿ ಅಟ್ಲಾಂಟಿಕ್ ಸಮುದ್ರದ ಮೇಲೆಯೂ ಸಹ ಇಂದೂ ಮಹಾ ಸಮದ್ರದಲ್ಲಿರುವ ಆಕಾರದಿಂದಲೇ ಇರುವುದು ವಿಶೇಷ. ಸುಮಾರು 39 ಲಕ್ಷ ವರ್ಷಗಳಿಂದ ಭಾರತದೇಶಕ್ಕೆ ದಕ್ಷಿಣ ಭಾಗದಲ್ಲಿರುವ ಶಕ್ತಿ, ಕಲಿಯುಗದಲ್ಲಿ ಎರಡು ಸಾವಿರವರ್ಷಗಳು ಕಳೆದ ನಂತರ, ಒಂದೇಬಾರಿಗೆ ಇಂದೂ ಮಹಾ ಸಮುದ್ರದಿಂದ ಅಟ್ಲಾಂಟಿಕ್ ಸಮುದ್ರದ ಮೇಲಕ್ಕೆ ಬರುವುದಕ್ಕೆ ಕಾರಣ ತಪ್ಪದೆ ಇರುತ್ತದೆ. ಇದಕ್ಕೆ ಮೊದಲು ಕಲಿಯುಗದಲ್ಲಿ 3112 ವರ್ಷದವರೆಗೂ ಇಂದೂ ಮಹಾಸಮುದ್ರದಲ್ಲಿ ಮೂರು ಕೋನಗಳ ಆಕಾರದಿಂದ ಇರುವ ಶಕ್ತಿ, ಈಗಲೂ ಸಹ ಅದೇ ಆಕಾರದಿಂದ ಇರುವುದಕ್ಕೆ ಕಾರಣವೇನೆಂದು ನೋಡಿದರೆ ಈ ವಿಧವಾಗಿದೆ.

ಪಂಚಭೂತಗಳಿಗೂ ಸಹ ಆತ್ಮ ಇದೆಯೆಂದು ಆಧ್ಯಾತ್ಮಿಕ ರೀತ್ಯಾ ತಿಳಿಯುತ್ತಿದೆ. ಆದ್ದರಿಂದ ಭೂಮಂಡಲದಲ್ಲಿನ ನೀರಿಗೆ ಆತ್ಮ ಸಮುದ್ರದಲ್ಲಿದೆ ಎಂದು ಅರ್ಥವಾಗುತ್ತಿದೆ. ಯಾವ ಭೂತಕ್ಕಾದರೂ (ಯಾವ ಜೀವರಾಶಿಗಾದರು) ಅದಕ್ಕಿರುವ ಶರೀರದಲ್ಲಿಯೇ ಆತ್ಮ ಜೊತೆಯಾಗಿರುತ್ತದೆ. ಜೀವಾತ್ಮ, ಆತ್ಮಗಳು ಎರಡಾಗಿದ್ದು ಮೂರನೆಯದು ಪರಮಾತ್ಮ ಸಹ ಇರುತ್ತದೆಂದು ಹೇಳಿ

ಕೊಂಡಿದ್ದೇವೆ. ಈ ಮೂರು ಆತ್ಮಗಳ ವಿಷಯ ಹೊರಗೆ ತಿಳಿಯುವುದಕ್ಕೆ ನೀರಿನಲ್ಲಿರುವ ಆತ್ಮ ಶಕ್ತಿ ತ್ರಿಕೋನಾಕಾರದಿಂದಲೇ ಇದೆ. ಜೀವಾತ್ಮ, ಆತ್ಮಗಳು ಎರಡು ಒಂದೇ ಜೋಡಿಯಾಗಿರುವ ಆತ್ಮಗಳು, ನಂತರ ಮೂರನೆಯದಾದ ಪರಮಾತ್ಮ ಪ್ರತ್ಯೇಕವಾಗಿದೆ. ಆ ವಿಷಯ ಚೆನ್ನಾಗಿ ಅರ್ಥವಾಗುವುದಕ್ಕೆ ಮೂರು ಕೋನಗಳ ಆಕಾರದಲ್ಲಿಯೂ ಸಹ ಪರಮಾತ್ಮ ಪ್ರತ್ಯೇಕ ಕೋನವಾಗಿ, ಎರಡು ಆತ್ಮಗಳನ್ನು ಸಮಾನವಾದ ಕೋನವಾಗಿ ಕಾಣಿಸುವುದು ನಡೆದಿದೆ. ಇಂದೂ ಮಹಾಸಮುದ್ರದಲ್ಲಾಗಲಿ, ಅಟ್ಲಾಂಟಿಕ್ ಸಮುದ್ರದಲ್ಲಾಗಲಿ ದೈವಶಕ್ತಿ (ಆತ್ಮಶಕ್ತಿ) ಒಂದೇ ಆಕಾರವಾಗಿ ಹೇಗೆ ವ್ಯಾಪಿಸಿದೆಯೋ ಕೆಳಗೆ ಚಿತ್ರದಲ್ಲಿ ನೋಡೋಣ.




ಮೇಲಿನ ಚಿತ್ರದಲ್ಲಿರುವಂತೆ ನೀರಿನ ಮೇಲೆ ಶಕ್ತಿ ಮೂರು ಕೋನಗಳಾಗಿ ವ್ಯಾಪಿಸಿ ಇದೆ. ಚಿತ್ರದಲ್ಲಿ 1, 2 ಮೂಲೆಗಳನ್ನು ಜೀವಾತ್ಮ ಆತ್ಮವಾಗಿ ಗುರುತಿಸಿದ್ದೇವೆ. 1ನೇ ನಂಬರ್‌ನಲ್ಲಿ ಜೀವಾತ್ಮ ಕೋನಕ್ಕೆ, 2ನೇ ನಂಬರ್‌ನಲ್ಲಿರುವ ಆತ್ಮ ಕೋನಕ್ಕೆ ಸ್ವಲ್ಪ ವ್ಯತ್ಯಾಸ ಇದೆ. ಎರಡನೇ ಕೋನದಿಂದ ಮೂರನೇ ಕೋನವಾದ ಪರಮಾತ್ಮ ಗುರುತಿನಕಡೆ ಹೊರಟ ರೇಖೆ ಸಮಾಂತರವಾಗಿ ಹೋಗಿದೆ. ಹಾಗೆ ಎರಡನೇ ಕೊನೆಯಾದ ಆತ್ಮಕಡೆಯಿಂದ ಒಂದನೇ ಕೋನದ ಕಡೆ ಹೊರಟ ರೇಖೆಯೂ ಸಹ 90 ಡಿಗ್ರಿಗಳ ಕೋನದಿಂದ ನಿಟಾರವಾಗಿ ಮೇಲಕ್ಕೆ ಹೋಗಿದೆ. ಇನ್ನೂ ಹೇಳಬೇಕೆಂದರೆ ಒಂದನೇಯ ಕೊನೆಯಾದ

ಜೀವಾತ್ಮನಿಂದ ಮೂರನೇ ಕೋನದ ಕಡೆಗೆ ಹೋಗುವ ರೇಖೆ 45 ಡಿಗ್ರಿಗಳು ಬಗ್ಗಿಹೋಗುವುದರಿಂದ ಜೀವಾತ್ಮವಾಗಿ ಗುರುತಿಸಿದ ಒಂದನೇ ಕೋನ ಸಣ್ಣದಾಗಿಯೂ, ಆತ್ಮವಾಗಿ ಗುರುತಿಸಿದ ಎರಡನೇ ಕೋನವು ಒಂದನೆಯದರಂತೆ ಇದ್ದೂ ಅದಕ್ಕಿಂತ ಸ್ವಲ್ಪ ದೊಡ್ಡದಾಗಿ ಕಾಣಿಸುತ್ತಿದೆ. ಇನ್ನು ಪರಮಾತ್ಮವಾಗಿ ಗುರುತಿಸಿದ ಮೂರನೆ ಕೋನವು ಮೊದಲು ಎರಡು ಕೋನಗಳಿಗಿಂತ ವಿಭಿನ್ನವಾಗಿ ಉದ್ದವಾದ ಮೂಲೆಯಾಗಿ ಕಾಣಿಸುತ್ತಿದೆ. ಶರೀರದಲ್ಲಿ ಜೋಡಿ ಆತ್ಮಗಳಾಗಿ ಹೆಸರುವಾಸಿಯಾದ ಜೀವಾತ್ಮ, ಆತ್ಮಗಳು ಒಂದುಕಡೆ ಮೇಲೆ ಕೆಳಗೆ ಇರುವಾಗ ಪ್ರತ್ಯೇಕವಾದ ಪರಮಾತ್ಮ ಪ್ರತ್ಯೇಕವಾಗಿಯೇ ಒಂದು ಕಡೆ ಇದೆ. ನಮ್ಮ ಹಸ್ತದಲ್ಲಿ ಕಾಣಿಸಿದಂತೆ ಜೀವಾತ್ಮ, ಆತ್ಮಗಳು ಒಂದು ಕಡೆ, ಪರಮಾತ್ಮ ಒಂದು ಕಡೆಯಲ್ಲಿರುವಂತೆ ತ್ರೈತಾಕಾರ ಎಂದರೆ ತ್ರಿಭುಜಾಕಾರ ಎಷ್ಟೋ ಅರ್ಥ ಸಹಿತವಾಗಿ ಕಾಣಿಸುತ್ತಿದೆ. ಜೀವಾತ್ಮ, ಆತ್ಮ, ಪರಮಾತ್ಮ ಧರ್ಮಗಳಿಗೆ ತಕ್ಕಂತೆ ಸಮುದ್ರದ ಮೇಲೆ ವಿಸ್ತೀರ್ಣದ ಆಕಾರವೂ ಸಹ ಇರುವುದು ವಿಶೇಷ. ಅಟ್ಲಾಂಟಿಕ್ ಸಮುದ್ರದಲ್ಲಿ ಮೇಲಿನ ಚಿತ್ರದಲ್ಲಿರುವಂತೆ ನಿಷೇದ ಸಮುದ್ರ ಪ್ರಾಂತವಿದೆ. ಸಮುದ್ರದ ಮೇಲೆ ಅದು ಬ್ಯಾನ್ ಮಾಡಿದ ಏರಿಯಾ ಆಗಿದೆ. ಆ ಪ್ರಾಂತದೊಳಗೆ ನೀರಿನ ಮೇಲೆ ನೌಕೆಗಳು ಹೋದರೂ, ಆಕಾಶದಲ್ಲಿ ವಿಮಾನಗಳು ಹೋದರೂ ಅವು ಗುರುತು ಸಿಕ್ಕದಂತೆ ಎಲ್ಲಿಗೆ ಹೋಗಿರುವುದು, ಏನಾಗಿರುವುದು ತಿಳಿಯದಂತೆ ಮಿಸ್ಟರಿಯಾಗಿ ಬದಲಾಗಿ ಹೋಗುತ್ತಿವೆ.

ಪ್ರಪಂಚದಲ್ಲಿನ ದೊಡ್ಡ ಮೇಧಾವಿಗಳಿಗೂ ಸಹ ಗುರುತುಸಿಗದ ರಹಸ್ಯವಾದುದನ್ನು ತಿಳಿದುಕೊಳ್ಳಬೇಕೆಂದು ಪ್ರಯತ್ನಿಸಿದವರು ಸಹ ಗುರುತು ಸಿಗದಂತೆ ಹೋಗಿದ್ದಾರೆ. ಕೊನೆಗೆ ಯಾರಿಗೂ ಅರ್ಥವಾಗದೆ ಅದರ ವಿಷಯವನ್ನು ಬಿಟ್ಟು, ಆ ಪ್ರಾಂತದೊಳಗೆ ಯಾರೂ ಹೋಗದಂತೆ ನಿಷೇಧ ಪ್ರಾಂತವಾಗಿ ಪ್ರಕಟಿಸಿದ್ದಾರೆ. ಅದರ ವಿಷಯದಲ್ಲಿ ನಾನು ಹೇಳುವುದೇನೆಂದರೆ! ಸಮುದ್ರದ ಮೇಲೆ ತ್ರಿಕೋನಾಕಾರವಾಗಿರುವ ಪ್ರಾಂತದಲ್ಲಿ ಆತ್ಮಶಕ್ತಿ ಇದೆ.

**ಆತ್ಮ, ನಾನೊಬ್ಬನೆ ಇರುವುದಿಲ್ಲ, ನಾನು ಎಲ್ಲಿದ್ದರೂ ನನ್ನಜೊತೆ ಇತ್ತ ಜೀವಾತ್ಮ, ಅತ್ತ ಪರಮಾತ್ಮ ಇರುತ್ತಾರೆಂದು ತಿಳಿಸುವುದಕ್ಕೆ ಮೂರು ಕೋನಗಳನ್ನು ಏರ್ಪಾಟು ಮಾಡಿಕೊಂಡಿದೆ.** ಜೀವಾತ್ಮ ಪರಮಾತ್ಮಗಳ ಮಧ್ಯದಲ್ಲಿನ ಆತ್ಮ ವಿಷಯವನ್ನೂ, ಅದರ ಜ್ಞಾನವನ್ನೂ ತಿಳಿದವನು ಆತ್ಮಜ್ಞಾನಿ ಆಗುತ್ತಾನೆ. ಆತ್ಮಜ್ಞಾನಿ ಅಲ್ಲದವನು ಭೂಮಿ ಮೇಲೆ ಯಾವುದರಲ್ಲಿ ದೊಡ್ಡದಾಗಿದ್ದರೂ, ಅವನು ತನ್ನನ್ನು ಗೌರವಿಸದವನ ಕೆಳಗೆ ಆತ್ಮ ಜಮಕಟ್ಟುತ್ತದೆ. ಆತ್ಮ ಒಂದು ಆತ್ಮಜ್ಞಾನಿಯನ್ನು ಮಾತ್ರವೇ ಗೌರವಿಸುತ್ತದೆ. ಈ ಸೂತ್ರದ ಪ್ರಕಾರ ನೋಡಿದರೆ ಆತ್ಮ ಶಕ್ತಿ ಇರುವ ಬೆರ್ಮುಡಾ ಟ್ರಯಾಂಗಿಲ್ ಮೇಲೆ ಹೋಗಿರುವ ವಿಮಾನಗಳನ್ನು ನಡೆಸುವ ಪೈಲೆಟ್‌ಗಳು, ನೌಕೆಗಳನ್ನು ನಡೆಸುವ ಕೆಪ್ಟೆನ್‌ಗಳು ಆತ್ಮಜ್ಞಾನ ಇಲ್ಲದವರೆ, ಆದ್ದರಿಂದ ಅವರು ಆ ಶಕ್ತಿಯಲ್ಲಿ ತಿಳಿಯದಂತೆಹೋಗಿದ್ದಾರೆ. ಅವರು ನಡೆಸುತ್ತಿರುವ ವಾಹನಗಳು ಅದೃಶ್ಯವಾಗಿಹೋಗಿವೆ. ಎಷ್ಟೋಜನ ಪರಿಶೋಧಕರಾದ ಶಾಸ್ತ್ರಜ್ಞರೂ ಸಹ ಜ್ಞಾನ ಇಲ್ಲದಿರುವುದರಿಂದ ಆತ್ಮಶಕ್ತಿ ಇರುವ ಪ್ರಾಂತದೊಳಗೆ ಹೋಗಿ ಮಾಯವಾಗಿಹೋಗಿದ್ದಾರೆ. ಯಾರಾದರೇ ಆತ್ಮಜ್ಞಾನವನ್ನು ತಿಳಿಯುತ್ತಾರೋ, ಅವನು ಅಪಾಯವೆಂದು ನಿಷೇಧಿಸಲ್ಪಟ್ಟ ಆ ಪ್ರಾಂತದೊಳಗೆ ಹೋದರೂ ಅವರಿಗೆ ಏನು ಆಗುವುದಿಲ್ಲ. ಅವರಿಗೆ ಆತ್ಮಶಕ್ತಿ ಜೊತೆಯಾಗಿರುತ್ತದೆ. ಆಧ್ಯಾತ್ಮಿಕ ವ್ಯಕ್ತಿಗಳು, ಬ್ರಹ್ಮವಿದ್ಯಾಶಾಸ್ತ್ರಜ್ಞರು, ಎಷ್ಟೋಬಾರಿ ಸಮುದ್ರದ ಮೇಲಿರುವ ತ್ರಿಕೋನಾಕಾರ ಪ್ರಾಂತದೊಳಗೆ ಹೋಗಿಬಂದರೂ ಯಾವ ಅಪಾಯವು ನಡೆಯುವುದಿಲ್ಲ. ಇಲ್ಲಿಯವರೆಗೂ ಅಂತಹ ಆತ್ಮಜ್ಞಾನಿಗಳು ಆ ಪ್ರಾಂತದೊಳಗೆ ಹೋಗಲಿಲ್ಲ.

ಅಮೇರಿಕಾ ಪಕ್ಕದಲ್ಲಿರುವ ಅಟ್ಲಾಂಟಿಕ್ ಸಮುದ್ರದಲ್ಲಿರುವ ಬೆರ್ಮುಡಾ ಟ್ರಯಾಂಗಿಲ್‌ನಲ್ಲಿ, ಕಳೆದುಹೋದ ಇನ್ನೂರು ಮುನ್ನೂರು ವರ್ಷಗಳಿಂದ ಆಗೊಂದು ಆಗೊಂದು ಲೆಕ್ಕವಿಲ್ಲದಷ್ಟು ನೌಕೆಗಳು, ವಿಮಾನಗಳು ಕಾಣಿಸದಂತೆ ಹೋಗಿವೆ. ಅಲ್ಲಿಗೆ ಹೋಗಿರುವವು ಮತ್ತೆ ಬರಲಿಲ್ಲವೆಂದು ಕೆಲವರಿಗೆ ತಿಳಿದಿದೆ,

ಆದರೆ ಅವು ಏನಾಗಿರುವುದು ಮಾತ್ರ ಯಾರಿಗೂ ತಿಳಿದಿಲ್ಲ. ಅವು ಸಮುದ್ರದಲ್ಲಿ ಮುಳಿಗಿಹೋಗಿವೆಯಾ? ಸಿಡಿದುಹೋಗಿವೆಯಾ? ಎನ್ನುವ ಪ್ರಶ್ನೆಗಳಿಗೆ ಯಾವ ಉತ್ತರವನ್ನು ಯಾರು ಹೇಳಲಿಲ್ಲ. ಉತ್ತರ ಹೇಳುವುದಕ್ಕೆ ಯಾವ ಆಧಾರವು ಇಲ್ಲ. ಆದರೆ ಅಲ್ಲಿ ಏನು ನಡೆದಿದೆ ಎಂದು ನನ್ನನ್ನು ಪ್ರಶ್ನಿಸಿದರೆ, ದೊಡ್ಡ ಓದು ಓದಿರುವ ಮೇಧಾವಿಗಳಿಗೂ, ಸೈನ್ಸ್‌ನ್ನೂ ಸಂಪೂರ್ಣವಾಗಿ ಪರಿಶೀಲಿಸಿದ ಶಾಸ್ತ್ರಜ್ಞರಿಗೂ ತಿಳಿಯದ ವಿಷಯವನ್ನು ನಾನು ಹೇಗೆ ಹೇಳಬಲ್ಲೆನು? ಎಂದು ಸುಲಭವಾಗಿ ತಪ್ಪಿಸಿಕೊಳ್ಳಬಹುದು. ಆದರೆ ನಾನು ಹಾಗೆ ತಪ್ಪಿಸಿಕೊಳ್ಳುವುದಿಲ್ಲ. ಇಲ್ಲಿಯವರೆಗೂ ಈ ಗ್ರಂಥದಲ್ಲಿ ಹೇಳಿದ ವಿಷಯಗಳು ಸಹ ಯಾರಿಗೂ ತಿಳಿಯದ ರಹಸ್ಯಗಳೆ! ಎಲ್ಲಾ ತಿಳಿಯದ ವಿಷಯಗಳನ್ನು ಹೇಳಿ, ಆಸಕ್ತಿಕರವಾದ ವಿಷಯಗಳನ್ನು ಹೇಳದಿರುವುದು ಚೆನ್ನಾಗಿರುವುದಿಲ್ಲ. ಪ್ರಪಂಚದಲ್ಲಿ ಐದು ಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳಾದರೆ ನಾನು ಅವುಗಳ ತಂಟೆಗೆ ಹೋಗುವುದಿಲ್ಲ. ಅವು ನನಗೆ ಸಂಬಂಧಿಸಿರುವವು ಅಲ್ಲ. ಆದರೆ ಇಲ್ಲಿನ ಪ್ರಶ್ನೆಗಳು ಆರನೆಶಾಸ್ತ್ರವಾದ ಬ್ರಹ್ಮವಿದ್ಯಾಶಾಸ್ತ್ರಕ್ಕೆ ಸಂಬಂಧಿಸಿರುವವು. ಆದ್ದರಿಂದ ಈ ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಹೇಳುವುದು ನನ್ನ ಕರ್ತವ್ಯ.

ಅಮೇರಿಕಾದಲ್ಲಿ ಪ್ಲೋರಿಡಾದಿಂದ ಹೋಗುವವು, ಬರುವವು ಕೆಲವು ನೌಕೆಗಳು ಸಾಂಕೇತಿಕ ಲೋಪದಿಂದಾಗಲಿ, ಇನ್ನೂ ಏನಾದರೂ ಲೋಪದಿಂದಾಗಲಿ ಸಮುದ್ರದಲ್ಲಿ ಮುಳುಗಿಹೋಗುವುದು ನಡೆದಿದೆ. ಆದರೂ ಅವು ಖಚಿತವಾಗಿ ಬೆರ್ಮುಡಾ ಟ್ರಯಾಂಗಿಲ್‌ನಲ್ಲಿಯೇ ಮುಳುಗಿ ಹೋಗಿವೆ ಎಂದು ಹೇಳಲಾರೆವು. 1938ನೇ ವರ್ಷ, ಮಾರ್ಚ್ ತಿಂಗಳಲ್ಲಿ 426 ಅಡಿಗಳ ಉದ್ದವಿರುವ ಭಾರೀ ನೌಕೆ 39ಜನರ ಸಿಬ್ಬಂದಿಯಿಂದ 5500 ಟನ್ನುಗಳ ಭಾರವಿರುವ ಸರುಕುಗಳಿಂದ ಬ್ರಿಟನ್‌ನಿಂದ ಅಮೇರಿಕಾಗೆ ಬರುತ್ತಾ, ಕೇವಲ ಎರಡು ನಿಮಿಷಗಳಲ್ಲಿ ತಿಳಿಯದಂತೆ ಹೋಗಿದೆ. ಆ ಭಾರೀನೌಕೆ ನಿಜವಾಗಿ ಬೆರ್ಮುಡಾ ಟ್ರಯಾಂಗಿಲ್ ನಲ್ಲಿಯೇ ಹೋಗಿದೆ. 1950 ರಿಂದ ಆ ಪ್ರಾಂತದಲ್ಲಿಯೇ ಹೋಗುತ್ತಿರುವಂತೆ

ನಿರ್ಧರಿಸಲ್ಪಟ್ಟರೂ, 1938ರಲ್ಲಿ ಹೋದ ಬ್ರಿಟನ್ ನೌಕೆಯೂ ಸಹ ಅಲ್ಲಿಗೇ ಹೋಗಿದೆ ಎಂದು ಹೇಳುತ್ತಿದ್ದೇವೆ. ಅಲ್ಲಿ ನೌಕೆಗಳು, ವಿಮಾನಗಳು ಹೇಗೆ ಹೋಗುತ್ತಿವೆಯೋ ಅರ್ಥವಾಗುವುದಕ್ಕೆ, 5500 ಟನ್ನುಗಳ ಸರುಕುಗಳಿಂದ ಹೋಗುವ 1938ನೇ ವರ್ಷದಲ್ಲಿನ ಸಂಘಟನೆಗಳನ್ನು ತೆಗೆದುಕೊಂಡು ನೋಡೋಣ. ಆ ಒಂದು ನೌಕೆ ವಿಷಯವು ತಿಳಿದರೆ, ಉಳಿದವುಗಳ ವಿಷಯವನ್ನು ಸಹ ಅರ್ಥ ಮಾಡಿಕೊಳ್ಳಬಹುದು.

ಬ್ರಿಟನ್‌ನಿಂದ ಅಮೇರಿಕಾದಲ್ಲಿನ ಪ್ಲೋರಿಡಾಗೆ ಹೊರಟ ಭಾರೀನೌಕೆ ಬೆರ್ಮುಡಾ ಟ್ರಯಾಂಗಿಲ್‌ನೊಳಗೆ ದಾರಿತಪ್ಪಿ ಬರುವುದು ನಡೆದಿದೆ. ಅಲ್ಲಿ ಅಪಾಯ ಇರುತ್ತದೆಂದು ಅವರಿಗೆ ಏನೂ ತಿಳಿದಿಲ್ಲ. 39 ಜನರ ನಾವಿಕಾ ಸಿಬ್ಬಂದಿಯೊಂದಿಗೆ ಪ್ರಯಾಣಿಸುತ್ತಿರುವ 426 ಅಡಿಗಳ ಉದ್ದವಿರುವ ನೌಕೆಗೆ ಆ ದಿನ ಸಮುದ್ರದ ಮೇಲೆ ಒಂದು ಮೇಘವು ಅಡ್ಡ ಬಂದಿದೆ. ಆ ನೌಕೆ ಮೇಘದಲ್ಲಿ ತೂರಿ ಬರುತ್ತಿದೆ. ಆ ನೌಕೆ ಸಂಪೂರ್ಣ ಮೇಘದೊಳಗೆ ಪ್ರವೇಶಿಸುವುದಕ್ಕೆ ಸುಮಾರು ಒಂದು ನಿಮಿಷ ಅಥವಾ ಒಂದುವರೆ ನಿಮಿಷ ಆಗಿರಬಹುದು. ನೌಕೆಯಲ್ಲಿನ ಸಿಬ್ಬಂದಿಗಾಗಲಿ, ನೌಕೆಗಾಗಲಿ ಏನು ಆಗಲಿಲ್ಲ. ಯಾವ ಅಪಾಯಕ್ಕೂ ನೌಕೆ ಗುರಿಯಾಗಲಿಲ್ಲ. ದಾರಿಗೆ ಅಡ್ಡ ಬಂದಿರುವ ಸಣ್ಣ ಮೇಘದೊಳಗೆ ಆ ನೌಕೆ ಪ್ರವೇಶಿಸಿದೆ. ಹೊಗೆಯಂತೆ ಇರುವ ಮೇಘದೊಳಗೆ ಪ್ರವೇಶಿಸಿದೆ. ಅಷ್ಟೇ! ಅಂದಿನಿಂದ ಆ ನೌಕೆ ಇಲ್ಲಿನ ಪ್ರಜೆಗಳಿಗೆ ತಿಳಿಯದಂತೆ ಹೋಗಿದೆ. ಮೇಘದಲ್ಲಿ ಪ್ರವೇಶಿಸಿದ ನೌಕೆ, ಮೇಘದಿಂದ ಹೊರಗೆ ಬರಲಿಲ್ಲ. ಸ್ವಲ್ಪ ಸಮಯಕ್ಕೆ ಮೇಘವು ತಿಳಿಯದಂತೆ ಕರಗಿಹೋಗಿ ಅದೃಶ್ಯವಾಗಿದೆ. ಆದರೆ ನೌಕೆಯ ಸುಳಿವು ಮಾತ್ರ ಇಲ್ಲ. ಒಂದು ನಿಮಿಷದಲ್ಲಿ ಮೇಘದೊಳಗೆ ಪ್ರವೇಶಿಸಿದ ನೌಕೆ ಏನಾಗಿದೆ? ಹೊಡೆದು ಹೋಗಿದೆಯಾ? ಅಪಾಯಕ್ಕೆ ಗುರಿಯಾಗಿದೆಯಾ? ಅದರಲ್ಲಿನ ಮನುಷ್ಯರು ಮರಣಿಸಿದ್ದಾರಾ? ಆ ನೌಕೆಯಲ್ಲಿನ 5500 ಟನ್ನುಗಳ ಸರುಕು ಎಲ್ಲಿಗೆ ಹೋಗಿದೆ? ನಿಜಕ್ಕೂ ನೌಕೆ ಮುಳಿಗಿಹೋಗಿದೆಯಾ? ಇಷ್ಟು ಪ್ರಶ್ನೆಗಳು ಬರುತ್ತಿವೆ. ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳು ಈ ವಿಧವಾಗಿ ಇವೆ.

1) **ಪ್ರಶ್ನೆ :–** ನೌಕೆಗೆ ಏನಾಗಿದೆ? **ಉ॥** ನೌಕೆಗೆ ಏನು ಆಗಲಿಲ್ಲ. 2) ಹೊಡೆದು ಹೋಗಿದೆಯಾ? **ಉ॥** ಇಲ್ಲ. 3) ಅಪಾಯಕ್ಕೆ ಗುರಿ ಆಗಿದೆಯಾ? **ಉ॥** ಯಾವ ಅಪಾಯವು ನಡೆಯಲಿಲ್ಲ. 4) ಅದರಲ್ಲಿನ ಮನುಷ್ಯರು ಸತ್ತು ಹೋಗಿದ್ದರಾ? **ಉ॥** ಒಬ್ಬನೂ ಸಹ ಸತ್ತುಹೋಗಿಲ್ಲ, ಒಬ್ಬರಿಗೂ ಸಹ ಯಾವ ಗಾಯವು ಆಗಲಿಲ್ಲ. 5) ಆ ನೌಕೆಯಲ್ಲಿನ ಸರುಕು ಏನಾಗಿದೆ? **ಉ॥** ಏನು ಆಗಲಿಲ್ಲ, ಹೇಗಿರುವುದು ಹಾಗೆ ಇದೆ. 6) ಒಟ್ಟಲ್ಲಿ ನೌಕೆ ಮುಳುಗಿಹೋಗಿದೆಯಾ? **ಉ॥** ಸ್ವಲ್ಪವೂ ಸಹ ಮುಳುಗಿಹೋಗಲಿಲ್ಲ. ಎಲ್ಲಾ ಪ್ರಶ್ನೆಗಳಿಗೂ ಎಲ್ಲಾ ಉತ್ತರಗಳನ್ನು ನೋಡಿದ ನಂತರ ಆಶ್ಚರ್ಯವಾಗಿ ಕೊನೆಯಲ್ಲಿ, ಏನು ಆಗದಿದ್ದರೆ ಆ ನೌಕೆ ಏಕೆ ಸುಳಿವು ತಿಳಿಯದಂತೆಹೋಗಿದೆ ಎಂದು ಪ್ರಶ್ನಿಸಬಹುದು. ಅದಕ್ಕೆ ನನ್ನ ಸಮಾಧಾನ ಹೀಗೆ ಇದೆ. ನೌಕೆ ಸರ್ವ ಸಾಧಾರಣವಾಗಿ ಮೇಘದೊಳಗೆ ಒಂದು ನಿಮಿಷದಿಂದ ಎರಡು ನಿಮಿಷಗಳೊಳಗೆ ಹೋಗಿದೆ. ಹಾಗೆ ಹೋಗಿರುವ ನೌಕೆ ಕೆಲವು ನಿಮಿಷಗಳ ನಂತರ ಮೇಘದಿಂದ ಹೊರಗೆ ಬರುವುದು ನಡೆದಿದೆ. ಆದರೆ ಆ ನೌಕೆ ಮೇಘದೊಳಗೆ ಪ್ರವೇಶಿಸುವವರೆಗೇ ನಮಗೆ ತಿಳಿದಿದೆ. ಮೇಘದೊಳಗೆ ತೂರಿದ ನಂತರ ಯಾವ ರಾಡಾರ್‌ಗೂ ತಿಳಿಯದಂತೆ ಹೋಗಿದೆ. ನನಗೆ ತಿಳಿದಿರುವುದು ನೌಕೆಕಾಣಿಸಿದಂತೆ ಮೇಘದಿಂದ ನೌಕೆ ಹೊರಗೆ ಬರಲಿಲ್ಲ. ಮೋಡವು ಕರಗಿ ಕಾಣಿಸದಂತೆ ಹೋಗಿದೆ. "ಈಗ ಕೆಲವರು ನನ್ನನ್ನು ಹೀಗೆ ನಮಗಾಗಲಿ, ನಮ್ಮ ರಾಡಾರ್ ವ್ಯವಸ್ಥೆಗಾಗಲಿ ತಿಳಿಯದಂತೆ ಹೋಗಿರುವ ನೌಕೆಯನ್ನು ನೀವು, ಸರ್ವ ಸಾಧಾರಣವಾಗಿ ಸ್ವಲ್ಪಸಮಯಕ್ಕೆ ಮೇಘದಿಂದ ಹೊರಗೆ ಬಂದಿದೆಂದು ಎನ್ನುತ್ತಿದ್ದಾರೆ. ಎಲ್ಲರಿಗೂ ಕಾಣಿಸದ ನೌಕೆ ನಿಮಗೇಗೆ ತಿಳಿದಿದೆ? ನೀವು ತಿಳಿದೆ ಹೇಳುತ್ತಿದ್ದೀರಾ?" ಎಂದು ಪ್ರಶ್ನಿಸುವುದಕ್ಕೆ ಅವಕಾಶ ಇದೆ. ಅದಕ್ಕೆ ನನ್ನ ಉತ್ತರ ಏನೆಂದರೆ! ನಾನು ಹೇಳಿದ ಮಾತು ಎಲ್ಲರಿಗೂ ಪ್ರಶ್ನಾರ್ಥಕವಾಗುತ್ತದೆಂದು ನನಗೆ ಚೆನ್ನಾಗಿ ತಿಳಿದಿದೆ. ಅಷ್ಟೇ ಅಲ್ಲದೆ ಈತನು ಮತಿ ಇದ್ದೇ ಮಾತನಾಡುತ್ತಾನಾ? ಎಂದೂ ಸಹ ಅಂದುಕೊಳ್ಳಬಹುದು. ಎಲ್ಲರೂ ಇಲ್ಲಿ ಸಂದಿಗ್ಧ ಪರಿಸ್ಥಿತಿಯಲ್ಲಿ ಬೀಳುತ್ತಾರೆಂದು ನನಗೆ ತಿಳಿದಿದೆ.

ಆದರೂ ನಡೆದ ವಿಷಯವು ನನಗೆ ಚೆನ್ನಾಗಿ ತಿಳಿದೆ ಹೇಳುತ್ತಿದ್ದೇನೆ. ನಡೆದ ವಿಷಯ ನಿಮಗೆ ತಿಳಿದಿಲ್ಲ, ಆದ್ದರಿಂದ ನೀವು ಹಾಗೆ ಅಂದುಕೊಳ್ಳುತ್ತಿದ್ದೀರಾ. ನಿಜಕ್ಕೆ ನಿಮಗೆ ತಿಳಿಯದಂತೆ ಅಲ್ಲಿ ಏನು ಸಂಭವಿಸಿದೆಯೋ ಕ್ಷಣಕ್ಷಣವನ್ನು ಗಮನಿಸಿದರೆ ಈ ವಿಧವಾಗಿ ಇದೆ.

ಆ ಭಾರೀ ನೌಕೆಯನ್ನು ನಡೆಸುತ್ತಿರುವ ಕ್ಯೆಪ್ಟನ್ ಪಾರ್‌ಸ್ಲೋ ಮತ್ತು ಆತನ ಸಹಾಯಕರು ಹೊಗೆಮಂಜಿನಂತಿರುವ ಮೋಡದೊಳಗೆ ನೌಕೆಯನ್ನು ಸರ್ವಸಾಧಾರಣವಾಗಿ ನಡೆಸಿದ್ದಾರೆ. ಮೇಘದೊಳಗೆ ಪ್ರವೇಶಿಸಿದ ನೌಕೆ ಸ್ವಲ್ಪಸಮಯಕ್ಕೆ ಎಂದರೆ ಸುಮಾರು ಹತ್ತು ಹದಿನೈದು ನಿಮಿಷಗಳಿಗೆ ಹೊರಗೆ ಬಂದಿದೆ. ಹೊರಗೆ ಬಂದಿರುವ ನೌಕೆಯಲ್ಲಿನ ಕೆಪ್ಟನ್ ಪಾರ್‌ಸ್ಲೋ, ನೌಕೆಯನ್ನು ಸಾಧಾರಣವಾಗಿ ನಡೆಸುತ್ತಾ ದಿಕ್ಸೂಚಿಕಡೆ ನೋಡಿದನು. ಆಗ ದಿಕ್ಸೂಚಿ ತಾವು ಪ್ರಯಾಣಿಸುತ್ತಿರುವುದು ಇಂತಹ ದಿಕ್ಕೆಂದು ತೋರಿಸದಂತೆ, ಅದು ಇಷ್ಟಬಂದಂತೆ ಕದಲುತ್ತಾ ಎಲ್ಲಾ ದಿಕ್ಕುಗಳನ್ನು ತೋರಿಸುವುದು ಪ್ರಾರಂಭಮಾಡಿದೆ. ಅದು ಕೆಲಸ ಮಾಡಲಿಲ್ಲವೆಂದು ಗ್ರಹಿಸಿದ ಕೆಪ್ಟನ್ ಪಾರ್‌ಸ್ಲೋ ತಕ್ಷಣ ಮತ್ತೊಂದು ದಿಕ್ಸೂಚಿಯನ್ನು ನೋಡಿದನು. ಅದು ಸಹ ಕೆಲಸ ಮಾಡುವುದಿಲ್ಲವೆಂದು ತಿಳಿದು ಹೋಗಿದೆ. ಅದರ ನಂತರ ತಾವು ಹೋಗುವ ವೇಗವನ್ನು ತಿಳಿಸುವ ಮೀಟರ್‌ಗಳು ಸಹ ಕೆಲಸ ಮಾಡುತ್ತಿಲ್ಲವೆಂದು ತಿಳಿದಿದೆ. ನಂತರ ನೌಕೆಯಲ್ಲಿ ಏನು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಅರ್ಥವಾಗಿದೆ. ಆಗ ತಾವು ಪ್ರಯಾಣಿಸುತ್ತಿರುವುದು ಅಟ್ಲಾಂಟಿಕ್ ಸಮುದ್ರವೇನಾ ಎಂದು ಅನುಮಾನ ಬಂದಿದೆ. ತಕ್ಷಣ ಆಗಿನ ಕಮ್ಯೂನಿಕೇಷನ್ ಆದ ಟೆಲಿಗ್ರಾಫ್ ಮೂಲಕ ಮೆಸೇಜ್ ಭೂಮಿ ಮೇಲಿರುವ ಪೋರ್ಟ್‌ಗೆ ಕಳುಹಿಸಿದಾಗ, ಆ ಮೆಸೇಜ್‌ಗೆ ಯಾರು ಸ್ಪಂದಿಸಲಿಲ್ಲ. ಆಗ ಅವರು ಸ್ವಲ್ಪ ಅಯೋಮಯ ಸ್ಥಿತಿಗೆ ಸೇರಿಕೊಂಡರೂ, ನೌಕೆ ಪ್ರಯಾಣ ಸಾಗುತ್ತಿದೆ ಅಲ್ಲವೆ! ಎಂದು ಧೈರ್ಯವಾಗಿದ್ದಾರೆ. ಮೇಲೆ ಆಕಾಶ, ಕೆಳಗೆ ಸಮುದ್ರ, ನೌಕೆ ಪ್ರಯಾಣವೂ ಸರ್ವಸಾಧಾರಣವಾಗಿ

ಇರುವುದರಿಂದ ಅವರಿಗೆ ದೊಡ್ಡ ಅನುಮಾನ ಏನು ಬರಲಿಲ್ಲ. ಅವರಿಗೆ ಸೂರ್ಯರಶ್ಮಿ ಇಲ್ಲದಂತೆ ಆಕಾಶ ತುಫಾನ್ ಸಮಯದಲ್ಲಿ ಇರುವಂತೆ ಮೇಘಗಳು ಇದ್ದವು. ಆಗಲೇ ಭೂಮಿಮೇಲೆ ರಾಡಾರ್‌ಗೆ ತಮ್ಮ ನೌಕೆ ತಿಳಿಯದಂತೆ ಹೋಗಿದೆಂದು ನೌಕೆಯಲ್ಲಿರುವವರಿಗೆ ತಿಳಿದಿಲ್ಲ. ಹಾಗೆ ಅವರು ಪ್ರಯಾಣಿ ಸುತ್ತಿರುವ ಕೆಲವು ಗಂಟೆಗಳಿಗೇ ಅಂದುಕೊಳ್ಳದೆ ಸಮುದ್ರ ತೀರವು ಕಾಣಿಸಿದೆ. ಆ ನೌಕೆ ಕೆಪ್ಟೆನ್ ಪಾರ್‌ಸ್ಲೋಗೆ ಅದು ಯಾವ ಪ್ರಾಂತವೋ, ಯಾವ ತೀರವೋ ಅರ್ಥವಾಗಲಿಲ್ಲ. ಆ ತೀರದಲ್ಲಿ ಷಿಪ್‌ಪೋರ್ಟು ಸಹ ಇಲ್ಲವೆಂದು ತಿಳಿದಿದೆ. ತಾವು ಎಲ್ಲಿಗೆ ಬಂದಿದ್ದೇವೋ ಸಹ ಅವರಿಗೆ ತಿಳಿಯಲಿಲ್ಲ. ತೀರಕ್ಕೆ ಅರ್ಧಕಿಲೋಮೀಟರ್ ದೂರದಲ್ಲಿ ನೌಕೆಯನ್ನು ನಿಲ್ಲಿಸಿ ಕೆಪ್ಟನ್, ತಮ್ಮ ಹತ್ತಿರವಿರುವ ಚಿಕ್ಕ ಬೋಟ್‌ಗಳನ್ನು ಸಮುದ್ರದೊಳಗೆ ಇಳಿಸಿ ದಡಕ್ಕೆ ಸೇರಿಕೊಂಡರು. ಚಿಕ್ಕ ಬೋಟ್‌ಗಳಲ್ಲಿ ಹೋಗುವಾಗ ಆ ಸಮುದ್ರದ ನೀರು ಬಹಳ ಭಾರವಾಗಿ ಇವೆಯೆಂದು ಅವರಿಗೆ ಅರ್ಥವಾಗಿದೆ. ದಡಕ್ಕೆ ಸೇರಿಕೊಂಡ ನಂತರ ಅದು ಅಮೇರಿಕಾ ಭೂಭಾಗವೇ ಅಲ್ಲವೆಂದು ಅರ್ಥ ಮಾಡಿಕೊಂಡಿ ದ್ದಾರೆ. ಅಲ್ಲಿ ಕಣ್ಣೋಟಕ್ಕೆ ಯಾರು ಕಾಣಿಸಲಿಲ್ಲ. ಅಷ್ಟೇ ಅಲ್ಲದೆ ಆ ಪ್ರಾಂತದಲ್ಲಿ ಎಲ್ಲಿಯೂ ಸಣ್ಣ ಗಿಡವೂ ಸಹ ಕಾಣಿಸಲಿಲ್ಲ. ಅವರಿರುವ ಪ್ರಾಂತವೆಲ್ಲಾ ಒಂದು ವಿಧವಾದ ಕಲ್ಲಿನ ಪ್ರದೇಶವಾಗಿ ಕಾಣಿಸಿದೆ. ಅಷ್ಟರಲ್ಲಿ ಆ ವಾತಾವರಣವು ಅವರಿಗೆ ಸರಿಹೋಗದಾಗೆ ತೋಚಿದೆ. ಅಲ್ಲಿ ಇಳಿದ ಹತ್ತು, ಹದಿನೈದು ನಿಮಿಷಗಳೊಳಗೆ ಅವರಿಗೆ ನಿದ್ರೆಮತ್ತು ಬರುವುದು, ಆಕಳಿಕೆಗಳು ಬರುವುದು, ಹೊಟ್ಟೆತುಂಬ ಆಹಾರ ತಿಂದಂತೆ ಇರುವುದು, ಒಬ್ಬೊಬ್ಬರು ತಾವು ಕುಳಿತುಕೊಂಡ ಸ್ಥಳದಲ್ಲಿಯೇ ಮಲಗಿ ನಿದ್ರೆಯಲ್ಲಿ ಜಾರಿಕೊಳ್ಳುವುದು ನಡೆದಿದೆ. ಅಲ್ಲಿ ಅವರ ವಿಷಯವು ಅವರ ಮನಸ್ಸು ಕೆಲಸ ಮಾಡಿದಷ್ಟು ಸಮಯ ನಮಗೆ ತಿಳಿದಿದೆ. ಅವರ ಮನಸ್ಸು ನಿದ್ರೆಯೊಳಗೆ ಹೋದ ತಕ್ಷಣ ಅಲ್ಲಿನ ವಿಷಯ ನಮಗೂ ಸಹ ತಿಳಿಯದಂತೆ ಹೋಗಿದೆ. ಅವರು ಎಚ್ಚರದಲ್ಲಿರುವಷ್ಟು ಸಮಯವೂ, ಅವರ ಮನಸ್ಸು ಜ್ಞಾಪಕದಲ್ಲಿರುವಷ್ಟು ಸಮಯವೂ, ಅವರ ಮನಸ್ಸು ಕನ್ನಡಿಯಂತೆ

ನಮಗೆ ಉಪಯೋಗಪಟ್ಟಿದೆ. ಆದ್ದರಿಂದ ನಡೆದ ವಿಷಯವೆಲ್ಲವೂ ಕನ್ನಡಿಯಲ್ಲಿ ನೋಡಿದಂತೆ ತಿಳಿದಿದೆ. ನಂತರ ಏನು ನಡೆದಿದೆಯೋ ಊಹೆಯಿಂದ ಹೇಳಬೇಕಾದ್ದೇ ಹೊರತು, ಪ್ರತ್ಯಕ್ಷವಾಗಿ ತಿಳಿದು ಹೇಳುವುದಕ್ಕೆ ಸಾಧ್ಯವಿಲ್ಲ. ನಂತರ ನಿದ್ರೆಯಿಂದ ಅವರ ಮನಸ್ಸು, ಜ್ಞಾಪಕ(ಎಚ್ಚರ) ದೊಳಗೆ ಬರಲಿಲ್ಲ. ಆದ್ದರಿಂದ ಅಲ್ಲಿನ ಪ್ರತ್ಯಕ್ಷ ವಿಷಯವು ಏನೂ ಹೇಳಲಾರೆವು.

ಈಗ ಪುನಃ ಆ ನೌಕೆ ವಿಷಯದಲ್ಲಿ ಹುಟ್ಟಿದ ಪ್ರಶ್ನೆಗಳ ಹತ್ತಿರಕ್ಕೆ ಬಂದು ನಾವು ಹೇಳಿದ ಉತ್ತರಗಳು ನೋಡಿರಿ. ನೌಕೆ ಯಾವ ಅಪಾಯಕ್ಕೂ ಗುರಿಯಾಗಲಿಲ್ಲ, ನೌಕೆ ಹೊಡೆದುಹೋಗಲಿಲ್ಲ, ನೌಕೆಯಲ್ಲಿನ ಸಿಬ್ಬಂದಿ ಸತ್ತು ಹೋಗಲಿಲ್ಲ, ಅವರಲ್ಲಿ ಯಾರಿಗೂ ಸಣ್ಣ ಗಾಯವೂ ಸಹ ಆಗಲಿಲ್ಲ. ನೌಕೆಯಲ್ಲಿನ ಸರಕು ಹಾಗೆಯೇ ಇದೆ. ನಾವು ಹೇಳಿದ ಉತ್ತರಗಳು ಎಲ್ಲವೂ ವಾಸ್ತವವೆ. ನೌಕೆ ತೀರಕ್ಕೆ ಸೇರುವುದು, ನೌಕೆಯಲ್ಲಿರುವವರು ನೌಕೆಯನ್ನು ನಿಲ್ಲಿಸಿ, ಸಣ್ಣ ದೋಣಿಯಲ್ಲಿ ದಡಕ್ಕೆ ಹೋಗುವುದು, ಅವರು ಅಲ್ಲಿ ನಿದ್ರೆಯೊಳಗೆ ಜಾರಿ ಕೊಳ್ಳುವುದು ಎಲ್ಲವೂ ನಿಜವೇ. ನಂತರ ಊಹೆಯಿಂದ ಹೇಳಬೇಕಾಗಿದ್ದೇ ಯೆಂದು ಹೇಳಿದ್ದೇವಲ್ಲ! ನಂತರ ಅವರ ವಿಷಯದಲ್ಲಿ ಒಂದು ಊಹೆಗೆ ಬರೋಣ. 1938ರ ನಂತರ 1947 ಡಿಸೆಂಬರ್ 5ನೇ ತಾರೀಖು, ಆರು ಅಮೇರಿಕಾ ಯುದ್ಧ ವಿಮಾನಗಳು ಮಾಯವಾದ ವಿಷಯವನ್ನು ತೆಗೆದುಕೊಂಡು, ಆ ದಿನ ಪ್ರತ್ಯಕ್ಷವಾಗಿ ನಡೆದ ವಿಷಯವನ್ನು ಹೇಳಿಕೊಳ್ಳೋಣ.

ಅಮೇರಿಕಾ ಮಿಲಿಟರಿಯಲ್ಲಿನ ಒಂದು ಭಾಗವಾದ ಎಯಿರ್‌ಫೋರ್ಸ್ (ವಾಯುಸೇನ)ಕ್ಕೆ ಸಂಬಂಧಿಸಿದ ಟ್ರೈನಿಂಗ್ ಐದು ವಿಮಾನಗಳಿಗೆ ಟ್ರೈನಿಂಗ್ ನಲ್ಲಿನ ಭಾಗವಾಗಿ ಸಮುದ್ರದಲ್ಲಿ ಒಂದು ಗುರಿ ಇಟ್ಟು ಅದರ ಮೇಲೆ ಬಾಂಬುಗಳು ಸುರಿಸಿ ಬರುವಂತೆ ಆಫೀಸರ್‌ಗಳು ಹೇಳುವುದು ನಡೆದಿದೆ. ಐದು ವಿಮಾನಗಳು ಒಂದೇಸಲ ಹಾರಿ ಸಮುದ್ರದಲ್ಲಿ 500 ಕಿಲೋಮಿಟರ್‌ಗಳ ದೂರದಲ್ಲಿರುವ ಗುರುತನ್ನು ಛೇದಿಸಬೇಕೆನ್ನುವುದು ಅವರ ಉದ್ದೇಶ. ಐದು ಯುದ್ಧ

ವಿಮಾನಗಳಿಗಿಂತ ಮೊದಲು ಒಬ್ಬ ಪೈಲೆಟ್‌ನ ವಿಮಾನ ಮೊದಲು ಹೋಗಿ, ಅಲ್ಲಿನ ಪರಿಸ್ಥಿತಿಯನ್ನು ಮೊದಲೇ ಹಿಂದೆ ಬರುವ ವಿಮಾನಗಳಿಗೆ ತಿಳಿಸಬೇಕು. ಮೊದಲು ಹೋದ ಪೈಲೆಟ್ ವಿಮಾನದ ಸೂಚನೆಗಳನ್ನು ಅನುಸರಿಸಿ, ಹಿಂದೆ ಬರುವ ವಿಮಾನಗಳು ಅಲ್ಲಿ ಬಾಂಬುಗಳು ಹಾಕಬೇಕಾಗಿದೆ. ಅದೇ ವಿಧವಾಗಿ ಮುಂಚೆ ಪೈಲೆಟ್ ವಿಮಾನ ಹೊರಟುಹೋಗಿ, ಕೆಲವು ನಿಮಿಷಗಳ ವ್ಯತ್ಯಾಸದಿಂದ ಹಿಂದೆ, ಬಾಂಬುಗಳು ಹಾಕಬೇಕಾದ ಯುದ್ಧ ವಿಮಾನಗಳು ಹೊರಟಿವೆ. ಅವರ ಆಫೀಸರ್‌ಗಳು ಮೊದಲೇ ನಿರ್ಣಯಿಸಿದ ರೂಟ್‌ನಲ್ಲಿಯೇ ಆ ವಿಮಾನ ಗಳು ಹೋಗಬೇಕಾಗಿದೆ. 1938ನೇ ವರ್ಷದಲ್ಲಿ ಭಾರೀನೌಕೆ ಕಾಣಿಸದಂತೆ ಹೋದ ಒಂಭತ್ತು ವರ್ಷಗಳಿಗೆ 1947ರಲ್ಲಿ ಅಮೇರಿಕಾ ಯುದ್ಧ ವಿಮಾನಗಳು ಸಹ ಹೋಗುವುದು ನಡೆದಿದೆ. ಆಗಲೂ ಸಹ ಸಮುದ್ರದ ಮೇಲೆ ಪ್ರತ್ಯೇಕವಾಗಿರುವ ಟ್ರಯಾಂಗಿಲ್ ಬಗ್ಗೆ ಯಾರಿಗೂ ಅರ್ಥವಾಗಲಿಲ್ಲ. ಕೊನೆಗೆ 1950ನೇ ವರ್ಷ ಸೆಪ್ಟಂಬರ್ 16ನೇ ತಾರೀಖು ಒಂದು ನೌಕೆ ಮಾಯವಾಗಿ ಹೋದಾಗ ಸಮುದ್ರದ ಮೇಲೆ ಸ್ವಲ್ಪ ಪ್ರಾಂತದಲ್ಲಿಯೇ ಹಾಗೆ ನಡೆಯುತ್ತಿದೆಂದು ಗುರುತಿಸಿದ್ದಾರೆ. ಆಗಿನಿಂದ ಆ ಪ್ರದೇಶವು ಮುಕ್ಕೋನಾಕಾರದಿಂದ ಇದೆಯೆಂದು ತಿಳಿದು ಅದನ್ನು ಬೆರ್ಮುಡಾ ಟ್ರಯಾಂಗಲ್ ಎಂದಿದ್ದಾರೆ. 1950ರ ವರೆಗೂ ಆಧಾರ ಪೂರಿತವಾಗಿ ಟ್ರಯಾಂಗಿಲ್ ವಿಷಯ ಯಾರಿಗೂ ತಿಳಿದಿಲ್ಲ. ಆದ್ದರಿಂದ 1947ರಲ್ಲಿ ಅಮೇರಿಕಾ ಯುದ್ಧ ವಿಮಾನಗಳು ಆ ಟ್ರಯಾಂಗಿಲ್ ಮೇಲೆ ಹೋಗುವುದು ನಡೆದಿದೆ. ಮೊದಲು ಹೋದ ಪೈಲೆಟ್ ವಿಮಾನ ಟ್ರಯಾಂಗಿಲ್, (ಮುಕ್ಕೋನ) ಆಕಾರ ವಿರುವ ಸಮುದ್ರದ ಮೇಲೆ ಹೋದಾಗ ಅದನ್ನು ನಡೆಸುತ್ತಿರುವ ವ್ಯಕ್ತಿಗೆ ತಾನು ಎಷ್ಟು ಸ್ಪೀಡ್‌ನಿಂದ ಹೋಗುತ್ತಿದ್ದೇನೆ ಎಂದಾಗಲಿ, ಭೂಮಿಗೆ ಎಷ್ಟು ದೂರದಲ್ಲಿ ಇದ್ದೇನೆಂದಾಗಲಿ, ಎಷ್ಟು ಮೇಲೆ ಎಗರುತ್ತಿದ್ದೇನೆಂದಾಗಲಿ, ಯಾವ ದಿಕ್ಕಿಗೆಹೋಗುತ್ತಿದ್ದೇನೆಂದಾಗಲಿ ತಿಳಿಯದಂತೆ ಹೋಗಿದೆ. ವಿಮಾನದಲ್ಲಿನ ಎಲ್ಲಾ ವಿಷಯಗಳನ್ನು ತಿಳಿಸುವ ಎಲ್ಲಾ ಪರಿಕರಗಳು ಕೆಲಸ ಮಾಡದಂತೆ ಹೋಗಿವೆ. ಕರೆಂಟ್ ಲೆಟ್‌ಗಳನ್ನು ಆನ್ ಮಾಡದಿದ್ದರೂ ಅವಷ್ಟಕ್ಕೆ ಅವೇ ಬೆಳಗಲು

ಆರಂಭಿಸಿವೆ. ಭೂಮಿ ಮೇಲೆ ಎಯರ್‌ಫೋರ್ಸು ಕೇಂದ್ರದಿಂದ ರೇಡಿಯೋ ಕಮ್ಯೂನಿಕೇಷನ್ ಇಲ್ಲದೆ ಹೋಗಿದೆ. ಆಗಲೂ ವಿಮಾನ ಹೋಗುತ್ತಲೆ ಇದೆ. ತನ್ನ ದಾರಿಗೆ ಸುತ್ತಾ ಬಿಳಿಯ ಮೇಘಗಳು ಕಾಣಿಸುತ್ತಾ ಕೊನೆಗೆ ಅವು ಒಂದು ಗುಹೆಯಂತೆ ತಯಾರಾಗಿ ಮಧ್ಯದಲ್ಲಿ ದಾರಿ ಇರುವಂತೆ, ವಿಮಾನ ಮೇಘಗಳ ಮಧ್ಯ ಗುಹೆಯೊಳಗೆ ಹೋದಂತೆ ಕಾಣಿಸುತ್ತಾ ಇದೆ. ಅಷ್ಟರಲ್ಲಿ ಒಂದು ಮೇಘ ಅಡ್ಡ ಬರುವುದು, ಆ ಮೇಘದೊಳಗೆ ವಿಮಾನ ಹೋಗುವುದು ನಡೆದಿದೆ. ಆಗಲೂ ಆ ವಿಮಾನವನ್ನು ನಡೆಸುತ್ತಿರುವ ಪೈಲೆಟ್ ಪೂರ್ತಿ ಎಚ್ಚರಿಕೆಯಲ್ಲಿಯೇ ಇದ್ದಾನೆ.

ವಿಮಾನವನ್ನು ಮುಚ್ಚಿದ ಮೇಘವು ಸ್ವಲ್ಪ ಸಮಯಕ್ಕೆ ತನ್ನ ವಿಮಾನವನ್ನು ಬಿಟ್ಟುಹೋಗಿದೆ. ಆದರೆ ತನ್ನ ವಿಮಾನ ಆಗಲೇ ಭೂಭಾಗದ ಮೇಲೆ ಲ್ಯಾಂಡ್ ಆಗಿರುವಂತೆ ಪೈಲೆಟ್‌ಗೆ ತಿಳಿದಿದೆ. ಆಕಾಶದಲ್ಲಿ ಎಗರುತ್ತಿರುವ ವಿಮಾನ, ಮೇಘವು ತೊಲಗಿಹೋಗುತ್ತಲೇ ಭೂಮಿ ಮೇಲೆ ನಿಂತಿರುವುದನ್ನು ನೋಡಿದ ಪೈಲೆಟ್ ಆಶ್ಚರ್ಯಪಟ್ಟಿದ್ದಾನೆ. ಅದು ಹೇಗೆ ನಡೆದಿದೆಯೋ ಆತನಿಗೆ ಸ್ವಲ್ಪವೂ ಅರ್ಥ ವಾಗಲಿಲ್ಲ. ತನ್ನ ವಿಮಾನ ನಿಂತಿರುವುದು ರನ್‌ವೇ ಮೇಲೆ ಅಲ್ಲ. ಸಾಧಾರಣ ಮೈದಾನದಲ್ಲಿ ನಿಂತಿದೆ. ಅಷ್ಟೇ ಅಲ್ಲದೆ ಆತನಿಗೆ ಮತ್ತೊಂದು ಆಶ್ಚರ್ಯಕರವಾದ ದೃಶ್ಯ ಕಾಣಿಸಿದೆ. ಅದೇನೆಂದರೆ! ತನ್ನ ಹಿಂದೆ ಹೊರಡಬೇಕಾದ ವಿಮಾನಗಳು ಐದು ಸಹ ತನಗೆ ಸ್ವಲ್ಪ ದೂರದಲ್ಲಿ ನಿಂತಿವೆ. ಅಸಲಿಗೆ ಏನು ನಡೆದಿದೆಯೋ ಅರ್ಥವಾಗದೆ ಅದೇನಾದರೂ ಕನಸಾ ಎಂದುಕೊಂಡಿದ್ದಾನೆ. ಅಷ್ಟರಲ್ಲಿ ತಾನು ಏನು ಆಲೋಚಿಸುವ ಪರಿಸ್ಥಿತಿಯಲ್ಲಿ ಇಲ್ಲದಂತೆ ನಿದ್ರೆಯೊಳಗೆ ಹೋಗಿದ್ದಾನೆ. ಇದೆಲ್ಲವೂ ಯಾರು ನಂಬಲಾರದ ಕಥೆಯಂತೆ ಇದೆ. ಅಷ್ಟೇ ಅಲ್ಲದೆ ಇದನ್ನೆಲ್ಲವನ್ನು ಕಲ್ಪಿತ ಕಥೆ ಎನ್ನುವ ಅವಕಾಶವೂ ಸಹ ಇದೆ. ಪರಿಶೋಧನಾ ಬುದ್ಧಿಯಿಂದ ನೋಡಿದರೆ ಸ್ವಲ್ಪಕ್ಕೆ ಸ್ವಲ್ಪ ಅರ್ಥವಾಗುತ್ತದೆ.

ಪ್ರಪಂಚ ಪ್ರಜೆಗಳ ದೃಷ್ಟಿಯಲ್ಲಿ 1938ನೇ ವರ್ಷ ಸಮುದ್ರದಲ್ಲಿ ಕಾಣೆಸದಂತೆ ಹೋದ ನೌಕೆ ವಿಷಯವಾಗಲಿ, 1947ನೇ ವರ್ಷ ಹೋದ ಆರು ವಿಮಾನಗಳ ವಿಷಯವಾಗಲಿ, ಅವು ಮರೆಯಾಗಿಹೋದ ತಕ್ಷಣ ಅವು ಪೂರ್ತಿಯಾಗಿ ಇಲ್ಲದಂತೆ ಹೋಗಿವೆ ಎಂದು ಭಾವಿಸಿದ್ದಾರೆ. ಆದರೆ ನಾವು ಮಾತ್ರ ಆ ದಿನ, ಆ ಸಮಯದಲ್ಲಿ ಏನು ನಡೆದಿದೆಯೋ, ಅವರ ಮನಸ್ಸಿನಲ್ಲಿ ಏನು ರಿಕಾರ್ಡ್ ಆಗಿದೆಯೋ, ಅದನ್ನು ಅವರ ಮನಸ್ಸಿನ ಮೂಲಕವೇ ತಿಳಿದುಕೊಂಡಿದ್ದೇವೆ. ಅವರ ಮನಸ್ಸು ನಿದ್ರೆಯೊಳಗೆ ಹೋಗಿರುವುದರಿಂದ ಅಲ್ಲಿಗೆ ಆ ಸಮಾಚಾರ ನಿಂತುಹೋಗಿದೆ. ಹಾಗೆ ಯಾವಾಗಲೋ ನಡೆದುಹೋಗಿರುವುದನ್ನು ಆ ಕಾಲದಲ್ಲಿ ಅವರ ಮನಸ್ಸಿನಲ್ಲಿರುವುದನ್ನು, ನಮ್ಮ ಮನಸ್ಸಿನ ಮೂಲಕ ತಿಳಿದುಕೊಳ್ಳುವುದು ಬಹಳ ಕಷ್ಟ. ಒಬ್ಬ ಮನುಷ್ಯ ತನ್ನ ಮನಸ್ಸನ್ನು ಏಕಾಗ್ರತೆ ಪಡಿಸಿ, ಮನಸ್ಸಿನಲ್ಲಿ ಏನು ಇಲ್ಲದಂತೆ ಖಾಲಿಯಾಗಿ ಇರುವಾಗ, ಯಾವ ವಿಷಯವಾದರೆ ತಿಳಿದುಕೊಳ್ಳಬೇಕೋ ಆ ವಿಷಯವನ್ನು ಸಂಕಲ್ಪಿಸಿ ಅದನ್ನು ತಿಳಿಯಬೇಕು ಎನ್ನುವ ದೃಢವಾದ ಭಾವನೆಯಿಂದಿರುವಾಗ, ಮೊದಲು ನಡೆದು ಹೋದ ವಿಷಯವನ್ನು ಅವರ ಮನಸ್ಸಿನಲ್ಲಿರುವ ರಿಕಾರ್ಡ್‌ನ ಮೂಲಕ ಗ್ರಹಿಸಬಹುದು. ಅದಕ್ಕೆ ದೃಢಸಂಕಲ್ಪ ಬೇಕು, ಮನಸ್ಸು ಏಕಾಗ್ರತೆಯಾಗಬೇಕು. ಇಂತಹ ವಿಷಯವು ನನ್ನ ಮನಸ್ಸಿಗೆ ತಿಳಿಯಬೇಕು ಎಂದು ಧೃಢ ಸಂಕಲ್ಪವನ್ನು ಮೊದಲೆ ಇಟ್ಟುಕೊಂಡು, ಮೊದಲು ಮನಸ್ಸನ್ನು ಯಾವ ವಿಷಯದ ಮೇಲೆ ಹೋಗದಂತೆ ನೋಡಿಕೊಳ್ಳಬೇಕು. ಮನಸ್ಸನ್ನು ಏಕಾಗ್ರತೆಪಡಿಸುವ ಸಮಯದಲ್ಲಿ ನನಗೆ ಇಂತಹ ವಿಷಯ ತಿಳಿಯಬೇಕು ಎನ್ನುವ ಜ್ಞಾಪಕವನ್ನೂ ಸಹ ಬಿಡಬೇಕು. ಹಾಗೆ ಮನಸ್ಸು ಖಾಲಿ ಆದಾಗ ಯೋಗವಾಗುತ್ತದೆ. ಮನಸ್ಸು ಯಾವಾಗ ಏಕಾಗ್ರತೆಹೊಂದುತ್ತದೋ ಆಗ ಬ್ರಹ್ಮಯೋಗವಾಗುವುದು ನಡೆಯುತ್ತಿರುತ್ತದೆ. ಬ್ರಹ್ಮಯೋಗದಲ್ಲಿ ಸ್ವಲ್ಪ ಸಮಯ ಇದ್ದನಂತರ ಮೊದಲೇ ಸಂಕಲ್ಪಿಸಿಕೊಂಡಂತೆ, ನಡೆದುಹೋದ ಸಂಘಟನೆ ಯಲ್ಲಿರುವವರ ಮನಸ್ಸಿನಲ್ಲಿರುವ ಸಮಾಚಾರ ಪ್ರತ್ಯಕ್ಷ ಪ್ರಸಾರವನ್ನು ತಿಳಿಯ

ಬಹುದು. ಮೊದಲು ದೃಢಸಂಕಲ್ಪ ಇರುವವನಿಗೇ, ಯೋಗವನ್ನು ಬಿಟ್ಟು ನೇರವಾಗಿ ಭೂತ ಕಾಲದಲ್ಲಿ ನಡೆದಾಗ ಇರುವ ಮನಸ್ಸಿನ ಜ್ಞಾಪಕದಲ್ಲಿ ಏನಿದೆಯೋ ತಿಳಿಯುತ್ತದೆ. ಮನಸ್ಸು ನಿಂತು ಬ್ರಹ್ಮಯೋಗವನ್ನು ಹೊಂದುವುದೇ ಕಷ್ಟ. ಹಾಗೆ ಬ್ರಹ್ಮಯೋಗವನ್ನು ಸಾಧಿಸಿದವರು ಮಾತ್ರವೇ ದೃಢವಾದ ಸಂಕಲ್ಪ ಬಲದಿಂದ ಹಿಂದಿನ ವಿಷಯವನ್ನು ತಿಳಿಯಬಹುದು.

ಈ ವಿಷಯವನ್ನು ಹೇಳಿಕೊಂಡಷ್ಟು ಸುಲಭವಲ್ಲ. ಯಾರಾದರೂ ಮನಸ್ಸನ್ನು ಜಯಿಸಿ, ಮನಸ್ಸನ್ನು ಕದಲದಂತೆ ಕಟ್ಟಿಹಾಕಿ, ಕೊನೆಗೆ ಬ್ರಹ್ಮಯೋಗವನ್ನು ಸಾಧಿಸಿದರೂ, ಆ ಯೋಗದ ನಂತರ ತಿಳಿಯಬೇಕೆಂದು ಕೊಂಡ ವಿಷಯವು ತಿಳಿಯದಂತೆಹೋಗುವುದಕ್ಕೆ ಅವಕಾಶ ಇದೆ. ಬ್ರಹ್ಮಯೋಗ ದಿಂದ ನೂರಕ್ಕೆ ತೊಂಭತ್ತುಜನರು ನೇರವಾಗಿ ನಿದ್ರೆಯೊಳಗೆ ಹೋಗುವವರು ಇರುತ್ತಾರೆ. ಹಾಗೆ ನಿದ್ರೆಯೊಳಗೆ ಹೋಗದಂತೆ ಪೂರ್ತಿ ಎಚ್ಚರಿಕೆಯಿಂದ ಇರುವವನಿಗೆ ಮಾತ್ರವೇ ಮೊದಲಿರುವ ಸಂಕಲ್ಪಬಲದಿಂದ ಮನಸ್ಸು, ಭೂತಕಾಲ ದಲ್ಲಿನ ಸಂಘಟನೆಗಳಿಗೆ ಸಂಬಂಧಿಸಿದ ವ್ಯಕ್ತಿಯೊಬ್ಬನ ಮನಸ್ಸಿನ ಹತ್ತಿರಕ್ಕೆ ಹೋಗಿ, ಅಲ್ಲಿನ ಸಮಾಚಾರವನ್ನು ಪ್ರತ್ಯಕ್ಷವಾಗಿ ನೋಡಬಲ್ಲದು. ಹಾಗೆ ನಡೆದ ಕಾಲದಲ್ಲಿ, ನಡೆದ ವಿಷಯವನ್ನು ತಿಳಿಯುವುದು ಬ್ರಹ್ಮಯೋಗಕ್ಕಿಂತ ಕಷ್ಟವಾದುದು. ದೃಢವಾಗಿ ಸಾಧಿಸಿ ಯಾರಾದರೂ ಹಿಂದಿನ ಕಾಲದಲ್ಲಿನ ರಹಸ್ಯವನ್ನು ಆಗಿನ ಅವರ ಮನಸ್ಸಿನಲ್ಲಿನ ಜ್ಞಾಪಕವನ್ನನುಸರಿಸಿ ತಿಳಿಯಬಹುದು. ಹಾಗೆ ತಿಳಿಯಬೇಕೆಂದವನು ಮೊದಲು ತನ್ನ ಜ್ಞಾಪಕವನ್ನು ತಾನೇ ಹಿಡಿತದಲ್ಲಿಟ್ಟು ಕೊಂಡು ನಿದ್ರೆಯನ್ನು ಜಯಿಸಿರಬೇಕು. ನಾವು ಹಿಂದೆ ನಡೆದಿರುವ ವಿಷಯಗಳನ್ನು ತಿಳಿಯಬೇಕೆಂದು ಪ್ರಯತ್ನ ಮಾಡಿ ಮಾಡಿ ಕೊನೆಗೆ ತಿಳಿದುಕೊಂಡಿದ್ದೇವೆ. ಅದೂ ಆಗಿರುವವನ ಮನಸ್ಸನ್ನು ಆಧಾರ ಮಾಡಿಕೊಂಡು ನೋಡಿರುವುದನ್ನೇ ಹೇಳಿದ್ದೇವೆ. ಆಗಿನ ಮನುಷ್ಯನ ಮನಸ್ಸು ನಿದ್ರೆಯೊಳಗೆ ಹೋಗಿ ಮರೆವು ಬಂದಾಗ ಆ ಸಮಾಚಾರ ತಿಳಿಯುವುದಿಲ್ಲ. 1938ರಲ್ಲಿ ನಡೆದ ಸಮಾಚಾರ

ವಾಗಲಿ, 1947ರಲ್ಲಿ ನಡೆದ ಸಮಾಚಾರವಾಗಲಿ ಆಗ ಅವರು ಎಚ್ಚರಿಕೆಯಲ್ಲಿರುವ ವರೆಗೂ ತಿಳಿದಿದೆ. ಅವರು ನಿದ್ರೆಹೋಗುವು ದರಿಂದ, ಮನಸ್ಸಿಗೆ ಜ್ಞಾಪಕ ಇಲ್ಲದಿರುವುದರಿಂದ, ನಂತರ ವಿಷಯ ಏನು ನಡೆದಿದೆಯೋ ತಿಳಿಯಲಿಲ್ಲ.

ನಂತರ ನಡೆದ ವಿಷಯವನ್ನು ಊಹಿಸಿ ಹೇಳಬೇಕಾಗಿದ್ದೇ ಹೊರತು ಪ್ರತ್ಯಕ್ಷವಾಗಿ ನೋಡಿ ಹೇಳಿರುವುದು ಅಲ್ಲ. ನಾವೂ ಸಹ ಅಲ್ಲಿಯವರೆಗೂ ನಡೆದ ವಿಷಗಳನ್ನನುಸರಿಸಿ ನಂತರ ಹೀಗೆ ನಡೆದಿರಬಹುದೆಂದು ಒಂದು ಆಲೋಚನೆಗೆ ಬಂದಿದ್ದೇವೆ. ನಾವು ಆಲೋಚನೆ ಮಾಡಿರುವ ಸಮಾಚಾರ ಸತ್ಯವಾಗಬಹುದು, ಇಲ್ಲವೇ ಅಸತ್ಯವೂ ಆಗಬಹುದು. ಆದ್ದರಿಂದ ನಂತರ ವಿಷಯವನ್ನು ಪೂರ್ತಿ ಸತ್ಯವೆಂದು ಹೇಳಲಾರೆವು. ಮುಂಚೆ ನಡೆದಿರುವುದು ನಡೆದಂತೆ ಹೇಳಿದ್ದೇವೆ ಆದ್ದರಿಂದ ನೌಕೆ ವಿಷಯದಲ್ಲಾಗಲಿ, ವಿಮಾನ ವಿಷಯಗಳಲ್ಲಾಗಲಿ ನಾವು ಹೇಳಿರುವುದೆಲ್ಲವೂ ಸತ್ಯವೇ. ಒಂದು ನೌಕೆ, ಆರು ವಿಮಾನಗಳು ಕಾಣಿಸದಂತೆಹೋದ ಎರಡು ಸಂಘಟನೆಗಳನ್ನು ತೆಗೆದುಕೊಂಡು ನೋಡಿದರೆ, ಎರಡು ಸಂಘಟನೆಗಳು ಬೇರೆ ಬೇರೆ ಕಾಲದಲ್ಲಿ ನಡೆದರೂ, ಅವು ಎರಡೂ ಸ್ವಲ್ಪ ವ್ಯತ್ಯಾಸದಿಂದ ಸುಮಾರು ಒಂದೇ ವಿಧವಾಗಿ ನಡೆದಿವೆ. ನೌಕೆ ಮೇಘದಿಂದ ಹೊರಗೆ ಬಂದ ನಂತರವೂ ಸಹ ಸಮುದ್ರದಲ್ಲಿ ಹೋದಂತೆ ಕಾಣಿಸಿದೆ. ನಂತರ ನೌಕೆಯಲ್ಲಿರುವವರು ಚಿಕ್ಕ ಬೋಟ್‌ಗಳಲ್ಲಿ ದಡಕ್ಕೆ ಬರುವುದು ನಡೆದಿದೆ. ವಿಮಾನವೇನೊ, ಮೇಘವು ಹೋಗುತ್ತಲೇ ಪೈಲೆಟ್‌ಗೆ ಮೈದಾನದಲ್ಲಿ ನಿಂತಿರುವಂತೆ ಕಾಣಿಸಿದೆ. ಹಾಗೇ ತನ್ನ ಹಿಂದೆ ಹೊರಟ ಐದು ಯುದ್ಧ ವಿಮಾನಗಳು ಸಹ ಲ್ಯಾಂಡಾಗಿರುವಂತೆ ಕಾಣಿಸಿದೆ. ಹೊರಗೆ ಪ್ರಪಂಚಕ್ಕೆ ಇತ್ತ ನೌಕೆಗಳಾಗಲಿ, ಅತ್ತ ವಿಮಾನಗಳಾಗಲಿ ಮೇಘದೊಳಗೆ ತೂರಿದಾಗಲೇ ಕಾಣಿಸದಂತೆ ಮಾಯವಾಗಿ ಹೋಗಿವೆ. ಹೊರಗೆ ಪ್ರಜೆಗಳಿಗೆ ವಿಮಾನಗಳು, ನೌಕೆ ಕಾಣಿಸದಂತೆ ಹೋದ ನಂತರ ಸಹ ಸ್ವಲ್ಪ ಸಮಯ ನೌಕೆಯಲ್ಲಿರುವವರು, ವಿಮಾನದಲ್ಲಿರುವವರು ಕ್ಷೇಮವಾಗಿಯೇ ಇದ್ದಾರೆ. ಪ್ರಪಂಚ ದೃಷ್ಟಿಗೆ ನೌಕೆ,

ವಿಮಾನವು ತಿಳಿಯದಂತೆ ಹೋದರೂ ಆಧ್ಯಾತ್ಮಿಕ ದೃಷ್ಠಿಗೆ ಪ್ರತ್ಯಕ್ಷವಾಗಿ ಗೋಚರಿಸಿವೆ. ಇಲ್ಲಿ ನಮಗೆ ಬೇಕಾದ ಉತ್ತರಗಳು ಏನೆಂದರೆ! ಆ ಭಾರೀ ನೌಕೆಯನ್ನು, ನಾವಿಕರನ್ನು ತಿಳಿಯದ ತೀರಕ್ಕೆ ಯಾರು ತೆಗೆದುಕೊಂಡು ಹೋಗಿದ್ದಾರೆ? ಮೇಘ ಅಡ್ಡ ಬರುವುದೇನು? ಅದರಿಂದ ಹೊರಗೆ ಬರುತ್ತಲೇ ಎಲ್ಲಿಯೋ ತಿಳಿಯದ ಪ್ರಾಂತದಲ್ಲಿ ಇರುವುದೇನು? ಹಾಗೆಯೇ ವಿಮಾನಕ್ಕೂ ಸಹ ಮೇಘ ಅಡ್ಡ ಬರುವುದು, ಅದು ಹೋದ ತಕ್ಷಣ ವಿಮಾನ ಭೂಮಿ ಮೇಲೆ ನಿಂತಿರುವುದೇನು? ಹಾಗೆ ನಿಲ್ಲಿಸಿರುವವರು ಯಾರು? ತನಗಿಂತ ಹಿಂದೆ ಬರುತ್ತಿರುವ ಐದು ವಿಮಾನಗಳೂ ಸಹ ಅಲ್ಲಿಗೆ ಹೇಗೆ ಬಂದಿವೆ? ನೌಕೆಗಾಗಲಿ, ವಿಮಾನಕ್ಕಾಗಲಿ ಮೇಘವೇ ಅಡ್ಡ ಬರುವುದೇನು? ನೌಕೆಯಲ್ಲಿನ ನಾವಿಕರು ಹೋದ ಸಮುದ್ರ ತೀರವಾಗಲಿ, ವಿಮಾನಗಳು ನಿಂತಿರುವ ಮೈದಾನವಾಗಲಿ ಎಲ್ಲಿಯವು? ಅಷ್ಟಕ್ಕೂ ನೌಕೆ, ನಾವಿಕರು ಹೋದ ಪ್ರಾಂತವೂ, ವಿಮಾನಗಳು ಇಳಿದಿರುವ ಪ್ರಾಂತವು ಯಾರಿಗೂ ತಿಳಿಯದ ಪ್ರಾಂತವಾ? ಹೀಗೆ ಎಷ್ಟೋ ಪ್ರಶ್ನೆಗಳು ಬರುತ್ತಿವೆ. ಇಷ್ಟು ಪ್ರಶ್ನೆಗಳಿಗೆ ಉತ್ತರಗಳನ್ನು ವಿಮಾನವನ್ನು ನಡೆಸಿದ ಪೈಲೆಟ್ ಮೂಲಕವಾಗಲಿ, ನೌಕೆಯನ್ನು ನಡೆಸಿ ದಡಕ್ಕೆ ಹೋದ ಪಾರ್ಸ್ಲೋ ಕೆಪ್ಟನ್ ಮೂಲಕವಾಗಲಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರು ನಿದ್ರೆಯೊಳಗೆ ಹೋಗಿದ್ದಾರೆ ಆದ್ದರಿಂದ ಅವರಿಂದ ಯಾವ ಉತ್ತರವು ಸಿಗುವುದಿಲ್ಲ. ಈಗ ಈ ಪ್ರಶ್ನೆಗಳೆಲ್ಲವುಗಳಿಗೆ ಉತ್ತರ ನಮಗೆ ತೋಚಿದ ವಿಧವಾಗಿ ಹೇಳಿಕೊಳ್ಳಬೇಕಾಗಿದೆ ಆಗಲಿ ಬೇರೆ ಮಾರ್ಗವಿಲ್ಲ. ನಮ್ಮ ಊಹೆಯ ಪ್ರಕಾರ ಹೇಳಿಕೊಳ್ಳುವ ವಿಷಯಗಳು ಕೆಲವು ಸತ್ಯವಾಗಬಹುದು, ಕೆಲವು ಅಸತ್ಯವಾಗಬಹುದು. ಆದ್ದರಿಂದ ಈಗ ನಾನು ಹೇಳುವಂತಹ ವಿಷಯ ಎಲ್ಲವೂ ನಿಜವೆಂದು ನಾನು ಹೇಳುತ್ತಿಲ್ಲ.

1938ನೇ ವರ್ಷ ಮಾಯವಾದ ನೌಕೆ ವಿಷಯವನ್ನು ಕುರಿತು ನನ್ನ ಉದ್ದೇಶ ಹೀಗೆ ಇದೆ. ಆ ದಿನ ಸಮುದ್ರದ ಮೇಲೆ ಪ್ರಯಾಣ ಮಾಡುತ್ತಿರುವ

ಬ್ರಿಟೀಷ್‌ನೌಕೆ, ಶಕ್ತಿ ಇರುವ ತ್ರಿಭುಜಾಕಾರ ಪ್ರಾಂತದೊಳಗೆ ಹೋಗುವುದು ನಡೆದಿದೆ. ಆ ನೌಕೆಯಲ್ಲಿರುವ ಪಾರ್‌ಸ್ಲೋ ಕೆಪ್ಟನ್‌ಗಾಗಲಿ, ಉಳಿದ ಸಿಬ್ಬಂದಿಗಾಗಲಿ ಸ್ವಲ್ಪವೂ ಸಹ ದೈವಜ್ಞಾನ ಇಲ್ಲ. ಆ ಪ್ರಾಂತದೊಳಗೆ ಹೋದವರು ಯಾರಾದರೂ ದೈವಜ್ಞಾನ ಇರುವವನಾಗಿರಬೇಕು. ದೇವರ ಮೇಲೆ ವಿಶ್ವಾಸವಿಲ್ಲದ ಅಜ್ಞಾನಿಗಳು ಶಕ್ತಿ ಇರುವ ಆ ಪ್ರಾಂತದೊಳಗೆ ಪ್ರವೇಶಿಸಿದರೆ, ಆ ಶಕ್ತಿ ಆ ಗ್ರಹಕ್ಕೆ ಗುರಿಯಾಗದೆ ತಪ್ಪುವುದಿಲ್ಲ. ಹಾಗೇ ಅಜ್ಞಾನಿಗಳ ಮೇಲೆ, ಸಮುದ್ರದಲ್ಲಿರುವ ಆ ಶಕ್ತಿಗೆ ಕೋಪ ಬರುವುದಕ್ಕೆ ಕಾರಣವಿದೆ. ತ್ರೇತಾಯುಗದಲ್ಲಿಯೇ ಇಂದೂ ಮಹಾಸಮುದ್ರದಲ್ಲಿರುವ ಆತ್ಮಶಕ್ತಿ ಹತ್ತಿರವೇ ಇರುವ ಶ್ರೀಲಂಕದಲ್ಲಿ ರಾವಣಬ್ರಹ್ಮನಾಗಿ ಜನ್ಮಿಸಿ ದೈವಜ್ಞಾನಕ್ಕೂ, ಯೋಗಕ್ಕೂ, ಮೋಕ್ಷಕ್ಕೂ ನಮೂನೆ ಯಾಗಿ ಜೀವಿಸಿದೆ. ಜ್ಞಾನವೆಂದರೆ ಎಂತಹದೋ, ಯೋಗ ಎಂದರೆ ಎಂತ ಹದೋ, ಮೋಕ್ಷವನ್ನು ಜೀವಾತ್ಮ ಹೇಗೆ ಹೊಂದಬೇಕೋ ಮಾನವರಿಗೆ ತಿಳಿಯು ವಂತೆ ಆಚರಿಸಿ ತೋರಿಸಿದೆ. ಆತ್ಮಶಕ್ತಿಯೇ ತನ್ನಲ್ಲಿನ ಅಂಶವನ್ನು ರಾವಣಬ್ರಹ್ಮನಾಗಿ ಕಳುಹಿಸಿ, ಮಾನವರು ಜ್ಞಾನವನ್ನು, ಯೋಗವನ್ನು, ಮೋಕ್ಷವನ್ನು ತಿಳಿಯುವಂತೆ ಶ್ರಮಿಸಿದಾಗ, ಅಂದಿಗೂ ಇಂದಿಗೂ ಪ್ರಜೆಗಳು ಅಜ್ಞಾನದಕಡೆ ಇದ್ದು, ಅಂದಿನ ರಾವಣಬ್ರಹ್ಮನ ದೊಡ್ಡತನವನ್ನು ಸ್ವಲ್ಪವೂ ಸಹ ಗುರುತಿಸದೆ, ಕೊನೆಗೆ ರಾವಣನನ್ನು ಅಜ್ಞಾನಿಯಾಗಿ, ದುಷ್ಟನನ್ನಾಗಿ, ಕಾಮಾಂಧ ಕಾರನನ್ನಾಗಿ ಹೇಳಿಕೊಳ್ಳುವುದರಿಂದ ಸಮುದ್ರದ ಮೇಲಿನ ಶಕ್ತಿಗೆ ಕೋಪ ಬಂದಿದೆ. ಆ ದಿನ ಇಂದೂ ಮಹಾಸಮುದ್ರ ದಲ್ಲಿರುವ ತ್ರೈತಾಕಾರ ಶಕ್ತಿ, ಈ ದಿನ ಅಟ್ಲಾಂಟಿಕ್ ಸಮುದ್ರದಲ್ಲಿರುವ ತ್ರೈತಾಕಾರ ಶಕ್ತಿ ಎರಡೂ ಒಂದೇ ಎಂದು, ಆ ಶಕ್ತಿಯ ಭಾಗವೇ ರಾವಣಬ್ರಹ್ಮ ಎಂದು ಮೊದಲೆ ಹೇಳಿಕೊಂಡಿದ್ದೇವೆ. ಅಂದಿನ ರಾವಣಬ್ರಹ್ಮನಿಗೆ ಇಂದಿನ ಸಮುದ್ರದ ಮೇಲಿನ ಶಕ್ತಿಗೆ ಯಾವ ವ್ಯತ್ಯಾಸ ಇಲ್ಲ, ಎರಡೂ ಒಂದೇ ಎಂದು ಹೇಳುತ್ತಿದ್ದೇವೆ. ಈ ದಿನ ಮನುಷ್ಯರು ತನ್ನನ್ನು ಕುರಿತು ಕೆಟ್ಟದಾಗಿ ಹೇಳಿಕೊಳ್ಳುವುದನ್ನು ನೋಡಿದ ರಾವಣಬ್ರಹ್ಮನಿಗೆ ಮನುಷ್ಯರ ಮೇಲೆ ಕೋಪ ಬರುವುದಿಲ್ಲವಾ? ಆದ್ದರಿಂದ ಆ ಶಕ್ತಿ ಇರುವ ಸಮುದ್ರ ಪ್ರಾಂತದೊಳಗೆ ಅಜ್ಞಾನಿಗಳು ಹೋದರೆ ಆ ಶಕ್ತಿಗೆ

ಕೋಪ ಬರುತ್ತಿದೆ. ಜ್ಞಾನಿಗಳನ್ನು ಗೌರವಿಸಿ ಯಾವ ತೊಂದರೆ ಇಲ್ಲದಂತೆ ಕಳುಹಿಸುವ ಆ ಶಕ್ತಿ, ಅಜ್ಞಾನಿಗಳನ್ನು ನೋಡಿದರೆ ಕೋಪದಿಂದ ಉರಿದು ಬೀಳುತ್ತಿದೆ. ಆದ್ದರಿಂದ ಅಲ್ಲಿಗೆ ಹೋದ ನೌಕೆಯಲ್ಲಿರುವವರ ಮೇಲೆ, ಸಮುದ್ರ ದಲ್ಲಿನ ಶಕ್ತಿಗೆ ಕೋಪ ಬಂದಿದೆಂದು ಹೇಳಬಹುದು. ಆ ಶಕ್ತಿಗೆ ಕೋಪ ಬಂದರೂ ಅವರನ್ನು ಸ್ವಲ್ಪವೂ ಸಹ ಹಿಂಸಿಸಲಿಲ್ಲ. ಆಗಲೂ ಸಹ ಅವರು ಜ್ಞಾನಿಗಳಾಗಿ ಬದಲಾವಣೆಯಾಗುವುದಕ್ಕೆ ಅವಕಾಶಕೊಟ್ಟಿದೆ. ಹಾಗೆ ಅವರನ್ನು ದೇವರ ಮೇಲೆ ವಿಶ್ವಾಸವಿರುವ ಜ್ಞಾನಿಗಳಾಗಿ ಬದಲಾಯಿಸುವುದಕ್ಕೆ, ಆ ಶಕ್ತಿ ಮಾಡಿದ ಕೆಲಸ ಒಳ್ಳೆಯದೆ,  ಆದರೂ ಇಷ್ಟು ದಿನ ಒಂದಾಗಿ ಕಲೆತು ಬೆರೆತು ಇದ್ದ ಅವರ ಕುಟುಂಬ ಸದಸ್ಯರಿಂದ ಶಾಶ್ವತವಾಗಿ ದೂರವಾಗಿಹೋಗುವುದು ಅವರಿಗೆ ಒಂದು ವಿಧವಾದ ಶಿಕ್ಷೆಯೇ ಎಂದು ಹೇಳಬಹುದು. ನನ್ನ ಲೆಕ್ಕದಲ್ಲಿ ಸ್ವಲ್ಪ ಶಿಕ್ಷೆ ಎನಿಸಿದರೂ, ಅವರ ಲೆಕ್ಕದಲ್ಲಿ ಅವರಿಗೆ ಪೂರ್ತಿ ಕಠಿಣವಾದ ಶಿಕ್ಷೆ ಎಂದೇ ಹೇಳಬಹುದು. ಜ್ಞಾನ ತಿಳಿಯದವರು ಯಾರಾದರೂ ಅದು ಪೂರ್ತಿ ಕಠಿಣವಾದ ಶಿಕ್ಷೆ ಎಂದೇ ಹೇಳಬಹುದು.

ಗತಕಾಲದಲ್ಲಿ ನಾವು ಬರೆದ **"ದೆವ್ವ ಹಾಗೂ ಭೂತಗಳ ಯಥಾರ್ಥ ಸಂಘಟನೆಗಳು"** ಎಂಬ ಗ್ರಂಥದಲ್ಲಿ ದೇವರ ರಾಜ್ಯದಲ್ಲಿನ, ದೇವರ ಪರಿಪಾಲನೆ ಯಲ್ಲಿ ಮೇಘಗಳು ಮುಖ್ಯವಾದ ಪಾತ್ರವನ್ನು ಪೋಷಿಸುತ್ತಿವೆ ಎಂದು ಬರೆಯುತ್ತಾ, ಮೇಘಗಳು ಮಾಡುತ್ತಿರುವ ಕೆಲಸಗಳನ್ನು ಸಹ ವಿವರಿಸಿದ್ದೇವೆ. ತ್ರಿಭುಜಾಕಾರವಾಗಿ ಸಮುದ್ರದ ಮೇಲಿರುವ ಶಕ್ತಿಯ ಉದ್ದೇಶವನ್ನು ಗ್ರಹಿಸಿದ ಮೇಘ, ನೌಕೆಗೆ ಒಂದು ಕಿಲೋಮೀಟರ್ ದೂರದಲ್ಲಿ ಸ್ವಲ್ಪ ಹುಟ್ಟಿ, ತಕ್ಷಣ ತನ್ನ ಆಕಾರವನ್ನು ಬೆಳೆಸಿಕೊಂಡಿದೆ. ನೌಕೆ ಹತ್ತಿರವಾದಂತೆಲ್ಲವೂ ಆಕಾರವನ್ನು ವಿಸ್ತರಿಸಿಕೊಂಡ ಮೇಘವು, ನೌಕೆ ತನ್ನಲ್ಲಿ ಪ್ರವೇಶಿಸುತ್ತಲೇ, ಸುತ್ತಲೂ ಮೇಘವಿದ್ದು ಏನು ಕಾಣಿಸದಂತೆ ಮಾಡಿದೆ. ಸುಮಾರು ಹತ್ತು, ಹದಿನೈದು ನಿಮೀಷಗಳಿಗೆ ಮೇಘದಿಂದ ಹೊರಗೆ ಬಂದಂತೆ ಅದರಲ್ಲಿನ ಸಿಬ್ಬಂದಿಗೆ ಕಾಣಿಸಿದರೂ, ಆ

ಹತ್ತು, ಹದಿನೈದು ನಿಮಿಷಗಳಲ್ಲಿ ಅವರಿಗೆ ಸ್ವಲ್ಪವೂ ಸಹ ತಿಳಿಯದ ವಿಷಯವೂ, ಯಾರಿಗೂ ಸಹ ಗುರುತು ಸಿಕ್ಕದ ವಿಷಯವೂ ನಡೆದಿದೆ. ಆ ಸ್ವಲ್ಪ ಸಮಯ ದಲ್ಲಿಯೇ ಆ ಮೇಘವು ಅಷ್ಟುದೊಡ್ಡ ನೌಕೆಯನ್ನು, ಎಷ್ಟೋ ಕೋಟಿ ಮೈಲಿಗಳ ದೂರದಲ್ಲಿರುವ ಒಂದು ಗ್ರಹದ ಮೇಲೆ ತೆಗೆದುಕೊಂಡು ಹೋಗಿದೆ. ಆ ಗ್ರಹ ಈ ಸೂರ್ಯ ಕುಟುಂಬದಲ್ಲಿರುವುದೇ ಅಲ್ಲ. ಆ ಗ್ರಹದ ಮೇಲೆಯೂ ಸಹ ಸಮುದ್ರವಿದೆ. ಆದ್ದರಿಂದ ಆ ನೌಕೆಯನ್ನು ಆ ಗ್ರಹದ ಸಮುದ್ರದ ಮೇಲೆ ಬಿಟ್ಟಿದೆ. ಅದೂ ತೀರಕ್ಕೆ ಹತ್ತಿರವಾಗಿ ಬಿಟ್ಟಿದೆ. ಮೇಘವು ಬಿಟ್ಟು ಹೋಗುವಷ್ಟರಲ್ಲಿ ತಮ್ಮ ಹಡಗು ಸಮುದ್ರದ ಮೇಲೆ ಪ್ರಯಾಣಿಸುತ್ತಿದೆ, ಆದ ಕಾರಣ ಆ ಹಡಗಿನಲ್ಲಿನ ಮನುಷ್ಯರಿಗೆ ಎಂತಹ ಅನುಮಾನವು ಬರಲಿಲ್ಲ. ನಂತರ ಸ್ವಲ್ಪ ಸಮಯಕ್ಕೆ ತೀರವು ಹತ್ತಿರದಲ್ಲಿ ಕಾಣಿಸಿದಾಗ, ತಾವು ದಾರಿ ತಪ್ಪಿದ್ದೇವೆಂದುಕೊಂಡರು. ಆದರೆ ತಾವು ತಮ್ಮ ಹಡಗು, ಭೂಗೋಳವನ್ನೇ ಬಿಟ್ಟು ಬಂದಿದ್ದೇವೆಂದು ಅವರಿಗೆ ಸ್ವಲ್ಪವೂ ಸಹ ತಿಳಿದಿಲ್ಲ.

ತಮ್ಮ ಹಡಗನ್ನು ಸಮುದ್ರದಲ್ಲಿ ನಿಲ್ಲಿಸಿ, ಸಣ್ಣ ದೋಣಿಗಳ ಮೂಲಕ ಅವರು ತೀರದೊಳಗೆ ಬಂದು ನೋಡಿದರು. ಅದು ಯಾವ ದೇಶವೊ, ಯಾವ ಪ್ರದೇಶವೊ ಸ್ವಲ್ಪವೂ ಸಹ ಅರ್ಥವಾಗಲಿಲ್ಲ. ಅಷ್ಟರಲ್ಲಿ ಅಲ್ಲಿಗೆ ತೆಗೆದುಕೊಂಡು ಹೋಗಿರುವ ಮೇಘವು ಅವರಿಗೆ ನಿದ್ರೆಮತ್ತು ಉಂಟುಮಾಡಿ, ನಿದ್ರೆಯೊಳಗೆ ಹೋಗುವಂತೆ ಮಾಡಿದೆ. ಅವರು ಒಂದು ಗಂಟೆ ಸಮಯ ನಿದ್ರೆಯಿಂದ ಎದ್ದಿದ್ದಾರೆ. ಆ ಗಂಟೆ ನಿದ್ರೆಕಾಲದಲ್ಲಿ ಅವರ ಮನಸ್ಸಿಗಿರುವ ಜ್ಞಾಪಕಗಳೆಲ್ಲವೂ, ಅವರ ಮನಸ್ಸಿನಿಂದ ಕಂಪ್ಯೂಟರ್‌ನಲ್ಲಿ ಡಿಲೇಟ್ ಆದಂತೆ ಆಗಿಹೋಗಿವೆ. ಅಲ್ಲಿಗೆ ಅವರಿಗೆ ಅವರ ಹಿಂದಿನದು ಪೂರ್ತಿಯಾಗಿ ತಿಳಿಯದಂತೆ ಹೋಗಿದೆ. ಅವರು ಭೂಲೋಕವಾಸಿಗಳಾದ ವಿಷಯವೂ ಸಹ ಅವರಿಗೆ ತಿಳಿದಿಲ್ಲ. ತಾವು ನೌಕೆಯಲ್ಲಿ ಬಂದಿದ್ದೇವೆಂಬ ಜ್ಞಾಪಕ ಸಹ ಇಲ್ಲ. ಹಾಗೆ ಅವರ ಪೂರ್ವ ಮನೋಜ್ಞಾಪಕಗಳನ್ನು ಕಳೆದುಕೊಳ್ಳುವುದರಿಂದ, ನಂತರ ಅವರಿಗೆ ಏನು

ನಡೆದಿದೆಯೋ ಪ್ರತ್ಯಕ್ಷವಾಗಿ ಅವರಿಗೆ ತಿಳಿದಿಲ್ಲ. ನಂತರ ವಿಷಯವನ್ನು ಪರೋಕ್ಷವಾಗಿ ಊಹಿಸಿ ಹೇಳುತ್ತಿದ್ದೇವೆ ವಿನಃ ಪೂರ್ತಿಯಾಗಿ ತಿಳಿದು ಹೇಳುವುದು ಅಲ್ಲ. ಹಾಗೆ ನಿದ್ರೆಯೊಳಗೆ ಹೋಗಿ ಎದ್ದವರಿಗೆ, ಹೊಸ ಜನ್ಮಬಂದಂತಾಗಿದೆ. ಹಳೆ ವಿಷಯಗಳೆಲ್ಲ ತಿಳಿಯದಂತೆ ಹೋದಾಗ, ಹಳೇಜನ್ಮ ಹೋದಂತೆ ಆಗುತ್ತದೆ. ಜನ್ಮ ಬದಲಾವಣೆಯಾಗದಿದ್ದರು, ಶರೀರ ಬದಲಾವಣೆಯಾಗದಿದ್ದರೂ ಅದು ಹೊಸ ಜನ್ಮಕ್ಕೆ ಸಮಾನವಾಗಿದೆ. ಆ ಗ್ರಹದ ಮೇಲೆಯೂ ಸಹ ಭೂಮಿ ಮೇಲಿರುವಂತೆ ಮನುಷ್ಯರೆ ಇದ್ದಾರೆ. ಆ ಮನುಷ್ಯರೆಲ್ಲರೂ ಒಳ್ಳೆಯ ದೈವಜ್ಞಾನ ಹೊಂದಿದವರು. ಅಂತಹ ಜ್ಞಾನಿಗಳಲ್ಲಿ ಭೂಗೋಳದಿಂದ ಹೋದವರು ಬೆರೆತು ಹೋಗಿದ್ದಾರೆ. ಗೋಳದ ಮೇಲಿರುವ ಮನುಷ್ಯರಲ್ಲಿ ಬೆರೆತು ಇರುವುದರಿಂದ, ಇಲ್ಲಿಂದ ಹೋದ ಮನುಷ್ಯರು ಸಹ ಜ್ಞಾನಿಗಳಾಗಿ ಬದಲಾವಣೆಯಾಗಿದ್ದಾರೆ. ಭೂಗೋಳದಿಂದ ತಪ್ಪಿಹೋಗುವುದು ನೌಕೆಯಲ್ಲಿರುವವರಿಗೆ ಒಂದು ವಿಧವಾಗಿ ಶಿಕ್ಷೆಯೇ ಆದರೂ, ಕೊನೆಗೆ ಅವರು ಜ್ಞಾನಿಗಳಾಗಿ ಬದಲಾಗಿಹೋಗುವುದು ಒಳ್ಳೆಯದೇ ಅಲ್ಲವೆ! ಈ ವಿಧವಾಗಿ ಒಂದು ನೌಕೆ ಹಿಂದೆ ಇಷ್ಟು ಕಥೆ ಇದೆ. ಇಷ್ಟು ನಡೆಯುವುದಕ್ಕೆ ಕಾರಣ ಅಟ್ಲಾಂಟಿಕ್ ಸಮುದ್ರದಲ್ಲಿನ ತ್ರೈತಾಕಾರ ಪ್ರಾಂತವೇಯೆಂದು ಹೇಳಬಹುದು.

1947ನೇ ವರ್ಷ ಅಮೇರಿಕಾ ಯುದ್ಧ ವಿಮಾನಗಳು ಹೋದಾಗ ನಡೆದ ವಿಷಯವನ್ನು ವಿವರಿಸಿಕೊಳ್ಳೋಣ. ಆ ದಿನ ಮೊದಲು ಪೈಲೆಟ್ ವಿಮಾನ ಹೊರಟಿದೆ. ಅದರ ಹಿಂದೆ ಕೆಲವು ನಿಮೀಷಗಳಿಗೆ ಐದು ಯುದ್ದ ವಿಮಾನಗಳು ಹೊರಟಿವೆ. ಫ್ಲೋರಿಡಾದಿಂದ ಹೊರಟಿರುವ ಮೊದಲ ಪೈಲೆಟ್ ವಿಮಾನ ಸಮುದ್ರದ ಮೇಲಿರುವ ಟ್ರಯಾಂಗಿಲ್ ಮೇಲೆ ಪ್ರಯಾಣಿಸುತ್ತಾ ಇದೆ. ಆಗ ಅಮೇರಿಕಾದಲ್ಲಿನ ಫ್ಲೋರಿಡಾದಿಂದ ಹೊರಟು ಸುಮಾರು 500 ಕಿಲೋಮೀಟರ್‌ಗಳು ಸಮುದ್ರದ ಮೇಲೆ ಪ್ರಯಾಣಿಸಿದೆ. ಆಗ ವಿಮಾನದಲ್ಲಿನ ಕಮ್ಯೂನಿಕೇಷನ್ ಸಿಸ್ಟಮ್ ಎಲ್ಲವೂ ಸ್ವಲ್ಪವೂ ಕೆಲಸ ಮಾಡಲಿಲ್ಲ. ಅದರ

ಹಿಂದೆ ಪೈಲೆಟ್‌ಗೆ ಭೂಮಿಯಿಂದ ಕನೆಕ್ಷನ್ ಕಿತ್ತುಹೋಗಿದೆ. ತಮ್ಮ ಹಿಂದೆಯೆ ನೂರು ಕಿಲೋಮೀಟರ್‌ಗಳ ದೂರದಲ್ಲಿ ಬರುತ್ತಿರುವ ಐದು ಯುದ್ಧ ವಿಮಾನಗಳ ಜೊತೆ ಸಂಬಂಧವಿಲ್ಲದಂತೆ ಹೋಗಿದೆ. ಕಾಕ್‌ಪಿಟ್‌ನಲ್ಲಿನ ಮೀಟರ್‌ಗಳೆಲ್ಲವೂ ಕೆಲಸ ಮಾಡದಂತೆ ಹೋಗಿವೆ. ಆದರಿಂದ ವಿಮಾನ ಭೂಮಿಯಿಂದ ಎಷ್ಟು ಎತ್ತರದಲ್ಲಿ ಎಗರುತ್ತಿದೆ ಎಂದಾಗಲಿ, ಎಷ್ಟು ವೇಗವಾಗಿ ಹೋಗುತ್ತಿದೆ ಎಂದಾಗಲಿ, ತಮಗೆ ಗುರಿ ಎಷ್ಟು ದೂರದಲ್ಲಿದೆಯೆಂದಾಗಲಿ ತಿಳಿಯದಂತೆ ಹೋಗಿದೆ. ಅದರಿಂದ ಪೈಲೆಟ್ ಸ್ವಲ್ಪ ಅಯೋಮಯಸ್ಥಿತಿಯಲ್ಲಿದ್ದ ನಂತರ, ಏಕೆ ಹೀಗೆ ಆಗುತ್ತಿದೆಯೋ ಅರ್ಥವಾಗದೆ, ಆತನ ಪ್ರಯತ್ನ ಆತನು ಮಾಡುತ್ತಿದ್ದನು. ಆಗಲೂ ವಿಮಾನ ಪ್ರಯಾಣಿಸುತ್ತಲೇ ಇದೆ. ಅಷ್ಟರಲ್ಲಿ ಹೊರಗಡೆ ವಿಮಾನದ ಸುತ್ತಾ ಮೇಘವಿದ್ದಂತೆ, ಮೇಘಗಳ ಮಧ್ಯದಲ್ಲಿ ಸ್ವಲ್ಪ ಖಾಲಿಸ್ಥಳದಲ್ಲಿ ತಮ್ಮ ವಿಮಾನ ಹೋಗುತ್ತಿರುವಂತೆ ಪೈಲೆಟ್‌ಗೆ ಅರ್ಥವಾಗಿದೆ. ಹಾಗೆ ಸ್ವಲ್ಪ ದೂರ ಹೋದ ಬಳಿಕ, ಒಂದು ಬಿಳಿ ಮೇಘ ವಿಮಾನಕ್ಕೆ ಅಡ್ಡ ಬಂದಿದೆ. ಆಗ ವಿಮಾನವು ಮೇಘದೊಳಗೆ ತೂರಿಹೋಗಿದೆ. ನಂತರ ಮೇಘವು ವಿಮಾನವನ್ನು ಬಿಟ್ಟುಹೋದಂತೆ, ಆಗಲೇ ವಿಮಾನ ಭೂಮಿ ಮೇಲೆ ಇಳಿದಿರುವಂತೆ ಪೈಲೆಟ್ ಗ್ರಹಿಸಿದ್ದಾನೆ. ತನಗೆ ಸ್ವಲ್ಪ ದೂರದಲ್ಲಿ ತನ್ನ ಹಿಂದೆ ಬರುವ ಐದು ವಿಮಾನಗಳು ಸಹ ಲ್ಯಾಂಡ್ ಆಗಿರುವಂತೆ ಕಾಣಿಸಿವೆ. ನಂತರ ಆತನಿಗೆ ನಿದ್ರೆ ಬರುವುದು, ಆತನು ನಿದ್ರೆಯೊಳಗೆ ಹೋಗುವುದು ನಡೆದಿದೆ.

ಆತನ ಹಿಂದೆ ಬರುವ ವಿಮಾನಗಳಿಗೂ ಸಹ ಮೊದಲ ವಿಮಾನದ ಪೈಲೆಟ್‌ಗೆ ನಡೆದಂತೆ ನಡೆದಿದೆ. ಅವುಗಳಿಗೂ ಸಹ ಮೇಘಗಳು ಅಡ್ಡ ಬರುವುದು, ಅವು ಸಹ ಮೇಘದೊಳಗೆ ಹೋಗುವುದು, ನಂತರ ಮೆಘದಿಂದ ಹೊರಗೆ ಬರುವಷ್ಟರಲ್ಲಿ ಐದು ವಿಮಾನಗಳು ಮೈದಾನದಲ್ಲಿ ನಿಂತಿರುವುದು ನಡೆದಿದೆ. ನಂತರ ಆ ಐದು ವಿಮಾನಗಳನ್ನು ನಡೆಸುವವರೂ ಸಹ ನಿದ್ರೆಯೊಳಗೆ ಹೋಗುವುದು ನಡೆದಿದೆ. ನಂತರ ಏನು ನಡೆದಿದೆಯೋ ಅವರಿಗೆ ತಿಳಿದಿಲ್ಲ,

ಅವರನ್ನು ಅನುಸರಿಸುವ ನಮಗೂ ಸಹ ತಿಳಿಯುವುದಿಲ್ಲ. ಆದರೆ ಅಲ್ಲಿ ನಡೆದಿರುವುದನ್ನು ಊಹಿಸಿ ಹೇಳುತ್ತಿದ್ದೇವೆ. ನಾವು ಊಹಿಸಿರುವುದು ಪೂರ್ತಿ ಸತ್ಯವೆಂದು ನಾವು ಸಹ ಹೇಳುವುದಿಲ್ಲ. ವಿಮಾನಗಳು ಮೈದಾನದಲ್ಲಿ ಇಳಿದಿರುವ ವರೆಗೂ ಪೂರ್ತಿ ಸತ್ಯವೆಂದು ಸಹ ಹೇಳಿದ್ದೇವೆ. ಹಾಗೆ ವಿಮಾನಗಳಲ್ಲಿ ಬಂದವರು ನಿದ್ರಿಸಿ ಒಂದು ಗಂಟೆ ನಂತರ ಎದ್ದಿದ್ದಾರೆ. ಎದ್ದ ನಂತರ ಅವರಿಗೂ ಸಹ ಅದಕ್ಕೂ ಮೊದಲು ಇರುವ ಜ್ಞಾಪಕ ಇಲ್ಲದಂತೆ ಹೋಗಿದೆ. ನೌಕೆಯಲ್ಲಿ ಬಂದಿರುವವರಿಗೆ ನಡೆದಂತೆ ವಿಮಾನದಲ್ಲಿ ಬಂದಿರುವವರಿಗೂ ಸಹ ಗತ ಜ್ಞಾಪಕಗಳೆಲ್ಲವೂ ಇಲ್ಲದಂತೆ ಹೋಗಿವೆ. ಅದರಿಂದ ಅವರ್ಯಾರೋ ಅವರಿಗೆ ತಿಳಿಯದಂತೆ ಹೋಗಿದೆ. ವಿಶೇಷವೇನೆಂದರೆ ನೌಕೆ ಸೇರಿದ ಗ್ರಹದ ಮೇಲೆ ವಿಮಾನಗಳು ಸಹ ಸೇರಿಸಲ್ಪಟ್ಟಿವೆ. ಬ್ರಿಟೀಷ್ ನೌಕೆಯವರು, ಅಮೇರಿಕಾ ವಿಮಾನದವರು ಒಂದೇ ಗ್ರಹದ ಮೇಲೆ ಇಳಿಸಲ್ಪಟ್ಟಿದ್ದಾರೆಂದು, ಭೂಮಂಡಲ ದೊಳಗಿನ ಅಮೇರಿಕಾದವರಿಗಾಗಲಿ, ಬ್ರಿಟೀಷ್ ಅವರಿಗಾಗಲಿ ತಿಳಿದಿಲ್ಲ.

ಒಂದೇ ಗ್ರಹದ ಮೇಲೆ ಇಳಿದ ಎರಡು ದೇಶದವರಿಗೂ ನಾವು ಇಂತಹವರೆಂದು ಹೇಳುವುದಕ್ಕೆ ಸಾಧ್ಯವಿಲ್ಲದಂತೆ ಜ್ಞಾಪಕಶಕ್ತಿ ಹೋಗಿದೆ. ಅವರು ಇಳಿದ ಗ್ರಹದ ಮೇಲೆಯೂ ಸಹ ಮನುಷ್ಯರು ಇರುವುದು, ಕೊನೆಗೆ ಅವರಜೊತೆ ಇವರು ಬೆರೆತುಹೋಗಿರುವುದೂ ನಡೆದಿದೆ. ಆ ಗ್ರಹವಾಸಿಗಳು ಏಳರಿಂದ ಎಂಟು, ಒಂಭತ್ತು ಅಡಿಗಳ ಎತ್ತರ ಶರೀರ ಇರುವವರು. ಇಲ್ಲಿಂದ ಹೋದವರು, ಐದರಿಂದ ಆರು ಅಡಿಗಳ ಎತ್ತರವಿದ್ದಾರೆ. ಆ ಗ್ರಹದೊಳಗಿನ ಪ್ರಜೆಗಳ ಮುಂದೆ, ಇಲ್ಲಿಂದ ಹೋದವರು ಕುಳ್ಳರಾಗಿಯೇ ಕಾಣಿಸುತ್ತಿರುವುದಲ್ಲದೆ, ಅವರ ಮುಂದೆ ಭೂಲೋಕದಿಂದ ಹೋದವರು ಬಹಳ ತಿಳುವಳಿಕೆ ಕಡಿಮೆ ಇರುವವರಾಗಿ ಕಾಣಿಸಿದ್ದಾರೆ. ಇಲ್ಲಿನವರು ವಿಮಾನವನ್ನೂ, ದೋಣಿಯನ್ನು ನಡೆಸುವಂತಹ ತಿಳಿವಳಿಕೆಯುಳ್ಳವರಾದರೂ, ಅಲ್ಲಿನ ಅವರ ಮುಂದೆ ಇವರ ತಿಳುವಳಿಕೆ ಬಹಳ ಕಡಿಮೆಯೇ ಎಂದು ಹೇಳಬಹುದು. ಅಲ್ಲಿನವರು ಎಲ್ಲಾ ರಂಗಗಳಲ್ಲಿಯೂ

ಮುನ್ನೆಚ್ಚರಿಯಲ್ಲಿ ಇರುವುದಲ್ಲದೆ, ಆಧ್ಯಾತ್ಮಿಕರಂಗದಲ್ಲಿಯೂ ಸಹ ಎಲ್ಲಾ ತಿಳಿದವರಾಗಿದ್ದಾರೆ. ಒಂದು ಊರಿನಲ್ಲಿ ಯಾರಾದರೂ ದೈವಜ್ಞಾನ ಇಲ್ಲದವನಾಗಿ ಅಜ್ಞಾನಿಯಾಗಿ ಇದ್ದರೆ, ಅವನನ್ನು ಆ ಊರಿನಿಂದ ಹೊರಹಾಕಿ ಊರಿನೊಳಗೆ ಕರೆದುಕೊಳ್ಳುತ್ತಿರಲಿಲ್ಲ. ದೈವಜ್ಞಾನ ಇಲ್ಲದವನು ಹುಟ್ಟುವುದೇ ತಪ್ಪು ಎಂದು ಹೇಳುತ್ತಿದ್ದರು. ಆ ಗೋಳದಲ್ಲಿನ ಪ್ರಜೆಗಳೆಲ್ಲರೂ ಜ್ಞಾನ ಹೊಂದಿ ಬದುಕು ಸಾಗಿಸುವುದಲ್ಲದೆ, ಎಷ್ಟೋ ಪ್ರಶಾಂತವಾಗಿ ಜೀವಿಸುತ್ತಿದ್ದಾರೆ. ಅವರಿಗೆ ನಮ್ಮಂತೆ ರಾಜಕೀಯವಿಲ್ಲ. ಆ ಗೋಳದಲ್ಲಿ ಯಾರು ದೊಡ್ಡಜ್ಞಾನಿ,  ಯೋಗಿಯಾಗಿ ರುತ್ತಾನೋ ಆತನೆ ಅವರಿಗೆ ರಾಜ. ಸ್ವಾರ್ಥ ಇಲ್ಲದಂತೆ ರಾಜ್ಯಪಾಲನೆ ಇರುತ್ತಿತ್ತು. ರಾಜನ ಕೆಳಗೆ ಪಾಲಕರೆಲ್ಲರೂ ದೈವಜ್ಞಾನ ಇರುವವರೇ. ಅಂತಹ ಪ್ರಜೆಗಳ ಮಧ್ಯದೊಳಗೆ ಹೋದ ಭೂಗೋಳ ವಾಸಿಗಳು ಸಹ ಅವರಂತೆ ಬದಲಾಗಿ ಒಳ್ಳೆಯ ಜ್ಞಾನಿಗಳಾಗಿ ತಯಾರಾಗಿದ್ದಾರೆ.

ಅಲ್ಲಿನ ಅವರು ಭೂಮಂಡಲದಿಂದ ಬಂದವರನ್ನು ಕುರಿತು ದೊಡ್ಡದಾಗಿ ತಲೆಕೆಡಿಸಿಕೊಳ್ಳಲಿಲ್ಲ. ಇವರು ಯಾರು? ಎಲ್ಲಿಂದ ಬಂದಿದ್ದಾರೆಂದು ಸಹ ಅಂದುಕೊಳ್ಳಲಿಲ್ಲ. ಅವರಿಗೆ ಮೊದಲೇ ಇಂತಹ ಮನುಷ್ಯರಾಗಲಿ, ಜಂತುಗಳಾಗಲಿ ಹೊಸದಾಗಿ ಆಗಾಗ ಅಲ್ಲಿಗೆ ಬರುತ್ತಿರುತ್ತಾರೆಂದು ತಿಳಿಯುತ್ತದೆ. ಅದಕ್ಕು ಮೊದಲು ಸಹ ಅಲ್ಲಿಲ್ಲದ ಮನುಷ್ಯರು, ಅಲ್ಲಿಲ್ಲದ ಪ್ರಾಣಿಗಳು ಬಂದಿವೆ ಎಂದು ಅವರಿಗೆ ತಿಳಿದಿದೆ. ಅವರನ್ನು ಕಾಣಿಸದ ಶಕ್ತಿ ತೆಗೆದುಕೊಂಡು ಬಂದು ಅಲ್ಲಿಗೆ ಬಿಡುತ್ತದೆಂದು ಸಹ ತಿಳಿದಿದೆ. ಅವರು ಎಲ್ಲಿನವರೆಂಬುವುದು ಅವರಿಗೆ ಜ್ಞಾಪಕವಿಲ್ಲದಂತೆ ಹೋಗುತ್ತದೆಂದು ಸಹ ಅಲ್ಲಿನವರಿಗೆ ತಿಳಿದಿದೆ. ಹೊಸದಾಗಿ ಬಂದವರು ಯಾರಾದರೂ ಅವರು ಮಾಡಿಕೊಂಡ ಪಾಪಕ್ಕೆ ಶಿಕ್ಷೆ ನಿಮಿತ್ತವೇ ಅವರ ಸ್ಥಾನದಿಂದ, ಅವರ ಸಂಬಂಧಿಕರಿಂದ ಕಾಣಿಸದ ಶಕ್ತಿ ಬೇರೆಮಾಡಿ ಇಲ್ಲಿಗೆ ತರುತ್ತಿದೆ ಎಂದು, ತಮ್ಮಲ್ಲಿ ತಿಳಿಯದವರಿಗೆ ಹೇಳುತ್ತಿದ್ದರು. ಈ ವಿಧವಾಗಿ ಆ ಗ್ರಹವಾಸಿಗಳು ಎಷ್ಟೋ ಜ್ಞಾನ ಹೊಂದಿದವರಾಗಿ ಕಾಣಿಸದ ಶಕ್ತಿ ಒಂದಿದೆ ಎಂದು, ಅದರ ಹಿಂದೆ ದೇವರಿದ್ದಾನೆಂದು ಹೇಳುತ್ತಿದ್ದರು.

ಪಾಪ ಮಾಡಿಕೊಂಡವರನ್ನು ಅವರ ಪಾಪವನ್ನು ಅನುಸರಿಸಿ, ಕಾಣಿಸದ ಶಕ್ತಿ ಶಿಕ್ಷೆಗೋಸ್ಕರ ಎಲ್ಲಿಂದಲೋ ಇಲ್ಲಿಗೆ ಕೆಲವರನ್ನು ತೆಗೆದುಕೊಂಡು ಬಂದಿದೆ ಎಂದು ಅವರು ಹೇಳುವುದು, ಪೂರ್ತಿ ಸತ್ಯವೇ ಎಂದು ನಾವೂ ಸಹ ಒಪ್ಪಿಕೊಳ್ಳದೇ ತಪ್ಪುವುದಿಲ್ಲ. ಏಕೆಂದರೆ! ಅವರು ಹೇಳಿದಂತೆ ಭೂಮಂಡಲ ದಲ್ಲಿಯೂ ಸಹ ನಡೆಯುತ್ತಿದೆ. ಆದರೆ ನಮ್ಮ ಅಜ್ಞಾನದಿಂದ ಆ ವಿಷಯ ನಮಗೆ ತಿಳಿಯದಂತೆ ಹೋಗಿದೆ. ಆ ಗ್ರಹವಾಸಿಗಳು ಹೇಳಿದ ಮಾತು ವಾಸ್ತವ ಎನ್ನುವುದಕ್ಕೆ, ನಮ್ಮ ಭೂಮಿ ಮೇಲೆ ನಡೆದ ಸಂಘಟನೆಗಳನ್ನು ತೆಗೆದುಕೊಂಡು ನೋಡೋಣ. ಸರ್ಕಾರದ ಕಾನೂನಿನ ಪ್ರಕಾರ ತಪ್ಪುಮಾಡಿದವನಿಗೆ ಶಿಕ್ಷೆ ಇದೆಯೆಂದು ನಮಗೆ ತಿಳಿದಿದೆ. ಕಾನೂನಿನ ಪ್ರಕಾರ ನ್ಯಾಯಸ್ಥಾನ ಒಬ್ಬ ವ್ಯಕ್ತಿಗೆ ಜೈಲು ಶಿಕ್ಷೆಯನ್ನು ವಿಧಿಸಿದರೆ, ಅದು ಜಾರಿಯಾದರೆ, ಶಿಕ್ಷೆಪಡೆದ ವ್ಯಕ್ತಿಯನ್ನು ಅವರ ಬಂಧುಗಳಿಗಾಗಲಿ, ಹೆಂಡತಿ ಮಕ್ಕಳಿಗಾಗಲಿ, ಸ್ನೇಹಿತರಿಗಾಗಲಿ ಸಂಬಂಧವಿಲ್ಲದಂತೆ ಜೈಲಿನಲ್ಲಿ ಇಡುವುದು ನಡೆಯುತ್ತಿದೆ. ಜೈಲಿನಲ್ಲಿ ಅನ್ನ ನೀರು ಸಿಗುವುದರಿಂದ ಕೇವಲ ತನ್ನವರಿಗೆ ದೂರವಾಗಿರುವುದೆ ಆತನಿಗೆ ಶಿಕ್ಷೆ ಆಗುತ್ತಿದೆ. ಕಾನೂನಿಗೆ ವಿರುದ್ಧವಾದ, ಸಂಘ ವಿರುದ್ಧವಾದ ಕೆಲಸಗಳನ್ನು ಮಾಡಿದವನಿಗೆ ವಿಧಿಸುವ ಶಿಕ್ಷೆ, ತನ್ನವರಿಗೆ ದೂರವಾಗಿ ಇಡುವುದೆ ಎಂದು ತಿಳಿಯುತ್ತಿದೆ. ಹಾಗೆಯೇ ದೈವ ವಿರುದ್ಧವಾದ ಸಂಘ ವಿರುದ್ಧ ಪಾಪಗಳನ್ನು ಮಾಡಿದವನಿಗೆ, ಕಾಣಿಸದ ಶಕ್ತಿ ವಿಧಿಸುವ ಶಿಕ್ಷೆಗಳಲ್ಲಿ ಒಂದು ಶಿಕ್ಷೆ, ತನ್ನವರಿಂದ ದೂರವಾಗಿ ಇಡುವುದೆಂದು ತಿಳಿಯುತ್ತಿದೆ.

ಇಲ್ಲಿ ಇನ್ನೊಂದು ಪ್ರಶ್ನೆ ಹುಟ್ಟುತ್ತಿದೆ. ಅದೇನೆಂದರೆ! ತನ್ನವರಿಗೆ ದೂರವಾಗಿಡುವುದು ಹೊರಗಿನ ಪ್ರಪಂಚದಲ್ಲಿನ ಶಿಕ್ಷೆ ಆದಾಗ, ಅದರಲ್ಲಿ ಜ್ಞಾಪಕಶಕ್ತಿ ಇರುವುದರಿಂದ ತನ್ನವರನ್ನು ಕುರಿತು ಜ್ಞಾಪಕಗಳ ದುಃಖ ಮನುಷ್ಯನನ್ನು ಮಾನಸಿಕವಾಗಿ ಹಿಂಸಿಸುತ್ತದೆಂದುಕೊಳ್ಳಬಹುದು. ಆದರೆ ಇಲ್ಲಿ ಬೇರೆ ಗ್ರಹದ ಮೇಲೆ ಹೋದವರಿಗೆ ಜ್ಞಾಪಕಶಕ್ತಿ ಸ್ವಲ್ಪವೂ ಸಹ ಇಲ್ಲದಂತೆ

ಹೋಗುವುದರಿಂದ, ಅವನಿಗೆ ತನ್ನವರನ್ನು ಕುರಿತು ಮಾನಸಿಕ ದುಃಖ ಇರುವುದಿಲ್ಲ ಅಲ್ಲವೆ! ಅಂತಹದರಲ್ಲಿ ಅದು ಶಿಕ್ಷೆ ಹೇಗೆ ಆಗುತ್ತದೆಂದು ಕೇಳಬಹುದು. ಈ ಪ್ರಶ್ನೆ ಇಲ್ಲಿ ಬಹಳ ಸಮಂಜಸವಾದುದೆ. ಅದಕ್ಕೆ ನಾವು ಹೇಳುವ ಉತ್ತರ ಏನೆಂದರೆ! ಮೇಘವು ಬೆರ್ಮುಡಾ ಟ್ರಯಾಂಗಿಲ್ (ತ್ರೈತಾಕಾರ ಪ್ರಾಂತ) ದಿಂದ ತೆಗೆದುಕೊಂಡು ಹೋಗುವುದರಲ್ಲಿ ಎರಡು ವಿಧಗಳ ಉದ್ದೇಶಗಳು ಇವೆ. ಒಂದು ಮಾನವನು ಶಿಕ್ಷೆ ಅನುಭವಿಸಬೇಕು, ಎರಡು ಜ್ಞಾನವನ್ನು ತಿಳಿದುಕೊಳ್ಳಬೇಕು. ಶಿಕ್ಷೆ ಅವನ ಕರ್ಮಾನುಸಾರವಾದುದೇ, ಆದರೆ ಜ್ಞಾನ ಕರ್ಮಾನುಸಾರ ಬರುವುದಲ್ಲ. ಅದು ಶ್ರದ್ಧಾನುಸಾರ ಬರುವುದು. ಆದರೆ ಭೂಮಿಯಿಂದ ತೆಗೆದುಕೊಂಡು ಹೋದ ಮನುಷ್ಯನಿಗೆ ಜ್ಞಾನದ ಮೇಲೆ ಶ್ರದ್ಧೆ ಇಲ್ಲ. ಅಂತಹದರಲ್ಲಿ ಅವನಿಗೆ ಶ್ರದ್ಧೆಯಿಲ್ಲದ ಕಾರಣದಿಂದ ಜ್ಞಾನ ತಿಳಿಯುವುದಿಲ್ಲ, ಅವನು ಜ್ಞಾನಿ ಆಗುವುದಿಲ್ಲ. ಹಾಗೆಯೇ ಅವನಿಗೆ ಜ್ಞಾಪಕಶಕ್ತಿ ಇಲ್ಲದಿರುವುದರಿಂದ, ಅವನು ಹಿಂದಿನ ಜೀವನಕ್ಕೆ ಸಂಬಂಧಿಸಿದ ದುಃಖವನ್ನು ಹೊಂದುವುದಕ್ಕೂ ಸಹ ಸಾಧ್ಯವಿಲ್ಲ. ಅಂತಹದರಲ್ಲಿ ಅವನಿಗೆ ದುಃಖಪಡುವ ಶಿಕ್ಷೆ ಇಲ್ಲ, ಸುಖಪಡುವ ಜ್ಞಾನವೂ ಇಲ್ಲ. ಅಂತಹದರಲ್ಲಿ ಕಾಣಿಸದ ಶಕ್ತಿ ಭೂಮಂಡಲದಿಂದ ಎರಡು ಉದ್ದೇಶಗಳಿಂದ ತೆಗೆದುಕೊಂಡು ಹೋಗಿದೆ ಎಂದು ಹೇಳುವುದರಲ್ಲಿ ಅರ್ಥವೇ ಇಲ್ಲವಲ್ಲ! ಎಂದು ಯಾರಾದರೂ ಪ್ರಶ್ನಿಸಬಹುದು. ಅದಕ್ಕೆ ನಮ್ಮ ಉತ್ತರ ಏನೆಂದರೆ! ಕಣ್ಣಿಗೆ ಕಾಣಿಸದ ಶಕ್ತಿ ಒಂದು ಕೆಲಸವನ್ನು ಮಾಡಿದೆ ಎಂದರೆ ಅದರಲ್ಲಿ ನೆರವೇರದಿರುವುದು ಇರುವುದಿಲ್ಲ. ಅಷ್ಟು ಇಲ್ಲದೇ ಆ ಶಕ್ತಿ ಆ ಕೆಲಸವನ್ನು ಮಾಡುವುದಿಲ್ಲ. ಆ ಕೆಲಸ ನೆರವೇರುವುದಕ್ಕೆ ಬೇಕಾದ ಜ್ಞಾಪಕಶಕ್ತಿಯಾಗಲಿ, ಅಗತ್ಯವಾದ ಶ್ರದ್ಧೆಯಾಗಲಿ ಇಲ್ಲದಂತೆ ಹೋದರೂ, ಇತ್ತ ಶಿಕ್ಷೆ ಬೀಳುತ್ತಿದೆ. ಅತ್ತ ಜ್ಞಾನ ಉಂಟಾಗುತ್ತಿದೆ. ಹೇಗೆ ಎಂದರೆ!

**ಅಸಾಧ್ಯವಾದ ಅನುಭವಗಳು ಸುಸಾಧ್ಯವಾಗುವುದಕ್ಕೆ ಮೊದಲೆ ಮನುಷ್ಯನಿಗೆ ಒಂದು ಅವಸ್ಥೆಯನ್ನು ದೇವರು ತಯಾರು ಮಾಡಿಟ್ಟಿದ್ದಾನೆ. ಆ ಅವಸ್ಥೆಯೇ ಸ್ವಪ್ನಾವಸ್ಥೆ.** ಸ್ವಪ್ನಾವಸ್ಥೆಯಲ್ಲಿ ಹೊರಗಿನ ಪ್ರಪಂಚದಲ್ಲಿ ಇಲ್ಲದ ಅನುಭಗಳೆಲ್ಲವೂ ನಡೆಯುತ್ತಿರುತ್ತವೆ. ಹೊರಗಿನ ಪ್ರಪಂಚದಲ್ಲಿ ಮನುಷ್ಯ ಆಕಾಶದಲ್ಲಿ ಎಗರಿಹೋಗಲಾರನು. ಆದರೆ ಸ್ವಪ್ನದಲ್ಲಿ ಮನುಷ್ಯನಿಗೆ ಪಕ್ಷಿಯಂತೆ ಆಕಾಶದಲ್ಲಿ ಎಗಿರಿಹೋಗುವುದು ಅನುಭವಕ್ಕೆ ಬರುತ್ತಿದೆ. ಎಂತಹ ಅನುಭವವಾದರು ಸ್ವಪ್ನಾವಸ್ಥೆಯಲ್ಲಿ ಅನುಭವಕ್ಕೆ ಬರುತ್ತದೆ. ಬೇರೆ ಗ್ರಹದ ಮೇಲೆ ತೆಗೆದುಕೊಂಡು ಹೋದ ಮನುಷ್ಯನಿಗೆ, ಹಿಂದಿನ ಜ್ಞಾಪಕಶಕ್ತಿ ಇಲ್ಲದಿರುವುದರಿಂದ, ಜಾಗ್ರತಾವಸ್ಥೆ ಯಲ್ಲಿ ಹಿಂದಿನ ಜೀವನಕ್ಕೆ ಸಂಬಂಧಿಸಿದ ಎಂತಹ ಮಾನಸಿಕ ದುಃಖಗಳು ಇಲ್ಲದಂತಿರುತ್ತದೆ. ಆದರೆ ಜಾಗ್ರತಾವಸ್ಥೆಗಿಂತ ಭಿನ್ನವಾಗಿರುವ ಸ್ವಪ್ನಾವಸ್ಥೆಯಲ್ಲಿ, ಹಿಂದಿನ ಜ್ಞಾಪಕಗಳು ಸಹ ಉಂಟಾಗುವುದರಿಂದ, ಆ ಮಾನಸಿಕ ದುಃಖವನ್ನು ಅನುಭವಿಸುತ್ತಿದ್ದಾನೆ. ಸ್ವಪ್ನಾವಸ್ಥೆಯಲ್ಲಿ ಕಾಲ ಪರಿಮಿತಿ, ಕಾಲಕ್ರಮವೂ ಇರುವುದಿಲ್ಲ. ಆದ್ದರಿಂದ ಹೊರಗೆ ಒಂದು ವರ್ಷದಲ್ಲಿ ಅನುಭವಿಸುವ ದುಃಖವನ್ನು, ಕನಸಿನಲ್ಲಿ ಒಂದು ಹತ್ತು ನಿಮಿಷದಲ್ಲಿಯೇ ಅನುಭವಿಸುತ್ತಾನೆ. ಸ್ವಪ್ನಗಳಲ್ಲಿ ಕಾಲವೂ ಬದಲಾಗುತ್ತಿರುತ್ತದೆ, ಹಾಗೆಯೇ ರೂಪವು ಬದಲಾ ಗುತ್ತಿರುತ್ತದೆ. ಹಾಗೆ ಸ್ಪೀಡಾಗಿ ಬದಲಾಗುತ್ತಿದ್ದರೂ, ನಮ್ಮ ಅನುಭವ ಸ್ಪೀಡಾಗಿದ್ದರೂ, ಅದನ್ನು ನಾವು ಗುರುತಿಸುವುದಿಲ್ಲ. ಸ್ವಪ್ನಾವಸ್ಥೆ ಹೊರಗಿನ ಎಚ್ಚರದೊಂದಿಗೆ ಹೋಲಿಕೆ ಮಾಡಿ ನೋಡಿದರೆ ಅದು ಮಾಯೆಯಂತೆ ಇರುತ್ತದೆ. ಜರುಗುವುದಕ್ಕೆ ಅವಕಾಶವೇ ಇಲ್ಲದಿರುವವೂ ಸಹ ಜರುಗುತ್ತಿರುತ್ತವೆ. ಮೊದಲು ನಾಯಿಯಾಗಿ ಕಾಣಿಸಿದೆ ಸ್ವಲ್ಪಹೊತ್ತಿಗೆ ಸಿಂಹವಾಗಿ ಬದಲಾಗಿದ್ದರೂ, ಅದನ್ನು ಸ್ವಲ್ಪವೂ ಸಹ ಗುರ್ತಿಸಲಾರೆವು, ಏಕೆ ಹೀಗೆ ಆಗಿದೆ ಎಂದು ಯೋಚಿಸಲಾರೆವು. ಆದ್ದರಿಂದ ಸ್ವಪ್ನಾವಸ್ಥೆ ಜೀವಿಗೆ ಒಂದು ಪ್ರತ್ಯೇಕವಾದ ಅನುಭವವೆಂದು ಹೇಳಬಹುದು. ಬೇರೆ ಗ್ರಹದೊಳಗೆ ಹೋದವರು ಅವರ ಜ್ಞಾಪಕಶಕ್ತಿಯನ್ನು ಕಳೆದುಕೊಂಡಿದ್ದರೂ, ಕರ್ಮ ಅವನನ್ನು ಹಿಂದಿನ ಜ್ಞಾಪಕಗಳನ್ನು ಸ್ವಪ್ನದಲ್ಲಿ

ಉಂಟುಮಾಡಿ, ಅವುಗಳ ಬಾಧೆಯನ್ನು ಅನುಭವಿಸುವಂತೆ ಮಾಡುತ್ತಿದೆ. ಎಷ್ಟೋ ಪ್ರತ್ಯೇಕತೆಗಳು ಹೊಂದಿರುವ ಸ್ವಪ್ನದಲ್ಲಿ ಪ್ರಸ್ತುತ ಜೀವನಕ್ಕೆ ಸಂಬಂಧವಿಲ್ಲದ ಯಾವ ದುಃಖವನ್ನಾದರೂ, ಯಾವ ಸುಖವನ್ನಾದರೂ ಅನುಭವಿಸಬಹುದೆಂದು ತಿಳಿಯುತ್ತಿದೆ. ಆದ್ದರಿಂದ ಜಾಗ್ರತಾವಸ್ಥೆಯಲ್ಲಿ ಜ್ಞಾಪಕವಿಲ್ಲದ ವಿಷಯಗಳು ಸಹ ಸ್ವಪ್ನದಲ್ಲಿ ಜ್ಞಾಪಕಬಂದು ಅನುಭವಿಸುವುದು ನಡೆಯುತ್ತಿದೆ.

ಸ್ವಪ್ನಾವಸ್ಥೆಯಲ್ಲಿ ಪ್ರಸ್ತುತ ಜೀವನಕ್ಕೆ ಸಂಬಂಧ ಇಲ್ಲದಿರುವವೂ ಸಹ ಅನುಭವಕ್ಕೆ ಬರಬಹುದು. ಆದ್ದರಿಂದ ಪೂರ್ವಜನ್ಮದಲ್ಲಿ ಜ್ಞಾಪಕವಿಲ್ಲದ ವಿಷಯಗಳನ್ನು ಸಹ ಈ ಜನ್ಮದಲ್ಲಿ ಸ್ವಪ್ನದಲ್ಲಿ ಅನುಭವಿಸಬಹುದು. ಇದರಿಂದ ಭೂಗ್ರಹದಿಂದ ಬೇರೆ ಗ್ರಹದ ಮೇಲಕ್ಕೆ ಹೋದವರಿಗೆ ಜ್ಞಾಪಕ ಹೋದರೂ, ಕರ್ಮ ಅನುಭವ ಮಾತ್ರ ಹೋಗಲಿಲ್ಲವೆಂದು ತಿಳಿಯುತ್ತಿದೆ. ಇನ್ನು ಜ್ಞಾನ ವಿಷಯಕ್ಕೆ ಬಂದರೆ ಭಗವದ್ಗೀತೆಯಲ್ಲಿ **"ಶ್ರದ್ಧಾವಾನ್ ಲಭತೇ ಜ್ಞಾನಮ್"** ಎನ್ನುವಂತೆ ಮನುಷ್ಯನಿಗೆ ಶ್ರದ್ಧೆ ಇದ್ದರೇನೆ ಜ್ಞಾನ ಲಭಿಸುತ್ತದೆ. ಶ್ರದ್ಧೆ ಎಷ್ಟು ಹೆಚ್ಚಾಗಿದ್ದರೆ ಅಷ್ಟು ಹೆಚ್ಚಾಗಿ ಜ್ಞಾನ ಲಭಿಸುತ್ತದೆಂದು ದೊಡ್ಡವರು ಸಹ ಹೇಳಿದ್ದಾರೆ. ಈ ಭೂಗೋಳದಿಂದ ತ್ರೈತಾಕಾರಶಕ್ತಿ ಬೇರೆ ಗ್ರಹದಮೇಲಕ್ಕೆ ತೆಗೆದುಕೊಂಡು ಹೋದ 45 ಜನರಿಗೆ ದೇವರ ಮೇಲಾಗಲಿ, ದೇವರ ಜ್ಞಾನದ ಮೇಲಾಗಲಿ ಸ್ವಲ್ಪವೂ  ಇಷ್ಟವಿಲ್ಲ. ಇಷ್ಟವಿಲ್ಲದಿರುವಾಗ ಅದರ ಮೇಲೆ ಆಸಕ್ತಿಯನ್ನು ತೋರಿಸುವುದಿಲ್ಲ. ಶ್ರದ್ಧೆಯಿಲ್ಲದಿರುವಾಗ ಜ್ಞಾನವೂ ಸಹ ಲಭಿಸುವುದಿಲ್ಲ. ಇದರಿಂದ ಯಾರಿಗೆ ಜ್ಞಾನದ ಮೇಲೆ ಶ್ರದ್ಧೆ ಇರುತ್ತದೋ ಅವನಿಗೆ ಮಾತ್ರವೆ ಜ್ಞಾನ ಲಭಿಸುತ್ತದೆಂದು ತಿಳಿಯುತ್ತಿದೆ. ಇಲ್ಲಿ ಚೆನ್ನಾಗಿ ಗಮನಿಸಿದರೆ ಒಂದು ಶಾಸ್ತ್ರಬದ್ಧವಾದ ಸೂತ್ರ ಇದೆ. ಒಬ್ಬ ವ್ಯಕ್ತಿ ಬಣ್ಣದಲ್ಲಿ ಬಿದ್ದಾಗ ಆ ಬಣ್ಣ ಆತನನ್ನು ಅಂಟಿಕೊಳ್ಳುತ್ತದೆ. ಹಾಗೆ ಅಲ್ಲದೆ ಬಣ್ಣವೇ ಆತನ ಮೇಲೆ ಬಿದ್ದಾಗಲೂ ಸಹ ಬಣ್ಣ ಆತನನ್ನು ಅಂಟಿಕೊಳ್ಳುತ್ತದೆ. ಅದೇ ವಿಧವಾಗಿ ಜ್ಞಾನದ ಮೇಲೆ ಶ್ರದ್ಧೆ ಇಲ್ಲದವನಿಗೆ ಜ್ಞಾನ ಉಂಟಾಗುವುದಿಲ್ಲ. ಜ್ಞಾನ ತಿಳಿದುಕೊಳ್ಳಬೇಕೆಂಬ ಪ್ರಯತ್ನವನ್ನು ಸಹ

ಅವನು ಮಾಡುವುದಿಲ್ಲ. ಅಂತಹವನು ಜ್ಞಾನಿ ಆಗುವುದಿಲ್ಲವಾ? ಎನ್ನುವ ಪ್ರಶ್ನೆಗೆ ಉತ್ತರವನ್ನು ನೋಡಿದರೆ, ದೇವರೇ ಭಗವಂತನ ರೂಪದಲ್ಲಿ ಶ್ರದ್ಧೆ ಇದ್ದರೇನೆ ಜ್ಞಾನ ಲಭಿಸುತ್ತದೆಂದು ಅಂದಿದ್ದಾನಲ್ಲವೆ! ಅದಕ್ಕಿಂತ ಬೇರೆ ಉತ್ತರ ಏನಿದೆ ಎಂದು ಹೇಳಬಹುದು. ಈ ಉತ್ತರ ಮಾನವರ ಕಡೆಯಿಂದ ಹೇಳಬಹುದು. ದೇವರ ಕಡೆಯಿಂದ ಮತ್ತೊಂದು ಉತ್ತರ ಸಹ ಇದೆ. ಅದೇನೆಂದರೆ! ಅರ್ಥವಾಗುವುದಕ್ಕೆ ಸಣ್ಣ ಉದಾಹರಣೆಯಿಂದ ಹೇಳಿಕೊಳ್ಳೋಣ.

ನಾನು 1981ನೇ ವರ್ಷದಲ್ಲಿ ಮದ್ರಾಸ್ (ಚೆನ್ನೈ) ಹತ್ತಿರ ಮೆರೀನಾ ಬೀಚ್‌ನಲ್ಲಿ ಕುಳಿತುಕೊಂಡಿದ್ದೆನು. ಸಾಯಂಕಾಲ ಸಮಯವಾದ್ದರಿಂದ ಹೆಚ್ಚಿನ ಜನರು ಅಲ್ಲಿ ಇದ್ದಾರೆ. ಚಿಕ್ಕ ಚಿಕ್ಕ ವ್ಯಾಪಾರಸ್ತರು ತಿನ್ನುವ ಪದಾರ್ಥಗಳನ್ನು ತಿ ಮಾರುಕೊಳ್ಳುತ್ತಿದ್ದಾರೆ. ಬೇಯಿಸಿದ ಶೆಂಗಬೀಜಗಳನ್ನು ಒಂದು ಬುಟ್ಟಿಯಲ್ಲಿ ಹಾಕಿಕೊಂಡು ಒಬ್ಬ ವ್ಯಕ್ತಿ ಮಾರುತ್ತಾ ನನ್ನ ಹತ್ತಿರಕ್ಕೆ ಬಂದು ಬೇಯಿಸಿದ ಶೇಂಗಬೀಜಗಳೆಂದು ನನಗೆ ಕೇಳಿಸುವಂತೆ ಅರಚಿದನು. ನಾನು ಕೊಳ್ಳಬೇಕೆಂದೇ ಆತನು ಹಾಗೆ ಅರಚುವುದು ನಡೆದಿದೆ. ಆದರೂ ನಾನು ಶೆಂಗಬೀಜವನ್ನು ಕೊಂಡುಕೊಳ್ಳಲಿಲ್ಲ. ನನಗೆ ಕುರುಕಲು ತಿನ್ನುವ ಅಭ್ಯಾಸ ಇಲ್ಲವೇ ಇಲ್ಲ. ಅದರಲ್ಲಿಯೂ ಶೇಂಗಬೀಜದ ಮೇಲೆ ಸ್ವಲ್ಪವೂ ಆಸಕ್ತಿಯಿಲ್ಲ. ಆ ವ್ಯಾಪಾರಿ ಮೂರು ಅಥವಾ ನಾಲ್ಕು ಬಾರಿ ಐದು ನಿಮಿಷಗಳಿಗೊಂದು ಸಲ ನನ್ನ ಪಕ್ಕದಲ್ಲಿ ಶೇಂಗಬೀಜಗಳು ರುಚಿಯಾಗಿ ಇವೆ ಎನ್ನುತ್ತಾ ಹೋಗಿದ್ದಾನೆ. ನನಗೆ ಅವುಗಳ ಮೇಲೆ ಶ್ರದ್ಧೆಯಿಲ್ಲ. ಆದ್ದರಿಂದ ನಾನು ಕೊಂಡುಕೊಳ್ಳಲಿಲ್ಲ. ನಂತರ ಆತನು ನೇರವಾಗಿ ನನ್ನ ಹತ್ತಿರಕ್ಕೆ ಬಂದು "ನೀವು ಕೊಂಡುಕೊಳ್ಳದಿದ್ದರೂ ಫರವಾಗಿಲ್ಲ, ಕಾಲಕ್ಷೇಪಕ್ಕೆ ರುಚಿ ನೋಡಿರಿ ಸಾರ್" ಎಂದು ನನ್ನ ಕೈಯಲ್ಲಿ ನಾಲ್ಕು ಬೀಜಗಳನ್ನು ಇಟ್ಟನು. ನಾನು ಕೇಳದಿದ್ದರು ಅವನಷ್ಟಕ್ಕೆ ಅವನು ಉಚಿತವಾಗಿ ಕೊಟ್ಟಾಗ ಏಕೆ ಬೇಡ ಅನ್ನಬೇಕೆಂದುಕೊಂಡು, ಆ ನಾಲ್ಕು ಬೀಜಗಳನ್ನು ತಿನ್ನುವುದು ನಡೆದಿದೆ. ಆ ನಾಲ್ಕು ಬೀಜಗಳನ್ನು ತಿಂದಾಗ ಅವು

ರುಚಿಯಾಗಿ ಕಾಣಿಸಿವೆ. ನಂತರ ತಿನ್ನಬೇಕೆನಿಸಿದೆ. ಒಂದುಕಡೆ ತಿನ್ನಬೇಕೆನಿಸಿದರು, ಇಲ್ಲಿಯವರೆಗೂ ಸುಮ್ಮನಿದ್ದು, ಈಗ ಕೊಂಡುಕೊಳ್ಳುವುದೇನು? ಎಂದು ಅನಿಸಿದರೂ, ಅವನು ಉಚಿತವಾಗಿ ಕೊಟ್ಟಿದ್ದಾನೆ ಅಲ್ಲವೆ! ಅದಕ್ಕಾದರೂ ಕೊಂಡುಕೊಳ್ಳಬೇಕೆನಿಸಿತು. ಕೊನೆಗೆ ಕೊಂಡುಕೊಳ್ಳುವುದು, ತಿನ್ನುವುದು ಎರಡೂ ನಡೆದಿವೆ. ಅಲ್ಲಿ ಪ್ರತ್ಯಕ್ಷವಾಗಿ ನಡೆದ ವಿಷಯವನ್ನು ನೋಡಿಕೊಂಡರೆ, ನನಗೆ ಶೇಂಗಬೀಜಗಳನ್ನು ತಿನ್ನಬೇಕೆಂದು ಇಷ್ಟ ಇಲ್ಲದಿದ್ದರು, ಮಾರುವವನು ಕೊಟ್ಟಿರುವುದರಿಂದ ಕೊನೆಗೆ ತಿನ್ನುವುದು ನಡೆದಿದೆ.

ಹಾಗೆಯೇ ಒಬ್ಬನಿಗೆ ದೈವಜ್ಞಾನದ ಮೇಲೆ ಸ್ವಲ್ಪವೂ ಶ್ರದ್ಧೆಯಿಲ್ಲ. ಅವನು ಜ್ಞಾನವನ್ನು ತಿಳಿದುಕೊಳ್ಳಬೇಕೆಂದು ಯಾವಾಗಲೂ ಅಂದುಕೊಳ್ಳಲಿಲ್ಲ. ಜ್ಞಾನವನ್ನು ಹೇಳುತ್ತಿರುವ ಬೋಧಕರನ್ನು ಬಹಳಸಾರಿ ನೋಡಿದ್ದಾನೆ. ಆದರೂ ಜ್ಞಾನದ ತಂಟೆಗಾಗಲಿ, ಹೇಳುವವರ ಹತ್ತಿರಕ್ಕಾಗಲಿ ಹೋಗಲಿಲ್ಲ. ಶೇಂಗಬೀಜವನ್ನು ಮಾರುವವನು ಮಾರುತ್ತಿದ್ದರೂ, ಕೊಂಡುಕೊಳ್ಳುವವರು ಕೊಳ್ಳುತ್ತಿದ್ದರೂ, ಶ್ರದ್ಧೆಯಿಲ್ಲದ ನಾನು ಮಾತ್ರ ಅವುಗಳನ್ನು ಕೊಂಡುಕೊಳ್ಳದಹಾಗೆ, ಶೇಂಗಬೀಜದಂತಿರುವ ಜ್ಞಾನವನ್ನು ಸಣ್ಣ ವ್ಯಾಪಾರಿಯಂತೆ ಇರುವ ಬೋಧಕನು ತಿಳಿಸುತ್ತಿದ್ದರೂ, ತಿಳಿದುಕೊಳ್ಳುವವರು ತಿಳಿದುಕೊಳ್ಳುತ್ತಿದ್ದರೂ ಆಸಕ್ತಿ (ಶ್ರದ್ಧೆ) ಇಲ್ಲದವರು ಸ್ವಲ್ಪವೂ ತಿಳಿದುಕೊಳ್ಳದೆ ಹೋಗುವುದು ಸಹಜವೇ. ಆದರೆ ಶ್ರದ್ಧೆಯಿಲ್ಲದ ಮನುಷ್ಯರನ್ನು ಗ್ರಹಿಸಿದ ಗುರು, ತನ್ನ ಬೋಧನೆಯನ್ನು ಮೊದಲು ತಾನೇ ಅವರಿಗೆ ಉಚಿತವಾಗಿ ತಿಳಿಸುತ್ತಾನೆ. ಜ್ಞಾನ ತಿಳಿದುಕೊಳ್ಳಬೇಕೆಂದು ಕರ್ಮದಲ್ಲಿ ಹೇಗೂ ಇರುವುದಿಲ್ಲ. ಜ್ಞಾನ ಶ್ರದ್ಧೆಯನ್ನನುಸರಿಸಿ ಮಾತ್ರವೇ ಇರುತ್ತದೆ. ಶ್ರದ್ಧೆ ಇಲ್ಲದವನಿಗೆ ಜ್ಞಾನ ಲಭಿಸುವುದಿಲ್ಲ. ಆದರೆ ಮೊದಲು, ಅವನು ಕೋರಿಕೊಳ್ಳದಿದ್ದರು ಲಭಿಸಿದ ಸ್ವಲ್ಪಮಟ್ಟಿನ ಜ್ಞಾನದಿಂದ ಜ್ಞಾನವನ್ನು ತಿಳಿದುಕೊಳ್ಳಬೇಕೆಂಬ ಶ್ರದ್ಧೆ ಉಂಟಾಗುತ್ತದೆ. ಹಾಗೆ ಬಂದಿರುವ ಶ್ರದ್ಧೆಯಿಂದ ಜ್ಞಾನ ಲಭಿಸುವುದಕ್ಕೆ ಪ್ರಾರಂಭವಾಗುತ್ತದೆ. ಮೊದಲು ನನಗೆ ಶೇಂಗಬೀಜದ

ಮೇಲೆ ಆಸಕ್ತಿ ಇಲ್ಲದಿದ್ದರೂ, ಮೊದಲು ಉಚಿತವಾಗಿ ಲಭಿಸಿದ ನಾಲ್ಕು ಬೀಜಗಳಿಂದ, ನಂತರ ಇನ್ನೂ ಸ್ವಲ್ಪ ಬೀಜಗಳನ್ನು ಬೇಕೆಂದುಕೊಂಡಂತೆ, **ಜ್ಞಾನದ ಮೇಲೆ ಶ್ರದ್ಧೆ ಇಲ್ಲದವರಿಗೆ ದೈವಶಕ್ತಿ ಮೊದಲು ಸ್ವಲ್ಪ ಜ್ಞಾನವನ್ನು ತಿಳಿಸಿ, ನಂತರ ಪೂರ್ತಿಜ್ಞಾನದ ಮೇಲೆ ಶ್ರದ್ಧೆ ಉಂಟಾಗುವಂತೆ ಮಾಡುತ್ತಿದೆ.**

ಭೂಮಿಮೇಲೆ ಅಜ್ಞಾನ ಸಾಂದ್ರತೆ ಬೆಳೆದುಹೋಗದಂತೆ ದೈವಶಕ್ತಿ ಹಾಗೆ ಮಾಡುತ್ತಿದೆ. ಒಂದುಬಾರಿ ಆ ವಿಧವಾಗಿ ಜ್ಞಾನದ ಮೇಲೆ ಶ್ರದ್ಧೆಯನ್ನು ದೈವವೇ ಉಂಟುಮಾಡಿದಾಗ, ನಂತರ ತನಗಿರುವ ಶ್ರದ್ಧೆಯಿಂದ ಮನುಷ್ಯ ಜ್ಞಾನವನ್ನು ತಿಳಿದುಕೊಳ್ಳಬೇಕಾಗಿದೆ. 1938 ಮತ್ತು 1947ನೇ ವರ್ಷಗಳಲ್ಲಿ ಭೂಮಿಯಿಂದ ತೆಗೆದುಕೊಂಡು ಹೋದ ವ್ಯಕ್ತಿಗಳು ಒಂದು ವಿಧವಾಗಿ ಅವರಿಗೆ ಉಂಟಾದ ಶ್ರದ್ಧೆಯಿಂದ ಜ್ಞಾನವನ್ನು ತಿಳಿದುಕೊಂಡಿದ್ದಾರೆ. ಹಾಗೆ ಅವರಿಗೆ ಉಂಟಾದ ಸ್ವಪ್ನಗಳಲ್ಲಿ ಪಾಪಕರ್ಮವನ್ನು ಅನುಭವಿಸಿದ್ದಾರೆ. ಸಮುದ್ರದ ಮೇಲೆ ತ್ರೈತಾಕಾರವಿರುವ ಶಕ್ತಿಯೊಳಗೆ ಹೋದವರನ್ನು, ಮೇಘಗಳೇ ಎಲ್ಲಿಯೋ ಮಾನವನಿಗೆ ತಿಳಿಯದಂತಿರುವ ಗೋಳದ ಮೇಲೆ ತೆಗೆದುಕೊಂಡುಹೋಗಿ, ಒಂದು ವಿಧವಾಗಿ ಕರ್ಮಾನುಭವವನ್ನು, ಒಂದು ವಿಧವಾಗಿ ಜ್ಞಾನಸಂಪಾದನೆಯನ್ನು ಉಂಟುಮಾಡಿವೆ. ಶಿಕ್ಷೆ ರೂಪದಲ್ಲಿರುವ ಕರ್ಮ ಅನುಭವದ ಜೊತೆಗೆ ಜ್ಞಾನವನ್ನು ತಿಳಿಸಬೇಕೆಂದುಕೊಂಡವರನ್ನು ಆ ವಿಧವಾಗಿ ಮೇಘಗಳು ಮಾಡಿವೆ. ಜ್ಞಾನ ಸಂಬಂಧ ಇಲ್ಲದಂತೆ, ಕೇವಲ ಕರ್ಮವನ್ನು ಮಾತ್ರವೆ ಅನುಭವಿಸುವಂತೆ ಮಾಡುವುದಕ್ಕೆ ಮೇಘಗಳು ಮತ್ತೊಂದು ಕೆಲಸವನ್ನು ಸಹ ಮಾಡುತ್ತಿವೆ. ಮನುಷ್ಯರನ್ನು ಅಲ್ಲದೆ ಬೇರೆ ಜಾತಿಗಳ ಜೀವರಾಶಿಗಳನ್ನು ಕರ್ಮ ಅನುಭವಕ್ಕೆ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಮೇಘಗಳು ಬದಲಾಯಿಸುವುದು ನಡೆಯುತ್ತಿದೆ. ಹಾಗೆ ಬದಲಾಯಿಸುವುದನ್ನು ನೋಡಿದರೆ ಅಟ್ಲಾಂಟಿಕ್ ಸಮುದ್ರದ ಮೇಲೆ ಮನುಷ್ಯರು ಮಾಯವಾಗಿ ಹೋಗುವುದು ಮೇಘಗಳ ಕೆಲಸವೇ ಎಂದು ಅರ್ಥವಾಗುತ್ತದೆ. ತಾವೇ ಆ ಕೆಲಸವನ್ನು ಮಾಡಿದ್ದೇವೆ ಎನ್ನುವಂತೆ,

ಮೇಘಗಳು ಜೀವರಾಶಿಗಳನ್ನು ಸಹ ಭೂಮಿ ಮೇಲೆಯೇ ಒಂದುಕಡೆ ಅದೃಶ್ಯ ಮಾಡಿ ಮತ್ತೊಂದು ಕಡೆ ಕಾಣಿಸುವಂತೆ ಮಾಡುತ್ತಿವೆ. ಈ ಕೆಲಸ ಭೂಮಿಮೇಲೆ ನಡೆಯುತ್ತಿದ್ದರೂ, ಮನುಷ್ಯರ ಬುರುಡೆಗಳಿಗೆ ಬೇಗನೆ ಅರ್ಥವಾಗಲಿಲ್ಲ. ಕರ್ಮ ವನ್ನನುಸರಿಸಿ ಜೀವರಾಶಿಗಳನ್ನು ಗುಂಪಾಗಿ ಆಗಲಿ, ಒಂದನ್ನಾಗಲಿ, ಮೇಘಗಳು ಸ್ಥಳ ಬದಲಾವಣೆ ಮಾಡಿಸುತ್ತಿವೆ ಎಂದು ಪೂರ್ವದಲ್ಲಿಯೆ **"ದೆವ್ವ ಹಾಗೂ ಭೂತಗಳ ಯಥಾರ್ಥ ಸಂಘಟನೆಗಳು"** ಎನ್ನುವ ಗ್ರಂಥದಲ್ಲಿ ಪೂರ್ತಿಯಾಗಿ ವಿವರಿಸಿದ್ದೇವೆ. ಅಂತಹ ಸಂಘಟನೆ ಒಂದನ್ನು ಈಗ ವಿವರಿಸುತ್ತೇವೆ ನೋಡಿರಿ.

2010ನೇ ವರ್ಷ ಸೆಪ್ಟೆಂಬರ್ ತಿಂಗಳು ಒಳ್ಳೆಯ ಮಳೆಗಾಲ ಆಗಿರುವು ದರಿಂದ ಹೈದರಾಬಾದ್‌ನಗರದಲ್ಲಿ ವಿಪರೀತವಾಗಿ ಮಳೆ ಸುರಿದಿದೆ. ಹೈದರಾಬಾದ್ ನಗರದಲ್ಲಿ ತಗ್ಗು ಪ್ರದೇಶಗಳೆಲ್ಲವೂ ನೀರಿನಿಂದ ಮುಳುಗಿಹೋಗಿವೆ. ಅಂತಹ ಸಂದರ್ಭಗಳಲ್ಲಿ ಒಂದುಕಡೆ ದೊಡ್ಡ ಭವನ ಕಟ್ಟುವುದಕ್ಕೆ ಆಳವಾಗಿ ತೆಗೆಯಲಾದ ಬುನಾದಿಯ ಗುಣಿಯೊಳಗೆ (ಸೆಲ್ಲಾರ್ ಗುಣಿಯೊಳಗೆ) ನೀರು ಸೇರಿದೆ. ಎರಡನೆ ದಿನ ಬೆಳಗಾದ ನಂತರ ಬುನಾದಿ ಗುಣಿಯಲ್ಲಿ 12 ಅಡಿಗಳ ಉದ್ದವಿರುವ ಮೊಸಳೆ ಇರುವುದು ಸ್ಥಾನಿಕರು ಗಮನಿಸಿದ್ದಾರೆ. ನಂತರ ಆ ವಿಷಯ ಎಲ್ಲರಿಗೂ ತಿಳಿಯುವುದು, ಆ ನಂತರ ಫಾರೆಸ್ಟ್ ಅಧಿಕಾರಿಗಳು ಬಂದು ಅದನ್ನು ಬಂಧಿಸಿ ತೆಗೆದುಕೊಂಡು ಹೋಗುವುದು ನಡೆದಿದೆ. ಆ ದಿನ 12 ಅಡಿಗಳ ಉದ್ದವಿರುವ ಮೊಸಳೆ ಅಲ್ಲಿಗೆ ಹೇಗೆ ಬಂದಿದೆಯೋ ಯಾರಿಗೂ ಅರ್ಥವಾಗಲಿಲ್ಲ. ಆ ವಿಷಯವನ್ನು ಅಲ್ಲಿಗೆ ಬಿಟ್ಟಿದ್ದಾರೆ. ಈಗ ನಾವು ಅದರ ಬಗ್ಗೆ ಆಲೋಚಿಸಿದರೆ, ಹೈದರಾಬಾದ್‌ಗೆ ಸಮೀಪದಲ್ಲಿ ಮೊಸಳೆಗಳ ನಿವಾಸಗಳು ಎಲ್ಲಿಯೂ ಇಲ್ಲ. ಆ ಸುತ್ತಾ ಮುತ್ತಾ ಅರಣ್ಯವಾಗಲಿ, ಮೊಸಳೆಗಳು ಬೆಳೆಯುವುದಕ್ಕೆ ಅನುಕೂಲವಾದ ಕೆರೆಗಳಾಗಲಿ, ನದಿಗಳಾಗಲಿ, ಕುಂಟೆಗಳಾಗಲಿ ಇಲ್ಲ. ಅಲ್ಲಿಗೆ ಸುತ್ತಾ ಎರಡು ಮೂರು ನೂರು ಕಿಲೋಮೀಟರ್‌ಗಳ ದೂರದಲ್ಲಾಗಲಿ ಎಲ್ಲಿಯೂ ಮೊಸಳೆಗಳು ಕಾಣಿಸುವುದಿಲ್ಲ. ಅವು ಇದ್ದಂತೆ ಆಧಾರಗಳೇ ಇಲ್ಲ. ಅಂತಹದರಲ್ಲಿ

ಜನ ಸಮೂಹದಿಂದ ಕೂಡಿಕೊಂಡ ಹೈದರಾಬಾದ್ ಪಟ್ಟಣದೊಳಗೆ ಆ ಮೊಸಳೆ ಹೇಗೆ ಬಂದಿದೆ? ಮೊಸಳೆಗಳು ಉಳಿದ ಜಂತುಗಳ ಹಾಗೆ ಹೆಚ್ಚಿನ ದೂರ ಪ್ರಯಾಣ ಮಾಡುವುದಿಲ್ಲ. ನಮಗೆ ತಿಳಿದಿರುವುದರಲ್ಲಿ ಅವು ಸಣ್ಣ ನೀರಿನ ಮಡುಗುಗಳಲ್ಲಿ ಪೂರ್ತಿಯಾಗಿ ಒಣಗಿಹೋಗುವವರೆಗೂ ಸಹ ಅಲ್ಲಿಯೇ ಇರುತ್ತವೆ. ಅಂತಹ ಮೊಸಳೆ ಪೂರ್ತಿ ಮಳೆಕಾಲ ಎಲ್ಲಿ ನೋಡಿದರು ಕೆರೆಗಳು, ಕುಂಟೆಗಳು, ನದಿಗಳು ತುಂಬಿರುವ ಕಾಲದಲ್ಲಿ ಎಲ್ಲವನ್ನು ಬಿಟ್ಟು ಜನಸಂಚಾರ ವಿರುವ ಪಟ್ಟಣದೊಳಗೆ ಬರಬೇಕಾದ ಅವಶ್ಯಕತೆಯೆ ಇಲ್ಲ. ಅದು ಶಾಶ್ವತವಾಗಿ ನೀರಿರುವ ಜಾಗ ಅಲ್ಲದೆ ಒಂದು ಬುನಾದಿ ಗುಣಿಯೊಳಗೆ ಏಕೆ ಬಂದಿದೆ? ರಾತ್ರಿಸಮಯವೂ ಸಹ ಲೈಟ್‌ಗಳು ಬೆಳಗುತ್ತಿರುವ ಪಟ್ಟಣದೊಳಗೆ ಯಾರಕಣ್ಣಿಗೂ ಬೀಳದಂತೆ ಬರುವುದು ಬಹಳ ಕಷ್ಟ. ಜನವಾಸಿಗಳ ಮಧ್ಯದೊಳಗೆ ಎಲ್ಲಿಂದ ಬಂದಿದೆ ಎನ್ನುವ ಪ್ರಶ್ನೆಗೆ ಯಾರು ಉತ್ತರ ಹೇಳಲಾರದೆಹೋಗಿದ್ದಾರೆ. ಅದನ್ನು ಕುರಿತು ನಾವೇನೆನ್ನುತ್ತಿದ್ದೇವೆಂದರೆ, ಅದು ಎಲ್ಲಿಂದಲೋ ಪ್ರಯಾಣಮಾಡಿ ಅಲ್ಲಿಗೆ ಬಂದಿಲ್ಲ. ಅದನ್ನು ಯಾರಾದರು ತಂದು ಅಲ್ಲಿಗೆ ಬಿಟ್ಟಿದ್ದಾರಾ ಎಂದರೆ, ಹಾಗೂ ಸಹ ಯಾರೂ ಮಾಡಲಿಲ್ಲ. ಹಾಗಿರುವಾಗ ಅದು ಅಲ್ಲಿಗೆ ಹೇಗೆ ಬಂದಿದೆ? ಎನ್ನುವುದು ಪ್ರಶ್ನೆಯಾಗಿ ಉಳಿದಿದೆ. ಇದಕ್ಕೆಲ್ಲಾ ಉತ್ತರ ಒಂದೇ ಇದೆ. ಬೆರ್ಮುಡಾ ಟ್ರಯಾಂಗಿಲ್‌ನಿಂದ ಮನುಷ್ಯರೂ, ದೊಡ್ಡನೌಕೆ, ಆರು ವಿಮಾನಗಳು ಹೇಗೆ ಮಾಯವಾಗಿ ಎಲ್ಲೋ ಕೆಲವು ಕೋಟಿಗಳ ಕಿಲೋಮೀಟರ್‌ಗಳ ದೂರದಲ್ಲಿ ಯಾರಿಗೂ ತಿಳಿಯದ ಗ್ರಹದ ಮೇಲೆ ಹೇಗೆ ಹೋಗಿವೆಯೊ, ಏಕೆ ಹೋಗಿವೆಯೊ, ಹಾಗೆಯೇ ಈ ಮೊಸಳೆಯೂ ಸಹ ಹೈದರಾಬಾದ್‌ನಲ್ಲಿನ ಒಂದು ಬುನಾದಿ ಗುಣಿಯೊಳಗೆ ಬಂದಿದೆ. ಮಳೆಸುರಿಸುವ ಮೇಘವೇ ಆ ಮೊಸಳೆಯನ್ನು ಸಹ ತಂದು ಬಿಟ್ಟಿದೆ ಎಂದು ಹೇಳುತ್ತಿದ್ದೇವೆ. ಮೇಘವು ಅಷ್ಟು ಕೆಲಸ ಮಾಡುತ್ತದಾ ಎಂದು ಆಶ್ಚರ್ಯಪಡಬೇಕಾದ ಅವಶ್ಯಕತೆ ಇಲ್ಲ. ಬೆರ್ಮುಡಾ ಟ್ರಯಾಂಗಿಲ್‌ನಿಂದ ಕೆಲವು ನಿಮಿಷಗಳಲ್ಲಿಯೇ ಆರು ವಿಮಾನಗಳು ಎಲ್ಲಿಗೋ ಸೇರಿಸಿದ ಮೇಘವು, ಮೊಸಳೆ ವಿಷಯದಲ್ಲಿ ಹಾಗೆ ಮಾಡಲಿಲ್ಲ.

ಕ್ಷಣಗಳಲ್ಲಿ ಅಲ್ಲಿಗೆ ತೆಗೆದುಕೊಂಡು ಬರಲಿಲ್ಲ. ಕೆಲವು ದಿನಗಳು ಆಕಾಶದಲ್ಲಿಯೇ ಕಾಣಿಸದಂತೆ ಅದೃಶ್ಯವಾಗಿ ತನ್ನ ಹತ್ತಿರ ಇಟ್ಟುಕೊಂಡು, ನಂತರ ಹೈದರಾಬಾದ್ ನಲ್ಲಿ ಬಿಟ್ಟಿದೆ. ಇದು ಮತ್ತಷ್ಟು ಹೊಸದಾಗಿದ್ದರೂ, ಈ ವಿಷಯಗಳೆಲ್ಲವೂ ವಿವರವಾಗಿ **"ದೆವ್ವ ಹಾಗೂ ಭೂತಗಳ ಯಥಾರ್ಥ ಸಂಘಟನೆಗಳು"** ಎನ್ನುವ ಗ್ರಂಥದಲ್ಲಿ ಮೊದಲೆ ಹೇಳುವುದು ನಡೆದಿದೆ. ತನ್ನ ರೂಪವನ್ನು ಬದಲಾಯಿಸಿ ಕೊಂಡು ಕಾಣಿಸದಂತೆ ಹೋಗುವ ಮೇಘವು ಯಾರನ್ನಾದರು ತನ್ನಲ್ಲಿ ಬಚ್ಚಿಟ್ಟುಕೊಳ್ಳುತ್ತದೆ, ಯಾರಿಗೂ ಕಾಣಿಸದಂತೆ ಮಾಡುತ್ತದೆ.


ಬೆರ್ಮುಡಾ ಟ್ರಯಾಂಗಿಲ್‌ನಿಂದ ಒಂದು ಭಾರೀ ನೌಕೆಯನ್ನು, ಆರು ವಿಮಾನಗಳನ್ನು ಮಾಯ ಮಾಡಿರುವುದು ಮೆಘವೆಂದರೆ ಯಾರು ನಂಬಲಾರದೆ ಹೋದರೂ, ಅವು ಅಲ್ಲಿ ಮಾಯವಾಗಿ ಹೋಗಿವೆ ಎಂಬುವುದನ್ನು ಮಾತ್ರ ಯಾರು ಅಲ್ಲ ಎನ್ನಲಾರರು. ಬೆರ್ಮುಡಾ ಟ್ರಯಾಂಗಿಲ್‌ನಲ್ಲಿ ದೈವಶಕ್ತಿ ತ್ರೈತಾಕಾರವಾಗಿ ಆವರಿಸಿದೆ. ದೇವರ ಪಾಲನೆಯಲ್ಲಿ ಮುಖ್ಯಪಾತ್ರ ಪೋಷಿ ಸುತ್ತಿರುವ ಮೇಘಗಳು, ಅಟ್ಲಾಂಟಿಕ್ ಸಮುದ್ರದ ಮೇಲಿರುವ ತ್ರೈತಾಕಾರಶಕ್ತಿ ಯನ್ನು ತಾಕಿ ಶಕ್ತಿಯನ್ನು ಹೊಂದಿ ಬರುತ್ತಿವೆ. ತ್ರೈತಾಕಾರ ಶಕ್ತಿಯನ್ನು ತಾಕಿ ಪೂರ್ತಿಯಾಗಿ ಉತ್ತೇಜವಾದ ಮೇಘಗಳು, ಭೂಮಿಮೇಲಿರುವ ಜೀವರಾಶಿಗಳ ಮೇಲೆ ತಮ್ಮ ಪ್ರಭಾವವನ್ನು ತೋರಿಸುತ್ತಿವೆ. ಆದರೂ ವಿಜ್ಞಾನ ಎನ್ನುತ್ತಾ ಅಜ್ಞಾನದಲ್ಲಿ ಸಿಲುಕಿಕೊಂಡು, ಕಾಣಿಸುವವುಗಳನ್ನೇ ನಂಬುತ್ತೇವೆ, ಕಾಣಿಸದವುಗ ಳನ್ನು ನಂಬುವುದಿಲ್ಲ ಎನ್ನುವವರೇ ಬಹಳಜನರು ಇದ್ದಾರೆ. ಅಂತಹವರು ಸಹ ಆಲೋಚಿಸುವ ವಿಧವಾಗಿ, ತಾವಿದ್ದೇವೆಂದು, ತಮ್ಮ ಶಕ್ತಿ ಇಂತಹದೆಂದು ತಿಳಿಯುವ ವಿಧವಾಗಿ ಮೇಘಗಳು ಸಮುದ್ರದ ಮೇಲೆಯೇ ಅಲ್ಲದೆ, ಭೂಮಿಮೇಲೆಯೂ ಸಹ ಕೆಲವು ಕೆಲಸಗಳು ಮಾಡುತ್ತಿವೆ. ಅಂತಹ ಕೆಲಸಗಳನ್ನು ನೋಡಿಯೂ ಸಹ ಏನು ಅರ್ಥವಾಗದೆ, ಅವುಗಳನ್ನು ಕುರಿತು ತಿಳಿದುಕೊಳ್ಳದೆ ಬಿಡುವವರಿದ್ದಾರೆ. ಒಂದು ಕೆಲಸವನ್ನು ಕುರಿತು ವಿವರಣೆ ಕೊಡದಿರುವುದು


ವಿಜ್ಞಾನವಲ್ಲ. ಮೇಘಗಳು ಮಾಡುವ ಎಲ್ಲಾ ಕೆಲಸಗಳನ್ನು ಅರ್ಥ ಮಾಡಿಕೊಳ್ಳದಿದ್ದರು, ಕನಿಷ್ಟ ಕೆಲವುಗಳಿಗಾದರು ವಿವರವನ್ನು ತಿಳಿದಿರಬೇಕು. ಹಾಗೆ ತಿಳಿಯದೆ ಹೋದರೆ ನಮಗೆ ಸೈನ್ಸು ತಿಳಿಯುವುದಿಲ್ಲ, ನಾವು ವಿಜ್ಞಾನಿಗಳು ಅಲ್ಲ ಎಂದು ಹೇಳುವುದಕ್ಕೆ ಅವಕಾಶವಿದೆ.

**ನಮ್ಮ ವಿಷಯ ನಿಮಗೆ ತಿಳಿದಿಲ್ಲ. ಇದನ್ನು ನೋಡಿದ ನಂತರವಾದರೂ ನಮ್ಮ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಿರೆಂದು ಮನುಷ್ಯರಿಗೆ ಸವಾಲು ಹಾಕುತ್ತಾ ಮೇಘಗಳು ಭೂಮಿಮೇಲೆ ಒಂದು ವಿಧವಾದ ಕೆಲಸವನ್ನು ಮಾಡುತ್ತಿವೆ.** ಭೂಮಿ ಮೇಲೆ ಮೇಘಗಳು ಮಾಡುತ್ತಿದ್ದರೂ ಮನುಷ್ಯರಿಗೆ ಅರ್ಥವಾಗದ ಕೆಲಸವನ್ನು ವಿವರಿಸಿಕೊಳ್ಳೋಣ. ಬೆರ್ಮುಡಾ ಟ್ರಯಾಂಗಿಲ್ ಎನ್ನುವ ತ್ರೈತಾಕಾರ ಅಮೇರಿಕಾಗೆ ಹತ್ತಿರವಾಗಿ ಅಟ್ಲಾಂಟಿಕ್ ಸಮುದ್ರದಲ್ಲಿ ಇದೆಯೆಂದು ಹೇಳಿ ಕೊಂಡಿದ್ದೇವಲ್ಲವೆ! ತ್ರೈತಾಕಾರಕ್ಕೆ ಹತ್ತಿರವಾಗಿರುವ ಅಮೇರಿಕಾದಲ್ಲಿಯೆ ಹೆಚ್ಚಾಗಿ ಮೇಘಗಳು ಒಂದು ಅದ್ಭುತ ಕೆಲಸವನ್ನು ಮಾಡುತ್ತಿವೆ ಅದೇನೆಂದರೆ! ಒಂದುದಿನ ಅಮೇರಿಕಾದಲ್ಲಿ ಒಂದು ಸಣ್ಣ ವಿಮಾನದಲ್ಲಿ ಕೇವಲ ಮೂವರು ಮನುಷ್ಯರು ಮಾತ್ರವೆ ಪ್ರತ್ಯೇಕವಾದ ಕೆಲಸದ ಮೇಲೆ ಹೋಗುತ್ತಿದ್ದಾರೆ. ಅದರಲ್ಲಿ ಒಬ್ಬ ಮನುಷ್ಯ ಕೆಳಗಿನ ಭೂಭಾಗವನ್ನು ನೋಡುತ್ತಾಹೋಗುತ್ತಿದ್ದನು. ಅವರು ಹೋಗುವ ದಾರಿಯಲ್ಲಿ ಒಂದು ಪ್ರತ್ಯೇಕವಾದ ಕಲ್ಲುಗಳು ಇವೆ. ಆ ಕಲ್ಲುಗಳನ್ನು ಮೇಲಿಂದ ನೋಡಬೇಕೆಂಬ ಉದ್ದೇಶದಿಂದ, ಆ ಮನುಷ್ಯ ಕೆಳಗಿನ ಭೂಭಾಗ ವನ್ನು ನೋಡುತ್ತಾ ಹೋಗಿದ್ದಾನೆ. ಆ ಶಿಲೆಗಳು ಕಾಣಿಸಿವೆ, ಆ ಸುತ್ತಾಮುತ್ತಲಿನ ಪ್ರದೇಶವೆಲ್ಲವೂ ಕಾಣಿಸಿದೆ. ಆ ಕಲ್ಲಿನ ಶಿಲೆಗಳು ನೇರವಾಗಿ ಎತ್ತರವಾಗಿವೆ. ಆ ಪ್ರದೇಶವೆಲ್ಲವೂ ಗೋಧಿ ಬೆಳೆಯಿಂದ ತುಂಬಿದೆ. ಗೋಧಿ ಬೆಳೆ ಹೊಲಗಳಲ್ಲಿ ತುಂಬಿರುವ ಆ ಪ್ರಾಂತದಲ್ಲಿ ಕಲ್ಲಿನ ಶಿಲೆಗಳು ಪ್ರಸಿದ್ಧಿಯಾಗಿವೆಯಂತೆ. ಆದ್ದರಿಂದ ಮೇಲೆ ವಿಮಾನದಲ್ಲಿ ಹೋಗುವ ವ್ಯಕ್ತಿ ಕೆಳಗೆ ನೋಡುತ್ತಾ ಹೋಗಿದ್ದಾನೆ.

ಅವರು ಹೋಗುವ ಗುರಿ ಹತ್ತಿರದಲ್ಲಿರುವುದರಿಂದ, ಹೋದವರು ಒಂದು ಗಂಟೆ ಅವಧಿಯಲ್ಲಿಯೇ ಮತ್ತೆ ಅದೇ ದಾರಿಯಲ್ಲಿ ಬಂದಿದ್ದಾರೆ. ಗಂಟೆಗೆ ತಿರುಗಿಬಂದ ವಿಮಾನ ಕಲ್ಲಿನಶಿಲೆಗಳಿರುವ ಪ್ರದೇಶದ ಮೇಲೆ ಹೋಗುವಾಗ, ಮೊದಲು ಕೆಳಗೆ ನೋಡುತ್ತಾ ಹೋದ ವ್ಯಕ್ತಿ, ಆಗಲೂ ಸಹ ಕೆಳಗೆ ನೋಡಿದನು. ಆದರೆ ಆಗ ಆತನಿಗೆ ಒಂದು ಆಶ್ಚರ್ಯವಾದ ದೃಶ್ಯ ಕಾಣಿಸಿದೆ. ಕಲ್ಲಿನ ಶಿಲೆಗಳಿಗೆ ಹತ್ತಿರವಾಗಿಯೇ ಇರುವ ಹೊಲಗಳ ಮೈದಾನದಲ್ಲಿ ಗೀಚಿದ ಬೊಂಬೆಗಳಂತೆ ಎಲ್ಲಾ ಅಳತೆಗಳು ಸಕ್ರಮವಾಗಿರುವ ಚಿತ್ರಗಳಂತೆ, ನೋಡುತ್ತಲೇ ಅಹ್ಲಾದವಾಗಿ ರುವ ಒಂದು ಚಿತ್ರ ಕಾಣಿಸಿದೆ.


ಅದು ಬೆಳೆದು ನಿಂತ ಗೋಧಿಬೆಳೆಯಿಂದ ಕೂಡಿಕೊಂಡ ಮೈದಾನ. ಆ ಮೈದಾನದಲ್ಲಿ ಕೆಲವು ನೂರು ಮಂದಿ ಮನುಷ್ಯರು ಕೆಲಸ ಮಾಡಿದರಾಗಲಿ ಏರ್ಪಡದ ಬೊಂಬೆ ಒಂದು ಗಂಟೆಯೊಳಗೇ ತಯಾರಾಗಿದೆ. ನಿಂತಿರುವ ಗೋಧಿಬೆಳೆ ಸ್ವಲ್ಪ ಬಿದ್ದು ಭೂಮಿಗೆ ಅಂಟಿಕೊಂಡಿದೆ, ಸ್ವಲ್ಪ ನೇರವಾಗಿ ನಿಂತಿದೆ. ಗೋಧಿಹುಲ್ಲು ನೇರವಾಗಿ ಸ್ವಲ್ಪ, ಬಿದ್ದು ಸ್ವಲ್ಪ ಇರುವುದರಿಂದ ಅದು ಒಂದು ಗೀಚಿದ ಬೊಂಬೆಯಂತೆ ಮೇಲಕ್ಕೆ ಕಾಣಿಸುತ್ತದೆ. ಆ ಆಕಾರವನ್ನು ಮೇಲೆ ಆಕಾಶದಿಂದ ನೋಡುವವರಿಗೆ ಮಾತ್ರವೇ ಅಂದವಾಗಿ ಕಾಣಿಸುತ್ತದೆ. ಸುಮಾರು ಕಿಲೋಮೀಟರ್‌ಗಳ ಉದ್ದವಿರುವ ಬೊಂಬೆಯಾಕಾರ ಭೂಮಿಮೇಲಿಂದ ನೋಡಿದರೆ ಪೂರ್ತಿಯಾಗಿ ಕಾಣಿಸುವುದಿಲ್ಲ. ಮೇಲೆ ವಿಮಾನ ಹೋಗುವ ಎತ್ತರದಿಂದ ನೋಡಿದರೂ, ಹೆಲಿಕ್ಯಾಪ್ಟರ್ ಹೋಗುವ ಎತ್ತರದಿಂದ ನೋಡಿದರೂ ಪೂರ್ತಿ ಬೊಂಬೆ ಕಾಣಿಸುತ್ತದೆ. ಪೈರು ಸ್ವಲ್ಪ ಬಿದ್ದುಹೋಗಿ ಏರ್ಪಟ್ಟಾಗ ಕಾಣಿಸುವ ಬೊಂಬೆ ಆಕಾರಗಳನ್ನು ಕೆಲವನ್ನು, ಮೇಲಿಂದ ತೆಗೆದ ಫೋಟೋಗಳನ್ನು, ನಂತರ ಪೇಜಿಗಳಲ್ಲಿ ತೋರಿಸುತ್ತೇವೆ ನೋಡಿರಿ.













































































ನೀವು ನೋಡಿದ ಆಕಾರಗಳೆಲ್ಲವೂ ಅಮೇರಿಕಾ ಖಂಡದಲ್ಲಿ ಅಲ್ಲಲ್ಲಿ, ಯಾವ ಮನುಷ್ಯರು ತಯಾರು ಮಾಡದಂತೆ, ರಾತ್ರಿಗೆರಾತ್ರಿಯೇ ಏರ್ಪಟ್ಟ ದೃಶ್ಯಗಳು. **"ಕ್ರಾಪ್‌ಸರ್ಕಲ್ಸ್"** ಎಂದು ಕರೆಯಲ್ಪಡುವ ಈ ದೃಶ್ಯಗಳನ್ನು ನೋಡಿದ ಬಹಳಜನರು ಬಹಳ ವಿಧಗಳಾಗಿ ಅಂದುಕೊಂಡಿದ್ದಾರೆ. ಇದೆಲ್ಲವೂ ಮನುಷ್ಯರು ಮಾಡಿರುವುದೆ ಎಂದು ಕೆಲವರು ನಾಸ್ತಿಕವಾದಿಗಳು ಅಂದಾಗ, ಇದು ಮನುಷ್ಯರಿಂದ ಆಗುವ ಕೆಲಸವಲ್ಲ, ಯಾವುದೋ ಕಾಣಿಸದ ಶಕ್ತಿ ಮಾಡಿರುತ್ತ ದೆಂದು ಕೆಲವರು ಆಸ್ತಿಕವಾದಿಗಳು ಅಂದಿದ್ದಾರೆ. ಕೆಲವರಾದರೆ ನಾವು ಮಾಡಿ ತೋರಿಸುತ್ತೇವೆಂದು ಕಷ್ಟಪಟ್ಟು ಆಕಾರಗಳನ್ನು ಮಾಡಿದವರು ಸಹ ಇದ್ದಾರೆ. ಆದರೆ ಮನುಷ್ಯರು ಮಾಡಿರುವ ಬೊಂಬೆಗಳನ್ನು ಸುಲಭವಾಗಿ ಗುರುತು ಹಿಡಿಯಬಹುದು. ಬೊಂಬೆಗಳನ್ನು ಮನುಷ್ಯರು ಮಾಡಬಲ್ಲರೆಂದು ನಿರೂಪಿಸುವು ದಕ್ಕೆ ಛಲದಿಂದ ಅಲಿಗೆಗಳಿಂದ ಎಷ್ಟೋಜನ ಪೈರನ್ನು ಮುರಿಯುತ್ತಾಹೋಗಿ ಆಕಾರವನ್ನು ಸೃಷ್ಟಿಸಿದರೂ, ಪೈರು ಪೂರ್ತಿಯಾಗಿ ಬಗ್ಗಿ ಭೂಮಿಗೆ ಅಂಟಿ ಕೊಂಡು ಹೋಗದಂತೆ, ಎಷ್ಟು ಬಗ್ಗಿಸಿ ತುಳಿದರೂ, ಸ್ವಲ್ಪ ಮೇಲಕ್ಕೆ ಏಳುವುದರಿಂದ ಆಕಾರದಲ್ಲಿ ಸ್ಪಷ್ಟತೆ ಇಲ್ಲದಂತೆ ಹೋಗಿದೆ. ಆದ್ದರಿಂದ ಮನುಷ್ಯರು ಮಾಡಿದ ಆಕಾರ ಪ್ರತ್ಯೇಕವಾಗಿ ಗುರುತಿಸುವಂತೆ ಕಾಣಿಸುವುದರಿಂದ, ರಾತ್ರಿಗೆ ರಾತ್ರಿಯೆ ತಯಾರಾದ ಆಕಾರಗಳು ಮನುಷ್ಯರಿಂದ ಮಾಡಿರುವವು ಅಲ್ಲವೆಂದು ತಿಳಿದುಹೋಗಿದೆ. ಮನುಷ್ಯರು ತಯಾರುಮಾಡುವ ಆಕಾರಗಳಿಗೆ ಸ್ಪಷ್ಟತೆ ಇಲ್ಲದಂತೆ ಹೋಗುವುದೇ ಅಲ್ಲದೆ, ಸ್ವಲ್ಪ ಕಾಲವೂ, ಕೆಲವು ಮನುಷ್ಯರು ಬೇಕಾಗುತ್ತಾರೆ. ಈ ಆಕಾರಗಳು ಮನುಷ್ಯರು ಮಾಡಿರುವವೇ ಎಂದು ನಿರೂಪಿಸುವುದಕ್ಕೆ ಕೆಲವರು ಶ್ರಮಿಸಿ ಮಾಡಿದರೂ, ಅವುಗಳನ್ನು ಸುಲಭವಾಗಿ ಗುರುತುಹಿಡಿಯ ಬಹುದು. ಆದ್ದರಿಂದ ಕೆಲವು ನಿಮಿಷಗಳಲ್ಲಿ ಯಾರಿಗೂ ತಿಳಿಯದಂತೆ ಏರ್ಪಟ್ಟ ಆಕಾರಗಳು ಮಾನವ ಸೃಷ್ಟಿ ಅಲ್ಲವೆಂದು ತಿಳಿದುಹೋಗಿದೆ. ಆದರೂ ಅವು ಹೇಗೆ ಏರ್ಪಡುತ್ತಿವೆ? ಅವುಗಳನ್ನು ಯಾವ ಶಕ್ತಿ ತಯಾರು ಮಾಡುತ್ತಿವೆಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದುಹೋಗಿದೆ.

ಕ್ರಾಪ್‌ಸರ್ಕಿಲ್ಸ್ ಎನ್ನುವ ಹೆಸರಿನಿಂದ ಕರೆಯಲ್ಪಡುವ ಆಕಾರಗಳನ್ನು ಕುರಿತು, ನೇಷನಲ್ ಜಿಯೋಗ್ರಫಿ ಟಿವಿ ಛಾನಲ್‌ನಲ್ಲಿ ತೋರಿಸುವುದು ನಡೆದಿದೆ. ಯಥಾರ್ಥ (ಸತ್ಯ) ಕಥೆಗಳು (TRUE STORIES) ಎನ್ನುವ ಹೆಸರಿನಿಂದ ತೋರಿಸಿದ ಪ್ರೋಗ್ರಾಮ್‌ನಲ್ಲಿ ಕ್ರಾಪ್‌ಸರ್ಕಿಲ್ಸ್ ಒಂದು ಮಿಸ್ಟರೀಯಾಗಿಯೇ ಇವೆಯೆಂದು ಹೇಳಲಾಗಿದೆ. ಯಾರಿಗೂ ಅವುಗಳ ವಿಷಯ ತಿಳಿಯದಿದ್ದರೂ ನಾವು ಮೊದಲೇ, ಈ ಕೆಲಸವನ್ನು ಮೇಘಗಳೇ ಮಾಡುತ್ತಿವೆಂದು ಹೇಳಿ ಕೊಂಡಿದ್ದೇವೆ. ತನ್ನ ಶಕ್ತಿಯ ಇರುವಿಕೆಯನ್ನು ತೋರಿಸಲು ಮೇಘಗಳು ಈ ವಿಧವಾದ ಕ್ರಾಪ್ ಸರ್ಕಿಲ್ಸ್‌ನ್ನು ಸೃಷ್ಟಿಸುತ್ತಿವೆ. ಮೇಘಗಳು ಮೇಲಿಂದ ಕೆಳಗೆ ತನ್ನಶಕ್ತಿಯಿಂದ ಕೆಲವು ನಿಮಿಷಗಳಲ್ಲಿಯೇ ಕ್ರಾಪ್‌ಸರ್ಕಿಲ್ ಬೊಂಬೆಯನ್ನು ಸೃಷ್ಟಿಸುತ್ತಿದೆ.  ಆ ಬೊಂಬೆ ಒಬ್ಬ ಕಳಾಕಾರನ ಕೈಯಲ್ಲಿ ತಯಾರಾದಂತೆ ಕಾಣಿಸುತ್ತಿದೆ. ಮೇಘವು ತಯಾರುಮಾಡಿದ ಬೊಂಬೆಯಲ್ಲಿ ಗೋಧಿಕಡ್ಡಿ ಭೂಮಿಯನ್ನು ಅಂಟಿಕೊಂಡು ಬಿದ್ದಿರುವುದರಿಂದ ಮೇಲಿಂದ ಆಕಾರವು ಸ್ಪಷ್ಟವಾಗಿ ಕಾಣಿಸುತ್ತಿದೆ. ಮೆಘಗಳು ಸೃಷ್ಟಿಸಿದ ಕ್ರಾಪ್‌ಸರ್ಕಿಲ್ ಆಕಾರಗಳನ್ನು ಮೇಲಿನ ಚಿತ್ರದಲ್ಲಿ ನೋಡಿದ್ದೀರಾ ಅಲ್ಲವೆ! ಆ ಬೊಂಬೆಗಳು ಮನುಷ್ಯನ ಊಹೆಗೂ ಸಹ ಬರುವುದಿಲ್ಲ. ಹಾಗೆ ತಯಾರಾದ ಆಕಾರವನ್ನು ರಂಗೋಲೆ ಎಂದಾಗಲಿ, ಇಂತಹ ಬೊಂಬೆಗಳೆಂದಾಗಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಅಂತಹ ಆಕಾರಗಳು ಭೂಮಿ ಮೇಲೆ ಎಲ್ಲಿಯೂ ಇರುವುದಿಲ್ಲ.

# ಕ್ರಾಪ್‌ಸರ್ಕಿಲ್ ಆಕಾರಕ್ಕೆ ಅರ್ಥ ಇದೆಯಾ !

ಕ್ರಾಪ್‌ಸರ್ಕಿಲ್ಸ್ ಆಕಾರಗಳನ್ನು ನೋಡುತ್ತಲೇ ಆ ಆಕಾರಗಳು ಭೂಮಿಮೇಲೆ ಎಲ್ಲಿಯೂ ಇಲ್ಲದಂತೆ, ಅವು ಮಾನವನ ಸೃಷ್ಟಿ ಅಲ್ಲವೆನ್ನುವಂತೆ, ಬೆಳೆಯ ಮೈದಾನದಲ್ಲಿ ಅಷ್ಟು ದೊಡ್ಡ ಆಕಾರಗಳು ಏರ್ಪಡುವುದರಲ್ಲಿ ಏನೋ ಒಂದು ಅರ್ಥವಿರುವಂತೆ ತಿಳಿಯುತ್ತಿದೆ. ಅಷ್ಟು ಖಚಿತವಾದ ಅಳತೆಗಳಿಂದ ಸೃಷ್ಟಿಸಲ್ಪಟ್ಟ ಆಕಾರದ ಹಿಂದೆ ಯಾವ ಭಾವವಿದೆಯೋ ತಿಳಿಯಬೇಕೆಂದರೆ,

ಮೊದಲು ಅವುಗಳನ್ನು ತಯಾರು ಮಾಡಿದವರನ್ನು ಕುರಿತು ತಿಳಿಯಬೇಕು. ನಮಗೆ ತಿಳಿದ ಪ್ರಕಾರ ಮೇಘಗಳೇ ಇವುಗಳ ಸೃಷ್ಟಿಕರ್ತರೆಂದು ಹೇಳಿಕೊಂಡರೂ, ಪ್ರಜೆಗಳ ದೃಷ್ಟಿಯಲ್ಲಿಯೂ ಸಹ ಯಾವುದೋ ದೊಡ್ಡಶಕ್ತಿ ಅವುಗಳನ್ನು ಸೃಷ್ಟಿಸುತ್ತಿದೆ ಎಂದು ಹೇಳುತ್ತಿದ್ದಾರೆ. ಅವರು ಪ್ರತ್ಯಕ್ಷವಾಗಿ ನೋಡಿದ ವಿಷಯಗಳನ್ನು ಸಹ ಹೀಗೆ ಹೇಳುತ್ತಿದ್ದಾರೆ. ಒಬ್ಬ ರೈತ ರಾತ್ರಿಸಮಯ ಹೊಲದಲ್ಲಿ ಟ್ರಾಕ್ಟರ್‌ನಿಂದ ಕೆಲಸಮಾಡಿ ಸ್ವಲ್ಪಹೊತ್ತು ಕಳೆದ ನಂತರ ಟ್ರಾಕ್ಟರ್‌ನ್ನು ಬಿಟ್ಟುಕೊಂಡು ಮನೆಗೆ ಬರುತ್ತಿದ್ದನಂತೆ. ರಾತ್ರಿಸಮಯವಾದ್ದರಿಂದ, ಎಲ್ಲಿ ನೋಡಿದರು ಕತ್ತಲಾಗಿರುವ ಸಮಯದಲ್ಲಿ ದೂರವಾಗಿ ಎರಡು ದೊಡ್ಡ ಲೈಟ್‌ಗಳ ಬೆಳಕು ಆತನಿಗೆ ಕಾಣಿಸಿವೆ. ಅವು ಭೂಮಿಮೇಲೆ ಅಲ್ಲದೆ ಆಕಾಶದಲ್ಲಿ 60 ಅಥವಾ 70 ಅಡಿಗಳ ಎತ್ತರಲ್ಲಿ ಬೆಳಗುತ್ತಿರುವಂತೆ ಕಾಣಿಸಿವೆ. ಹಾಗೆ ಕಾಣಿಸಿದ ಲೈಟ್‌ಗಳು ಸ್ಪೀಡಾಗಿ ತನ್ನಕಡೆ ಬರುತ್ತಿರುವಂತೆ ಆ ರೈತನಿಗೆ ಕಾಣಿಸಿವೆ. ರೈತನು ಟ್ರಾಕ್ಟರ್ ಹೋಗುತ್ತಲಿರುವಾಗಲೇ ಅದೇ ದಾರಿಯಲ್ಲಿ ಹಿಂಬದಿಯಿಂದ, ಸುಮಾರು 100 ಕಿಲೋಮೀಟ್‌ರಗಳ ವೇಗದಿಂದ ಬಂದು ಟ್ರಾಕ್ಟರ್ ಮೇಲಿಂದ ಟ್ರಾಕ್ಟರ್‌ನ್ನು ದಾಟಿ ಮುಂದಕ್ಕೆ ಹೋಗುವುದು ನಡೆದಿದೆ. ಆ ದಿನ ರೈತನು ನೋಡಿದಂತೆ ಆಗಾಗ ಇತರರೂ ಸಹ ನೋಡಿದ್ದಾರೆ. ಆ ಬೆಳಕುಗಳು ಪ್ರತ್ಯೇಕವಾದವೆಂದು, ಅಂತಹ ಬೆಳಕುಗಳನ್ನು ತಾವು ಯಾವಾಗಲೂ ನೋಡಲಿಲ್ಲವೆಂದು ಅವರು ಹೇಳುವುದು ನಡೆದಿದೆ. ಯಾರಿಗೂ ಊಹಿಸಲಸಾಧ್ಯ ಬೆಳಕುಗಳು ಕಾಣಿಸುವುದು, ನಂತರ ಸ್ವಲ್ಪ ದಿನಗಳಿಗೆ ಆ ಪ್ರದೇಶದಲ್ಲಿ ಎಲ್ಲಿಯೋ ಒಂದು ಕಡೆ ಕ್ರಾಪ್‌ಸರ್ಕಿಲ್ ಏರ್ಪಡುವುದು ನಡೆಯುತ್ತಿತ್ತು. ಅದು ಎಲ್ಲಿಯೂ ಇಲ್ಲದಿರುವುದಾಗಿದ್ದು, ಹೊಸದಾಗಿರುವುದರಿಂದ, ಅದನ್ನು ಯಾವುದೋ ಒಂದು ಮಹಾತ್ತರಶಕ್ತಿ ಮಾಡುತ್ತಿದೆ ಎಂದು ಪ್ರಜೆಗಳು ಸಹ ಭಾವಿಸುತ್ತಿದ್ದರು.

ನನಗೆ ತಿಳಿದ ಜ್ಞಾನದ ಪ್ರಕಾರ ಪ್ರಜೆಗಳಿಗೆ ಯಾವ ವಿಧವಾಗಿ ಕಾಣಿಸಿದರೂ, ಹಾಗೆ ಕ್ರಾಪ್‌ಸರ್ಕಿಲ್ಸ್‌ನ್ನು ತಯಾರು ಮಾಡಿರುವವು ಮೇಘಗಳೆಂದು ನಿರ್ಧಾರಕ್ಕೆ ಬಂದಿದ್ದೇವೆ. ಬೆಳಕಿನ ವಿಷಯಕ್ಕೆ ಬಂದರೆ, ಮೇಘಗಳು ದೇವರ

ಪಾಲನೆಯಲ್ಲಿನ ಭಾಗವಾಗಿ ದೇವರ ಸೇವೆ ಮಾಡುತ್ತಿವೆ ಯೆಂದು ಹೇಳಿ ಕೊಂಡಿದ್ದೇವಲ್ಲವೆ! ಹಾಗೆಯೇ ದೇವರ ಸೇವೆ ಮಾಡುವ ಚಿಕ್ಕ ಚಿಕ್ಕ ಗ್ರಹಗಳು ಆಕಾಶದಲ್ಲಿ ಕೆಲವು ಕೋಟಿಗಳ ಸಂಖ್ಯೆಯಲ್ಲಿ ಇವೆ. ಅಂತಹ ಗ್ರಹಗಳು ಆಗಾಗ ಭೂಮಿಮೇಲೆ ಸಂಚರಿಸುತ್ತಿರುತ್ತವೆ. ಅಂತಹವುಗಳಲ್ಲಿ ಯಾವ ಗ್ರಹಗಳಾದರು ಹಾಗೆ ಬೆಳಕಿನ ರೂಪದಲ್ಲಿ ಕಾಣಿಸಿರಬಹುದು. ಅಷ್ಟೇಯಾಗಲಿ ಮೇಘಗಳು ಬೆಳಕಿನ ರೂಪದಲ್ಲಿ ಕಾಣಿಸುವುದಿಲ್ಲ. ಆಕಾಶದಲ್ಲಿ ದೊಡ್ಡಪಾತ್ರವನ್ನು ಪೋಷಿಸುವವು ಮೇಘಗಳಾಗಿದ್ದು, ಚಿಕ್ಕ ಚಿಕ್ಕ ಪಾತ್ರಗಳನ್ನು ಚಿಕ್ಕ ಗ್ರಹಗಳು ಪೋಷಿಸುತ್ತಿರುತ್ತವೆ. ಈ ವಿಶ್ವದಲ್ಲಿ ಯಾವು ಮಾಡುವ ಕೆಲಸವನ್ನು ಅವು ಮಾಡುತ್ತಿವೆ. ರಾಜ್ಯಾಂಗದಲ್ಲಿ ಪ್ರಜೆಗಳು, ಪಾಲನೆ ಎಂದು ಎರಡೂ ಇರುವಂತೆ, ದೇವರ ರಾಜ್ಯಾಂಗದಲ್ಲಿಯೂ ಸಹ ಜೀವರಾಶಿಗಳು, ಅವುಗಳನ್ನು ಪಾಲಿಸುವ ಪಾಲಕರು ಎರಡೂ ಇವೆ. ಪ್ರತಿ ಮನುಷ್ಯ ಪಾಪವನ್ನು, ಪುಣ್ಯವನ್ನು ಪ್ರತಿ ಕ್ಷಣವೂ ಲೆಕ್ಕಿಸುತ್ತಾ ಅವುಗಳನ್ನು ಜಾರಿಮಾಡಿ ಅನುಭವಿಸುವಂತೆ ಮಾಡುವ ಪಾಲನೆಯಲ್ಲಿ ಎಷ್ಟೋ ಗ್ರಹಗಳು, ಮೇಘಗಳು, ಭೂತಗಳು, ಉಪಭೂತಗಳು ತಮ್ಮತಮ್ಮ ಪಾತ್ರವನ್ನು ನಿರ್ವಹಿಸುತ್ತಿವೆ ಎಂದು ಮಾನವನಿಗೆ ತಿಳಿಯದು. ಮನುಷ್ಯ ತನ್ನ ಇಷ್ಟಬಂದಂತೆ ಮಾಡುತ್ತಿದ್ದಾನೆ ಹೊರತು ನಾನು ಮಾಡುವ ಕೆಲಸ ಒಳ್ಳೆಯದಾ, ಕೆಟ್ಟದಾ ಎಂದು ಯಾವ ಮಾತ್ರ ಯೋಚಿಸುತ್ತಿಲ್ಲ. ಯಾರಿಗೆ ಕಷ್ಟವಾದರೂ, ಯಾರಿಗೆ ನಷ್ಟವಾದರೂ ಫರವಾಗಿಲ್ಲ ತನಗೆ ಮಾತ್ರ ಅನುಕೂಲವಾಗಿ, ಸುಖವಾಗಿ, ಲಾಭವಾಗಿರಬೇಕೆಂಬ ಉದ್ದೇಶದಲ್ಲಿ ಮನುಷ್ಯ ಕೆಲಸಗಳು ಮಾಡುತ್ತಿದ್ದಾನೆ. ಈ ಕೆಲಸದಿಂದ ಪಾಪ ಬರುತ್ತದೆಂಬ ಧ್ಯಾಸ ಸ್ವಲ್ಪವೂ ಸಹ ಇಲ್ಲದಂತೆ ಮಾಡುತ್ತಿದ್ದಾರೆ. ಪ್ರತಿ ಕೆಲಸವನ್ನು ಗಮನಿಸುತ್ತಿರುವವರು ಇದ್ದಾರೆಂದು, ಪ್ರತಿ ಕೆಲಸದ ಹಿಂದೆ ತನ್ನ ಪಾಪ ಪುಣ್ಯಗಳನ್ನು ಲೆಕ್ಕಿಸಿ ಶಿಕ್ಷಿಸುವವರಿದ್ದಾರೆಂದು, ಯಾವ ಮನುಷ್ಯ ಅಂದುಕೊಳ್ಳುತ್ತಿಲ್ಲ. ಧನಿಕನಾದರೆ ತಾನು ಏನು ಮಾಡಿದರು ನಡೆಯುತ್ತದೆಂದುಕೊಳ್ಳುತ್ತಿದ್ದಾನೆ, ರಾಜಕೀಯ ನಾಯಕನಾದರೆ ನನ್ನ ಕೆಲಸಗಳಿಗೆ ಅಡ್ಡಬೀಳುವವನ್ಯಾರು ಎನ್ನುವ ಗರ್ವದಿಂದ ಇರುತ್ತಾನೆ. ತಾನು ಎಷ್ಟು ಧನಿಕನಾದರು, ರಾಜಕೀಯ ನಾಯಕನಾದರು, ದೊಡ್ಡ

ಅಧಿಕಾರಿಯಾದರು ತನಗಿಂತ ದೊಡ್ಡವರು, ತನ್ನನ್ನು ಶಿಕ್ಷಿಸುವವರು, **ತನ್ನ ಕಾಲುಗಳಲ್ಲಿಯೂ, ತನ್ನ ಕೀಲುಗಳಲ್ಲಿಯೂ, ತನ್ನ ಶರೀರದಲ್ಲಿಯೂ, ತನ್ನ ಕಣ್ಣಿನಲ್ಲಿಯೂ** ಇದ್ದಾರೆಂದು ತಿಳಿದುಕೊಳ್ಳದೆ ಹೋಗುತ್ತಿದ್ದಾನೆ. ಒಬ್ಬ ಮನುಷ್ಯ ಜೀವನವನ್ನು ಸಾಗಿಸುತ್ತಿದ್ದಾನೆಂದರೆ, ಅವನನ್ನು ಪ್ರತಿ ಕ್ಷಣ ಕಾದುಕೊಂಡು ನೋಡುತ್ತಿರುವವನು ಒಬ್ಬನು, ಅವನನ್ನು ನಿತ್ಯವು ಶಿಕ್ಷಿಸುವವನು ಮತ್ತೊಬ್ಬನು ಇದ್ದಾನೆಂದು ಮರೆಯಬಾರದು. ಇದನ್ನನುಸರಿಸಿ ನೋಡಿದರೆ ಮನುಷ್ಯರಿಗಿಂತ, ಕಾಣಿಸದಂತೆ ಮನುಷ್ಯರನ್ನು ಪಾಲಿಸುವವರ ಸಂಖ್ಯೆ ಹೆಚ್ಚಾಗಿದೆ ಎಂದು ತಿಳಿಯುತ್ತಿದೆ.

ಟ್ರಾಕ್ಟರ್‌ನಲ್ಲಿ ಹೋಗುವ ರೈತನಿಗೆ ಕಾಣಿಸಿದ ಬೆಳಕುಗಳು ಬಹುಶ ಯಾವೋ ಚಿಕ್ಕ ಗ್ರಹಗಳಾಗಿರಬೇಕು. ಮೇಘಗಳು, ಗ್ರಹಗಳಿಗಿಂತ ಶಕ್ತಿವಂತವಾದವು. ಕ್ರಾಪ್‌ಸರ್ಕಿಲ್ಸ್‌ನನ್ನು ತಯಾರುಮಾಡುವುದರಲ್ಲಿ ಮೆಘಗಳು ಯಾವ ಗ್ರಹಗಳ ಸಹಾಯ ಇಲ್ಲದಂತೆಯೇ ಮಾಡುತ್ತವೆ. ಮೇಘಗಳು ಏರ್ಪಡಿಸಿದ ಕ್ರಾಪ್‌ಸರ್ಕಿಲ್ಸ್ ಎಷ್ಟೋ ಆಕೃತಿಗಳಾಗಿರುವಂತೆ ಮೇಲಿನ ಬೊಂಬೆಗಳಲ್ಲಿ ನೀವು ನೋಡಿದ್ದೀರಾ. ಆ ಆಕೃತಿಗಳಲ್ಲಿ ಹೆಚ್ಚಾಗಿ ಸರ್ಕಿಲ್ಸ್ ಇರುತ್ತವೆ, ಆದರೆ ಯಾಂಗಿಲ್ಸ್ ಹೆಚ್ಚಾಗಿರುವುದಿಲ್ಲ. ಆದ್ದರಿಂದ ಸರ್ಕಿಲ್ಸ್ ಎಂದು ಅವುಗಳಿಗೆ ಹೆಸರು ಬಂದಿದೆ ಅಂದುಕೊಳ್ಳುತ್ತೇವೆ. ಮೇಲೆ ನೀವು ನೋಡಿರುವವು ಮಾತ್ರವೇ ಅಲ್ಲದೆ ಇನ್ನೂ ಎಷ್ಟೋ ವಿಧಗಳ ಸರ್ಕಿಲ್ಸ್ ಏರ್ಪಟ್ಟಿವೆ. ಅದರಲ್ಲಿ ಕೆಲವನ್ನು ಮಾತ್ರ ಇಲ್ಲಿ ತೋರಿಸಿದ್ದೇವೆ. ನಿಮಗೆ ತೋರಿಸಿದ ಬೊಂಬೆಗಳಲ್ಲಿ ಕೆಲವು ಮೂರು ಚಂದ್ರಕಾರವೂ, ಮೂರು ದುಂಡನೆಯ ಆಕಾರಗಳು ಕಾಣಿಸುತ್ತಿವೆ. ಆ ಬೊಂಬೆಗಳಲ್ಲಿ ಮೂರು ಸಂಖ್ಯೆ ಹೆಚ್ಚಾಗಿ ಕಾಣಿಸುವುದರಿಂದ, ಮೂರು ಆತ್ಮಗಳಿಗೂ ಸಂಬಂಧಿಸಿದ ವಿವರವೆಂದು ಅರ್ಥವಾಗುತ್ತದೆ. ನಂತರ ಚಂದ್ರಾಕಾರ ಗುರುತುಗಳು ಕಾಣಿಸುವುದರಿಂದ ಜ್ಞಾನ ಸಂಬಂಧವಾದ ಗುರುತುಗಳೆಂದು ತಿಳಿಯುತ್ತಿವೆ. ಅವು ಹೇಗಿದ್ದರು ಅದರಲ್ಲಿ ಮೂರು ಆತ್ಮಗಳ ಜ್ಞಾನಕ್ಕೆ ಸಂಬಂಧಿಸಿದ ಗುರುತುಗಳಿವೆ ಎಂದು ಹೇಳಬಹುದು. ಕ್ರಾಪ್‌ಸರ್ಕಿಲ್ಸ್ ಮೇಘಗಳು ಸೃಷ್ಟಿಸಿದ ಆಕಾರಗಳಾಗಿರುವುದರಿಂದ

ಅವು ಏನೋ ದೊಡ್ಡ ಭಾವನೆಯಿಂದಲೇ ಇರುತ್ತವೆಂದು ಹೇಳಬಲ್ಲೆವು. ಆದರೆ ಖಚಿತವಾಗಿ ಇಂತಹ ಭಾವವೆಂದು ಹೇಳಲಾರೆವು. ಪೆನ್ನು ತೆಗೆದುಕೊಂಡು, ಪೇಪರ್ ಮೇಲೆ ನಾವು ಹಾಕಲಾರದ ಆಕಾರಗಳನ್ನು ಸಹ ಮೈದಾನದಲ್ಲಿ ಗೋಧಿ ಹುಲ್ಲಿನ ಮೇಲೆ ಹಾಕುವುದು ಆಶ್ಚರ್ಯಕರವಾದ ವಿಷಯವೇ, ಆದರೂ ನಮ್ಮ ವಿಜ್ಞಾನಿಗಳು ಅವುಗಳ ವಿವರವನ್ನು ಹೇಳಲಾಗದೆ ಹೋಗುವುದು ಚೋದ್ಯವೆ.

ಬೆರ್ಮುಡಾ ಟ್ರಯಾಂಗಿಲ್ ವಿಷಯವಾಗಲಿ, ಕ್ರಾಪ್‌ಸರ್ಕಿಲ್ ವಿಷಯ ವಾಗಲಿ ಹೇಳಲಾರದೆ ಹೊಗುತ್ತಿದ್ದೇವೆಂದರೆ, ಇಲ್ಲಿಯವರೆಗೂ ನಾವು ತಿಳಿದುಕೊಂಡ ಸೈನ್ಸ್‌ಗೆ ಕೈಲಾಗುವುದಿಲ್ಲವೆಂದೇ ಅರ್ಥ. ನಾವು ಸೈನ್ಸ್‌ನ್ನು ಎರಡು ವಿಧಗಳಾಗಿ ಹೇಳಿಕೊಂಡಿದ್ದೇವೆ. ಪ್ರಪಂಚ ಜ್ಞಾನಕ್ಕೆ ಸಂಬಂಧಿಸಿದ ಸೆನ್ಸ್, ಪರಮಾತ್ಮ ಜ್ಞಾನಕ್ಕೆ ಸಂಬಂಧಿಸಿದ ಸೈನ್ಸೆಂದು ಎರಡು ವಿಧಗಳು ಇವೆ. **ಪರಮಾತ್ಮ ಜ್ಞಾನಕ್ಕೆ ಸಂಬಂಧಿಸಿದ ಸೈನ್ಸ್‌ನ್ನು ಸೂಪರ್ ಸೈನ್ಸ್ ಎನ್ನುತ್ತೇವೆ. ಪ್ರಜೆಗಳಿಗೆ ಇಲ್ಲಿಯವರೆಗೂ ತಿಳಿದಿರುವುದು ಸಾಧಾರಣ ಸೈನ್ಸ್‌ನ್ನು ಮಾತ್ರವೆ, ಅದನ್ನೇ ಸಾಮಾನ್ಯಶಾಸ್ತ್ರ ಎನ್ನುತ್ತೇವೆ.** ಪ್ರಜೆಗಳಿಗೆ ಇಲ್ಲಿಯವರೆಗೂ ತಿಳಿದ ಸೈನ್ಸಿನ ಆಧಾರದಿಂದ, ದೈವಶಕ್ತಿಗೆ ಸಂಬಂಧಿಸಿರುವುದನ್ನು ವಿವರವಾಗಿ ತಿಳಿದುಕೊಳ್ಳುವು ದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ದೈವಶಕ್ತಿಯಿಂದ ಕೂಡಿಕೊಂಡ ಟ್ರಯಾಂಗಿಲ್‌ನ್ನು ಕುರಿತಾಗಲಿ, ಕ್ರಾಪ್ ಸರ್ಕಿಲ್‌ನ ಬಗ್ಗೆ ಆಗಲಿ ತಿಳಿದುಕೊಳ್ಳದೆ ಹೋಗಿದ್ದೇವೆ. ಸಮುದ್ರದ ಮೇಲಿರುವ ಟ್ರಯಾಂಗಿಲ್ ಬಗ್ಗೆಯಾಗಲಿ, ಭೂಮಿ ಮೇಲೆ ಏರ್ಪಟ್ಟಿರುವ ಕ್ರಾಪ್‌ಸರ್ಕಿಲ್‌ನನ್ನು ಕುರಿತಾಗಲಿ ತಿಳಿದುಕೊಳ್ಳಬೇಕೆಂದರೆ ಸೂಪರ್‌ಸೈನ್ಸ್‌ನ್ನು ಆಧಾರ ಮಾಡಿಕೊಳ್ಳಬೇಕು. ಸೂಪರ್‌ಸೈನ್ಸ್ ಎಲ್ಲಿದೆ, ನೀವು ಹೊಸ ಮಾತನ್ನು ಹೇಳುತ್ತಿದ್ದೀರ ಎಂದು ಯಾರಾದರೂ ನಮ್ಮನ್ನು ಕೇಳಿದರೆ, ಅದಕ್ಕೆ ಉತ್ತರವಾಗಿ ಆರನೇಶಾಸ್ತ್ರವಾದ ಬ್ರಹ್ಮವಿದ್ಯಾಶಾಸ್ತ್ರದಲ್ಲಿ ಪೂರ್ತಿಯಾಗಿ ಸೂಪರ್‌ಸೈನ್ಸ್ ಇದೆಯೆಂದು ಹೇಳುತ್ತಿದ್ದೇವೆ. ಸೂಪರ್‌ಸೈನ್ಸ್‌ನಲ್ಲಿನ ಸೂತ್ರಗಳನ್ನು ತಿಳಿದುಕೊಂಡರೆ, ಅದಕ್ಕೆ ತಿಳಿಯದ ದೈವ ರಹಸ್ಯವಂತೂ ಏನು ಇರುವುದಿಲ್ಲ.

ಮನುಷ್ಯರು ಸಾಧಾರಣ ಸೈನ್ಸ್‌ನ್ನು ತಿಳಿದುಕೊಂಡು ನಾವು ಮೇಧಾವಿಗಳೆಂದು ಅಂದುಕೊಳ್ಳುತ್ತಿದ್ದಾರೆ. ಪ್ರಪಂಚ ವಿಷಯಗಳಲ್ಲಿ ಮೇಧಾವಿಗಳಾದರು ಪರಮಾತ್ಮ ವಿಷಯಗಳಲ್ಲಿ ಅವರ ಮೇಧಸ್ಸು ಕೆಲಸ ಮಾಡುತ್ತಿಲ್ಲ. ಆದ್ದರಿಂದ ಬೆರ್ಮುಡಾ ಟ್ರಯಾಂಗಿಲ್‌ನ್ನು ಕುರಿತಾಗಲಿ, ಕ್ರಾಪ್‌ಸರ್ಕಿಲ್ಸ್‌ನ್ನು ಕುರಿತಾಗಲಿ, ಪ್ಲಯಿಂಗ್ ಸಾಸರ್ಸ್‌ಗಳನ್ನು (ಹಾರಾಡುವ ತಟ್ಟೆಗಳು) ಕುರಿತಾಗಲಿ, ಏಲಿಯನ್ಸ್ (ಗ್ರಹಾಂತರವಾಸಿ) ಗಳನ್ನು ಕುರಿತಾಗಲಿ ತಿಳಿಯಲಾರದೆಹೋಗಿದ್ದಾರೆ. ಸೂಪರ್ ಸೈನ್ಸ್ ತಿಳಿದುಕೊಂಡರೆ, ದೈವಕ್ಕೆ ಸಂಬಂಧಿಸಿದವುಗಳನ್ನು ಕುರಿತು, ಅಭೌತಿಕ ಶಕ್ತಿಗಳನ್ನು ಕುರಿತು ತಿಳಿಯಬಹುದು. ಈಗ ನಾವು ಸೈನ್ಸ್‌ನ್ನು ಬಿಟ್ಟು ಸೂಪರ್ ಸೈನ್ಸ್‌ನ್ನು ಆಧಾರ ಮಾಡಿಕೊಂಡು ಪ್ಲಯಿಂಗ್ ಸಾಸರ್ಸ್‌ನನ್ನು ಕುರಿತು, ಹಾಗೆ ಏಲಿಯನ್ಸ್ ಕುರಿತು ತಿಳಿದುಕೊಳ್ಳೋಣ.

## ಹಾರಾಡುವ ತಟ್ಟೆಗಳು ಎಂದರೇನು ?

ಕೆಲವು ದೇಶಗಳಲ್ಲಿ ಪ್ಲಯಿಂಗ್ ಸಾಸರ್ಸ್‌ನ್ನು ನೋಡಿದ್ದೇವೆಂದು, ಅವು ತಮ್ಮ ಪ್ರಾಂತಗಳಲ್ಲಿ ಆಕಾಶದಲ್ಲಿ ಕಾಣಿಸಿವೆ ಎಂದು ಬಹಳಜನರು ಹೇಳಿದಾಗ ಕೇಳಿದ್ದೇವೆ. ಇನ್ನೂ ಸ್ವಲ್ಪಜನರು ಪ್ಲಯಿಂಗ್ ಸಾಸರ್ಸ್ ಇಳಿಯುವುದು ನೋಡಿದ್ದೇವೆಂದು, ಅದರಲ್ಲಿಂದ ಏಲಿಯನ್ಸ್ ಇಳಿದಿದ್ದಾರೆಂದು ಹೇಳುತ್ತಿದ್ದಾರೆ. ಹಾಗೆ ಅವರು ಹೇಳುವ ಮಾತುಗಳು ನಿಜವೇನಾ ಎಂದು ನೋಡಿದರೆ ಪ್ಲಯಿಂಗ್ ಸಾಸರ್ಸ್‌ಗೂ, ಏಲಿಯನ್ಸ್‌ಗೂ ಸ್ವಲ್ಪವೂ ಸಂಬಂಧವಿಲ್ಲ. ಪ್ಲಯಿಂಗ್ ಸಾಸರ್ಸ್ ಬೇರೆ, ಏಲಿಯನ್ಸ್ ಬೇರೆ ಎಂದು ತಿಳಿಯುತ್ತಿದೆ. ಪ್ಲಯಿಂಗ್ ಸಾಸರ್ಸ್ ಇರುವ ಮಾತು ನಿಜವೇ, ಹಾಗೆಯೇ ಏಲಿಯನ್ಸ್ ಮಾತು ನಿಜವೇ. ಆದರೆ ಪ್ಲಯಿಂಗ್ ಸಾಸರ್ಸ್‌ನಲ್ಲಿ ಏಲಿಯನ್ಸ್ ಬಂದಿದ್ದಾರೆಂಬ ಮಾತು ಪೂರ್ತಿ ಅಸತ್ಯ. ಪ್ಲಯಿಂಗ್ ಸಾಸರ್ಸ್ ಅನೇಕ ದೇಶಗಳಲ್ಲಿ ನೋಡಿ ಅವು ಗ್ರಹಾಂತರವಾಸಿಗಳ (ಏಲಿಯನ್ಸ್) ವಾಹನಗಳು ಅಂದುಕೊಳ್ಳುವುದು ನಡೆದಿದೆ. ವಾಸ್ತವಕ್ಕೆ ಅವು ವಾಹನಗಳು

ಅಲ್ಲ. ಖಗೋಳದಲ್ಲಿ ಕೆಲವು ಕೋಟಿ ಸಂಖ್ಯೆಯಲ್ಲಿ ಚಿಕ್ಕ ಚಿಕ್ಕ ಗ್ರಹಗಳು ಇವೆ. ಚಿಕ್ಕ ಗ್ರಹಗಳೂ ಸಹ ಸ್ಥೂಲವಾಗಿ ಹೇಗಿದ್ದರೂ, ಯಾವ ಆಕಾರದಿಂದ ಇದ್ದರೂ ಸೂಕ್ಷ್ಮವಾಗಿ ಸಜೀವವಾದವೆಂದು ಮೊದಲೇ ಹೇಳಿಕೊಂಡಿದ್ದೇವೆ. ಸಜೀವವಾದ ಚಿಕ್ಕ ಗ್ರಹಗಳು ಸಹ ದೇವರ ಪಾಲನೆಯಲ್ಲಿ ಭಾಗಸ್ವಾಮಿಗಳಾಗಿವೆ ಎಂದು ಹೇಳಿಕೊಂಡಿದ್ದೇವೆ. ಅಂತಹ ಸ್ವಲ್ಪ ಗ್ರಹಗಳಲ್ಲಿ ಒಂದು ವಿಧವಾದವು ಫ್ಲಯಿಂಗ್ ಸಾಸರ್ಸ್ ಎನ್ನುವವು. ಹಾರಾಡುವ ತಟ್ಟೆಗಳು (ಫ್ಲಯಿಂಗ್ ಸಾಸರ್ಸ್) ನಿತ್ಯವೂ ಭೂಮಿಮೇಲಕ್ಕೆ ಬಂದುಹೋಗುತ್ತಿರುತ್ತವೆ. ನಿತ್ಯವೂ ಬಂದು ಹೋಗುತ್ತಿದ್ದರೂ ಬಹು ಅಪರೂಪವಾಗಿ ಮನುಷ್ಯರಿಗೆ ಕಾಣಿಸಿರಬಹುದು. ಅವುಗಳ ಇರುವಿಕೆ ಮಾನವರಿಗೆ ತಿಳಿಯುವುದಕ್ಕೋಸ್ಕರ ಹಾಗೆ ಯಾವಾಗಾದರೂ ಕಾಣಿಸಿರಬಹುದು. ಮನುಷ್ಯರಿಗೆ ಪುನರ್ಜನ್ಮಗಳು ಇವೆ, ಆದರೂ ಅವು ಯಾರಿಗೂ ತಿಳಿದಿಲ್ಲ. ಅವು ಇವೆಯೆಂದು ತಿಳಿಯುವುದಕ್ಕೆ ಎಲ್ಲಿಯೋ ಒಂದು ಕಡೆ, ಯಾರಿಗೋ ಒಬ್ಬರಿಗೆ ಪುನರ್ಜನ್ಮ ಜ್ಞಾಪಕ ಬರುತ್ತಿದೆ. ಹಾಗೆ ಪುನರ್ಜನ್ಮ ಜ್ಞಾಪಕ ಬಂದವನು ತನ್ನ ಪೂರ್ವವೃತ್ತಾಂತವನ್ನು ಹೇಳುವುದು, ಅದನ್ನು ವಿಚಾರಿಸಿದರೆ ಎಲ್ಲಾ ನಿಜವೆಂದು ತಿಳಿಯುವುದು ನಡೆಯುತ್ತಿದೆ. ಹಾಗೆ ನಡೆಯುವುದರಿಂದ ನಮಗೆ ಪುನರ್ಜನ್ಮಗಳಿವೆ ಎಂಬುವುದಕ್ಕೆ ಆಧಾರ ಸಿಗುತ್ತಿದೆ. ಅದೇ ವಿಧವಾಗಿ ಎಷ್ಟೊ ಸೂಕ್ಷ್ಮ, ಸ್ಥೂಲ ಗ್ರಹಗಳು ಖಗೋಳದಲ್ಲಿ ಇದ್ದರೂ, ಅವು ನಮಗೆ ತಿಳಿಯ ದಿರುವವು ಎಷ್ಟೋ ವಿಧಗಳಿವೆ. ತಿಳಿಯದಿರುವವು ಸಹ ಇವೆ ಎಂಬುವುದಕ್ಕೆ ಆಧಾರವಾಗಿ ಯಾರಿಗೋ ಒಬ್ಬರಿಗೆ ಪುನರ್ಜನ್ಮ ಜ್ಞಾಪಕ ಬಂದಂತೆ, ಯಾವಾಗೊ ಒಂದುಬಾರಿ ಫ್ಲಯಿಂಗ್ ಸಾಸರ್ಸ್ ಕಾಣಿಸುವುದು, ಏಲಿಯನ್ಸ್ ಕಾಣಿಸುವುದು ನಡೆಯುತ್ತಿದೆ.

ಫ್ಲಯಿಂಗ್ ಸಾಸರ್ಸ್ ಎಷ್ಟೋ ಕಾಲದಿಂದ ಕಾಣಿಸುತ್ತಿವೆಂದು ತಿಳಿಯುತ್ತಿದೆ. ಫ್ಲಯಿಂಗ್‌ಸಾಸರ್ಸ್ ಆಗಲಿ, ಏಲಿಯನ್ಸ್ ಆಗಲಿ ಹೆಚ್ಚಾಗಿ ಅಮೇರಿಕಾ ಖಂಡದಲ್ಲಿಯೇ ಕಾಣಿಸುವುದು ವಿಶೇಷ. ಬಹುಶ 1940ನೇ ವರ್ಷದಲ್ಲಿ ಅಂದುಕೊಳ್ಳುತ್ತೇನೆ, ಅಮೇರಿಕಾದಲ್ಲಿ ಫ್ಲಯಿಂಗ್ ಸಾಸರ್ಸ್‌ನ್ನು ಕುರಿತಾದ ಒಂದು

ಸಂಘಟನೆ ನಡೆದಿದೆ. ಅದೇನೆಂದರೆ! ಅದಕ್ಕೂ ಮೊದಲು ಎಷ್ಟೋಬಾರಿ ಫ್ಲಯಿಂಗ್ ಸಾಸರ್ಸ್‌ಗಳನ್ನು ನೋಡಿದ ಅಮೇರಿಕದವರು, ಅವು ಏನು? ಎಲ್ಲಿಂದ ಬರುತ್ತಿವೆ, ಅವುಗಳಲ್ಲಿ ಯಾರಿದ್ದಾರೆ? ಎನ್ನುವ ವಿಷಯಗಳು ತಿಳಿದುಕೊಳ್ಳಬೇಕೆಂದು ಕೊಂಡಿದ್ದಾರೆ. ಅಂತಹ ಸಂದರ್ಭಗಳಲ್ಲಿ ಒಂದುದಿನ ಫ್ಲಯಿಂಗ್ ಸಾಸರ್ಸ್‌ಗಳು ಅವರಿಗೆ ಕಾಣಿಸಿವೆ. ತಕ್ಷಣ ಅಮೇರಿಕಾ ಎಯಿರ್‌ಫೋರ್ಸ್‌ಗೆ ಸಂಬಂಧಿಸಿದ ನಾಲ್ಕು ಯುದ್ಧ ವಿಮಾನಗಳು ಹೊರಟು ಅವುಗಳನ್ನು ಹಿಂಬಾಲಿಸಿವೆ. ಹೇಗಾದರು ಅವುಗಳನ್ನು ಬಲವಂತವಾಗಿ ಕೆಳಗೆ ಇಳಿಸುವುದಾಗಲಿ, ಹಾಗೆ ಸಾಧ್ಯವಾಗದ ಸಮಯದಲ್ಲಿ ಬೀಳಿಸುವುದಾಗಲಿ ಮಾಡಬೇಕೆಂಬುವುದು ಯುದ್ದವಿಮಾನಗಳ ಉದ್ದೇಶ. ಆ ಉದ್ದೇಶದಿಂದ ವಿಮಾನಗಳು ಫ್ಲಯಿಂಗ್ ಸಾಸರ್ಸ್‌ಗೆ ಹತ್ತಿರವಾಗಿ ಹೋಗಿವೆ. ವಿಮಾನಗಳು ಪೂರ್ತಿಯಾಗಿ ಅವುಗಳನ್ನು ಸಮೀಪಿಸಿದಾಗ, ಆ ಫ್ಲಯಿಂಗ್ ಸಾಸರ್ಸ್‌ನಿಂದ ನೀಲಿಬಣ್ಣದ ಹೊಗೆ ಹೊರಗೆ ಬಂದಿದೆ. ಆ ಹೊಗೆ ನಂತರ ಅವು ಕಾಣಿಸದಂತೆ ಹೋಗಿವೆ. ನೀಲಿಬಣ್ಣದ ಹೊಗೆ ಬಂದಾಗ, ಹೊಗೆ ಅವುಗಳನ್ನು ಕಾಣಿಸದಂತೆ ಮಾಡಿದೆ. ಹೊಗೆ ನಂತರ ಅವು ಪೂರ್ತಿಯಾಗಿ ಕಾಣಿಸದಂತೆ ಹೋಗಿವೆ. ಎಷ್ಟು ಪ್ರಯತ್ನ ಮಾಡಿದರೂ ಫಲಿತ ಇಲ್ಲದಂತೆ ಹೋಗಿದೆ. ಅವುಗಳ ವಿವರ ತಿಳಿಯದಂತೆ ಹೋಗಿದೆ. ನಂತರ ಅವುಗಳನ್ನು ಕುರಿತಾದ ಪೂರ್ತಿ ಸಮಾಚಾರ ಇಲ್ಲಿಯವರೆಗೂ ಸಿಗಲಿಲ್ಲ. ಕೆಲವರು ಫ್ಲಯಿಂಗ್ ಸಾಸರ್ಸ್ ಬಿದ್ದುಹೋಗಿದೆ ಎಂದು ಹೇಳಿದರು ಅದು ಸುಳ್ಳು. ಹಾಗೆ ಬಿದ್ದುಹೋಗುವುದು ಇಲ್ಲಿಯವರೆಗೂ ಎಲ್ಲಿಯೂ ನಡೆಯಲಿಲ್ಲ. ಫ್ಲಯಿಂಗ್ ಸಾಸರ್ ಒಂದು ಯಂತ್ರವಾಗಲಿ, ವಾಹನವಾಗಲಿ ಅಲ್ಲ. ಅದು ಸಜೀವವಾದ ಸಣ್ಣದಾದ ಗ್ರಹ. ಆದ್ದರಿಂದ ಅದು ಬಿದ್ದುಹೋಗುವುದಕ್ಕೆ ಸಾಧ್ಯವಿಲ್ಲ. ಫ್ಲಯಿಂಗ್ ಸಾಸರ್ಸ್ ಎನ್ನುವುದು ಒಂದು ಹಾರಾಡುವ ತಟ್ಟೆಯಂತೆ ಕಾಣಿಸಿದರೆ ಅದನ್ನು ಒಂದು ಯಂತ್ರದಂತೆ ಹೋಲಿಸಿಕೊಳ್ಳುವುದು ತಪ್ಪು. ಆ ಗ್ರಹದ ಆಕಾರ ತಟ್ಟೆಯಂತೆ ಇರುವುದರಿಂದ, ಅದನ್ನು ಮನುಷ್ಯರು ತಪ್ಪಾಗಿ ಒಂದು ವಾಹನ ಯಂತ್ರ ಎಂದುಕೊಂಡಿದ್ದಾರೆ. ಫ್ಲಯಿಂಗ್ ಸಾಸರ್ಸ್ ಎನ್ನುವ ಆ ಗ್ರಹಗಳು,

ಮಾನವನ ಪಾಪಗಳನ್ನು ಜಾರಿ ಮಾಡುವುದರಲ್ಲಿ ತನ್ನ ಕರ್ತವ್ಯ ಕಾರ್ಯ ಮಾಡುವುದಕ್ಕೆ, ನಿತ್ಯವು ಎಷ್ಟೋ ಭೂಮಿಮೇಲಕ್ಕೆ ಬರುವುದು ನಡೆಯುತ್ತಿದೆ. ಮಾನವನ ಒಂದು ವಿಧವಾದ ಪಾಪಕ್ಕೆ ತಕ್ಕಂತೆ ಶಿಕ್ಷೆಯನ್ನು ಜಾರಿ ಮಾಡುವುದಕ್ಕೆ ಪ್ರತ್ಯೇಕವಾಗಿರುವ ಫ್ಲಯಿಂಗ್ ಸಾಸರ್ಸ್ ಭೂಮಿ ಮೇಲಕ್ಕೆ ನಿತ್ಯವೂ ಅನೇಕ ಜಾಗಗಳಿಗೆ ಬರುತ್ತಿವೆಂದು ಯಾರಿಗೂ ತಿಳಿದಿಲ್ಲ. ಮನುಷ್ಯನಿಗೆ ಎಷ್ಟು ತಿಳುವಳಿಕೆ ಇದ್ದರೂ, ಎಷ್ಟು ದೊಡ್ಡ ಅಧಿಕಾರ ಇದ್ದರೂ, ಎಷ್ಟು ಧನವಿದ್ದರೂ, ಎಷ್ಟು ವಿದ್ಯೆ ಇದ್ದರೂ ತನ್ನ ಪಾಪಪುಣ್ಯಗಳನ್ನು ತನ್ನ ಮೇಲೆ ಹೇಗೆ ಜಾರಿಯಾಗುತ್ತಿವೆಯೋ ಯಾರಿಗೂ ತಿಳಿದಿಲ್ಲ. ಪಾಪ ಜಾರಿಯಾಗುವ ವಿಧಾನ ಸ್ವಲ್ಪಕ್ಕೆ ಸ್ವಲ್ಪವಾದರೂ ತಿಳಿಯಬೇಕೆಂದರೆ, ಆತನು ಆಧ್ಯಾತ್ಮಿಕ ವಿದ್ಯೆಯನ್ನು ಚೆನ್ನಾಗಿ ತಿಳಿದಿರಬೇಕು. ಆಧ್ಯಾತ್ಮಿಕ ತಿಳಿಯದವನಿಗೆ, ಅವನಿಗೇ ಅವನು ತಿಳಿಯುವುದಿಲ್ಲ. ಅವನಿಗೆ ಅವನೇ ತಿಳಿಯದಿರುವಾಗ, ಅವನ ಕರ್ಮವನ್ನು ಕುರಿತು ಅವನಿಗೆ ಅಸಲಿಗೆ ತಿಳಿಯುವುದಿಲ್ಲ. ಅಂತಹದರಲ್ಲಿ ಕರ್ಮ ಹೇಗೆ ಬರುತ್ತಿದೆಯೋ, ಪಾಪವು ಹೇಗೆ ತನ್ನನ್ನು ಸೇರುತ್ತಿದೆಯೋ, ಕೊನೆಗದು ಯಾವ ರೂಪದಲ್ಲಿ, ಯಾರ ಮೂಲಕ ಆಚರಣೆಗೆ ಬರುತ್ತಿದೆಯೋ ತಿಳಿದಿಲ್ಲ. ಆ ವಿಧಾನದಲ್ಲಿ ಫ್ಲಯಿಂಗ್ ಸಾಸರ್ಸ್ ನಮ್ಮ ಪಾಪ ಪರಿಪಾಲಕರಲ್ಲಿ ಭಾಗಸ್ತರೆಂದು ಸಹ ತಿಳಿಯದು.

## ಗ್ರಹಾಂತರ ವಾಸಿಗಳು ಇದ್ದಾರಾ ?

ಗ್ರಹಾಂತರ ವಾಸಿಗಳು (ಏಲಿಯನ್ಸ್) ಇದ್ದಾರಾ? ಎನ್ನುವ ಪ್ರಶ್ನೆಗೆ ಇದ್ದಾರೆಂದೇ ಸಮಾಧಾನ ಹೇಳುತ್ತಿದ್ದೇವೆ. ಹಾರಾಡುವ ತಟ್ಟೆಗಳು ಯಾವ ವಿಧವಾಗಿ ಭೂಮಿಮೇಲೆ ಕಾಣಿಸಿವೆಯೋ, ಗ್ರಹಾಂತರವಾಸಿಗಳೆನ್ನುವವರು ಸಹ ಆ ವಿಧವಾಗಿಯೇ ಅಲ್ಲಲ್ಲಿ ಕಾಣಿಸಿದಂತೆ ಕೆಲವರು ಹೇಳುತ್ತಿರುವಾಗ ಕೇಳಿದ್ದೇವೆ. ಇಂತಹ ವಿಷಯಗಳೆಲ್ಲವೂ ಹೆಚ್ಚಾಗಿ ನ್ಯೂಸ್‌ಪೇಪರ್‌ಗಳಲ್ಲಿ ಬರುತ್ತಿರುತ್ತವೆ. ನ್ಯೂಸ್‌ಪೇಪರ್‌ನಲ್ಲಿ ಬಂದಿರುವ ಸಮಾಚಾರವನ್ನು ಶೇಕರಿಸಿ

ఫ్లయింగ్ సాసర్స్ విషయవన్ను బరెదిద్దేవె. ఫ్లయింగ్ సాసర్స్ విషయదల్లి న్యూస్ పేపర్‌గళ సమాచార స్వల్పమట్టిగె ఇద్దరూ, ఉళిద సమాచార వన్ను నావు హేళిద్దేవె. నీవు యావ పరిశోధనె మాడి హేళుత్తిద్దీ రెందు నమ్మన్ను యారాదరు కేళిదరూ, నావు అదక్కె సమాధానవాగి సూపర్ సైన్స్‌న్ను తిళిదుకొండరె ప్రపంచదల్లి మేధావిగళు, శాస్త్రజ్ఞరు హేళలారద విషయగళన్ను హేళబహుదెందు సహ తిళిసిద్దేవె. ఈగలూ సహ ఏలియన్స్ విషయదల్లి ఫ్లయింగ్ సాసర్స్‌న్ను కురితు హేళిద విధానవన్నే అనుసరిసుత్తా హేళుత్తిద్దేవె. ఏలియన్స్ ఎందు అథవా గ్రహాంతరవాసిగళెందు హేళల్పడువ అవరు నిజవాగలు ఇద్దారెందు నావూ సహ హేళుత్తిద్దేవె. ఈగ గ్రహాంతర వాసిగళు యారు? ఎన్నువ విషయవన్ను వివరిసికొండు నోడోణ. గ్రహాంతరవాసిగళెందు హెసరిట్టు యారన్నాదరె అన్నుత్తిద్దేవో అవరు నిజవాగలూ గ్రహాంతర వాసిగళు అల్ల. భూగోళద మేలె అల్లదె బేరె గ్రహద మేలింద బందిరువవరెందుకొండు, ఏలియన్స్‌నన్ను గ్రహాంతరవాసిగళెందు ఎన్నుత్తిద్దేవె. వాస్తవక్కె **ఏలియన్స్ ఎన్నువవరు ఇతర గ్రహవాసిగళు అల్ల. అవరిగింత యావ గ్రహవు ప్రత్యేకవాగి ఇల్ల. అవరు భూమండలవన్ను ఆశ్రయిసికొండె ఇద్దారె. మనుష్యరు నివాసవిరువ భూమి మేలెయే ఇద్దారె. ఆద్దరింద గ్రహాంతరవాసిగళు అల్ల. ఒందు విధవాగి అవరన్ను గృహాంతర వాసిగళెందే హేళబేకు.**

ఏలియన్స్ ఎన్నువవరూ సహ దేవర పాలనెయల్లి పాత్రహొంది దవరె. అవరు అదృశ్యరూపదల్లి ఎల్లాకడెయల్లియూ ఇద్దారె. ఈగ నావు హేళువ విషయవు సత్యవెందు నిరూపణెగె బరువుదక్కే ఎన్నువంతె, అవరు అదృశ్యరాదరూ కెలవరిగె అల్లల్లి కాణిసి నావిద్దేవెందు నిరూపిసి కొండిద్దారె. ఇందిగె హత్తుదినగళ కెళగె నల్గొండ జిల్లెయల్లి ఒబ్బ

ಯುವಕನು ರಾತ್ರಿಸಮಯ ಮೂತ್ರವಿಸರ್ಜನೆಗೆ ಹೋದಾಗ ಆತನಿಗೆ ಬೀದಿಲೈಟ್‌ಗಳ ಬೆಳಕಿನಲ್ಲಿ ಒಂದು ಗಿಡದಮರೆಯಿಂದ ತಲೆಯಾಕಾರ ಕಾಣಿಸಿದೆ. ಸುಮಾರು 15 ಅಡಿಗಳ ಎತ್ತರವಿರುವ ಮರದಕೊಂಬೆಗಳ ಮರೆಯಿಂದ ಪಕ್ಕಕ್ಕೆ ಬಗ್ಗಿ ನೋಡಿದಂತೆ ಕಾಣಿಸಿದ ಆಕಾರವನ್ನು ಗಮನಿಸಿದ ಆ ಯುವಕನು, ಧೈರ್ಯವಾಗಿ ತನ್ನ ಸೆಲ್‌ಪೋನ್‌ನಲ್ಲಿ ಆ ದೃಶ್ಯವನ್ನು ವಿಡಿಯೋ ರಿಕಾರ್ಡಿಂಗ್ ಮಾಡಿದ್ದಾನೆ. ಆ ದೃಶ್ಯವನ್ನು ಟಿವಿ ಛಾನಲ್ಸ್‌ನಲ್ಲಿಯೂ ಸಹ ಪ್ರಸಾರಮಾಡಿದ್ದಾರೆ. ನ್ಯೂಸ್ ಪೇಪರ್‌ಗಳಲ್ಲಿಯೂ ಸಹ ಆ ವಿಷಯ ಬಂದಿದೆ. ಸೆಲ್‌ಪೋನ್‌ನಲ್ಲಿ ತೆಗೆದ ದೃಶ್ಯಗಳನ್ನು ನೋಡಿದರೆ ಸುಮಾರು ಮರದಷ್ಟು ಎತ್ತರವಿರುವ ಆಕಾರ, ತನ್ನ ಕೈಗಳು ಸೊಂಟದವರೆಗೂ ಮರದ ಮರೆಯಿಂದ ಹೊರಗೆ ಬಂದು ಕಾಣಿಸಿದಂತೆ ತಿಳಿಯುತ್ತಿದೆ. ಅದೊಂದು ನೆರಳಿನ ದೃಶ್ಯದಂತೆ ಇದ್ದೂ ಕಾಣಿಸುತ್ತಿದ್ದರೂ ಪೂರ್ತಿ ಸ್ಪಷ್ಟತೆಯಿಲ್ಲ. ಅದು ಪೂರ್ತಿ ಸ್ಥೂಲ ಶರೀರದಂತೆ ಅಲ್ಲದೆ ಅದೃಶ್ಯ ರೂಪದಲ್ಲಿದ್ದು, ನೀರಿನ ಮೇಲೆ ಛಾಯೆಯಂತೆ ಇರುವಂತೆ ಕಾಣಿಸಿದೆ. ಹೇಗೆ ಕಾಣಿಸಿದರು, ಯಾರು ನೋಡಿದರು ನೋಡದಿದ್ದರು ಏಲಿಯನ್ಸ್ ಎನ್ನುವವರು ಇದ್ದಾರೆ.

ಏಲಿಯನ್ಸ್ ಭೂಲೋಕವಾಸಿಗಳೆ ಆದರೂ ಆ ವಿಷಯವು ಪ್ರಜೆಗಳಿಗೆ ತಿಳಿಯದಿರುವುರಿಂದ ಅವರನ್ನು ಗ್ರಹಾಂತರವಾಸಿಗಳು ಎಂದಿದ್ದಾರೆ. ಏಲಿಯನ್ಸ್ ಗ್ರಹಾಂತರವಾಸಿಗಳು ಅಲ್ಲ ಭೂಲೋಕನಿವಾಸಿಗಳೇ ಎಂದು ಹೇಳುತ್ತಿದ್ದೇವೆ. ಭೂಲೋಕದಲ್ಲಿ ಅವರು ದೇವರ ಪಾಲನೆಯಲ್ಲಿ ಪಾತ್ರಧಾರಿಗಳಾಗಿದ್ದಾರೆ. ಇದರಿಂದ ಜೀವರಾಶಿಗಳನ್ನು ಪಾಲಿಸುವವರಲ್ಲಿ ಏಲಿಯನ್ಸ್ ಸಹ ಒಂದು ಕಾರ್ಯವನ್ನು ನಿರ್ವರ್ತಿಸುತ್ತಿದ್ದಾರೆಂದು ತಿಳಿಯುತ್ತಿದೆ. ನಮ್ಮ ಶೋಧನೆಯಲ್ಲಿ ನಮಗೆ ಏಲಿಯನ್ಸ್‌ನ್ನು ಕುರಿತು ತಿಳಿದ ವಿಷಯ ಏನೆಂದರೆ! ಏಲಿಯನ್ಸ್ ಕ್ಯಾನ್ಸರ್ ಕಣಗಳನ್ನು ಹೊತ್ತುಕೊಂಡು ಹೋಗುವ ವಾಹನಕಾರರಾಗಿ ಇದ್ದಾರೆ. ಅವರು ಪ್ರತ್ಯೇಕವಾಗಿ ಕ್ಯಾನ್ಸರ್ ಕಣಗಳನ್ನು ಅವರಲ್ಲಿ ಸ್ಟೋರ್ ಮಾಡಿಕೊಂಡಿದ್ದಾರೆ. ಏಲಿಯನ್ಸ್ ಕಾಣಿಸಿದ ಅದೃಶ್ಯರೂಪಗಳೆ ಆದರೂ ಅವರು ಎಲ್ಲಿಯೋ ಒಂದುಕಡೆ,

ಯಾರಿಗೋ ಒಬ್ಬರಿಗೆ ಕಾಣಿಸಿದ್ದಾರೆ. ಪ್ರತ್ಯೇಕವಾಗಿ ಕ್ಯಾನ್ಸರ್ ಕಣಗಳನ್ನು ಅವರ ಶರೀರದಲ್ಲಿ ತುಂಬಿಕೊಂಡು ಎಲ್ಲಿಗೆ ಅವಶ್ಯವಾದರೆ ಅಲ್ಲಿಗೆ ಹೋಗುತ್ತಿರುತ್ತಾರೆ. ಹೋದ ಜನ್ಮದಲ್ಲಿ ಪ್ರತ್ಯೇಕವಾದ ಪಾಪ ಮಾಡಿಕೊಂಡವರ ಶರೀರದೊಳಗೆ ಕ್ಯಾನ್ಸರ್ ಕಣಗಳನ್ನು ಸೇರಿಸುವುದೆ ಏಲಿಯನ್ಸ್‌ಗೆ ಮುಖ್ಯವಾದ ಕೆಲಸವಾಗಿದೆ. ಮಾನವನ ಪ್ರತಿ ಕರ್ಮ, ಸೂರ್ಯ ಚಂದ್ರಾದಿ ದ್ವಾದಶ ಗ್ರಹಗಳ ಕೈಯಲ್ಲಿ ಇರುತ್ತದೆ. ಗ್ರಹಗಳು ಆ ಕರ್ಮವನ್ನು ತಮ್ಮ ಅಧೀನದಲ್ಲಿ ಕೆಲಸಮಾಡುವ ಅನೇಕ ಗ್ರಹಗಳಿಗೆ, ಉಪಗ್ರಹಗಳಿಗೆ, ಭೂತಗಳಿಗೆ, ಉಪಭೂತಗಳಿಗೆ ಕೊಟ್ಟು ಅವರಿಂದ ಪ್ರಜೆಗಳು ಪಾಪಪುಣ್ಯಗಳನ್ನು ಅನುಭವಿಸುವಂತೆ ಮಾಡುತ್ತಿರುತ್ತಾರೆ. ದೈವ ಪಾಲನೆಯಲ್ಲಿನ ಸೂರ್ಯಚಂದ್ರಾದಿ ಗ್ರಹಗಳ ಕೆಳಗೆ ಕೆಲಸ ಮಾಡುವವರಲ್ಲಿ ಏಲಿಯನ್ಸ್ ಸಹ ಇದ್ದಾರೆ. ಏಲಿಯನ್ಸ್ ಎನ್ನುವವರು ಮನುಷ್ಯರು ಮಾಡಿಕೊಂಡ ಪಾಪವನ್ನನುಸರಿಸಿ ಕ್ಯಾನ್ಸರ್ ರೋಗವನ್ನು ಅನುಭವಿಸಬೇಕಾದವರಿಗೆ, ತಮ್ಮ ಹತ್ತಿರವಿರುವ ಕ್ಯಾನ್ಸರ್ ಕಣಗಳನ್ನು ಅಂಟಿಸುತ್ತಿರುತ್ತಾರೆ. ಒಬ್ಬ ಮನುಷ್ಯನಿಗೆ ಕ್ಯಾನ್ಸರ್ ಬಂದಿದೆ ಎಂದರೆ ಅದು ಏಲಿಯನ್ಸ್‌ನಿಂದಲೆ ಬಂದಿದೆ ಎಂದು ಖಚಿತವಾಗಿ ಹೇಳಬಹುದು. ಅಷ್ಟು ಖಚಿತವಾಗಿ ಹೇಳುವುದಕ್ಕೆ ಕಾರಣ **ಪ್ರಪಂಚದಲ್ಲಿ ಕ್ಯಾನ್ಸರ್ ಕಣಗಳು ಏಲಿಯನ್ಸ್ ಹತ್ತಿರ ಹೊರತು ಯಾರ ಹತ್ತಿರವೂ ಇಲ್ಲ.**

ಮನುಷ್ಯನಾಗಿ ಹುಟ್ಟಿದವನು ಒಂದು ವಿಧವಲ್ಲದೆ ಅನೇಕ ವಿಧಗಳ ಪಾಪವನ್ನು ಮಾಡಿರುತ್ತಾನೆ ಅಲ್ಲವೆ! ಅಂತಹದರಲ್ಲಿ ಯಾವ ವಿಧವಾದ ಪಾಪ ಮಾಡಿದವರಿಗೆ ಕ್ಯಾನ್ಸರ್ ರೋಗ ಬರುತ್ತದೆಂದು, ಯಾವ ಪಾಪ ಇರುವವನಿಗೆ ಏಲಿಯನ್ಸ್ ಕ್ಯಾನ್ಸರ್ ಕಣಗಳನ್ನು ಕೊಡುತ್ತಾರೆಂದು ಇಲ್ಲಿ ಕೆಲವರು ಕೇಳಬಹುದು. ಆ ಪ್ರಶ್ನೆಗೆ ಉತ್ತರವನ್ನು ಏಲಿಯನ್ಸ್‌ನನ್ನೇ ಕೇಳಿದರೆ ಅವರು ಹೀಗೆ ಹೇಳುತ್ತಾರೆ. ಅವರ ಮನೋಭಾವನೆಯನ್ನು ತಿಳಿದುಕೊಂಡರೆ ತಿಳಿಯುವ ವಿಷಯವು ನಾವು ಹೇಳುತ್ತಿದ್ದೇವೆ. ಭೂಮಿಮೇಲೆ ಯಾರಾದರಾಗಲಿ ಸ್ವಲ್ಪ ಅಧಿಕಾರ ಹೊಂದಿದವನು, ಎದುರುಗಡೆ ವ್ಯಕ್ತಿ ತಪ್ಪು ಮಾಡಲಿಲ್ಲವೆಂದು ತಿಳಿದು, ತನ್ನ ಅಧಿಕಾರದಿಂದ

ಪಾಪ ಬರುತ್ತದೆಂಬ ಧ್ಯಾಸವಾಗಲಿ, ಪಾಪದ ಭಯವಾಗಲಿ ಇಲ್ಲದವನಾಗಿ, ಒಬ್ಬ ನಿರ್ದೋಷಿಯನ್ನು ದೋಷಿಯಾಗಿ ತೋರಿಸಿದರೂ, ಇಲ್ಲವೆ ನಿರ್ದೋಷಿಯನ್ನು ದೋಷಿಯಾಗಿ ವರ್ಣಿಸಿದರೂ, ಅಂತಹವನಿಗೆ ಬರುವ ಪ್ರತ್ಯೇಕವಾದ ಪಾಪವನ್ನು ಅನುಭವಿಸುವಂತೆ ಮಾಡುವುದಕ್ಕೆ, ಕುಜಗ್ರಹದ ಅನುಮತಿಯಿಂದ ಏಲಿಯನ್ಸ್ ಕ್ಯಾನ್ಸರ್ ಕಣಗಳನ್ನು ಅವನಿಗೆ ಸೇರಿಸುತ್ತಿದ್ದಾರೆ. ತನಗಿರುವ ಅಧಿಕಾರದಿಂದ ತನಗೆ ಕೈಲಾಗುತ್ತದೆಂದು, ಒಬ್ಬ ನಿರ್ದೋಷಿಯನ್ನು ದೋಷಿಯಾಗಿ ಆರೋಪಿಸಿದರೆ, ಆ ಆರೋಪಣೆ ಫಲವಾಗಿ ಬರುವ ಪಾಪವು ಆ ಅಧಿಕಾರಿಯಲ್ಲಿ ತಿಳಿಯದೇ ಸೇರಿಹೋಗುತ್ತಿದೆ. ಆ ಪಾಪವು ದ್ವಾದಶ ಗ್ರಹಗಳಾದ ಸೂರ್ಯಚಂದ್ರಾದಿ ಗ್ರಹಗಳಲ್ಲಿ ಕುಜಗ್ರಹದ ವಿಭಾಗದಲ್ಲಿ ಸೇರಿಹೋಗುತ್ತದೆ. ನಂತರ ಜನ್ಮದಲ್ಲಿ ಕುಜಗ್ರಹ ಆ ಪಾಪವನ್ನು ಅನುಭವಿಸುವಂತೆ ಮಾಡುವುದಕ್ಕೆ, ದೇವರ ಪಾಲನೆಯಲ್ಲಿನ ಏಲಿಯನ್ಸ್‌ಗೆ ಅನುಮತಿಕೊಡುತ್ತದೆ. ಕುಜಗ್ರಹ ತನ್ನ ಅಧೀನದಲ್ಲಿನ ಪಾಪವನ್ನು ಕುರಿತು, ಆ ಪಾಪಫಲಿತವು ಕ್ಯಾನ್ಸರ್ ರೋಗವೆ ಎಂದು ತಿಳಿಸಿದಾಗ, ಕುಜಗ್ರಹ ಆದೇಶವನ್ನು ತೆಗೆದುಕೊಂಡ ಏಲಿಯನ್ಸ್ ತಮ್ಮ ಶರೀರದಲ್ಲಿ ನೆಲೆ ಇರುವ ಕ್ಯಾನ್ಸರ್ ಕಣಗಳನ್ನು, ಗತ ಜನ್ಮದಲ್ಲಿ ಅಧಿಕಾರಿಯಾಗಿದ್ದು ತಪ್ಪು ಆರೋಪಣೆಗಳನ್ನು ಮಾಡಿದವನಿಗೆ ಸೇರಿಸುವುದರಿಂದ, ಅವನಿಗೆ ಆಗಿನಿಂದ ಕ್ಯಾನ್ಸರ್ ಪ್ರಾರಂಭವಾಗುತ್ತದೆ. ಈ ವಿಧವಾಗಿ ಒಂದು ಕ್ಯಾನ್ಸರ್ ರೋಗವನ್ನು ವ್ಯಾಪಿಸುವಂತೆ ಮಾಡುವ ನಿಮಿತ್ತವೇ ಏಲಿಯನ್ಸ್ ಇವೆಯೆಂದು ತಿಳಿಸುತ್ತಿದ್ದೇವೆ. ಫ್ಲಯಿಂಗ್ ಸಾಸರ್ಸ್ ಸಹ ಜೀವಚೈತನ್ಯವಿರುವ ಗ್ರಹಗಳೇಯಾಗಲಿ ಬೇರೆಯಲ್ಲವೆಂದು, ಅವು ಸಹ ಮಾನವನು ಸಂಪಾದಿಸಿಕೊಂಡ ಒಂದುವಿಧವಾದ ಪಾಪವನ್ನು ಅನುಭವಿಸುವಂತೆ ಮಾಡುವುದಕ್ಕೆ ಇವೆಯೆಂದು ಸಹ ತಿಳಿದುಕೊಂಡಿದ್ದೇವೆ.

ಅಧಿಕಾರ ಇರುವಾಗ ತಪ್ಪು ಮಾಡದಿದ್ದರು, ಒಳ್ಳೆಯವನನ್ನೂ ಸಹ ಆರೋಪಿಯನ್ನಾಗಿ, ಅಪರಾಧಿಯನ್ನಾಗಿ ಚಿತ್ರಿಸಿ ತೋರಿಸುವುದು ಉಳಿದ ಶಾಖೆಯಲ್ಲಿನ ಅಧಿಕಾರಿಗಳಿಗಿಂತ ಹೆಚ್ಚಾಗಿ ಪೊಲೀಸ್ ಶಾಖೆಯಲ್ಲಿನ

ಇನ್‌ಸ್ಪೆಕ್ಟರ್‌ಗು, ಸಬ್‌ಇನ್‌ಸ್ಪೆಕ್ಟರ್‌ಗು ಮತ್ತೆ ಕೆಲವರಿಗೆ ಮಾತ್ರವೇ ಇರುತ್ತದೆ. ಆದ್ದರಿಂದ ಅವರು ಸ್ವಲ್ಪವೂ ಸಹ ಪಾಪಭೀತಿ ಇಲ್ಲದಂತೆ ಮಾಡಿಕೊಂಡ ಪಾಪವು, ನಂತರ ಜನ್ಮದಲ್ಲಿ ಕ್ಯಾನ್ಸರ್ ರೋಗವಾಗಿ ಪೀಡಿಸುತ್ತದೆಂದು ತಿಳಿಯುತ್ತದೆ. ಈಗ ಪ್ರಸ್ತುತ ಕಾಲದಲ್ಲಿ ಕ್ಯಾನ್ಸರ್ ರೋಗವು ಇರುವವರೆಲ್ಲರೂ ಹೋದ ಜನ್ಮದಲ್ಲಿ ಅಧಿಕಾರ ಮದ ತಲೆಗೇರಿ, ಒಬ್ಬ ವ್ಯಕ್ತಿ ತಪ್ಪುಮಾಡಲಿಲ್ಲವೆಂದು ತಿಳಿದರೂ ಒಳ್ಳೆಯವನನ್ನೂ ಸಹ ಆರೋಪಿಯನ್ನಾಗಿ, ಅಪರಾಧಿಯನ್ನಾಗಿ, ಕೆಟ್ಟವನನ್ನಾಗಿ ಚಿತ್ರಿಸಿದವರಾಗಿರುತ್ತಾರೆಂದು ಅರ್ಥವಾಗುತ್ತಿದೆ. ಕ್ಯಾನ್ಸರ್ ರೋಗ ಏಕೆ ಬರುತ್ತದೋ ಈಗ ತಿಳಿದಿದೆ ಅಲ್ಲವೆ! ಈಗಲಾದರೂ ಪಾಪ ಮುಂದೆ ಬರುವ ಜನ್ಮದಲ್ಲಿ ಭಯಂಕರವಾದ ಶಿಕ್ಷೆಹಾಕುತ್ತದೆಂದು ತಿಳಿದು, ತಮ್ಮ ಅಧಿಕಾರವನ್ನು ದುರ್ವಿನಿಯೋಗ ಮಾಡಿಕೊಳ್ಳದೆ, ಪಾಪವನ್ನು ಮೂಟೆಕಟ್ಟಿಕೊಳ್ಳ ದಂತೆ ಇರಬೇಕೆಂದು, ಈಗ ಅಧಿಕಾರಿಗಳಾಗಿರುವವರಿಗೆ ತಿಳಿಸುತ್ತಿದ್ದೇವೆ. ಈಗಲೂ ಪಾಪ ಎಂದರೆ ಭಯವಿಲ್ಲದವರನ್ನು ಕಾಣಿಸದ ಎಷ್ಟೋ ಗ್ರಹಗಳು, ಅನೇಕ ವಿಧಗಳಾಗಿ ದುಃಖಿಸುವುದಕ್ಕೆ ಪೀಡಿಸುವುದಕ್ಕೆ ತಯಾರಾಗಿವೆ. ಅವು ಪಂಚಮಹಾ ಭೂತಗಳಿಂದ, ದ್ವಾದಶ ಗ್ರಹಗಳಿಂದ ಆಜ್ಞೆ ಹೊಂದಿರುವವಾಗಿ ಭೂಕಂಪಗಳನ್ನೂ, ಸುನಾಮಿಗಳನ್ನು ಸೃಷ್ಟಿಸಿ ಭಾದಿಸುತ್ತವೆ. ಆದ್ದರಿಂದ ಈಗಲಾದರೂ ದೈವಜ್ಞಾನ ಹೊಂದಿ, ಪಾಪದಿಂದ ಹೊರಬೀಳುವ ಮಾರ್ಗವನ್ನು ತಿಳಿದುಕೊಳ್ಳೋಣ.

## ಭೂಕಂಪಗಳು – ಸುನಾಮಿಗಳು ಏಕೆ ಬರುತ್ತಿವೆ?

ಒಂದು ರಾಜ್ಯವಿದ್ದರೆ ಅದಕ್ಕೆ ರಾಜಧಾನಿ ಇರುತ್ತದೆ. ಹಾಗೆಯೇ ಭೂಗೋಳದಲ್ಲಿ ಮಾತ್ರ ದೇವರ ಪಾಲನೆಗೆ ರಾಜಧಾನಿ, ದೈವ ಶಕ್ತಿಯಿಂದ ಕೂಡಿಕೊಂಡಿರುವ **"ಬೆರ್ಮುಡಾಟ್ರಯಾಂಗಿಲ್"** ಎಂದೇ ಹೇಳಬಹುದು. ದೇವರ ಪಾಲನೆ ಎಂದು ನಾವು ಹೇಳಿಕೊಳ್ಳುತ್ತಿದ್ದರೂ, ಸ್ವತಃವಾಗಿ ದೇವರು ಪಾಲಿಸುವುದು ಅಲ್ಲ. ದೇವರಿಂದ ಒಪ್ಪಿಸಲ್ಪಟ್ಟಿರುವ ಅಧಿಕಾರದಿಂದ, ಪ್ರಕೃತಿಯೇ ಪಾಲಿಸುವುದನ್ನು ದೇವರ ಪಾಲನೆ ಎಂದು ಅನ್ನುತ್ತಿದ್ದೇವೆ ಹೊರತು ನಿಜವಾಗಲು ದೇವರ

ಪಾಲನೆಯಲ್ಲ, ಪ್ರಕೃತಿ ಪಾಲನೆಯೇ ಎಂದು ಹೇಳಬಹುದು. ಪ್ರಕೃತಿಯಲ್ಲಿರುವ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಅನ್ನುವ ಪಂಚಭೂತಗಳು ದೇವರ ಆಜ್ಞೆಗೆ ಒಳಪಟ್ಟು, ಸೃಷ್ಟಿ ಆದಿಯಿಂದ ಜೀವರಾಶಿಗಳ ಪಾಪಪುಣ್ಯಗಳನ್ನು ಪಾಲಿಸುತ್ತಿವೆ. ಪ್ರಕೃತಿ ಎನ್ನುವ ಪಂಚಭೂತಗಳ ಕೆಳಗೆ ಭೂತಗಳು, ಉಪಭೂತ ಗಳು, ಗ್ರಹಗಳು, ಉಪಗ್ರಹಗಳು ಮತ್ತು ಪ್ರಕೃತಿಗೆ ಸಂಬಂಧಿಸಿರುವವು ಎಷ್ಟೋ ಕೆಲಸ ಮಾಡುತ್ತಿವೆ. ಅಂತಹ ಉಪಗ್ರಹಗಳಲ್ಲಿ ಫ್ಲಯಿಂಗ್ ಸಾಸರ್ಸ್, ಏಲಿಯನ್ಸ್ ಎನ್ನುವವು ಸಹ ಇವೆ. ಸೃಷ್ಟಿ ಪ್ರಾರಂಭದಲ್ಲಿ ದೇವರು ನಿರ್ಮಿಸಿದ ಪಾಲನೆಯನ್ನು ಪ್ರಕೃತಿ ಶ್ರದ್ಧೆಯಿಂದ ಪಾಲಿಸುತ್ತಿದ್ದರೂ, ಅದನ್ನು ನಾವು ದೇವರ ಪಾಲನೆ ಎಂದು ಹೇಳಿಕೊಳ್ಳುತ್ತಿದ್ದರೂ, ಪ್ರತ್ಯಕ್ಷವಾಗಿ ದೇವರು ಏನು ಮಾಡುತ್ತಿಲ್ಲ. ಎಲ್ಲವೂ ಪ್ರಕೃತಿಯೇ ಮಾಡುತ್ತಿದೆ. ಜೀವರಾಶಿಗಳು, ಮಾನವರು ಮಾಡಿಕೊಂಡ ಪಾಪವನ್ನು ಜಾರಿ ಮಾಡುವುದಕ್ಕೆ ತಕ್ಕ ಏರ್ಪಾಟುಗಳಿಂದ ನಿರ್ಮಿಸಲ್ಪಟ್ಟ ವಿಧಾನವನ್ನು, ದೇವರ ಪಾಲನೆ ಎನ್ನುತ್ತಿದ್ದೇವೆ. ಎಲ್ಲದಕ್ಕೂ ದೊಡ್ಡವ ದೇವರಾದರೂ ಪಾಲನೆ ಯನ್ನು ಸಾಗಿಸುವುದು ಪ್ರಕೃತಿ ಎಂದೇ ತಿಳಿದುಕೊಂಡಿದ್ದೇವೆ. ದೇವರ ಪಾಲನೆಯನ್ನು ಕುರಿತು ಇಲ್ಲಿಯವರೆಗೂ ಯಾರಿಗೂ ತಿಳಿದಿಲ್ಲ. ದೇವರ ಪಾಲನೆಯಲ್ಲಿ ಯಾರ್ಯಾರು ಪಾತ್ರ ವಹಿಸುತ್ತಿದ್ದಾರೆಂದಾಗಲಿ, ಯಾರದು ಮುಖ್ಯಪಾತ್ರ ಎಂದಾಗಲಿ, ಅದರಲ್ಲಿ ಸಣ್ಣವರ್ಯಾರು, ದೊಡ್ಡವರ್ಯಾರು ಎಂದಾಗಲಿ ಮನುಷ್ಯರಿಗೆ ಇಲ್ಲಿಯವರೆಗೂ ತಿಳಿದಿಲ್ಲ. ಪಾಲಿಸುವವರು ಯಾರೋ ತಿಳಿಯದಿರು ವಾಗ, ಅವರ ಪಾಲನೆ ಹೇಗಿರುತ್ತದೋ ಸಹ ತಿಳಿಯುವುದಿಲ್ಲ. ಈ ವಿಷಯಗಳನ್ನು ಕೆಲವನ್ನು ನಮ್ಮ ರಚನೆಯಲ್ಲಿನ **"ದೆವ್ವ ಹಾಗೂಭೂತಗಳ ಯಥಾರ್ಥ ಸಂಘಟನೆಗಳು"** ಎನ್ನುವ ಗ್ರಂಥದಲ್ಲಿ ವಿವರಿಸಿ ಹೇಳಿದ್ದೇವೆ. ಅದರಲ್ಲಿ ದೇವರ ಪಾಲನೆ ಬಹಳ ನಿಷ್ಪಕ್ಷಪಾತವಾಗಿ ಇರುತ್ತದೆಂದು ಹೇಳುವುದಲ್ಲದೆ, ಬಹಳ ಕಠಿಣವಾಗಿ ಇರುತ್ತದೆಂದು ಸಹ ಹೇಳಿದ್ದೇವೆ.

ಕರ್ಮಪಾಲನೆ ಯಾವ ವಿಧವಾಗಿ ಪ್ರಕೃತಿಯಲ್ಲಿನ ಅನೇಕ ಭಾಗಗಳಿಂದ ಮಾಡಲ್ಪಡುತ್ತಿದೆಯೋ ಅರ್ಥವಾಗುವುದಕ್ಕೆ, ಏಲಿಯನ್ಸ್ ಎನ್ನುವ ಸಣ್ಣ ಗ್ರಹಗಳು ಒಂದು ವಿಧವಾದ ಪಾಪವನ್ನು ಮಾತ್ರವೇ ಜಾರಿ ಮಾಡುವುದಕ್ಕೆ ಇವೆಯೆಂದು

ಹೇಳಿಕೊಂಡಿದ್ದೇವೆ. ಒಂದು ವಿಧವಾದ ಪಾಪವನ್ನು ಜಾರಿ ಮಾಡುವುದಕ್ಕೆ ಒಬ್ಬರು ಇರುವಾಗ, ಅನೇಕ ವಿಧಗಳ ಪಾಪಗಳನ್ನು ಜಾರಿ ಮಾಡುವುದಕ್ಕೆ ಅನೇಕವಾದ ಗುಂಪುಗಳಾಗಿರುವ ಗ್ರಹಗಳು, ಉಪಗ್ರಹಗಳು, ಭೂತಗಳು, ಉಪಭೂತಗಳು ಜವಾಬ್ದಾರಿಯಿಂದ ಕೆಲಸ ಮಾಡುತ್ತಿರುತ್ತವೆ. ಮನುಷ್ಯರು ಸ್ವಲ್ಪವೂ ಸಹ ಪಾಪ ಎನ್ನುವುದರ ಮೇಲೆ ಧ್ಯಾಸವಿಲ್ಲದಂತೆ, ಯಾರಾದರು ದೊಡ್ಡವರು ಗುರ್ತುಮಾಡಿದರೂ ಅದರ ಬಗ್ಗೆ ಸ್ವಲ್ಪವೂ ಯೋಚಿಸದಂತೆ, ತಮ್ಮದು ತಪ್ಪೆಂದು ತಿಳಿದರೂ, ತಮ್ಮನ್ನು ತಾವು ಸಮರ್ಥಿಸಿಕೊಂಡು ಪಾಪಗಳನ್ನು ಸುಲಭವಾಗಿ ಮಾಡುತ್ತಿದ್ದಾರೆ. ಹಾಗೆ ಮಾಡಿದ ಸಣ್ಣ ಪಾಪವಾದರು, ದೊಡ್ಡ ಪಾಪವಾದರು ಶರೀರದಲ್ಲಿಯೆ ಲೆಕ್ಕಿಸಿ ಬರೆಯಲಾಗುತ್ತಿದೆ ಎಂದು, ಅದನ್ನು ಅನುಭವಿಸುವಂತೆ ಮಾಡುವುದಕ್ಕೆ ಒಂದು ದೊಡ್ಡ ಯಂತ್ರಾಂಗವೇ ಇದೆಯೆಂದು ಮನುಷ್ಯನಿಗೆ ತಿಳಿದಿಲ್ಲ. ಕೆಲವು ಪಾಪಗಳನ್ನು ಉಪಗ್ರಹಗಳು, ಕೆಲವು ಪಾಪಗಳನ್ನು ಗ್ರಹಗಳು, ಕೆಲವು ಪಾಪಗಳನ್ನು ಭೂತಗಳು, ಕೆಲವು ಪಾಪಗಳನ್ನು ಉಪಭೂತ ಗಳು, ಮತ್ತೆ ಕೆಲವು ಪಾಪಗಳನ್ನು ಮಹಾಭೂತಗಳು ಲೆಕ್ಕಪ್ರಕಾರ ವಿಭಜಿಸಿಕೊಂಡು ಜಾರಿಮಾಡಿ ಮನುಷ್ಯನಿಂದ ಅನುಭವಿಸುವಂತೆ ಮಾಡುತ್ತಿವೆ. ಮಹಾಭೂತಗಳು ಐದು ಆಗಿದ್ದು, ಭೂತಗಳು ಲೆಕ್ಕವಿಲ್ಲದಷ್ಟು ಇವೆ. ಹಾಗೆಯೇ ಉಪಭೂತಗಳು ಕೆಲವು ಕೋಟಿಗಳಲ್ಲಿ ಇವೆ. ನಮ್ಮ ಭೂಗೋಳಕ್ಕೆ ಮಹಾಗ್ರಹಗಳು ಹನ್ನೆರಡು ಇರುವಾಗ ಗ್ರಹಗಳು, ಉಪಗ್ರಹಗಳು ಎಷ್ಟೋ ಕೋಟಿಗಳಲ್ಲಿ ಇವೆ. ಒಬ್ಬ ಮನುಷ್ಯನ ಹಿಂದೆ ಕಾಣಿಸದ ಎಷ್ಟೋ ಕಣ್ಣುಗಳು ಕಾದು ನೋಡುತ್ತಿವೆ. ಎಷ್ಟೋ ಶಕ್ತಿಗಳು ಆತನ ಪಾಪವನ್ನು ಜಾರಿ ಮಾಡುವುದಕ್ಕೆ ಸಿದ್ಧವಾಗಿವೆ. ಉಪಗ್ರಹಗಳನ್ನು ಅವುಗಳಲ್ಲಿಯೇ ಫ್ಲಯಿಂಗ್ ಸಾಸರ್ಸ್, ಏಲಿಯನ್ಸ್ ಮತ್ತು ಎಷ್ಟೊ ವಿಧಗಳು ಇರುವಾಗ, ಒಂದೊಂದು ಒಂದೊಂದು ವಿಧವಾದ ಪಾಪವನ್ನು ಜಾರಿ ಮಾಡುವುದಕ್ಕೆ ನಿಯಮಿಸಲ್ಪಟ್ಟಿವೆ.

ಮನುಷ್ಯ ಮಾಡಿಕೊಂಡ ಎಷ್ಟೋ ವಿಧಗಳ ಪಾಪಗಳು, ಎಷ್ಟೋ ರೋಗಗಳ ರೂಪದಲ್ಲಿ ಮನುಷ್ಯ ಅನುಭವಿಸುತ್ತಲೇ ಇದ್ದಾನೆ. ಒಂದು ರೋಗ

ಬಂದಿದೆ ಎಂದರೆ ಅದರ ಹಿಂದೆ ಒಂದು ಗ್ರಹವೊ, ಒಂದು ಭೂತವೊ ಕೆಲಸ ಮಾಡಿರುತ್ತದೆ. ಮೇಲಕ್ಕೆ ಕಾಣಿಸುವುದು ಮಾತ್ರವೆ ಮನುಷ್ಯನಿಗೆ ತಿಳಿಯುತ್ತಿದೆ, ಆದರೆ ಅದರ ಹಿಂದೆ ಕಾಣಿಸದಿರುವುದು ಮನುಷ್ಯನಿಗೆ ತಿಳಿಯುವುದಿಲ್ಲ. ಮನುಷ್ಯ ಮನುಷ್ಯನಿಗೂ ಬೇರೆ ಬೇರೆಯಾಗಿ ಜಾರಿ ಮಾಡುವ ಪಾಪಗಳನ್ನು, ಬೇರೆಬೇರೆ ಶಕ್ತಿಗಳು ಜಾರಿಮಾಡುತ್ತಿವೆ. ಒಂದು ಸಮಯದಲ್ಲಿ ಒಬ್ಬರೇ ಕರ್ಮವನ್ನು ಅನುಭವಿಸುತ್ತಿರುತ್ತಾರೆ. ಪಕ್ಕದವರು ಸ್ವಲ್ಪವೂ ಸಹ ಅನುಭವಿಸುವುದಿಲ್ಲ. ಉದಾಹರಣೆಗೆ ಹತ್ತುಜನರು ಇರುವಕಡೆ ಒಬ್ಬನಿಗೆ ಹೊಟ್ಟೆನೋವು ಬಂದಾಗ ಅವನು ಮಾತ್ರವೇ ಅನುಭವಿಸುತ್ತಿದ್ದಾನೆ. ಪಕ್ಕದವನು ಅನುಭವಿಸುತ್ತಿಲ್ಲ. ಒಂದೊಂದು ಸಮಯದಲ್ಲಿ ಹತ್ತುಜನರು ಒಂದೇಬಾರಿ, ಒಂದೇ ಕರ್ಮವನ್ನು ಅನುಭವಿಸುವುದು ಸಹ ನಡೆಯುತ್ತಿರುತ್ತದೆ. ಉದಾಹರಣೆಗೆ ಒಂದು ವಾಹನದಲ್ಲಿ ಹತ್ತುಜನರು ಪ್ರಯಾಣ ಮಾಡುತ್ತಿರುವಾಗ ಆ ವಾಹನ ಅಪಘಾತಕ್ಕೆ ಗುರಿಯಾದರೆ, ಆ ವಾಹನದಲ್ಲಿರುವ ಹತ್ತು ಜನರಿಗೂ ಗಾಯಗಳಾಗುವುದು ನಡೆಯುತ್ತದೆ. ಆಗ ಅಲ್ಲಿರುವ ಹತ್ತು ಜನರು ಸಾಮೂಹಿಕವಾಗಿ ಕರ್ಮವನ್ನು ಅನುಭವಿ ಸುತ್ತಿದ್ದಾರೆ. ಅದೇ ವಿಧವಾಗಿ ಒಂದೊಂದು ಸಲ ಒಂದು ಊರೆಲ್ಲವೂ, ಒಂದೊಂದು ಸಲ ಒಂದು ಪ್ರಾಂತವೆಲ್ಲವೂ, ಒಂದೊಂದು ಸಲ ಒಂದು ರಾಷ್ಟ್ರವೆಲ್ಲವೂ, ಒಂದೊಂದು ಸಲ ಒಂದು ದೇಶವೆಲ್ಲವೂ ಕರ್ಮವನ್ನು ಅನುಭವಿಸಬೇಕಾಗಿ ಬರುತ್ತದೆ. ಅಂತಹ ಬೇರೆಬೇರೆ ಸಂದರ್ಭಗಳಲ್ಲಿ ಬೇರೆಬೇರೆ ಗ್ರಹಗಳು, ಬೇರೆಬೇರೆ ಭೂತಗಳು ಕೆಲಸ ಮಾಡುತ್ತಿವೆ.

ನಾನು ಈ ಸಮಾಚಾರವನ್ನು ಬರೆಯುವುದಕ್ಕೆ ಮೇಲೆ **"ಭೂಕಂಪಗಳು, ಸುನಾಮಿಗಳು ಹೇಗೆ ಬರುತ್ತಿವೆ"** ಎಂದು ಹೆಡ್ಡಿಂಗ್ ಇಟ್ಟು ಬರೆಯುವುದಕ್ಕೆ ಸಜ್ಜಾಗಿದ್ದೇವೆ. ಶುಕ್ರವಾರ 11–03–2011 ತಾರೀಖು ಸರಿಯಾಗಿ ಮಧ್ಯಾಹ್ನ 12 ಗಂಟೆಗಳ ಸಮಯದಲ್ಲಿ ನಮ್ಮ ಮಗ ಫೋನ್ ಮಾಡಿ ಟಿವಿ ನೋಡಿರಿ ಅದರಲ್ಲಿ ಜಪಾನ್ ದೇಶ ಭೂಕಂಪಕ್ಕೆ, ಸುನಾಮೀಗೆ ಗುರಿ ಆಗಿದೆ ಎಂದು ತೋರಿಸುತ್ತಿದ್ದಾರೆಂದು ಹೇಳಿದ್ದಾನೆ. ಆಗ ಟಿವಿ ಆನ್‌ಮಾಡಿ ನೋಡಿದರೆ

ನಾನು ಬರೆಯಬೇಕಾಗಿರುವುದು ಕಣ್ಣಿಗೆ ಪ್ರತ್ಯಕ್ಷವಾಗಿ ಕಾಣಿಸುತ್ತಿದೆ. ಅದಕ್ಕು ಹಿಂದಿನ ದಿನವೆ ಬೆರ್ಮುಡಾ ಟ್ರಯಾಂಗಿಲ್ ಏರಿಯಾವನ್ನು ಗ್ಲೋಬ್ ಮೇಲೆ ಪಕ್ಕದವರಿಗೆ ತೋರಿಸಿ, ಇದಕ್ಕೆ ಎದುರುಗಡೆ ಇರುವ ಕೆಳಗೆ ಇಂಡೋನೇಷಿಯಾದಿಂದ ಮೇಲೆ ಜಪಾನ್‌ವರೆಗಿರುವ ಪ್ರಾಂತದಲ್ಲಿ ಉಪದ್ರವ ನಡೆಯುವ ಅವಕಾಶವಿದೆ ಎಂದು ಹೇಳಿಕೊಂಡಿದ್ದೆವು. ಬೆರ್ಮುಡಾಟ್ರಯಾಂಗಿಲ್‌ನಲ್ಲಿ ಶಕ್ತಿ ಮನುಷ್ಯರ ಮೇಲೆ ಕೋಪಗೊಂಡಿದೆ. ಅದರ ದೃಷ್ಟಿ ಭೂಗರ್ಭದೊಳಗಿನಿಂದ ಬಂದು ಅದಕ್ಕೆ ಎದುರಾಗಿರುವ ಪ್ರಾಂತದ ಮೇಲೆ ಬೀಳುತ್ತದೆ. ಆದ್ದರಿಂದ ಯಾವಾಗಲೋ ಒಂದುಸಲ, ಅದಕ್ಕೆ ಎದುರಾಗಿರುವ ಪ್ರಾಂತದಲ್ಲಿ ಮಹಾ ಭೂತಗಳು ಉದ್ರೇಕಗೊಂಡು ಮನುಷ್ಯರನ್ನು ಹಿಂಸಿಸುತ್ತವೆಂದು ಹೇಳುವುದು ನಡೆದಿದೆ. ನಾವು ಆ ವಿಧವಾಗಿ ಹೇಳಿದ ಎರಡನೇ ದಿನವೇ ಜಪಾನ್ ಪ್ರಾಂತದ ಮೇಲೆ ಆ ಶಕ್ತಿಯ ಕೋಪವು ಕೆಲಸ ಮಾಡುತ್ತದೆಂದು ನಾವೂ ಸಹ ಊಹಿಸಲಿಲ್ಲ. ನಾವು ಟಿವಿ ನೋಡುತ್ತಿದ್ದಂತೆ ಹಿಂದಿನದಿನ ಬೆರ್ಮುಡಾ ಟ್ರಯಾಂಗಿಲ್‌ನನ್ನು ಕುರಿತು ಹೇಳಿದಾಗ ಕೇಳಿದ ಮನುಷ್ಯ ಬಂದು, ನೀವು ಹೇಳಿರುವುದು ಈ ದಿನವೇ ನಡೆದಿದೆ ಎಂದು ನಮ್ಮ ಹತ್ತಿರ ಹೇಳುವುದು ನಡೆದಿದೆ. ನಿಜಕ್ಕೆ ಈ ವಿಧವಾಗಿ ನಡೆಯುತ್ತದೆಂದು ಕೊಂಡಿದ್ದೆವು.. ಆದರೆ ಅಂದುಕೊಂಡ ಮಾರನೆಯ ದಿನವೇ ನಡೆಯುವುದು ನಮಗೆ ದೊಡ್ಡ ವಿಚಿತ್ರವಾಗಿ ತೋಚಿದೆ.

**"ತ್ರೈತಾಕಾರ ರಹಸ್ಯ"** ಎನ್ನುವ ಹೆಸರಿನಿಂದ ಬರೆಯುವ ಗ್ರಂಥವನ್ನು ಕುರಿತು ನನ್ನ ಹತ್ತಿರ ಜ್ಞಾನವನ್ನು ತಿಳಿದುಕೊಳ್ಳುವ ಮನುಷ್ಯರು ಕೇಳಿದಾಗ, ಅದನ್ನು ಕುರಿತು ಹೇಳುತ್ತಾ ಅದರಲ್ಲಿ ಹೆಚ್ಚಾಗಿ ಬೆರ್ಮುಡಾಟ್ರಯಾಂಗಿಲ್ ಬಗ್ಗೆ ಬರೆಯುವುದು ಇರುತ್ತದೆಂದು ಹೇಳಿದ್ದೇವೆ. ಬೆರ್ಮುಡಾಟ್ರಯಾಂಗಿಲ್ ಎಲ್ಲಿದೆಯೋ ಅರ್ಥವಾಗುವುದಕ್ಕೆ, ಭೂಗೋಳ ಚಿತ್ರವಿರುವ ಗ್ಲೋಬ್‌ನ್ನು ತೆಗೆದುಕೊಂಡು, ಅಟ್ಲಾಂಟಿಕ್ ಸಮುದ್ರದಲ್ಲಿ ಅಮೇರಿಕಾಗೆ ಪಕ್ಕದಲ್ಲಿರುವ ಟ್ರಯಾಂಗಿಲ್‌ನನ್ನು ಕುರಿತು ತೋರಿಸುತ್ತಾ ಬೆರ್ಮುಡಾ ಎನ್ನುವ ಸಣ್ಣ ದ್ವೀಪಕ್ಕೆ ಬಹಳ ಸಮೀಪವಾಗಿರುವುದರಿಂದ, ಆ ಪ್ರಾಂತವನ್ನು ಗುರುತಿಗಾಗಿ ಬೆರ್ಮುಡಾ

ಟ್ರಯಾಂಗಿಲ್ ಎನ್ನುವುದು ನಡೆದಿದೆಂದು, ಅಲ್ಲಿ ನಡೆಯುವ ಅಪಘಾತಗಳು ಅರ್ಥವಾಗದಿರುವವರು ಅಲ್ಲಿ ಯಾವುದೋ ದೆವ್ವ ಇದೆಯೆಂದು ಅದನ್ನು **"ಡೆವಿಲ್ ಯಾಂಗಲ್"** ಎಂದೂ ಸಹ ಅಂದಿದ್ದಾರೆಂದು ಹೇಳಿದ್ದೇವೆ. ತಿಳಿಯದವರು ಹಾಗೆ ಅಂದರೂ, ಅಲ್ಲಿ ದೆವ್ವ ಇಲ್ಲವೆಂದು, ದೈವಶಕ್ತಿ ಇದೆಯೆಂದು, ಆ ಶಕ್ತಿಯೇ ಅಲ್ಲಿ ನಡೆಯುವ ಕೆಲಸಗಳಿಗೆ ಕಾರಣವೆಂದು ಹೇಳಿದ್ದೇವೆ. ಅಷ್ಟೇ ಅಲ್ಲದೆ ಮನುಷ್ಯರಲ್ಲಿ ಅಜ್ಞಾನ ಹೆಚ್ಚಾದಂತೆಲ್ಲವೂ, ಆ ದೈವಶಕ್ತಿಗೆ ಮನುಷ್ಯರ ಮೇಲೆ ಬೇಸರವಾಗುತ್ತದೆಂದು, ಆದ್ದರಿಂದ ಆ ಯಾಂಗಿಲ್‌ಗೆ ಎದುರುಗಡೆಯಿರುವ ಭೂಭಾಗದಲ್ಲಿರುವ ಇಂಡೋನೇಷಿಯದಲ್ಲಿ ಒಂದುಬಾರಿ ಸುನಾಮಿ ಬಂದಿದೆ ಎಂದು, ಆದರೂ ಮನುಷ್ಯರಲ್ಲಿ ಬದಲಾವಣೆ ಬರಲಿಲ್ಲವೆಂದು, ಅಜ್ಞಾನ ಹೆಚ್ಚಾಗುತ್ತಾ ಜ್ಞಾನಕ್ಕೆ ಬೆಲೆಕೊಡದಂತೆ ಹೋಗುತ್ತಿದ್ದಾರೆಂದು, ಆದ ಕಾರಣ ಟ್ರಯಾಂಗಿಲ್‌ನಿಂದ ಮತ್ತೊಂದು ಬಾರಿ ಅಪಾಯ ಉಂಟಾಗಬಹುದೆಂದು ವಿವರಿಸಿದ್ದೇವೆ. ಆದರೆ ಅದು ಮರು ದಿನವೇ ನಡೆದಿದೆ.

ಈಗ ತಾಜಾವಾಗಿ ನಡೆದ ಜಪಾನ್ ವಿಧ್ವಂಸದ ನಂತರ ಕೆಲವು ಗಂಟೆಗಳಿಗೇ ಭೂಕಂಪಗಳನ್ನು ಕುರಿತು, ಸುನಾಮಿಗಳನ್ನು ಕುರಿತು ಬರೆ ಯುತ್ತಿದ್ದೇವೆ. ಈ ವಿಧವಾಗಿ ಸಾಮೂಹಿಕವಾಗಿ ಒಂದು ದೇಶದ ಪ್ರಜೆಗಳು ಹಿಂಸಿಸಲ್ಪಡಬೇಕಾಗಿ ಬಂದಾಗ, ಎಲ್ಲಾರ ಪಾಪಗಳನ್ನು ಒಂದೇ ಮೂಟೆಕಟ್ಟಿ, ಒಂದೇಬಾರಿ ಜಾರಿಮಾಡಿ ಅನುಭವಿಸುವಂತೆ ಮಾಡಬೇಕಾಗಿ ಬಂದಾಗ ಚಿಕ್ಕ ಗ್ರಹಗಳಲ್ಲದೆ, ಚಿಕ್ಕ ಭೂತಗಳಲ್ಲದೆ, ದೊಡ್ಡ ಭೂತಗಳ ಶಕ್ತಿಯೇ ಕೆಲಸ ಮಾಡುತ್ತದೆಂದು ತಿಳಿಯುತ್ತಿದೆ. ಪ್ರಕೃತಿಯಲ್ಲಿ ಮಹಾಭೂತಗಳು ಐದು ಇವೆ. ಅದರಲ್ಲಿ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವ ಮಹಾಭೂತಗಳಾಗಿ ಇವೆ. ಗಾಳಿ, ಅಗ್ನಿ, ಎನ್ನುವ ಎರಡು ಏಕವಾಗಿ ಒಂದೊಂದು ಬಾರಿ ಉದ್ರೇಕ ಗೊಂಡು ಪ್ರಜೆಗಳನ್ನು ಭಯಂಕರವಾಗಿ ಬಾಧಿಸಿ ಸಾಯಿಸುತ್ತವೆ. ಒಂದೊಂದು ಬಾರಿ ಗಾಳಿ, ನೀರು ಉದ್ರೇಕಗೊಳ್ಳುವುದರಿಂದಲೂ ಸಹ ಕೆಲವು ಪ್ರಾಂತಗಳು ಸಾಮೂಹಿಕವಾಗಿ ನರಕವನ್ನು ಅನುಭವಿಸುತ್ತವೆ. ಹಾಗೆಯೇ ಒಂದೊಂದು

ಬಾರಿ ನೀರು, ಭೂಮಿ ಉದ್ರೇಕಗೊಳ್ಳುವುದರಿಂದಲೂ ಸಹ ಈಗ ಜಪಾನ್‌ನಲ್ಲಿ ಏರ್ಪಟ್ಟಂತೆ ಭೂಕಂಪಗಳು, ಸುನಾಮಿಗಳು ಬಂದು ಪ್ರಜೆಗಳ ಪಾಪಗಳನ್ನು ಎಲ್ಲರೂ ಒಂದೇಸಲ ಅನುಭವಿಸುವಂತೆ ಮಾಡುತ್ತವೆ. ಒಂದೊಂದು ಬಾರಿ ಭೂಮಿ ಒಂದೇ ವಿಜೃಂಭಿಸುವುದರಿಂದ ಭೂಮಿ ಕಂಪಿಸಿ ಮನೆಗಳು ಬಿದ್ದುಹೋಗಿ ಎಷ್ಟೋ ಜನರಿಗೆ ಪ್ರಾಣನಷ್ಟ ನಡೆಯುತ್ತದೆ. ಪ್ರಕೃತಿಯಲ್ಲಿನ ಯಾವ ಒಂದು ಭಾಗವು ವಿಜೃಂಭಿಸಿದರೂ ಅದರ ದಾಳಿಗೆ ಮಾನವನು ನಿಲ್ಲಲಾರನು. ಪ್ರತಿ ನಾಲ್ವರಲ್ಲಿ ಒಬ್ಬರು ಮೇಧಾವಿಗಳಾಗಿರುವ ಜಪಾನ್‌ದೇಶವು ಅವರ ಮೇಧಾಶಕ್ತಿ, ಪ್ರಕೃತಿಶಕ್ತಿ ಮುಂದೆ ಸ್ವಲ್ಪವೂ ಸಹ ಕೆಲಸ ಮಾಡಲಿಲ್ಲ. ಪ್ರಕೃತಿಯಲ್ಲಿನ ಯಾವ ಒಂದು ಭಾಗವು ವಿಜೃಂಭಿಸಿದರು ಪ್ರಜೆಗಳಲ್ಲಿ ವಿಧ್ವಂಸವು ನಡೆದು ಹೋಗುತ್ತದೆ. ತಾಯಿ ಮುಂದೆ ಮಗಳು “ಅಮ್ಮಾ! ನನ್ನನ್ನು ಕಾಪಾಡು” ಎಂದು ಅರಚುತ್ತಿದ್ದರೂ, ತಾಯಿ ಮಗಳನ್ನು ಕಾಪಾಡಲಿಲ್ಲ, ಮಗಳು ತಾಯಿಯನ್ನು ಕಾಪಾಡಲಿಲ್ಲ. ಒಂದು ಮನೆಯವರು, ಒಂದು ಕುಟುಂಬದಲ್ಲಿರುವವರು ನಡೆಯುತ್ತಿರುವ ಪ್ರಕೃತಿ ಭೀಭತ್ಸದಲ್ಲಿ ಒಬ್ಬರನ್ನೊಬ್ಬರು ಕಾಪಾಡಿಕೊಳ್ಳದೆ, ಒಬ್ಬರ ಆರ್ತನಾದಗಳು ಮತ್ತೊಬ್ಬರು ಕೇಳುತ್ತಾ ನಿಸ್ಸಹಾಯಕರಾಗಿ ಮರಣಿಸಬೇಕಾಗಿದ್ದೇ. ಇದಕ್ಕೆಲ್ಲ ಕಾರಣ ಮನುಷ್ಯರು ಮಾಡಿಕೊಂಡ ಪಾಪವೇ!

ಭೂಮಿಮೇಲೆ ಅಟ್ಲಾಂಟಿಕ್ ಸಮುದ್ರದಲ್ಲಿರುವ ಬೆರ್ಮುಡಾ ಟ್ರಯಾಂಗಿಲ್ ಶಕ್ತಿ ಮೊದಲು ಇಂದೂ ಮಹಾಸಮುದ್ರದಲ್ಲಿತ್ತು. ಅದೇ ರಾವಣ ಬ್ರಹ್ಮನಾಗಿ ಜನ್ಮ ತೆಗೆದುಕೊಂಡಿದೆ ಎಂದು ಸಹ ಹೇಳಿದ್ದೇವೆ. ಆ ದಿನ ಮಾನವನಿಗೆ ಒಳ್ಳೆಯ ಮಾರ್ಗವನ್ನು ತೋರಿಸುವುದಕ್ಕೆ, ಆಧ್ಯಾತ್ಮಿಕ ವಿದ್ಯೆಯಲ್ಲಿ ಆಸಕ್ತಿಯನ್ನು ಕಲ್ಪಿಸುವುದಕ್ಕೆ, ಜ್ಞಾನ ಯೋಗಗಳ ನಮೂನೆ ತೋರಿಸುವುದಕ್ಕೆ ರಾವಣಬ್ರಹ್ಮ ಹುಟ್ಟಿದ್ದಾನೆ. ಆತನು ಬ್ರಹ್ಮವಿದ್ಯೆಗೆ ತಾರ್ಕಾಣವಾಗಿ ನಿಂತು ತೋರಿಸಿದರೂ, ಕೊನೆಗೆ ಮನುಷ್ಯ ರಾವಣಬ್ರಹ್ಮನನ್ನೂ ಸಹ ಕೆಟ್ಟದಾಗಿ ಚಿತ್ರಿಸಿ ಹೇಳಿಕೊಳ್ಳುವುದು, ಪಾಪಗಳನ್ನು ಮಾಡುವುದರಲ್ಲಿಯೇ ಮುಳುಗಿಹೋಗುವುದು ನಡೆದಿದೆ. ಮನುಷ್ಯ ತ್ರೇತಾಯುಗದಿಂದ ಕಲಿಯುಗದವರೆಗೂ ಬರುಬರುತ್ತಾ ಅಜ್ಞಾನಿಯಾಗಿ

ಬದಲಾಗಿ, ಆಧ್ಯಾತ್ಮಿಕ ವಿದ್ಯೆಯನ್ನು ಸ್ವಲ್ಪವೂ ಸಹ ಗುರುತಿಸದೆ, ಆ ವಿದ್ಯೆ ತಿಳಿದುಕೊಂಡ ಯೋಗಿಗಳನ್ನು ಸಹ ಹೇಳನ ಮಾಡುತ್ತಿದ್ದಾರೆ. ಎಲ್ಲದಕ್ಕೂ ಶಕ್ತಿಯನ್ನು ಕೊಡುವ ದೈವಶಕ್ತಿಗಿಂತ ತನ್ನ ಮೇಧಾಶಕ್ತಿಯೇ ದೊಡ್ಡದೆಂದುಕೊಂಡು, ಯಾವ ಕೋನದಲ್ಲಾಗಲಿ ದೈವದ ಮೇಲೆ ವಿಧೇಯತೆ ಇಲ್ಲದ ಮನುಷ್ಯರಾಗಿ ಬದಲಾಗುವುದನ್ನು ತ್ರೈತಾಕಾರಶಕ್ತಿ, ಸಹಿಸಿಕೊಳ್ಳದೆ ಹೋಗುತ್ತಿದೆ. ಆದ್ದರಿಂದ ಪ್ರಕೃತಿಯಲ್ಲಿನ ಭೂತಗಳಿಗು, ಗ್ರಹಗಳಿಗು, ಉಪಗ್ರಹಗಳಿಗು, ಉಪಭೂತಗಳಿಗೂ ಕೇಂದ್ರವಾಗಿರುವ ತ್ರೈತಾಕಾರಶಕ್ತಿ ಮಾನವರಿಗೆ ದೈವಶಕ್ತಿಯ ಬಲವೇನೋ ತೋರಿಸಬೇಕೆಂದುಕೊಂಡಿದೆ. ಆದ್ದರಿಂದ ವಿಕೃತಿನಾಮ ವರ್ಷದಿಂದ ಗ್ರಹಗಳಿಂದ, ಭೂತಗಳಿಂದ ಮನುಷ್ಯರಲ್ಲಿ ವಿಧ್ವಂಸವು ಸೃಷ್ಟಿಸಬೇಕೆಂದುಕೊಂಡಿದೆ. ಕ್ರಿ॥ಶ॥ 2010ನೇ ವರ್ಷದಿಂದ (ವಿಕೃತನಾಮ ವರ್ಷದಿಂದ) ಬಿಸಿಲು, ಮಳೆ, ಚಳಿ, ಗಾಳಿ, ಎಲ್ಲವೂ ಹೆಚ್ಚಾಗುವುದಲ್ಲದೆ, ಭೂಕಂಪಗಳು, ತುಫಾನುಗಳೂ, ಸುನಾಮಿ ಗಳೂ, ಅಗ್ನಿಪರ್ವತಗಳು ಎಲ್ಲವೂ ಹೆಚ್ಚಾಗುವುದಕ್ಕೆ ಅವಕಾಶ ಇದೆಯೆಂದು ಕಳೆದ ವರ್ಷವೆ ಹೇಳಿಕೊಂಡಿದ್ದೇವೆ. ಭೂಮಿಮೇಲೆ ಎಲ್ಲಾ ಉಪದ್ರವಗಳು ಹೆಚ್ಚಾಗಿ ಮನುಷ್ಯರು ನಾಶವಾಗುವುದಕ್ಕೆ ಅವಕಾಶ ಇದೆಯೆಂದು, ಬರುವ ವಿಪತ್ತನ್ನು ಗಮನಿಸಿ, ಲೋಕಕ್ಕೆ ಭವಿಷ್ಯತ್ತು ಹೇಳಿ ಕಾಲಜ್ಞಾನವನ್ನು ಬರೆದ ವೀರಬ್ರಹ್ಮಯ್ಯರವರ ಕಲ್ಲಿನ ಪ್ರತಿಮೆಯಿಂದ ಕಣ್ಣೀರು ಬಂದಿದೆ. ಅನಂತಪುರ ಜಿಲ್ಲೆ, ಧರ್ಮವರಂನಲ್ಲಿ ಬ್ರಹ್ಮಯ್ಯರವರ ಪ್ರತಿಮೆಗೆ ಒಂದು ದಿನವೆಲ್ಲವೂ ನೀರು ಸೋರುವುದು ಬಹಳ ಜನರು ನೋಡಿದ್ದಾರೆ. ಆದರೆ ಏಕೆ ಹಾಗೆ ನಡೆಯುತ್ತಿ ದೆಯೋ ನೋಡಿದವರಿಗೆ ಯಾರಿಗೂ ತಿಳಿದಿಲ್ಲ.

ಇಂದೂ ಮಹಾಸಮುದ್ರದಲ್ಲಿರುವ ಶಕ್ತಿ ಈಗ ಕೆಲವು ವರ್ಷಗಳಿಂದ ಬೆರ್ಮುಡಾ ದ್ವೀಪದ ಹತ್ತಿರಕ್ಕೆ ಹೋಗಿದೆ. ಇಂದೂ ಮಹಾಸಮುದ್ರದಲ್ಲಿರುವ ಶಕ್ತಿ ದಕ್ಷಿಣ ಭಾರತದೇಶದಲ್ಲಿ ದೈವಜ್ಞಾನವನ್ನು ಸ್ಥಾಪಿಸಿ ಇಂದೂ ಧರ್ಮಗಳನ್ನು ತಿಳಿಸುವಂತೆ ದೇವಾಲಯಗಳನ್ನು ಸಹ ಸೃಷ್ಟಿಸಿದೆ. ಆದ್ದರಿಂದ ಪ್ರಪಂಚದಲ್ಲಿಯೇ ಎಲ್ಲಿಯೂ ಇಲ್ಲದ ದೈವ ಧರ್ಮಗಳನ್ನು ತಿಳಿಸುವ ದೇವಾಲಯಗಳು ದಕ್ಷಿಣ

ಭಾರತದೇಶದಲ್ಲಿ ಇವೆ. ಅಷ್ಟೇ ಅಲ್ಲದೆ ಒಟ್ಟಾರೆ ಪ್ರಪಂಚದಲ್ಲಿಯೆ ದೈವಜ್ಞಾನ ತಿಳಿಯದೆ ಅಧರ್ಮಗಳನ್ನು ಆಚರಿಸುವವರು ತಯಾರಾದರೂ, ಒಂದೇ ಒಂದು ಭಾರತದೇಶದಲ್ಲಿ ಅದೂ ದಕ್ಷಿಣ ಭಾರತದೇಶದಲ್ಲಿಯೆ ಧರ್ಮಗಳು ಸಜೀವವಾಗಿದ್ದು ಪುನಃ ಪುನರುದ್ಧರಿಸಲ್ಪಡುವುದಕ್ಕೆ ಅವಕಾಶ ಇದೆ. ಹಾಗೆ ನಡೆಯುವುದಕ್ಕೆ, ದಕ್ಷಿಣ ಭಾರತದೇಶದಲ್ಲಿ ಧರ್ಮಗಳು ಉಳಿದಿರುವುದಕ್ಕೆ ಕಾರಣ ಬೆರ್ಮುಡಾ ಟ್ರಯಾಂಗಿಲ್‌ನಲ್ಲಿರುವ ದೈವಶಕ್ತಿಯವೊಂದು ದೃಷ್ಟಿ, ದಕ್ಷಿಣ ಭಾರತದೇಶದ ಮೇಲೆ ಇರುವುದೇ ಎಂದು ಹೇಳಬಹುದು. ದೈವಕ್ಕೆ ವಿರೋಧಿ ಗಳಾದವರನ್ನು ತನ್ನ ಭೂತಗಳಿಂದ, ಗ್ರಹಗಳಿಂದ ನಂತರ ಜನ್ಮಗಳಲ್ಲಿ ನರಕಗಳನ್ನು ಅನುಭವಿಸುವಂತೆ ಮಾಡುತ್ತಿವೆ. ಈ ದಿನ ಸುನಾಮಿಗಳೂ, ಭೂಕಂಪಗಳು ಒಂದು ಪ್ರಾಣಾಳಿಕೆ ಪ್ರಕಾರವೇ ನಡೆಯುತ್ತಿವೆ. ಅಪಾಯ ಬಂದಾಗ ದೇವರನ್ನು ಬೇಡಿಕೊಂಡರೂ, ಆತನ ಪಾಲನೆಯಲ್ಲಿರುವವರು ಮಾತ್ರ ಬಿಡುವುದಿಲ್ಲ. **ದೇವರು ಅಪಾಯದಲ್ಲಿ ಕೈ ಮುಗಿಸಿಕೊಳ್ಳುವವನು ಅಲ್ಲ. ಒಂದುವೇಳೆ ಸುನಾಮಿ ಬಂದಾಗಲೋ, ಭೂಕಂಪ ಬಂದಾಗಲೋ ದೇವರನ್ನು ಬೇಡಿಕೊಂಡರೂ, ದೇವರು ತನ್ನ ಪರಿವಾರವಾದ ಮಹಾಭೂತಗಳನ್ನೇ ಸಮರ್ಥಿಸುತ್ತಾನಾಗಲಿ ಆಪತ್ತಿನಲ್ಲಿ ಕೈ ಮುಗಿಯುವ ಅಜ್ಞಾನಿಗಳನ್ನು ಸಮರ್ಥಿಸುವುದಿಲ್ಲ**. ಮನುಷ್ಯರು ಮಾಡಿದ ಪ್ರತಿ ಪಾಪ, ಪ್ರತಿ ತಪ್ಪನ್ನು ಮರೆತುಹೋಗದ ಗ್ರಹಗಳಾಗಲಿ, ಭೂತಗಳಾಗಲಿ, ಅವನ ತಪ್ಪನ್ನು ಗುರುತುಮಾಡಿಕೊಂಡು ಅವನನ್ನು ಬಾಧಿಸುತ್ತಾರೆ.

1950 ರಿಂದ ಮನುಷ್ಯರು ವಿಜ್ಞಾನದಲ್ಲಿ ಅಭಿವೃದ್ಧಿಯಾಗುತ್ತಾ ಅಜ್ಞಾನದೊಳಗೆ ಮುಳಗಿದ್ದಾರೆ. ದೈವಜ್ಞಾನದ ಮೇಲೆ ಸ್ವಲ್ಪವೂ ಸಹ ಧ್ಯಾಸ ಇಲ್ಲದಂತೆ ಹೋಗಿದೆ. ಅಷ್ಟೇ ಅಲ್ಲದೆ ಕೆಲವರು ದೇವಾಲಯಗಳನ್ನು ಆದಾಯ ಕೇಂದ್ರಗಳಾಗಿ ಬದಲಾಯಿಸಿಕೊಂಡಿದ್ದಾರೆ. ಕೆಲವರು ಮತ ಛಾಂದಸವಾದಿಗಳಾಗಿ ಜ್ಞಾನಿಗಳನ್ನೇ ಅವಮಾನಿಸುತ್ತಿದ್ದಾರೆ. ಅಂತಹವನಿಗೆ ನಾವು ಹೇಳುವ ದೈವಜ್ಞಾನವೂ ಸಹ ಅರ್ಥವಾಗದೆ, ನಮ್ಮನ್ನು ಸಹ ನಿಂದಿಸುವ ಸ್ಥಿತಿಗೆ ಬಂದಿದ್ದಾರೆ. ನಾವು ಜ್ಞಾನ ಎನ್ನುವ ಅರ್ಥದಿಂದ **“ಇಂದೂ”** ಎನ್ನುವ ಪದವನ್ನು

ಹೇಳಿದರೆ, ಹೇಳಿರುವುದು ಅರ್ಥಮಾಡಿಕೊಳ್ಳದೆ, ಆ ಪದವನ್ನು ಬದಲಾಯಿಸಿ ರೆಂದು ನಮ್ಮನ್ನೇ ಹೆದರಿಸುವ ಸ್ಥಾಯಿಗೆ ಮತ ಛಾಂದಸವಾದಿಗಳು ತಯಾರಾಗಿ ದ್ದಾರೆ. ಒಂದು ವಿಧವಾಗಿ ಅಲ್ಲದೆ ಎಲ್ಲಾ ವಿಧಗಳಲ್ಲಿ ಮನುಷ್ಯ ಅಜ್ಞಾನದಲ್ಲಿ ಕೂರಿಕೊಂಡುಹೋಗಿ, ದೈವವನ್ನೇ ಧಿಕ್ಕರಿಸುವ ಸ್ಥಾಯಿಗೆ ಬಂದಿದ್ದಾನೆ. ಆದ್ದರಿಂದ ದೇವರು ತನ್ನ ಪರಿಪಾಲನೆಯಲ್ಲಿನ ಸೈನಿಕರಾದ ಮಹಾಭೂತಗಳ ಮೂಲಕ ಭೂಕಂಪಗಳು, ಸುನಾಮಿಗಳನ್ನು ಸೃಷ್ಟಿಸಿ ಮಾನವನನ್ನು ಶಿಕ್ಷಿಸುತ್ತಿದ್ದಾನೆ. ಇಷ್ಟು ನಡೆಯುತ್ತಿದ್ದರೂ ತನ್ನ ತಿಳುವಳಿಕೆಯನ್ನು ದೈವ ಜ್ಞಾನವನ್ನು ಪರಿಶೋಧಿಸುವುದಕ್ಕೆ ಉಪಯೋಗಿಸಿ ಅಸಲು ಕಾರಣವನ್ನು ತಿಳಿದುಕೊಳ್ಳದೆ, ಪ್ರಪಂಚಜ್ಞಾನದಲ್ಲಿಯೇ ಇಟ್ಟು, ಪ್ರಪಂಚ ಜ್ಞಾನದ ಪರಿಶೋಧನೆಗಳೇ ಮಾಡಿ ಸುನಾಮಿಗಳು, ಭೂಕಂಪ ಗಳು ಹೀಗೆ ಬರುತ್ತಿವೆ ಎಂದು ವಿವರವನ್ನು ಹೇಳುತ್ತಿದ್ದಾನೆ, ಆದರೆ ಏಕೆ ಬರುತ್ತಿವೆಯೋ ತಿಳಿದುಕೊಳ್ಳದೆ ಹೋಗುತ್ತಿದ್ದಾನೆ. ಬಂದಿರುವುದಕ್ಕೆ ವಿವರವನ್ನು ಹೇಳುವವನು ಅದಕ್ಕೆ ಕಾರಣವನ್ನು ಹೇಳಲಾರದೆ ಹೋಗುತ್ತಿದ್ದರೂ, ಹೇಳಿದ ವಿವರವೂ ಸಹ ಸರಿಯಾಗಿಲ್ಲವೆಂದು ಗಮನಿಸಲಾರದೆ ಹೋಗುತ್ತಿದ್ದಾನೆ. ಬಂದಿರುವುದಕ್ಕೆ ವಿವರ ಹೇಳಬೇಕೆಂದರೂ, ಹಾಗೆಯೇ ಬಂದಿರುವುದಕ್ಕೆ ಕಾರಣವನ್ನು ಹೇಳಬೇಕೆಂದರೂ, ಆತನು ಆರನೇ ಶಾಸ್ತ್ರವಾದ ಬ್ರಹ್ಮವಿದ್ಯಾ ಶಾಸ್ತ್ರವನ್ನು ತಿಳಿದಿರಬೇಕು. ಬ್ರಹ್ಮವಿದ್ಯಾಶಾಸ್ತ್ರ ತಿಳಿಯದವನಿಗೆ ಸ್ಥೂಲವೆ ಕಾಣಿಸುತ್ತದೆ, ಆದರೆ ಅದರಹಿಂದೆ ಇರುವ ಸೂಕ್ಷ್ಮವಾದ ಶಕ್ತಿ ಕಾಣಿಸುವುದಿಲ್ಲ. ಆದ್ದರಿಂದ ಆರನೆಶಾಸ್ತ್ರವನ್ನು ತಿಳಿಯದವರು ಸುನಾಮಿಗಾಗಲಿ, ಭೂಕಂಪಕ್ಕಾಗಲಿ, ಪ್ರಕೃತಿ ವೈಪರೀತ್ಯಕ್ಕಾಗಲಿ, ಯಾವುದಕ್ಕಾಗಲಿ ವಿವರವನ್ನು ಹೇಳಲಾರರು, ಕಾರಣವನ್ನೂ ಹೇಳಲಾರರು.

ಭೂಕಂಪ ಬಂದಾಗ ಆ ಸಮಯದಲ್ಲಿ ವೀಡಿಯೋ ತೆಗೆದವರಿದ್ದಾರೆ. ಆ ವೀಡಿಯೋ ಚಿತ್ರಗಳನ್ನು ನೋಡಿದರೆ ಕಾಣಿಸುವ ದೃಶ್ಯಗಳು ನಮ್ಮನ್ನು ಸ್ವಲ್ಪ ಆಲೋಚನೆ ಮಾಡುವ ವಿಷಯಗಳಾಗಿರುತ್ತವೆ. ಮಾರ್ಚ್ 11, 2011ನೇ ತಾರೀಖು ಜಪಾನ್‌ನಲ್ಲಿ ಭೂಕಂಪ ಬಂದಾಗ, ಒಂದು ಆಫೀಸ್‌ನಲ್ಲಿ ಆ

ಸಮಯಕ್ಕೆ ವೀಡಿಯೋ ಕೆಮೆರಾ ಆನ್‌ನಲ್ಲಿರುವುದರಿಂದ ಅಲ್ಲಿನ ದೃಶ್ಯಗಳನ್ನು ನೋಡಿದ್ದೇವೆ. ಅಲ್ಲಿ ಟೇಬುಲ್ಸ್ ಮೇಲೆ ಕಂಪ್ಯೂಟರ್‌ಗಳು ಕದಲುವುದು, ಉಳಿದ ಸಾಮಾನುಗಳು ಕದಲುವುದು ಕಾಣಿಸುತ್ತಿದೆ. ಟೇಬಲ್ ಮೇಲೆ ಕಂಪ್ಯೂಟರ್ ಮುಂದಕ್ಕೂ ಹಿಂದಕ್ಕೂ ಕದಲುತ್ತಾ ಕೊನೆಗೆ ಕೆಳಗೆ ಬಿದ್ದುಹೋಗಿದೆ. ಅದು ಕದಲಿರುವುದನ್ನು ಅನುಸರಿಸಿ ಆ ಭವನವೂ ಸಹ ಮುಂದಕ್ಕೂ, ಹಿಂದಕ್ಕೂ ತೂಗಾಡುತ್ತಿದೆ ಎಂದು ಅರ್ಥವಾಗುತ್ತಿದೆ. ಮಾರ್ಚ್ 11, 2011ನೇ ತಾರೀಖು ನಡೆದ ಜಪಾನ್ ಸಂಘಟನೆಯಲ್ಲಿಯೇ ಅಲ್ಲದೆ, ಬಹಳಕಡೆ ನಡೆದ ಭೂಕಂಪಗಳಲ್ಲಿ ಮನೆಗಳಲ್ಲಿ ಕದಲಿದ ವಸ್ತುಗಳನ್ನು ನೋಡಿದರೆ ಅವು ಮುಂದಕ್ಕೂ, ಹಿಂದಕ್ಕೂ ತೂಗಾಡುತ್ತಿರುವಂತೆ ತಿಳಿಯುತ್ತಿದೆ. ಹಾಗೆ ಆ ವಸ್ತುಗಳು ತೂಗುವುದನ್ನು ನೋಡಿದರೆ ಭೂಮಿ ಎರಡು ಕಡೆಗಳಿಗೂ ಅಲುಗಾಡಿದಾಗಲೇ ಹಾಗೆ ನಡೆಯ ಬಹುದು. ಆದರೆ ಭೂಕಂಪ ಪರಿಶೋಧಕರು ಹೊರಡಿಸಿದ ಸಮಾಚಾರದ ಪ್ರಕಾರ, ಭೂಮಿಯಲ್ಲಿ ಕದಲಿಕೆಗಳು ಬಂದಾಗ ಆ ಕದಲಿಕೆಯೇ ಮೇಲಿನವರೆಗೂ ಬಂದು ಭೂಮಿ ಕದಲುತ್ತಿದೆ. ಹಾಗೆ ಭೂಮಿ ಕದಲುವುದನ್ನೇ ಭೂಕಂಪಗಳು ಎನ್ನುತ್ತಿದ್ದೇವೆ ಎಂದು ತಿಳಿಸುತ್ತಿದ್ದಾರೆ. ಭೂಮಿಯಲ್ಲಿ ಕದಲಿಕೆಗಳು ಏಕೆ ಬರುತ್ತಿವೆ ಎಂದು ಕೇಳಿದರೆ ಅದಕ್ಕೆ ಉತ್ತರವಾಗಿ, ಭೂಮಿಯಲ್ಲಿ ಎಲ್ಲಿಯಾದರು ಖಾಲಿಯಾದ ಪ್ರದೇಶದಿಂದ ಅದು ಬಿದ್ದುಹೋದಾಗಾಗಲಿ, ಹಾಗೆ ಇಲ್ಲದಿದ್ದರೆ ಭೂಮಿಯಲ್ಲಿ ಕಲ್ಲುಬಂಡೆಯ ಮಧ್ಯದಲ್ಲಿ ಖಾಲಿ ಇರುವಾಗ ಆ ಕಲ್ಲುಬಂಡೆಗಳ ಖಾಲಿ ಪ್ರದೇಶದೊಳಗೆ ನುಸುಳಿ ಹೋದಾಗಾಗಲಿ ಏರ್ಪಡುವ ಕದಲಿಕೆ ಕೊನೆಗೆ ಭೂಮಿ ಮೇಲಕ್ಕೆ ಬರುವುದನ್ನು ಭೂಕಂಪ ಎನ್ನುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅಷ್ಟೇ ಅಲ್ಲದೆ ಕೆಲವರು ಉಳಿದ ಕಾರಣಗಳನ್ನು ಸಹ ಹೇಳುತ್ತಿದ್ದಾರೆ. ಅವರು ಹೇಳಿರುವುದು ಸತ್ಯವೇ ಆದರೂ, ಅವರು ಹೇಳುವ ಕದಲಿಕೆಗಳು ಭೂಮಿಮೇಲೆ ಬೇರೆ ವಿಧವಾಗಿ ಇರಬೇಕು. ಮುಂದಕ್ಕೂ ಹಿಂದಕ್ಕೂ ಅಲ್ಲಾಡಿಸಿದಂತೆ ಇರಬಾರದು. ಭೂಮಿಯಲ್ಲಿ ಎಷ್ಟೋ ಆಳದಲ್ಲಿ ನಡೆದೆ ಕದಲಿಕೆ ಭೂಮಿಮೇಲಕ್ಕೆ ಬರುವಷ್ಟರಲ್ಲಿ ಆ ಕದಲಿಕೆಯ ವೇಗವು ಕಡಿಮೆಯಾಗಬೇಕು. ಭೂಮಿಯೊಳಗೆ ನಡೆದ ಕದಲಿಕೆ ಹೊರಗೆ ಬರುವಷ್ಟರಲ್ಲಿ ಪಕ್ಕಭೂಮಿಯ ಒತ್ತಡದಿಂದ ಕದಲಿಕೆ

ಶಕ್ತಿ, ಕದಲಿಕೆ ವೇಗವು ಕಡಿಮೆಯಾಗುತ್ತಾ ಬರಬೇಕು. ಒಂದುವೇಳೆ ಆ ಕದಲಿಕೆ ಮೇಲಿನವರೆಗೂ ಬಂದರೂ ಆದು ಯಾವುದೋ ಒಂದು ಪಕ್ಕಕ್ಕೆ ಮಾತ್ರವೆ ಇರಬೇಕು, ಆದರೆ ಎರಡು ಕಡೆಯಲ್ಲಿಯೂ ಇರುವುದರಿಂದ ಸ್ವಲ್ಪ ಆಲೋಚಿಸಬೇಕಾಗಿ ಬರುತ್ತಿದೆ. ಪರಿಶೋಧಕರು ಹೇಳುವಮಾತು ನಿಜವೇನಾ ಎಂದು ಪ್ರಶ್ನಾರ್ಥಕವಾಗುತ್ತಿದೆ.

ಭೂಕಂಪ ಬರುತ್ತಿರುವುದು ವಾಸ್ತವವೇ, ಭವನಗಳು ಮುಂದಕ್ಕೂ ಹಿಂದಕ್ಕೂ ಕದಲುತ್ತಿರುವುದು ನಿಜವೇ. ಆದರೆ ಪರಿಶೋಧಕರು ಹೇಳುವ ಮಾತಿನ ಪ್ರಕಾರ ನಡೆಯುತ್ತಿದೆಯಾ? ಅಥವಾ ಬೇರೆ ವಿಧವಾಗಿ ನಡೆಯುತ್ತಿದೆಯಾ? ಎನ್ನುವ ಪ್ರಶ್ನೆಗಳು ಉಳಿದುಹೋಗುತ್ತಿವೆ. ಅಷ್ಟೇ ಅಲ್ಲದೆ ಮತ್ತೊಂದು ಪ್ರಶ್ನೆಯೂ ಸಹ ಈ ವಿಧವಾಗಿದೆ. ಭೂಮಿಹುಟ್ಟಿ ಎಷ್ಟೋ ಕೋಟಿ ವರ್ಷಗಳಾಗಿದೆ ಅಲ್ಲವೆ! ಆಗಿನಿಂದ ಇಲ್ಲಿಯವರೆಗೂ ಭೂಕಂಪಗಳು ಬರುತ್ತಲೆ ಇವೆಯಲ್ಲವೆ! ಭವಿಷ್ಯತ್ತಿನಲ್ಲಿ ಸಹ ಭೂಕಂಪಗಳು ಬರುವುದಿಲ್ಲವೆಂದು ಹೇಳಲಾರೆವು ಅಲ್ಲವೆ! ಅಂತಹದರಲ್ಲಿ ಭೂಮಿಯೊಳಗೆ ಇನ್ನೂ ಎಷ್ಟು ಖಾಲಿ ಸ್ಥಳಗಳಿವೆ? ಮೊದಲು ಎಷ್ಟು ಖಾಲಿ ಸ್ಥಳಗಳು ಇದ್ದವು? ಆ ಲೆಕ್ಕದ ಪ್ರಕಾರ ಹೋದರೆ ಭೂಮಿ ಎಲ್ಲವೂ ಟೊಳ್ಳಾಗಿ ಇದೆಯಾ? ಎನ್ನುವ ಮೊದಲಾದ ಪ್ರಶ್ನೆಗಳು ಬರುತ್ತವೆ. ನಾನು ಕೇಳುವ ಪ್ರಶ್ನೆಗಳೆಲ್ಲವೂ ಸಮಂಜಸವಾದವುಗಳೇ ಅಂದುಕೊಳ್ಳುತ್ತೇನೆ. ಇನ್ನು ಸುನಾಮಿಗಳ ವಿಷಯಕ್ಕೆ ಬಂದರೆ ಅವುಗಳಲ್ಲಿ ಸಹ ಕೆಲವು ಪ್ರಶ್ನೆಗಳು ಉತ್ಪನ್ನವಾಗುತ್ತಿವೆ. ನಾವು ಪರಿಶೋಧಕರು ಅವುಗಳ ಮೇಲೆ ಪೂರ್ತಿ ಪರಿಶೋಧನೆ ಮಾಡಿ ಹೇಳುತ್ತಿದ್ದೇವೆಂದರೂ, ಅವರು ಹೇಳಿದಂತೆ ಕುರುಡರಂತೆ ನಂಬಿದರೆ ಅವು ಮೂಢನಂಬಿಕೆಗಳಾಗುತ್ತವೆ. ಆದ್ದರಿಂದ ಅವುಗಳನ್ನೂ ಸಹ ಪ್ರಶ್ನಿಸಿ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಸಮುದ್ರದಲ್ಲಿ ಭೂಕಂಪಗಳು ಬಂದಾಗ ಸುನಾಮಿಗಳು ಬರುತ್ತಿವೆ ಎಂದು ಹೇಳುತ್ತಿದ್ದಾರೆ. ಹಾಗೆಯೇ ಭೂಮಿ ಮೇಲೆ ಬಂದರೆ ಭವನಗಳು ಬಿದ್ದುಹೋಗುತ್ತಿವೆ. ಭೂಮಿಮೇಲೆ ಬರುವ ಭೂಕಂಪಗಳು ಭವನಗಳನ್ನು ಬೀಳುವಂತೆ ಮಾಡುವುದು ನೋಡಿದ ವಿಷಯವೇ,

ಅದೇ ಸಮುದ್ರದಲ್ಲಿನ ಭೂಮಿಯಲ್ಲಿ ಭೂಕಂಪ ಬಂದರೆ ನೀರಿನಲ್ಲಿ ಸುನಾಮಿ ಬರುತ್ತದೆ. ಮಾರ್ಚ್ 11, 2011ನೇ ತಾರೀಖು ಜಪಾನ್ ಹತ್ತಿರ ಬಂದಿರುವ ಸುನಾಮಿ ಗಂಟೆಗೆ 800 ಕಿಲೋಮೀಟರ್‌ಗಳ ವೇಗದಿಂದ, ನೀರು 30 ಅಡಿಗಳ ಎತ್ತರದಲ್ಲಿ ಭೂಮಿ ಮೇಲಕ್ಕೆ ಬಂದಿದೆ ಎಂದು, ಆ ಒತ್ತಡಕ್ಕೆ ಟೋಕಿಯೋ ನಗರವು ಶಿಥಿಲಾವಸ್ಥೆಗೆ ಸೇರಿಕೊಂಡಿದೆಂದು ಹೇಳಿದ್ದಾರೆ. ಸುನಾಮಿ ಅಷ್ಟು ಬಲವಾಗಿ, ಅಷ್ಟು ವೇಗವಾಗಿ ಬರುವುದಕ್ಕೆ ಸಮುದ್ರದಲ್ಲಿನ ಭೂಕಂಪವೇ ಕಾರಣವಾದರೆ, ಸಮುದ್ರವನ್ನು ಅಷ್ಟಾಗಿ ಕದಲಿಸುವುದಕ್ಕೆ, ನೀರನ್ನು ಅಷ್ಟು ಅಡಿಗಳ ಎತ್ತರ ಮಾಡುವುದಕ್ಕೆ ಬೇಕಾದ ಶಕ್ತಿ ಹೊರಗೆ ಬರುವ ಭೂಕಂಪದಲ್ಲಿ ಕಾಣಿಸುವುದಿಲ್ಲ. ಹೊರಗೆ ಬರುವ ಭೂಕಂಪದಲ್ಲಿ ಹೊರಗೆ ಭೂಮಿ ಕುಗ್ಗಿ ಹೋಗುತ್ತಿದೆಯಾಗಲಿ, ಭೂಮಿ ಮೇಲಕ್ಕೆ ಬರುತ್ತಿಲ್ಲ. ಸಮುದ್ರದಲ್ಲಿ ಭೂಮಿ ಕುಗ್ಗಿಹೋದರೆ ನೀರು ಒಳಗೆ ಹೋಗಬೇಕಾಗಲಿ, ಮೇಲಕ್ಕೆ ಎತ್ತರವಾಗಿ ಏಕೆ ಏಳುತ್ತಿದೆಯೋ? ಭೂಮಿ ಕಂಪನಗಳು ಭಾರವಾದ ಭವನಗಳನ್ನು ಕದಲಿಸುತ್ತಿವೆ. ಕೆಲವುಕಡೆ ಕೆಲವು ಭವನಗಳು ಬಿದ್ದು ಹೋಗುತ್ತಿವೆ. ಕೆಲವು ಪ್ರಾಂತಗಳಲ್ಲಿ ಕಟ್ಟಡಗಳು ಬಿದ್ದುಹೋಗದಂತೆ ನಿಂತಿವೆ. ಭವನಗಳನ್ನು ಕದಲಿಸುವ ಬಲವನ್ನು ನೋಡಿದ ನಂತರ, ಆ ಬಲವು ಸ್ವಲ್ಪ ನೀರನ್ನು ಕದಲಿಸಬಹುದಾಗಲಿ, ನೀರನ್ನು ಎತ್ತರಕ್ಕೆ ಎಬ್ಬಿಸಲಾರದು. ಭವನಗಳನ್ನು ಕದಲಿಸುವ ಬಲವು ನೀರನ್ನು ತಳ್ಳಬಹುದು, ಆದರೆ ಆ ಬಲವು ಕೆಲವು ನೂರಾರು ಕಿಲೋಮೀಟರ್‌ಗಳ ವೇಗದಿಂದ ನೀರನ್ನು ತಳ್ಳಲಾರದು. ಅಂತಹದರಲ್ಲಿ ಸಮುದ್ರದಲ್ಲಿನ ನೀರಿಗೆ ಅಷ್ಟು ವೇಗ ಹೇಗೆ ಬಂದಿದೆ? ಎನ್ನುವ ವಿಷಯವೂ ಸಹ ಪ್ರಶ್ನೆಯಾಗಿಯೇ ಉಳಿದು ಹೋಗುತ್ತದೆ.

ಮಾರ್ಚ್ 11, 2011ನೇ ತಾರೀಖು ಜಪಾನ್‌ನಲ್ಲಿ ಸಮುದ್ರ 30 ಅಡಿಗಳ ಎತ್ತರದಲ್ಲಿ ಬಂದಿರುವ ಮಾತು ನಿಜವೇ. ಹಾಗೆ (800) ಎಂಟುನೂರು ಕಿಲೋಮೀಟರ್‌ಗಳ ವೇಗದಿಂದ ಬಂದಿರುವ ಮಾತು ಸಹ ನಿಜವೇ. ಆದರೆ ಶಾಸ್ತ್ರಜ್ಞರು, ಪರಿಶೋಧಕರು ಎಂದು ಹೇಳಿಕೊಳ್ಳುವವರು ಹೇಳುವ ವಿವರವನ್ನು

ಮಾತ್ರ ನಂಬಲಾರೆವು. ನಾವು ಏನು ಹೇಳಿದರು ನಂಬುತ್ತಾರೆಂದು ಹೇಳುತ್ತಿದ್ದಾರೆ ಹೊರತು ಪೂರ್ತಿಯಾಗಿ ಅವರಿಗೆ ತಿಳಿದು ಹೇಳುತ್ತಿಲ್ಲವೆಂದು, ನಡೆದಿರುವುದಕ್ಕೆ ಸರಿಹೋಗುವಂತೆ ಕಲ್ಪನೆ ಮಾಡಿ ಹೇಳುತ್ತಿದ್ದಾರೆ ಹೊರತು ಪ್ರತ್ಯೇಕವಾಗಿ ಪರಿಶೋಧನೆ ಮಾಡಿ ಇರುವ ಸತ್ಯವನ್ನು ಹೇಳುತ್ತಿಲ್ಲವೆಂದು, ಇರುವ ಸತ್ಯವೇನೋ ಅವರಿಗೆ ತಿಳಿದಿಲ್ಲವೆಂದು ಅರ್ಥವಾಗುತ್ತಿದೆ. ಒಂದು ಸುನಾಮಿ ವಿಷಯದಲ್ಲಾಗಲಿ, ಭೂಕಂಪ ವಿಷಯದಲ್ಲಾಗಲಿ, ಹಾಗೇ ಇನ್ನು ಕೆಲವು ವಿಷಯಗಳಲ್ಲಾಗಲಿ ನಾವು ಶಾಸ್ತ್ರಜ್ಞರು, ನಾವು ಪರಿಶೋಧಕರು ಎನ್ನುವ ಮಾತನ್ನು ಅಡ್ಡ ಇಟ್ಟುಕೊಂಡು, ನಮಗೆ ತಿಳಿದಷ್ಟು ಯಾರಿಗೂ ತಿಳಿದಿಲ್ಲವೆಂದು, ನಾವು ಹೇಳಿರುವುದೆ ಎಲ್ಲರೂ ನಂಬುತ್ತಾರೆಂಬ ಧೈರ್ಯದಿಂದ ವಾಸ್ತವವಲ್ಲದ ವಿಷಯಗಳನ್ನು ಸಹ ಹೇಳುತ್ತಿದ್ದಾರೆಂದು, ಅವುಗಳನ್ನು ನಾವು ಕುರುಡರಂತೆ ನಂಬುತ್ತಿದ್ದೇವೆಂದು ಯಾರು ಅಂದುಕೊಳ್ಳುತ್ತಿಲ್ಲ. ನಮ್ಮ ಕಣ್ಣಿಗೆ ಕಾಣಿಸುವ ದೃಶ್ಯದಲ್ಲಿನ ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ಯಾರೂ ಸರಿಯಾಗಿ ಪ್ರಯತ್ನ ಮಾಡಲಿಲ್ಲವೆಂದು ತಿಳಿಸುವುದಕ್ಕೆ ಒಂದು ವಿಷಯವನ್ನು ಉದಾಹರಣೆಯಾಗಿ ವಿವರಿಸಿಕೊಳ್ಳೋಣ. ಅಮೇರಿಕಾದಲ್ಲಿ ಆಲ್‌ಖೈದಾ ತೀವ್ರವಾದಿಗಳು W.T.C ಟವರ್ಸ್ ಮೇಲೆ ವಿಮಾನದಿಂದ ದಾಳಿ ಮಾಡಿದ ವಿಷಯವು ಎಲ್ಲರಿಗೂ ತಿಳಿದಿದೆ. ನೂರು ಅಂತಸ್ಥುಗಳಿರುವ ಟವರನ್ನು ಸುಮಾರು 75 ಅಂತಸ್ಥುಗಳ ಹತ್ತಿರ ವಿಮಾನ ಟವರೊಳಗೆ ತೂರಿಹೋಗಿ ಬೆಂಕಿ ಒತ್ತಿಕೊಂಡಿದೆ. ವಿಮಾನದಲ್ಲಿ ಪೆಟ್ರೋಲ್ ಇರುವುದರಿಂದ ವಿಮಾನ ತೂರಿದ ಅಂತಸ್ಥಿನಜೊತೆಗೆ ಅದರ ಮೇಲಿನ ಅಂತಸ್ಥುಗಳು ಎರಡೂ, ಕೆಳಗಿನ ಅಂತಸ್ಥುಗಳು ಎರಡು ಅಗ್ನಿ ಆಘಾತಕ್ಕೆ ಗುರಿಯಾಗಬಹುದು. ಅಲ್ಲಿ ನಡೆದಿರುವುದು ಪ್ರತ್ಯಕ್ಷವಾಗಿ ಟಿವಿಯಲ್ಲಿ ಕಾಣಿಸುತ್ತಿದೆ. ನಾವು ಹೇಳಿಕೊಂಡಂತೆ ಐದಾರು ಅಂತಸ್ಥುಗಳು ಮಾತ್ರವೆ ಅಗ್ನಿ ಆಘಾತಕ್ಕೆ ಗುರಿಯಾಗಿವೆ. ಆ ದಿನ ಆಲ್‌ಖೈದಾ ತೀವ್ರವಾದಿಗಳು ಸಹ ವಿಮಾನದಿಂದ ಟವರ್ಸ್‌ನ್ನು ಗುದ್ದಿಸಿ ವಿಮಾನದಲ್ಲಿರುವವರನ್ನು, ಅಲ್ಲಿ ಆಘಾತಕ್ಕೆ ಗುರಿಯಾದ ಅಂತಸ್ಥುಗಳಲ್ಲಿ ಇರುವವರನ್ನು ಸಾಯಿಸಬೇಕೆಂದುಕೊಂಡಿದ್ದಾರೆ

ಹೊರತು, ಆ ಆಘಾತದಲ್ಲಿ ಟವರ್ಸ್ ಬಿದ್ದುಹೋಗುತ್ತವೆಂದು, ದೊಡ್ಡ ಆಘಾತ ಏರ್ಪಡುತ್ತದೆಂದು ಅವರೂ ಸಹ ಅಂದುಕೊಂಡಿರಲಿಲ್ಲ. ತೀವ್ರವಾದಿಗಳು ಅಂದುಕೊಂಡಿರುವುದಕ್ಕಿಂತ ಹೆಚ್ಚಾಗಿ ಆಘಾತ ನಡೆದಿದೆ ಎಂದು ಹೇಳಬಹುದು. ನಿಜಕ್ಕೆ ಅವರು ಟವರ್ಸ್‌ನ್ನು ಬೀಳಿಸಬೇಕೆಂದು ಬರಲಿಲ್ಲ. ಅಲ್ಲಿ ನಡೆದ ಸಂಘಟನೆಯನ್ನು ನೋಡಿದ ನಂತರ ತೀವ್ರವಾದ ನಾಯಕರು ತಾವು ಊಹಿಸದ ಕೆಲಸ ನಡೆದಿದೆಂದು ಆಶ್ಚರ್ಯಹೋಗಿರುತ್ತಾರೆ. ಅಮೇರಿಕಾಗೆ ತಾವು ಅಂದುಕೊಂಡಿರುವುದಕ್ಕಿಂತ, ತಾವು ಮಾಡಿರುವುದಕ್ಕಿಂತ ಹೆಚ್ಚಾಗಿ ನಷ್ಟ ಆಗಿರುವುದರಿಂದ ಸಂತೋಷಿಸಿರುತ್ತಾರೆ.

**W.T.C** ಟವರ್‌ಗಳು ಒಂದರನಂತರ ಒಂದು ಬಿದ್ದುಹೋಗುವುದನ್ನು ಪ್ರತ್ಯಕ್ಷವಾಗಿ ಟೀವಿಯಲ್ಲಿ ನೋಡಿದ್ದೇವೆ. ನಾವೇ ಅಲ್ಲ ಬಹುಶಃ ಎಲ್ಲರೂ ನೋಡಿರುತ್ತಾರೆ. ಒಂದು ಟವರ್ ಮೊದಲು ಬಿದ್ದುಹೋಗಿದೆ. ಬಿದ್ದುಹೋದ ಮೊದಲನೆಯ ಟವರ್, ಭಾಗವತದಲ್ಲಿ ಬಲಿಚಕ್ರವರ್ತಿಯನ್ನು ವಾಮನನು ತಲೆಮೇಲೆ ತುಳಿದರೆ ನೇರವಾಗಿ ಭೂಮಿಯೊಳಗೆ ಹೋದಂತೆ, ಸ್ವಲ್ಪವೂ ಸಹ ಪಕ್ಕಕ್ಕೆ ಬೀಳದಂತೆ ನೇರವಾಗಿ ಭೂಮಿಯೊಳಗೆ ಹೋದಂತೆ ಕಾಣಿಸಿದೆ. ಆಘಾತ ನಡೆದಿರುವುದು ಮೇಲೆಯಾದರೆ ಮೇಲಿನ ಅಂತಸ್ಥುಗಳಾಗಲಿ, ಆಘಾತ ನಡೆದ ಅಂತಸ್ಥುಗಳಾಗಲಿ ಬಿದ್ದು ಹೋಗದಂತೆ ಅವು ಹಾಗೆ ಇರುವಾಗಲೆ, ಕೆಳಗೆ ಭೂಮಿ ಹತ್ತಿರವಿರುವ ಅಂತಸ್ತುಗಳು ಭೂಮಿಯೊಳಗೆ ಹೋದಂತೆ, ನೇರವಾಗಿ ಮೇಲಿಂದ ಕೆಳಗಿನವರೆಗೂ ಹೋಗುವುದನ್ನು ನೋಡಿದರೆ, ಅಲ್ಲಿಯೂ ಸಹ ಮಾನವನಿಗೆ ತಿಳಿಯದಿರುವುದು ಏನೊ ನಡೆದಿದೆಂದು ಅನುಮಾನ ಬಾರದೆ ಇರುವುದಿಲ್ಲ. ಎರಡನೆ ಟವರ್ ಸಹ ಮೊದಲ ಟವರ್ ಹೋದಂತೆ ಕಾಣಿಸುತ್ತಾ ಹೋಗಿದೆ. ತೀವ್ರವಾದಿಗಳು ದಾಳಿಮಾಡಿದಾಗ ಎರಡು ಟವರ್‌ಗಳು ಬಿದ್ದುಹೋದ ಮಾತು ವಾಸ್ತವವೇ. ಅವು ನಮ್ಮ ಕಣ್ಣುಮುಂದೆಯೆ ಬಿದ್ದುಹೋಗಿವೆ. ಅಲ್ಲಿಯವರೆಗೂ ನಿಜವೆ, ಆದರೆ ಆ ಟವರ್‌ಗಳು ಆ ವಿಧವಾಗಿ ಬಿದ್ದುಹೋಗುವು ದಕ್ಕೆ ಸರಿಹೋಗುವ ಸಂಘಟನೆ, ಅಲ್ಲಿ ತೀವ್ರವಾದಿಗಳು ಮಾಡಿದ ಆಘಾತ

ದೊಂದಿಗೆ ಸರಿಹೋಗುತ್ತದಾ? ಎನ್ನುವುದು ಪ್ರಶ್ನೆ. ಈ ಪ್ರಶ್ನೆಗೆ ಉತ್ತರವನ್ನು ನೋಡಿದರೆ ತೀವ್ರವಾದಿಗಳು ಮಾಡಿದ ಆಕ್ಸಿಡೆಂಟ್‌ಗೆ ಟವರ್‌ಗಳು ಬಿದ್ದು ಹೋಗಿರುವುದಕ್ಕೆ ಸ್ವಲ್ಪವೂ ಸರಿಹೋಗುವುದಿಲ್ಲ. ಅಲ್ಲಿ ನಡೆದಿರುವುದಕ್ಕೆ ಏನೋ ಒಂದು ಕಲ್ಪಿಸಿ ಕಾಂಕ್ರೀಟ್‌ನಲ್ಲಿ ಬಳಸಿದ ಕಬ್ಬಿಣ ಕರಿಗಿಹೋಗುವುದರಿಂದ ಹಾಗೆ ನಡೆದಿದೆಯೆಂದು ಸರಿಮಾಡಿ ಹೇಳಿದ್ದಾರೆ. ಆದರೆ ಅವರು ಹೇಳಿದಂತೆ ಎಲ್ಲಾ ಅಂತಸ್ಥುಗಳ  ಕಬ್ಬಿಣ ಕರಗುವುದಕ್ಕೆ  ಅವಕಾಶವಿದೆಯಾ ಎಂದರೆ, ಅಷ್ಟು ಕಬ್ಬಿಣ ಕರಗುವ ಅವಕಾಶವೇ ಇಲ್ಲವೆಂದು ಹೇಳಬಹುದು.

ಅಮೇರಿಕಾದಲ್ಲಿನ ಆ ಟವರ್ಸ್‌ಗಳು ಬಿದ್ದುಹೋಗುವುದಕ್ಕೆ ಪೂರ್ತಿ ಕಾರಣ ವಿಮಾನ ಆಘಾತ ಅಲ್ಲವೆ ಅಲ್ಲ. ಉಗ್ರವಾದಿಗಳು ಅಂದುಕೊಂಡಿರುವುದು, ಮಾಡಿರುವುದು ಸ್ವಲ್ಪವೇ. ಆದರೆ ಅಲ್ಲಿ ಅವರಿಗೂ ಸಹ ತಿಳಿಯದಂತೆ ಹೆಚ್ಚಾಗಿ ನಡೆದಿದೆ. ದಾಳಿಮಾಡಿದ ಉಗ್ರವಾದಿಗಳಿಗೆ ಅಲ್ಲದೆ ಮನುಷ್ಯರಿಗೆ ಯಾರಿಗೂ ತಿಳಿಯದ ಶಕ್ತಿ ಯಾವುದೋ ಅಲ್ಲಿ ಕೆಲಸ ಮಾಡಿದೆ ಎಂದು ಸುಲಭವಾಗಿ ಹೇಳಬಹುದು. ಟವರ್ಸ್‌ಗಳು ಬಿದ್ದುಹೋದ ವಿಧಾನವನ್ನು ನೋಡಿದರೆ ಆ ವಿಷಯವು ನಮ್ಮ ಅಂದಾಜಿಗೆ ಬಂದಿದೆ. ಯಾವುದೋ ಒಂದು ಶಕ್ತಿ ಅದೃಶ್ಯರೂಪದಲ್ಲಿ ಅಲ್ಲಿಗೆ ಬಂದು  ಆ ಟವರ್ಸ್‌ಗಳ ಮೇಲೆ ತನ್ನ ಕಾಲನ್ನು ಇಟ್ಟು ಒಳಗೆ ತುಳಿದುಹಾಕಿದೆ ಎಂದು ಹೇಳಬಹುದು. ಸೈನ್ಸ್‌ನಲ್ಲಿ ಅದೃಶ್ಯಶಕ್ತಿಗಳು ಎನ್ನುವವು ಇಲ್ಲ, ಯಾರೂ ನಿರೂಪಣೆ ಮಾಡಲಾರರೆಂದು ಕೆಲವರಂದರೂ, ನಿಮಗೆ ತಿಳಿದ ಸೈನ್ಸ್‌ನಲ್ಲಿ ಇಲ್ಲ, ನಮಗೆ ತಿಳಿದ ಸೈನ್ಸ್‌ನಲ್ಲಿ ಇವೆಯೆಂದು ನಾವು ಹೇಳುತ್ತಿದ್ದೇವೆ. **"ನಮಗೆ ತಿಳಿದ ಸೈನ್ಸ್ ಸೂಪರ್‌ಸೈನ್ಸ್, ಅದೇ ಬ್ರಹ್ಮವಿದ್ಯಾಶಾಸ್ತ್ರ"**. ಅದನ್ನು ತಿಳಿದರೆ ಅಮೆರಿಕಾದಲ್ಲಿನ ಟವರ್ಸ್ ವಿಷಯವೇ ಅಲ್ಲ, ಜಪಾನ್‌ನಲ್ಲಿ ಭೂಕಂಪ ವಿಷಯವೂ, ಇಂಡೋನೇಷಿಯಾ ಸುನಾಮಿ ವಿಷಯವೂ ಅರ್ಥವಾಗುತ್ತವೆ. ಅವುಗಳ ವಿಷಯಗಳಲ್ಲಿ ಉತ್ಪನ್ನವಾದ ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳು ಸಿಗುತ್ತವೆ. ನಮಗೆ ತಿಳಿದ ಶಾಸ್ತ್ರದ ಪ್ರಕಾರ ಅಮೆರಿಕಾದಲ್ಲಿ ಆಘಾತಕ್ಕೆ ಗುರಿಯಾದ ಎರಡು ಟವರ್‌ಗಳನ್ನು ಒಂದು ಗ್ರಹ ತುಳಿದಿದೆ.

ಹಾಗೆಯೇ ಇಂಡೋನೇಷಿಯಾದಲ್ಲಿನ ಸುನಾಮಿಯನ್ನು ಒಂದು ಭೂತವು ಎಬ್ಬಿಸಿದೆ. ಮಾರ್ಚ್ 11, 2011ನೇ ತಾರೀಖು ಜಪಾನ್‌ನಲ್ಲಿ ಭೂಕಂಪವನ್ನು ಸಹ ಒಂದು ಭೂತವು ಮಾಡಿರುವುದೇ. ಅಮೆರಿಕಾದಲ್ಲೇನೊ ಗ್ರಹವಾದರೆ, ಜಪಾನ್, ಇಂಡೋನೇಷಿಯಾಗಳಲ್ಲಿ ಮಾಡಿರುವವು ಭೂತಗಳೆಂದು ಹೇಳುತ್ತಿದ್ದೇವೆ. ಗ್ರಹಗಳ ಶಕ್ತಿಯಾಗಲಿ, ಭೂತಗಳ ಶಕ್ತಿಯಾಗಲಿ ಯಾರ ಊಹೆಗೂ ಬರುವುದಿಲ್ಲ. ಗ್ರಹಗಳಾಗಲಿ, ಭೂತಗಳಾಗಲಿ ಅಟ್ಲಾಂಟಿಕ್ ಸಮುದ್ರದಲ್ಲಿರುವ ಟ್ರಯಾಂಗಿಲ್ ಶಕ್ತಿಗೆ ತಿಳಿಯದಂತೆ ಇಂತಹ ವಿಧ್ವಂಸಗಳನ್ನು ಮಾಡುವುದಿಲ್ಲ. **ದೇವರ ಪಾಲನೆಗೆ ರಾಜಧಾನಿಯಂತೆ ಇರುವ ಬೆರ್ಮುಡಾ ಟ್ರಯಾಂಗಿಲ್ ಶಕ್ತಿ ಆಧಾರದಿಂದಲೆ, ಅನುಮತಿಯಿಂದಲೆ ಸುನಾಮಿಗಳು, ಭೂಕಂಪಗಳು ನಡೆಯುತ್ತಿವೆ.** ಮಾರ್ಚ್ 11, 2011ನೇ ತಾರೀಖು ನಡೆದ ಜಪಾನ್ ಭೂಕಂಪವಾಗಲಿ, ಸುನಾಮಿಯಾಗಲಿ ಬೆರ್ಮುಡಾ ಟ್ರಯಾಂಗಿಲ್ ಶಕ್ತಿಗೆ ತಿಳಿಯದಂತೆ ನಡೆಯಲಿಲ್ಲ ವೆಂದು ಹೇಳಬಹುದು. ಇಂಥವು ಎಷ್ಟೋ ಭೂಮಿಮೇಲೆ ನಡೆಯುತ್ತಿದ್ದರೂ, ಅವುಗಳ ಹಿಂದಿರುವ ನಿಜಸ್ಥಿತಿಯನ್ನು ಮನುಷ್ಯರು ತಿಳಿದುಕೊಳ್ಳದಿದ್ದಾರೆ. ಕ್ಷಣಗಳಲ್ಲಿ ಎಷ್ಟು ದೂರವಾದರು ಹೋಗುವ ಮೇಘಗಳು ಸಮುದ್ರ ಮೇಲಿರುವ ಟ್ರಯಾಂಗಿಲ್‌ಗೂ, ಗ್ರಹಗಳಿಗೂ, ಭೂತಗಳಿಗೂ ಮಧ್ಯವರ್ತಿಯಂತೆ ಇವೆ. ಮನುಷ್ಯನಿಗೆ ಕಾಣಿಸದ ತತಂಗಗಳು, ಯೋಚಿಸಿದರೂ ತಿಳಿಯದ ರಹಸ್ಯಗಳು ಎಷ್ಟೋ ಇವೆ. ಪ್ರಪಂಚ ವಿಜ್ಞಾನವನ್ನು ಸಂಪಾದಿಸಿಕೊಂಡವರೆಲ್ಲರನ್ನೂ ಬುದ್ಧಿಗೆ ಪ್ರತ್ಯಕ್ಷವಾಗಿ ನಡೆಯುವ ಕೆಲಸಗಳಲ್ಲಿ ತಿಳಿಯದ ರಹಸ್ಯಗಳು ಎಷ್ಟೋ ಇವೆಯೆಂದು ಹೇಳುತ್ತಿದ್ದೇವೆ.

ಸೂಪರ್‌ಸೈನ್ಸ್ ಎನ್ನುವ ಆರನೇಶಾಸ್ತ್ರವಾದ ಬ್ರಹ್ಮವಿದ್ಯಾಶಾಸ್ತ್ರವನ್ನು ತಿಳಿದವನಿಗೆ ಗ್ರಹಗಳು, ಭೂತಗಳು ಎಂದರೆ ಏನೊ ತಿಳಿದಿದೆ. ಆದ್ದರಿಂದ ಪೂರ್ವಕಾಲದಲ್ಲಿ ಆಧ್ಯಾತ್ಮಿಕ ವಿದ್ಯೆಯನ್ನು ತಿಳಿದವರು ಭೂತಗಳನ್ನು, ಗ್ರಹಗಳನ್ನು ತಿಳಿದವರಾಗಿರುತ್ತಿದ್ದರು. ಪೂರ್ವದಲ್ಲಿ ರಾವಣಬ್ರಹ್ಮ ಈ ವಿಷಯವನ್ನು ನಿರೂಪಿಸಿ ತೋರಿಸುವುದಕ್ಕೆ ತನ್ನ ಜೀವನದಲ್ಲಿ ಸೂರ್ಯಚಂದ್ರಾದಿ ಗ್ರಹಗಳನ್ನು ತನ್ನ

ಮಾತು ಕೇಳುವಂತೆ, ತನ್ನ ಮಾತನ್ನು ಗೌರವಿಸುವಂತೆ ಮಾಡಿ ತೋರಿಸಿದ್ದಾನೆ. ಚಿಕ್ಕ ಚಿಕ್ಕ ಗ್ರಹಗಳು ಇಂದಿಗೂ ಯೋಗಿಗಳನ್ನು ಗೌರವಿಸುತ್ತಿವೆ. ಯೋಗಿಗಳ ಮಾತಿನ ಪ್ರಕಾರ ನಡೆದು ಕೊಳ್ಳುತ್ತಿವೆ. ಇಂದಿನಕಾಲದಲ್ಲಿ ಮನುಷ್ಯರಲ್ಲಿ ಅಜ್ಞಾನ ಬೆಳೆದು ಹೋಗುವುದರಿಂದ ಬ್ರಹ್ಮವಿದ್ಯಾಶಾಸ್ತ್ರ ಒಂದಿದೆಯೆಂದು ತಿಳಿಯದಂತೆ ಹೋಗಿದೆ. ಅದು ತಿಳಿಯದೇ ಹೋಗಿರುವುದರಿಂದ ಕಾಣಿಸದ ಗ್ರಹಗಳ, ಭೂತಗಳ ಸುಳಿವೇ ತಿಳಿಯದಂತೆಹೋಗಿದೆ. ಅವುಗಳ ಸುಳಿವೇ ತಿಳಿಯದೇ ಹೋಗುವುದರಿಂದ ಪ್ರಳಯ ಸಮಾನವಾದ ಸುನಾಮಿಗಳು, ಭೂಕಂಪಗಳು ಹೇಗೆ ಬರುತ್ತಿವೆಯೋ, ಏಕೆ ಬರುತ್ತಿವೆಯೋ ಯಾರಿಗೂ ತಿಳಿಯುತ್ತಿಲ್ಲ. ಅಂಥವರಿಗೆ  ಈಗ ನಾವು ಹೇಳುವ ವಿಷಯಗಳೆಲ್ಲವೂ ನಂಬಲು ಸಾಧ್ಯವಿಲ್ಲದಂತೆ ಇವೆ. **ನಾವು ಹೇಳಿದಷ್ಟು ಮಾತ್ರಕ್ಕೆ ದೈವಜ್ಞಾನ ಇಲ್ಲದವರಿಗೆ ಸ್ವಲ್ಪವೂ ಅರ್ಥವಾಗುವುದಿಲ್ಲ. ನಾವು ಹೇಳಿದ ವಿಷಯಗಳು ನೂರಕ್ಕೆ ನೂರುಪಾಲು ಸತ್ಯವೆಂದು ತಿಳಿಯುವುದಕ್ಕೆ ಸ್ವಲಕ್ಕೆ ಸ್ವಲ್ಪವಾದರು ಜ್ಞಾನ ಇರಲೇಬೇಕು.**

# ನಾಸ್ತಿಕವಾದಿಗಳನ್ನು ದೈವಜ್ಞಾನಿಗಳಾಗಿ ಬದಲಾಯಿಸಬಹುದಾ?

ಏನು ಹೇಳಿದರೂ, ಎಷ್ಟು ಹೇಳಿದರೂ ಕೆಲವರು ಅಜ್ಞಾನಿಗಳು ನಾವು ವಿಜ್ಞಾನಿಗಳು, ನಮಗೆ ಎಲ್ಲಾ ತಿಳಿದಿದೆ, ನೀವು ಹೇಳುವವು ಶಾಸ್ತ್ರಬದ್ಧವಾದ ವಿಷಯಗಳು ಅಲ್ಲ, ಸೈನ್ಸು ಪರಿಶೋಧನೆಗೂ ಸಹ ನಿಲ್ಲುವುದಿಲ್ಲ, ಎಂದು ಅವರ ವಾದವನ್ನು ಅವರು ಹೇಳುವುದಕ್ಕೆ ಪ್ರಯತ್ನಿಸುತ್ತಿರುತ್ತಾರೆ. ಆದರೆ ನಾವು ಹೇಳುವ ಮಾತುಗಳು ಕೇಳುವುದಿಲ್ಲವೆಂದು ನಮಗೆ ಚೆನ್ನಾಗಿ ತಿಳಿದಿದೆ. ಅಂತಹ ಹಠ ವಾದಿಗಳು ವಿಜ್ಞಾನದ ಹೆಸರು ಹೇಳಿಕೊಂಡು ಅಜ್ಞಾನದಲ್ಲಿಯೇ ಇರದಂತೆ, ಈ ದಿನ ಅಟ್ಲಾಂಟಿಕ್ ಸಮುದ್ರದಲ್ಲಿ ಟ್ರಯಾಂಗಿಲ್ ರೂಪದಲ್ಲಿರುವ ಆತ್ಮಶಕ್ತಿ

ಇದೇ ಭಾರತದೇಶದೊಳಗೆ ತನ್ನಶಕ್ತಿಯನ್ನು ಸ್ವಲ್ಪ ಕಳುಹಿಸಿ ಒಬ್ಬ ವ್ಯಕ್ತಿಯಾಗಿ ಹುಟ್ಟಿಸಿದೆ. ಈ ದಿನ ಆ ವ್ಯಕ್ತಿಯಲ್ಲಿ ಟ್ರಯಾಂಗಿಲ್ ಶಕ್ತಿ ಇರುವುದರಿಂದ, ಆ ವ್ಯಕ್ತಿ ನಾಸ್ತಿಕವಾದಿಗಳಿಗೂ, ಹೇತುವಾದಿಗಳಿಗೂ ಕಣ್ತೆರೆಸುವಂತೆ ಒಂದು ಪ್ರಶ್ನೆಯಾಗಿ ಉಳಿದಿದ್ದಾನೆ. ನಾಸ್ತಿಕವಾದಿಗಳಿಗೆ ಪ್ರಶ್ನೆಯಾಗಿ ನಿಂತಿರುವ ಆ ವ್ಯಕ್ತಿ ವಿಷಯದಲ್ಲಿ ಸಮಾಧಾನ ತಿಳಿದ ಯಾವ ಹೇತುವಾದಿಯಾಗಲಿ, ನಾಸ್ತಿಕವಾದಿಯಾಗಲಿ ಜ್ಞಾನಿಯಾಗಿ ಬದಲಾಗಬೇಕಾಗಿದ್ದೇ! ಉತ್ತರ ಹೇಳದವನು ವಿಜ್ಞಾನಿ ಅಲ್ಲ ಅಜ್ಞಾನಿಯೇ ಆಗುತ್ತಾನೆ. ವಿಜ್ಞಾನಿ ಆದರೆ ಸೈನ್ಸ್ ಪ್ರಕಾರ ಉತ್ತರ ಹೇಳಲೇಬೇಕು. ಒಂದುವೇಳೆ ಉತ್ತರವನ್ನು ಹೇಳಿದರೆ ಎಷ್ಟು ನಾಸ್ತಿಕನಾದರು ಜ್ಞಾನಿಯೇ ಆಗುತ್ತಾನೆ. ಶಾಸ್ತ್ರಬದ್ಧವಾದ ಜ್ಞಾನ ಇಲ್ಲದೇ ಯಾರು ಉತ್ತರ ಹೇಳಲಾರನು. ಉತ್ತರವನ್ನು ಹೇಳದಂತೆ ಹೋದರೆ ತಾನು ವಿಜ್ಞಾನಿ ಅಲ್ಲವೆಂದು ಹೇಳಬೇಕಾಗಿರುತ್ತದೆ. ಒಂದುವೇಳೆ ಉತ್ತರವನ್ನು ಹೇಳಿದರೆ, ನಾನು ಅಜ್ಞಾನಿ ಅಲ್ಲ ಜ್ಞಾನಿಯೆಂದು ಹೇಳಬೇಕಾಗಿರುತ್ತದೆ. ಟ್ರಯಾಂಗಿಲ್ ಆತ್ಮಶಕ್ತಿ ಇಟ್ಟಿರುವ ಆ ತಿರಕಾಸು ಏನೊ ಕೆಳಗೆ ನೋಡೋಣ.

29–04–2010ನೇ ತಾರೀಖು ಒಂದು ನ್ಯೂಸ್‌ಪೇಪರ್‌ನಲ್ಲಿ ಬಂದಿರುವ ವಾರ್ತೆ ಹೀಗಿದೆ. 83 ವರ್ಷಗಳ ವಯಸ್ಸಿರುವ ವ್ಯಕ್ತಿ ಈಗಲೂ 74 ವರ್ಷಗಳಿಂದ ಆಹಾರವಾಗಲಿ, ನೀರಾಗಲಿ ಏನೂ ತೆಗೆದುಕೊಳ್ಳದೆ ಇರುತ್ತಿದ್ದಾನೆ. ನೀರಾಗಲಿ, ಅನ್ನವಾಗಲಿ ತಿನ್ನದಿದ್ದರೂ ಆತನು ಆರೋಗ್ಯವಾಗಿದ್ದಾನೆ. ಆತನ ಮೆದುಳು ಸಹ 25 ವರ್ಷಗಳ ಯುವಕನಿಗಿರುವಂತೆ ಚುರುಕಾಗಿ ಕೆಲಸ ಮಾಡುತ್ತಿದೆಯಂತೆ. ಈ ವಿಷಯ ನಿಜವೊ ಅಲ್ಲವೊ ಎಂದು 30 ಜನ ಡಾಕ್ಟರ್‌ಗಳ ಬೃಂದವು ಕೆಲವು ತಿಂಗಳು ಆತನನ್ನು ಪರೀಕ್ಷೆ ಮಾಡುತ್ತಾ ಬಂದು ಕೊನೆಗೆ ಎಲ್ಲಾ ಸತ್ಯವೇ ಎಂದು ತೀರ್ಮಾನಿಸಿ ಹೇಳಿದರು. ಆತನನ್ನು ನೋಡಿದರೂ ನಂಬದವರು ಎಷ್ಟೋ ಜನ ಪರೀಕ್ಷಿಸಿದ್ದಾರೆ. ನಂತರ ಎಷ್ಟೋಜನ ಪರೀಕ್ಷೆಮಾಡುವುದರಲ್ಲಿದ್ದಾರೆ. ಆ ದಿನ ಬಂದಿರುವ ವಾರ್ತೆಯನ್ನು ಇರುವುದು ಇದ್ದಂತೆ ನಂತರ ಪುಟದಲ್ಲಿ ಬರೆಯುತ್ತಿದ್ದೇವೆ.

ಒಬ್ಬ ವ್ಯಕ್ತಿ ಕೆಲಸ ಮಾಡುವುದಕ್ಕಾಗಲಿ, ಅವನ ಶರೀರವು ಆರೋಗ್ಯ ವಾಗಿರುವುದಕ್ಕಾಗಲಿ, ಮನುಷ್ಯನಿಗೆ ಆಹಾರ ಅಗತ್ಯವೆಂದು ಎಲ್ಲರಿಗೂ ತಿಳಿದಿದೆ. ಭೌತಿಕಶಾಸ್ತ್ರದ ಪ್ರಕಾರ ಶರೀರಗಳಿಗೆ ಕ್ಯಾಲರೀಸ್ ರೂಪದಲ್ಲಿ ಶಕ್ತಿ ಬೇಕು.



ಏಳು ದಶಾಬ್ದಗಳಿಂದ ಏನೂ ತಿನ್ನದಂತೆ..!

*ಈ ಫೊಮೋದಲ್ಲಿ ಕಾಣಿಸುತ್ತಿರುವ ಪ್ರಹ್ಲಾದ್ ಜಾನೀ (ಮಾತಾಜೀ) ವೈದ್ಯಶಾಸ್ತ್ರಕ್ಕೆ ಸವಾಲಾಗಿ ನಿಂತಿದ್ದಾರೆ. 74 ವರ್ಷಗಳಿಂದ ಎಂತಹ ಆಹಾರ. ಪಾನೀಯಗಳು ಇಲ್ಲದಂತೆ ಜೀವಿಸುತ್ತಿರುವ ಆತನ ವಯಸ್ಸು 83 ವರ್ಷಗಳು. ಆದರೂ ಎಂತಹ ಅನಾರೋಗ್ಯವು ಇಲ್ಲ. ಮೆದುಳು 25ವರ್ಷದ ಯುವಕನ ಮೆದುಳಿನಂತೆ ಚುರುಕಾಗಿ ಕೆಲಸ ಮಾಡುತ್ತದೆಂದು ಆತನನ್ನು ಪರೀಕ್ಷಿಸಿದ 30 ಜನ ವೈದ್ಯ ನಿಪುಣರ ಬೃಂದವು ತೀರ್ಮಾನಿಸಿದೆ. ಪ್ರಸ್ತುತ ಆತನು ಗುಜರಾತ್‌ನಲ್ಲಿ ಅಹ್ಮದಾಬಾದ್ ಸ್ಟೆರ್ಲಿಂಗ್ ಆಸ್ಪತ್ರೆಯಲ್ಲಿ ಇದ್ದಾರೆ. ಈ ಮಿಸ್ಟರಿಯನ್ನು ಚೇಧಿಸುವುದಕ್ಕೆ ಡಿಆರ್‌ಡಿ ಈ ಶಾಸ್ತ್ರಜ್ಞರು ಈ ರಂಗದೊಳಗೆ ಇಳಿಯುತ್ತಿದ್ದಾರೆ.*

ಕ್ಯಾಲರೀಸ್ ಆಹಾರದ ಮೂಲಕ ಲಭಿಸುತ್ತದೆ. ಹಾಗೆಯೆ ಶರೀರವು ಬಿಸಿಯಾಗಿರಬೇಕು ಎಂದರೆ ಶ್ವಾಶಕೋಶಗಳಿಂದ ಆಕ್ಸಿಜನ್ (ಪ್ರಾಣ ವಾಯುವು) ಶರೀರದಲ್ಲಿನ ಪ್ರತಿ ಧಾತುಕಣಕ್ಕೂ ಸೇರಬೇಕು. ಹಾಗೆಯೇ ಜೀರ್ಣವ್ಯವಸ್ಥೆಯಿಂದ ಕಾರ್ಬೋಹೈಡ್ರೇಟ್ಸ್ (ಹಿಟ್ಟಿನಪದಾರ್ಥಗಳು) ಎನ್ನುವವು ಹೋಗಿ ಪ್ರತಿ ಧಾತುಕಣಕ್ಕೂ ಸೇರಬೇಕು. ಮೂಗಿನರಂಧ್ರಗಳಿಂದ ಬರುವ ಗಾಳಿ ಮೂಲಕ ಲಭಿಸಿದ ಪ್ರಾಣವಾಯುವೂ, ಬಾಯಿಂದ ಬಂದಿರುವ ಆಹಾರದ ಮೂಲಕ ಲಭಿಸಿದ ಗ್ಲೂಕೋಜ್ (ಹಿಟ್ಟಿನ ಪದಾರ್ಥಗಳು) ಶರೀರದಲ್ಲಿ ಅಣುವಣುನಲ್ಲಿರುವ ಧಾತುಗಳವರೆಗೂ ಹೋಗುತ್ತದೆ. ಅಲ್ಲಿ ಪ್ರತಿ ಧಾತುಕಣ ಒಂದು ಫ್ಯಾಕ್ಟರಿಯಂತೆ ಇರುತ್ತದೆ. ಆ ಫ್ಯಾಕ್ಟರಿಯೊಳಗೆ ಆಹಾರಪದಾರ್ಥವಾದ ಗ್ಲೂಕೋಸ್ ಹೋಗಬೇಕೆಂದರೆ, ಇನ್ಸುಲಿನ್ ಎನ್ನುವ ಗೇಟ್‌ಪಾಸ್ ಇರಬೇಕು. ರಕ್ತದಲ್ಲಿರುವ ಇನ್ಸುಲಿನ್ ಎನ್ನುವ ಗೇಟ್‌ಪಾಸ್‌ನ್ನು ತೆಗೆದುಕೊಂಡು ಗ್ಲೂಕೋಸ್ ಧಾತುಕಣ ದೊಳಗೆ ಪ್ರವೇಶಿಸಿದಾಗ, ರಕ್ತದಲ್ಲಿರುವ ಕೆಂಪು ಕಣಗಳ ಮೇಲೆ ಅಂಟಿಕೊಂಡು ಬಂದಿರುವ ಆಕ್ಸಿಜನ್ ಸಹ ಧಾತುಕಣದೊಳಗೆ ಸೇರುತ್ತದೆ. ಆಕ್ಸಿಜನ್ ಧಾತುಕಣದೊಳಗೆ ಹೋಗುವುದಕ್ಕೆ ಗೇಟ್‌ಪಾಸ್ ಅಗತ್ಯವಿಲ್ಲ. ಧಾತುಕಣದೊಳಗೆ ಒಂದು ಸಣ್ಣದಾದ ಫ್ಯಾಕ್ಟರಿಯಂತೆ ಇರುತ್ತದೆ. ಹೊರಗಿನಿಂದ ಹೋದ ಹಿಟ್ಟಿನ ಪದಾರ್ಥಗಳು ಅಥವಾ ಗ್ಲೂಕೋಸ್ ಎನ್ನುವುದು ಆ ಫ್ಯಾಕ್ಟರಿಯಲ್ಲಿ ಸುಟ್ಟುಹೋಗುವ ಕಟ್ಟಿಗೆಗಳಂತೆ ಉಪಯೋಗಪಡುವಾಗ, ಉರಿಯುವ ಗುಣ ಇರುವ ಆಕ್ಸಿಜನ್‌ನ್ನು, ಸುಟ್ಟುಹೋಗುವ ಗುಣವಿರುವ ಕಾರ್ಬೋಹೈಡ್ರೇಸ್ ಎನ್ನುವ ಗ್ಲೂಕೋಜ್, ಕಣಗಳನ್ನು ಆ ಧಾತುಕಣವೆನ್ನುವ ಫ್ಯಾಕ್ಟರಿಯಲ್ಲಿ ಬಾಯಿಲರಾಗಿ (ಉರಿಸುವ ಯಂತ್ರದಂತೆ) ಇರುವ ಆತ್ಮಶಕ್ತಿಯಲ್ಲಿ ಸೇರಿಸಲಾಗುತ್ತದೆ. ಆತ್ಮಶಕ್ತಿ ಯಿಂದ ಇತತ ಗ್ಲೂಕೋಜ್, ಅತ್ತ ಆಕ್ಸಿಜನ್ ಬೆರೆಸುವುದರಿಂದ ಗ್ಲೂಕೋಸ್ ಆಕ್ಸಿಜನ್‌ನಲ್ಲಿ ಸುಟ್ಟುಹೋಗುತ್ತಿದೆ. ಈ ಪ್ರಕ್ರಿಯೆ ಶರೀರವೆಲ್ಲವೂ ಅಣುವಣುವಿನಲ್ಲಿ ಕ್ಷಣಕ್ಷಣವೂ ನಡೆಯುತ್ತಿದೆ. ಹಾಗೆ ನಡೆಯುವುದರಿಂದ ಉಂಟಾದ ಉರಿಯಿಂದ ಧಾತುಕಣ ಬಿಸಿಯಾಗಿರುತ್ತದೆ. ಪ್ರತಿ ಧಾತುಕಣವು ಬಿಸಿಯಾಗಿರುವುದರಿಂದ ಶರೀರವೆಲ್ಲವೂ ಬಿಸಿಯಾಗಿರುತ್ತದೆ. ಬದುಕಿರುವ ಶರೀರವು ಬಿಸಿಯಾಗಿದೆ

ಎಂದರೆ ಆ ಶರೀರದಲ್ಲಿ ಅಣುವಣುವುನಲ್ಲಿರುವ ಧಾತುಕಣಗಳಲ್ಲಿ ಆಕ್ಸಿಜನ್ ಗ್ಲೂಕೋಜ್‌ನನ್ನು ಉರಿಸುತ್ತಿದೆಂದು ತಿಳಿಯುತ್ತಿದೆ. ಧಾತುಕಣದಲ್ಲಿ ಉರಿ ಉರಿಯುತ್ತಾ ಇರಬೇಕೆಂದರೆ ಅವುಗಳಿಗೆ ಗ್ಲೂಕೋಸ್ ಮತ್ತು ಪ್ರಾಣವಾಯುವು ಎರಡೂ ಅಗತ್ಯ. ಆ ಎರಡೂ ಬೇಕೆಂದರೆ ಬಾಯಿಂದ ಆಹಾರವು, ಮೂಗಿನಿಂದ ಗಾಳಿ ಅಗತ್ಯ. ಇದನ್ನನುಸರಿಸಿ ಒಬ್ಬ ಮನುಷ್ಯ ಬದುಕಿದ್ದಾನೆಂದರೆ, ಭೌತಿಕಶಾಸ್ತ್ರದ ಪ್ರಕಾರ ಇತ್ತ ಗಾಳಿ, ಅತ್ತ ಆಹಾರ ಎರಡು ಅಗತ್ಯವೇ. ಒಂದಿದ್ದು ಒಂದು ಇಲ್ಲದಿದ್ದರೆ ಒಳಗೆ ಉರಿ ಉರಿಯುವುದಿಲ್ಲ. ಶರೀರದಲ್ಲಿ ಉರಿ ಉರಿಯ ದೆಹೋದರೆ ಶರೀರವು ತಣ್ಣಗಾಗಿಹೋಗಿ ಮನುಷ್ಯ ಮರಣಿಸುತ್ತಾನೆ. ಒಬ್ಬ ಮನುಷ್ಯ ಬದುಕಿದ್ದಾನೆಂದರೆ ನಿತ್ಯವೂ, ಕ್ಷಣಕ್ಷಣವೂ ಉರಿಯುವ ಕಾರ್ಯಕ್ರಮ ನಡೆಯುತ್ತಿರಬೇಕಾಗಿದೆ. ಆ ಉರಿಯುವ ಕಾರ್ಯಕ್ರಮಕ್ಕೋಸ್ಕರ ಮನುಷ್ಯ ಒಂದುಕಡೆ ಬಾಯಿಂದ ಆಹಾರ ತಿನ್ನಬೇಕಾಗಿದೆ. ಒಂದುಕಡೆ ಮೂಗಿನ ಮೂಲಕ ಗಾಳಿಯನ್ನು ತೆಗೆದುಕೊಳ್ಳಬೇಕಾಗಿದೆ. ಇಲ್ಲಿಯವರೆಗೂ ಹೇಳಿರುವುದು ನಮಗಿರುವ ಆರುಶಾಸ್ತ್ರಗಳಲ್ಲಿ ನಾಲ್ಕನೆಯದಾದ ಭೌತಿಕಶಾಸ್ತ್ರಕ್ಕೆ ಸಂಬಂಧಿಸಿದ ಸೈನ್ಸ್.

ಈಗ ಅಸಲು ವಿಷಯಕ್ಕೆ ಬರೋಣ, ಗುಜರಾತ್‌ನಲ್ಲಿನ ಪ್ರಹ್ಲಾದ್ ಜಾನಿ ಎನ್ನುವ 83 ವರ್ಷಗಳ ವಯಸ್ಸಿರುವ ವ್ಯಕ್ತಿ ಈಗಲೂ 74 ವರ್ಷಗಳಿಂದ ಆಹಾರವಾಗಲಿ, ನೀರಾಗಲಿ ತೆಗೆದುಕೊಳ್ಳಲಿಲ್ಲವೆಂದು ತಿಳಿದಿದೆ. ಹಾಗೆ ಇರುವುದು ಭೌತಿಕಶಾಸ್ತ್ರ ಸೈನ್ಸ್‌ಗೆ ದೊಡ್ಡಸವಾಲಿನಂತಹ ವಿಷಯ. ಭೌತಿಕಶಾಸ್ತ್ರದ ಪ್ರಕಾರ ಆಹಾರ ಇಲ್ಲದಿದ್ದರೆ, ಮನುಷ್ಯ ಬದುಕಲಾರ ಎನ್ನುವ ಮಾತು ವಾಸ್ತವ. ಒಂದುವೇಳೆ ನಾಲ್ಕೈದು ದಿನಗಳು ಆಹಾರ ಇಲ್ಲದವರು ಸಹ ಸತ್ತುಹೋಗಲಿಲ್ಲವಲ್ಲ ಎಂದು ಯಾರಾದರು ಕೇಳಿದರೆ, ಹಾಗೆ ಕೆಲವು ದಿನಗಳು ಮಾತ್ರವೆ ಆಹಾರ ತೆಗೆದುಕೊಳ್ಳದಿದ್ದರು ಶರೀರದಲ್ಲಿ ನೆಲೆ ಇರುವ ಗ್ಲೈಕೋಜ್ ಎನ್ನುವುದು ಗ್ಲೂಕೋಜ್ ಆಗಿ ಬದಲಾವಣೆಯಾಗಿ, ಆಹಾರವಾಗಿ ಸರಬರಾಜು ಮಾಡುವ ಏರ್ಪಾಟು ಶರೀರದಲ್ಲಿದೆ. ಆದ್ದರಿಂದ ಗ್ಲೈಕೋಜ್ ನೆಲೆ ಇರುವವರೆಗೂ ಮನುಷ್ಯ ಬದುಕುತ್ತಾನೆ. ನಂತರ ಆಹಾರ ಸಿಗುವುದಿಲ್ಲವಾದ್ದರಿಂದ ಮರಣಿಸುವುದು ಸಂಭವಿಸುತ್ತದೆ. ಆ ವಿಧಾನವು ಕೆಲವು ದಿನಗಳಿಗೇ ಪರಿಮಿತವಾಗಲಿ

ಒಂದು ತಿಂಗಳಿಗೂ ಸಹ ಸರಿಹೋಗುವುದಿಲ್ಲ. ಇದಕ್ಕು ಮೊದಲು ನಾವು ಹೇಳಿಕೊಂಡಿರುವುದು ಭೌತಿಕಶಾಸ್ತ್ರವಾದ್ದರಿಂದ ಅದು ವಾಸ್ತವವೇ. ಆದರೆ ಭೌತಿಕಶಾಸ್ತ್ರಕ್ಕೆ ವಿರುದ್ಧವಾಗಿ 83 ವರ್ಷಗಳ ಪ್ರಹ್ಲಾದ್ ಜಾನ್ ಬದುಕಿರುವುದು ವಾಸ್ತವವೇ. ಈ ಎರಡೂ ಪರಸ್ಪರ ವಿರುದ್ಧಗಳು. ಶಾಸ್ತ್ರವು ಎಂದಿಗೂ ಅಸತ್ಯವಾಗುವುದಿಲ್ಲ. ಶಾಸ್ತ್ರಕ್ಕೆ ವಿರುದ್ಧವಾಗಿ ಯಾರೂ ಬದುಕುವುದಕ್ಕೆ ಸಾಧ್ಯವಿಲ್ಲ. ಯಾವುದೋ ಒಂದು ಸತ್ಯ ಆಗಬೇಕು. ಒಂದು ಅಸತ್ಯ ಆಗಬೇಕು. ಆದರೆ ಶಾಸ್ತ್ರವು ಎಂದಿಗೂ ಸತ್ಯವೇ. ಆದರೆ ಇಲ್ಲಿ ಅನುಭವರೀತ್ಯಾ ಮನುಷ್ಯ ಬದುಕಿರುವುದು ಸಹ ಸತ್ಯವೇ. ಇಲ್ಲಿ ಶಾಸ್ತ್ರಜ್ಞರೆಲ್ಲರೂ ಜುಟ್ಟನ್ನು ಕಿತ್ತುಕೊಂಡರು ಅವರಿಗೆ ಏನೂ ಅರ್ಥವಾಗಲಿಲ್ಲ.

ಇಲ್ಲಿ ಮನುಷ್ಯ ಎಷ್ಟು ಮೇಧಾವಿಯಾದರು, ಎಷ್ಟು ವಿಜ್ಞಾನವಂತನಾದರು ಆತನು ಪೂರ್ತಿ ವಿಜ್ಞಾನಿಯಲ್ಲ, ಹಾಗೆಯೇ ಆತನು ಪೂರ್ತಿ ಮೇಧಾವಿಯೂ ಅಲ್ಲ. ಪೂರ್ತಿ ಮೇಧಾವಿ ಆಗಬೇಕೆಂದರೂ, ಪೂರ್ತಿ ವಿಜ್ಞಾನಿ ಆಗಬೇಕೆಂದರೂ ಆರನೇಶಾಸ್ತ್ರವನ್ನು ಮನುಷ್ಯ ತಿಳಿದಿರಲೇಬೇಕು ಎನ್ನುವುದು ಮುಖ್ಯಸೂತ್ರವಾಗಿ ಇದೆ. ಆರನೇ ಶಾಸ್ತ್ರವನ್ನು ತಿಳಿದಾಗಲೇ ಆತನು ಇಂತಹ ಯಾವ ಪ್ರಶ್ನೆಗಾದರು ಉತ್ತರ ಹೇಳಬಲ್ಲನು ಎಂದು ತಿಳಿಯುವುದಕ್ಕೆ, ಟ್ರಯಾಂಗಿಲ್ ಶಕ್ತಿ ಆ ವ್ಯಕ್ತಿಯನ್ನು ಹುಟ್ಟಿಸಿ ಮನುಷ್ಯನ ಬುದ್ಧಿಶಕ್ತಿಗೆ, ಮನುಷ್ಯನ ವಿಜ್ಞಾನಕ್ಕೆ ಪ್ರಶ್ನೆಯಾಗಿ ನಿಲ್ಲಿಸಿದೆ. ಹೀಗೆ ನಡೆಯುವುದರಿಂದ ಮನುಷ್ಯ ಆರನೇಶಾಸ್ತ್ರವನ್ನು ಗುರ್ತಿಸುತ್ತಾನೆಂದು, ಅದರಿಂದ ಮಾನವನು ಜ್ಞಾನಿ ಆಗುತ್ತಾನೆಂದು ಟ್ರಯಾಂಗಿಲ್ (ಮೂರು ಕೋನಗಳ) ಶಕ್ತಿ ಒಂದರ ಉದ್ದೇಶವಾಗಿರುತ್ತದೆ. ಎಷ್ಟೋ ಅರ್ಥವಾಗದ ಸಂಘಟನೆಗಳು ಸಮುದ್ರದಲ್ಲಿ ಏರ್ಪಟ್ಟರೂ, ಪ್ರಹ್ಲಾದ್‌ಜಾನಿಯಂತಹ ಪ್ರಶ್ನಾರ್ಥಕವಾದ ಅರ್ಥವಾಗದಿರುವ ವಿಷಯಗಳು ಭೂಮಿ ಮೇಲೆ ಎಷ್ಟೋ ಇದ್ದರು, ಮನುಷ್ಯ ಅವುಗಳನ್ನು ಕುರುಡನಂತೆ ಬಿಟ್ಟುಹಾಕುತ್ತಿದ್ದಾನೆ. ಅವುಗಳಿಗೆ ಯಾವ ಸಮಾಧಾನ ಹೇಳಲಾರದ ಸ್ಥಿತಿಯಲ್ಲಿದ್ದರೂ ಸಹ ತನ್ನನ್ನು ತಾನು ಮೇಧಾವಿಯಾಗಿ ಹೇಳಿಕೊಳ್ಳುತ್ತಿದ್ದಾನೆ. ಆರನೇಶಾಸ್ತ್ರವನ್ನು ತಿಳಿದವರನ್ನು

ಹೇಳನವಾಗಿ ಮಾತನಾಡುತ್ತಿದ್ದಾನೆ. ಬೆರ್ಮುಡಾ ಟ್ರಯಾಂಗಿಲ್ ವಿಷಯದಲ್ಲಿ ಏನು ಹೇಳಲಾರದೆಹೋದರೂ, ಪೂರ್ವದಿಂದ ಭೂಕಂಪಗಳು ಏಕೆ ಬರುತ್ತಿವೆಯೊ, ಅವುಗಳ ಹಿಂದಿನ ಚರಿತ್ರೆ ತಿಳಿಯದೆಹೋದರೂ, ಪ್ರಹ್ಲಾದ್ ಜಾನಿಯಂತಹವರು ಹೇಗೆ ಬದುಕಿದ್ದಾರೋ ಹೇಳಲಾರದೆ ಹೋದರು, ಮನುಷ್ಯ ಜೀವನಕ್ಕೆ ಮುಖ್ಯವಾದ ದೈವಜ್ಞಾನ ಇಲ್ಲದಿದ್ದರೂ, ತಾನು ವಿದ್ಯಾವೇತ್ತನೆಂದು, ಶಾಸ್ತ್ರಜ್ಞನೆಂದು, ಮೇಧಾವಿ ಎಂದು ಹೇಳಿಕೊಳ್ಳುವುದು ನಾಚಿಕೆಗೇಡು ಅಲ್ಲವೆ! ದೈವಜ್ಞಾನ ಇಲ್ಲದಿದ್ದರೆ ಭೂಮಿಮೇಲೆ ಹುಟ್ಟಿದ ಪ್ರಾಣಿಗೆ ಅಗತ್ಯವಾಗಿರುವವೇ ನಮಗಿವೆಯೆಂದು, ಅವುಗಳಂತೆ ನಿದ್ರೆ, ಅಹಾರ, ಕೆಲಸ ಇವೆಯೆಂದು, ಅವುಗಳಿಗು ನಮಗೂ ಏನು ವ್ಯತ್ಯಾಸ ಇಲ್ಲವೆಂದು ತಿಳಿಯುತ್ತಿದೆ. ಹಾಗೆ ಅಲ್ಲದೆ ನಿಜವಾದ ವಿಜ್ಞಾನಿಯಾಗಿ, ನಿಜವಾದ ಮೇಧಾವಿಯಾಗಿರಬೇ ಕೆಂದರೆ ಆರನೆ ಶಾಸ್ತ್ರವನ್ನು ತಿಳಿದು ಶಾಸ್ತ್ರಜ್ಞನಾಗಬೇಕೆಂದು ತಿಳಿಸುತ್ತಿದ್ದೇವೆ.

ಬೆರ್ಮುಡಾ ಟ್ರಯಾಂಗಿಲ್‌ನಲ್ಲಿರುವ ಶಕ್ತಿಗೆ ದೈವಶಕ್ತಿ ಎಂದಿದ್ದೇವೆ. ಮನುಷ್ಯನ ಲೆಕ್ಕದಲ್ಲಿ ಆತ್ಮಶಕ್ತಿಯನ್ನು ದೈವಶಕ್ತಿ ಎಂದು ಮರ್ಯಾದಪೂರ್ವಕವಾಗಿ ಉಚ್ಛರಿಸಬಹುದು. ಸೃಷ್ಟಿ ನಂತರ ಎಲ್ಲಾಕಡೆ ಕೆಲಸ ಮಾಡುವುದು ಆತ್ಮಶಕ್ತಿಯೇ. ಆತ್ಮಶಕ್ತಿಯನ್ನು ದೈವಶಕ್ತಿ ಎಂದು ಕರೆಯುತ್ತಿದ್ದೇವೆಂದು ಜ್ಞಾಪಕ ಇಟ್ಟುಕೊಳ್ಳಬೇಕು. ಕೆಲವರು ಶಾಸ್ತ್ರಜ್ಞರು ಬೆರ್ಮುಡಾ ಟ್ರಯಾಂಗಿಲ್ ಮೇಲೆ ಪರಿಶೋಧನೆಗಳು ಮಾಡುವವರು "ಅಲ್ಲಿ ಅಯಸ್ಕಾಂತಶಕ್ತಿ ಇರಬಹುದು. ಸೂರ್ಯನಿಂದ ವ್ಯಾಪಿಸುವ ಬಿಸಿಯಿಂದ ಅಲ್ಲಿ ಹೆಚ್ಚಾಗಿ ಬಲವಾದ ಅಯಸ್ಕಾಂತಶಕ್ತಿ ಇರುತ್ತದೆ. ಆದ್ದರಿಂದ ಲೆಕ್ಕವಿಲ್ಲದಷ್ಟು ವಿಮಾನಗಳು, ನೌಕೆಗಳು ಅಪಾಯಕ್ಕೆ ಗುರಿಯಾಗಿವೆ". ಎಂದು ಅವರ ಅಂದಾಜಿನ ಪ್ರಕಾರ ಅವರು ಹೇಳಿದ್ದಾರೆ. ಅದಕ್ಕೆ ಯಾವ ವಿಧವಾದ ಆಧಾರವನ್ನು ಅವರು ತೋರಿಸಲಿಲ್ಲ. ಕೊನೆಗೆ ಯಾವುದೋ ಒಂದು ಶಕ್ತಿ ಅಲ್ಲಿ ಇದೆಯೆಂದು ಅನ್ನುತ್ತಿದ್ದಾರೆ, ಹೆಚ್ಚಿನ ಜನರು ಅಯಸ್ಕಾಂತಶಕ್ತಿ ಎಂದಿದ್ದಾರೆ. ಅಯಸ್ಕಾಂತ ಶಕ್ತಿಯ ಬಗ್ಗೆ ನಾವು ಏನು ಹೇಳುತ್ತಿದ್ದೇವೆಂದರೆ! ಅಯಸ್ಕಾಂತ ಶಕ್ತಿ ಬೇರೆ, ಆತ್ಮಶಕ್ತಿಬೇರೆ, ಅಯಸ್ಕಾಂತಶಕ್ತಿಯನ್ನು ಮನುಷ್ಯ ತಯಾರುಮಾಡಬಹುದು. ಆದರೆ ಆತ್ಮಶಕ್ತಿಯನ್ನು ಯಾರು ತಯಾರು

ಮಾಡಲಾರರು. ವಿದ್ಯುತ್ ಶಕ್ತಿಯನ್ನು ಅಯಸ್ಕಾಂತ ಶಕ್ತಿಯಾಗಿ, ಅಯಸ್ಕಾಂತ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಬದಲಾಯಿಸಬಹುದು. ಆದರೆ ಆತ್ಮಶಕ್ತಿಯನ್ನು ಯಾವ ಶಕ್ತಿಯಿಂದ ತಯಾರು ಮಾಡಲಾರೆವು. ಮಾನವನ ಶರೀರದಲ್ಲಿ ಆತ್ಮಶಕ್ತಿ ಇದೆ. ಹಾಗೆಯೇ ಬೆರ್ಮುಡಾ ಟ್ರಯಾಂಗಿಲ್ ಪ್ರಾಂತದಲ್ಲಿ ಸಹ ಆತ್ಮಶಕ್ತಿಯೇ ಇದೆ. ಆತ್ಮಶಕ್ತಿ ವಿಶ್ವವೆಲ್ಲವೂ ಎಲ್ಲರಲ್ಲಿಯೂ ಭಿನ್ನಭಿನ್ನವಾಗಿ ಇದ್ದರೂ ಶಕ್ತಿ ಮಾತ್ರ ಒಂದೇ. ಆತ್ಮಶಕ್ತಿ ಇರುವ ಸ್ಥಳವನ್ನು ಅನುಸರಿಸಿ ತನ್ನ ಪಾತ್ರವನ್ನು ಅನುಸರಿಸಿ ಪೋಷಿಸುತ್ತಿರುತ್ತದೆ. ಸಮುದ್ರದ ಮೇಲೆ ಟ್ರಯಾಂಗಿಲ್‌ನಲ್ಲಿರುವ ಆತ್ಮಶಕ್ತಿ ಒಂದು ಪಾತ್ರವನ್ನು ಪೋಷಿಸಿದರೆ, ಮನುಷ್ಯ ಶರೀರದಲ್ಲಿರುವ ಶಕ್ತಿ ಒಂದು ಪಾತ್ರವನ್ನು ಪೋಷಿಸುತ್ತದೆ. ಆತ್ಮಶಕ್ತಿ ವಿಶ್ವವೆಲ್ಲವೂ ಒಂದೇ ಆದರೂ ಅದು ಇರುವ ಸ್ಥಳಗಳನ್ನನುಸರಿಸಿ ಬೇರೆಬೇರೆಯಾಗಿದ್ದು ಬೇರೆಬೇರೆ ಕೆಲಸಗಳನ್ನು ಮಾಡುತ್ತಿದೆ. ಪ್ರಪಂಚದಲ್ಲಿ ಯಾವ ಜೀವರಾಶಿಯಲ್ಲಾದರೂ ಕೆಲಸಗಳನ್ನು ಮಾಡುವುದು ಆತ್ಮವೇ. ಎಲ್ಲಿಯಾದರೂ, ಯಾವ ಕೆಲಸವಾದರು ನಡೆದಿದೆ ಎಂದರೆ, ಅಲ್ಲಿ ಆತ್ಮದಿಂದಲೇ ನಡೆದಿರುತ್ತದೆ. ಆ ಲೆಕ್ಕದ ಪ್ರಕಾರ ಮನುಷ್ಯರು ಮಾಡುವ ಕೆಲಸಗಳೆಲ್ಲವೂ ಅವರ ಶರೀರದಲ್ಲಿನ ಆತ್ಮವೇ ಮಾಡಿಸುತ್ತಿದೆ. ವಿಶ್ವದಲ್ಲಿ ಎಷ್ಟೋ ಪಾತ್ರಗಳನ್ನು ಆತ್ಮ ಪೋಷಿಸುತ್ತಿದ್ದರೂ, ಆತ್ಮ ಎನ್ನುವ ಶಬ್ದವು ಎಲ್ಲರಿಗೂ ಸುಪರಿಚಿತವಾದರೂ, ಆತ್ಮ ಅಂದರೆ ಏನೊ, ಅದನ್ನು ಕುರಿತಾದ ಜ್ಞಾನ ಯಾರಿಗೂ ತಿಳಿದಿಲ್ಲ. ಕೆಲವರು ಜೀವಾತ್ಮವನ್ನು ಆತ್ಮ ಅನ್ನುತ್ತಿದ್ದಾರೆ. **ಕೆಲವರು ಪರಮಾತ್ಮನನ್ನು ಆತ್ಮ ಎನ್ನುತ್ತಿದ್ದಾರೆ. ಆದರೆ ಈ ಎರಡು ಅಲ್ಲದಿರುವುದು ಆತ್ಮ ಎಂದು ಯಾರಿಗೂ ತಿಳಿದಿಲ್ಲ. ಮನುಷ್ಯನಿಗೆ ಆತ್ಮಜ್ಞಾನ ಮುಖ್ಯವಾದರೂ ಆತ್ಮ ಹೆಸರು ಹೇಳಿಕೊಂಡು ಆತ್ಮವಲ್ಲದಿರುವುದನ್ನು ಮನುಷ್ಯ ತಿಳಿದುಕೊಳ್ಳುತ್ತಿದ್ದಾನೆ.**

ಪೂರ್ವದಲ್ಲಿ ರಾವಣಬ್ರಹ್ಮ ಈಶ್ವರಲಿಂಗದ ಮೇಲೆ ಮೂರು ವಿಭೂತಿ ರೇಖೆಗಳನ್ನು ತಿದ್ದಿ, ಆ ರೇಖೆಗಳಲ್ಲಿ ಕೆಳಗಿರುವುದು ಜೀವಾತ್ಮನಿಗು, ಮಧ್ಯದಲ್ಲಿರು ವುದು ಆತ್ಮಕ್ಕು, ಮೇಲಿರುವುದು ಪರಮಾತ್ಮನಿಗು ಚಿಹ್ನೆಗಳೆಂದು ತಿಳಿಸಿ

ಮಧ್ಯದಲ್ಲಿರುವ ಆತ್ಮಜ್ಞಾನವೇ ಮನುಷ್ಯನಿಗೆ ಮುಖ್ಯವೆಂದು, ಅದನ್ನು ತಿಳಿಯುವಂತೆ ಲಿಂಗದ ಮೇಲೆ ಮಧ್ಯರೇಖೆಗೆ ಕುಂಕುಮ ಬೊಟ್ಟು ಇಟ್ಟು ತೋರಿಸಿದ್ದಾನೆ. ಅದೇ ಪದ್ಧತಿಯಲ್ಲಿ ತಾನೂ ಧರಿಸಿದ್ದಾನೆ, ಎಲ್ಲರನ್ನೂ ಧರಿಸು ವಂತೆ ಮಾಡಿದ್ದಾನೆ. ಆದರೂ ಈ ಕಾಲದಲ್ಲಿ ಆಧ್ಯಾತ್ಮಿಕ ವಾದಿಗಳಿಗೂ ಸಹ ಆತ್ಮದ ವಿವರವು ತಿಳಿಯದಂತೆಹೋಗಿದೆ. ಇಂಥದ್ದೇ ಆತ್ಮ ಎಂದಾಗಲಿ, ಇಂತಹ ಕೆಲಸವನ್ನು ಮಾತ್ರ ಆತ್ಮ ಮಾಡುತ್ತಿದೆ ಎಂದಾಗಲಿ, ನಿರ್ಧಿಷ್ಟವಾಗಿ ಯಾರು ಹೇಳಲಾರದೆ ಹೋಗುತ್ತಿದ್ದಾರೆ. ಅಂತಹ ಆತ್ಮವನ್ನು ಕುರಿತು ತಿಳಿದುಕೊಂಡರೆ ಎಷ್ಟೋ ರಹಸ್ಯಗಳು ತಿಳಿಯುತ್ತವೆ. ಈಗ ಅಸಲು ವಿಷಯಕ್ಕೆ ಬರೋಣ. 83 ವರ್ಷಗಳ ಪ್ರಹ್ಲಾದ್‌ಜಾನೀ ಎನ್ನುವ ವ್ಯಕ್ತಿ ಶರೀರದಲ್ಲಿ ನಿರ್ಧಿಷ್ಟವಾದ ಕೆಲಸಗಳು ಮಾಡುವ, ನಿರ್ಧಿಷ್ಟ ಭಾಗಗಳು ಒಟ್ಟು 26 ಇವೆ. ಅದರಲ್ಲಿ ಆತ್ಮ ಸಹ ಒಂದು. ಆತ್ಮವನ್ನು ಪಕ್ಕಕ್ಕೆ ಇಟ್ಟು ನೋಡಿದರೆ ಒಟ್ಟು 25 ಭಾಗಗಳು ಜೀವಿಯ ಜೊತೆ ಇವೆ. ಶರೀರದಲ್ಲಿ 25 ಭಾಗಗಳು ಕೆಲಸ ಮಾಡುತ್ತಿರುವಾಗ ಶರೀರವು ಬದುಕುತ್ತಿದೆ. ಶರೀರದಲ್ಲಿನ 25 ಭಾಗಗಳು ಯಾವುದರ ಕೆಲಸ ಅದು ಮಾಡುವುದಕ್ಕೆ ಬೇಕಾದ ಶಕ್ತಿಯನ್ನು ಆತ್ಮವೇ ಕೊಡುತ್ತಿದೆ. ಇದರಿಂದ ಪ್ರತಿ ಶರೀರದಲ್ಲಿಯೂ, ನಡೆಯುವ ಪ್ರತಿ ಕೆಲಸ ಆತ್ಮಶಕ್ತಿಯಿಂದ ನಡೆಯುತ್ತಿದೆ ಎಂದು ತಿಳಿಯುತ್ತಿದೆ. ಶರೀರದಲ್ಲಿ ಆತ್ಮ ಇಲ್ಲದಿದ್ದರೆ ಆ ಶರೀರಕ್ಕೆ ಕದಲಿಕೆಯೇ ಇಲ್ಲವೆಂದು ಹೇಳಬಹುದು. ಶರೀರಕ್ಕೆಲ್ಲಾ ಅಧಿಪತಿ ಆತ್ಮವೇ. ಅಟ್ಲಾಂಟಿಕ್ ಸಮುದ್ರದಲ್ಲಿ ಆತ್ಮ ತ್ರೈತಾಕಾರ ಕೋನವನ್ನು ಸ್ಥಾನ ಮಾಡಿಕೊಂಡಾಗ, ಶರೀರದಲ್ಲಿ ಆತ್ಮ ತಲೆಯಲ್ಲಿ ಸ್ಥಾನಹೊಂದಿದೆ. ಅಲ್ಲಿಂದ ತನ್ನ ಶಕ್ತಿಯನ್ನು ಶರೀರವೆಲ್ಲವೂ ಪ್ರಸಾರಮಾಡುತ್ತಿದೆ.

74 ವರ್ಷಗಳಿಂದ ಆಹಾರವಾಗಲಿ, ನೀರಾಗಲಿ ಸ್ವೀಕರಿಸದ ಪ್ರಹ್ಲಾದ್ ಜಾನೀ ಎನ್ನುವ ವ್ಯಕ್ತಿಯನ್ನು ಭೂಮಿಮೇಲೆ ಹೇತುವಾದಿಗಳು, ನಾಸ್ತಿಕವಾದಿಗಳು, ಅಜ್ಞಾನಿಗಳು, ವಿಜ್ಞಾನಿಗಳು ಎಲ್ಲರಿಗೂ ಕಣ್ತೆರೆದು ನೋಡುವಂತೆ ತ್ರೈತಾಕಾರವಾಗಿರುವ ಶಕ್ತಿಯೇ ಹುಟ್ಟಿಸಿದೆ. ಆತನು ಹುಟ್ಟಿದ ಒಂಭತ್ತು ವರ್ಷ

ಗಳಿಂದ ಆಹಾರ ತಿನ್ನುವುದನ್ನು ಬಿಟ್ಟಿದ್ದಾನೆ. ದ್ರವ ಆಹಾರವಾಗಲಿ, ಘನ ಆಹಾರವಾಗಲಿ, ಕೊನೆಗೆ ನೀರಾಗಲಿ ತೆಗೆದುಕೊಳ್ಳದೆ ಇದ್ದಾನೆ. ಆ ದಿನದಿಂದ ಇಂದಿನವರೆಗೂ ಆರೋಗ್ಯವಾಗಿ ಬದುಕುತ್ತಿದ್ದಾನೆ. ಆತನಿಂದ ಭೌತಿಕ ಶಾಸ್ತ್ರಜ್ಞರಿಗೂ ಸಹ ಏನು ಅರ್ಥವಾಗದ ಪರಿಸ್ಥಿತಿ ಏರ್ಪಟ್ಟಿದೆ. ಆತನು ಆಹಾರ ಇಲ್ಲದಂತೆ ಹೇಗೆ ಆರೋಗ್ಯವಾಗಿ ಬದುಕುತ್ತಿದ್ದಾನೋ ಭೌತಿಕ ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯವೇ ಆದರೂ ಭೌತಿಕ ಶಾಸ್ತ್ರಜ್ಞರಿಂದ ಅದಕ್ಕೆ ವಿವರವು ಇಲ್ಲ. ಅವರು ಎಂದಿಗೂ ಹೇಳಲಾರರು. ಏಕೆಂದರೆ! ಇದು ಆತ್ಮಕ್ಕೆ ಸಂಬಂಧಿಸಿದ ವಿಷಯ. ಆತ್ಮ ಏನೋ ಭೌತಿಕಶಾಸ್ತ್ರಕ್ಕೆ ತಿಳಿದಿಲ್ಲ. ಆತ್ಮವನ್ನು ಕುರಿತು ಹೇಳುವುದು ಒಂದೇ ಒಂದು **ಬ್ರಹ್ಮವಿದ್ಯಾಶಾಸ್ತ್ರ**. ಆ ಆರನೆಶಾಸ್ತ್ರವನ್ನು ತಿಳಿದವರ ಹತ್ತಿರ ಮಾತ್ರವೇ ಆಹಾರ ಇಲ್ಲದಂತೆ ಆತನು ಹೇಗೆ ಬದುಕುತ್ತಿದ್ದಾನೆನ್ನುವುದಕ್ಕೆ ಉತ್ತರ ಇದೆ. ಪ್ರಪಂಚದಲ್ಲಿ ಕೇವಲ ನಾಲ್ಕುಶಾಸ್ತ್ರಗಳನ್ನು ತಿಳಿದವರನ್ನು ಬಿಟ್ಟು, ಆರನೇ ಶಾಸ್ತ್ರವನ್ನು ತಿಳಿದ ಆತ್ಮಜ್ಞಾನಿಗಳನ್ನು ಕೇಳಿದರೆ ಅವರು ಹೀಗೆ ಹೇಳುತ್ತಿದ್ದಾರೆ. ಶರೀರದಲ್ಲಿ ಎಲ್ಲಾ ಕೆಲಸಗಳನ್ನು ಮಾಡಿಸುವವನು ಆತ್ಮ. ಶರೀರದಲ್ಲಿ ಅಧಿಪತಿಯಾಗಿರುವವನು ಆತ್ಮ. ಆತ್ಮಶಕ್ತಿ ಶರೀರವೆಲ್ಲವೂ ಹರಡಿ ಅಣುವಣುವಿನಲ್ಲಿ ವ್ಯಾಪಿಸಿದೆ. ಶರೀರದಲ್ಲಿ ಕೆಲವು ಕೋಟಿಗಳ ಧಾತುಕಣಗಳು ಇವೆ. ಎಲ್ಲದರಲ್ಲಿಯೂ ಆತ್ಮಶಕ್ತಿ ವ್ಯಾಪಿಸಿದೆ. ಧಾತುಕಣಗಳಲ್ಲಿ ವ್ಯಾಪಿಸಿರುವ ಆತ್ಮ ಅಲ್ಲಿಗೆ ಬರುವ ಗ್ಲೂಕೋಸ್‌ನ್ನು ಆಕ್ಸಿಜನ್‌ನನ್ನು ಬೆರೆಸಿ ಉರಿಸುತ್ತಿದೆ ಎಂದು ಮೊದಲೇ ಹೇಳಿಕೊಂಡಿದ್ದೇವೆ. ಎಲ್ಲಾರ ಶರೀರದಲ್ಲಿ ನಡೆಯುವ ಕೆಲಸ ಅದಾದರೆ, ಇಲ್ಲಿ ಪ್ರತ್ಯೇಕವಾಗಿ ತ್ರೈತಾಕಾರ ಆತ್ಮಶಕ್ತಿಯಿಂದ ಹುಟ್ಟಿದ ಪ್ರಹ್ಲಾದ್‌ಜಾನಿ ಶರೀರದಲ್ಲಿ ಏನು ನಡೆಯುತ್ತಿದೆ ಎಂದರೆ!

ಪ್ರಹ್ಲಾದ್‌ಜಾನಿ ಮೂಗಿನ ಮೂಲಕ ಗಾಳಿಯನ್ನು ತೆಗೆದುಕೊಳ್ಳುತ್ತಿದ್ದಾನಾಗಲಿ, ಬಾಯಿ ಮೂಲಕ ಆಹಾರವನ್ನು ತೆಗೆದುಕೊಳ್ಳಲಿಲ್ಲ. ಆದ್ದರಿಂದ ಆತನ ಶರೀರದಲ್ಲಿ ಉಸಿರಾಟಚೀಲದಿಂದ ಪ್ರಾಣವಾಯುವು ರಕ್ತಕಣದೊಳಗೆ ಸೇರಿ, ರಕ್ತಪ್ರಸರಣೆಯ ಮೂಲಕ ಪ್ರತಿ ಧಾತುಕಣಕ್ಕೂ ಹೋಗುತ್ತಿದೆ. ಹಾಗೆ ಹೋದ

ಪ್ರಾಣವಾಯುವು ಉರಿಸುವ ಗುಣವು ಹೊಂದಿರುವುದಾಗಿದೆ. ಆದರೆ ಅಲ್ಲಿ ಸುಡುವುದಕ್ಕೆ ಆಕ್ಸಿಜನ್ ಇದ್ದರು, ಸುಟ್ಟುಹೋಗುವುದಕ್ಕೆ ಗ್ಲೂಕೋಸ್ ಇಲ್ಲ. ಆತನು ಆಹಾರವನ್ನು ತೆಗೆದುಕೊಂಡಿಲ್ಲ ಅದರಿಂದ ಅಲ್ಲಿಗೆ ಗ್ಲೂಕೋಸ್ ಹೋಗಲಿಲ್ಲ. ಪ್ರತಿ ಧಾತುಕಣದಲ್ಲಿಯೂ ಆತ್ಮಶಕ್ತಿ ವ್ಯಾಪಿಸಿದ್ದು, ಗ್ಲೂಕೋಸ್‌ನ್ನು ಪ್ರಾಣವಾಯುವನ್ನು ಸೇರಿಸಿ ಉರಿಯುವಂತೆ ಮಾಡುತ್ತಿರುತ್ತದೆ. ಶರೀರಕ್ಕೆಲ್ಲವೂ ಅಧಿಪತಿ ಆತ್ಮವೆಂದು ಮುಂಚೆಯೇ ಹೇಳಿಕೊಂಡಿದ್ದೇವೆ. ಆದ್ದರಿಂದ ಆತ್ಮ ಮನುಷ್ಯನ ಕರ್ಮವನ್ನನುಸರಿಸಿ ತಾನು ಸ್ವತಃವಾಗಿ ನಡೆದುಕೊಳ್ಳುತ್ತದೆ. ಆತ್ಮವನ್ನು ನಡೆಸುವಶಕ್ತಿ ಶರೀರದಲ್ಲಿ ಯಾವುದೂ ಇಲ್ಲ. ಆತ್ಮವೇ ಎಲ್ಲವನ್ನೂ ನಡೆಸುತ್ತದೆ. ಆತ್ಮ ಶರೀರದಲ್ಲಿ ಬಿಸಿ ಇಲ್ಲದಂತೆ ಮಾಡಬೇಕೆಂದುಕೊಂಡರೆ ಧಾತುಕಣದೊಳಗೆ ಬಂದಿರುವ ಗ್ಲೂಕೋಸ್‌ನ್ನು, ಆಕ್ಸಿಜನ್‌ನನ್ನು ಉರಿಯದಂತೆ ಮಾಡುತ್ತದೆ. ಆದ್ದರಿಂದ ಆಸ್ಪತ್ರೆಯಲ್ಲಿ ಮೂಗುಗಳಿಗೆ ಆಕ್ಸಿಜನ್‌ನನ್ನು ಒದಗಿಸಿದರೂ, ರಕ್ತದೊಳಗೆ ಗ್ಲೂಕೋಸ್‌ನನ್ನು ಏರಿಸಿದರು ಧಾತುಕಣಗಳವರೆಗು ಎರಡೂ ಹೋದರೂ, ಆತ್ಮ ಬೇಡವೆಂದುಕೊಂಡರೆ ಎರಡು ಉರಿಯುವುದಿಲ್ಲ. ಆಗ ಶರೀರದಲ್ಲಿ ಬಿಸಿಕಡಿಮೆಯಾಗಿ ತಣ್ಣಗಾಗಿಹೋಗಿ ಮನುಷ್ಯ ಮರಣಿಸುತ್ತಾನೆ. ಆತ್ಮ ಅಂದುಕೊಂಡರೆ ಆಕ್ಸಿಜನ್ ಕಡಿಮೆ ಬಂದರೂ, ಗ್ಲೂಕೋಸ್ ಕಡಿಮೆ ಬಂದರೂ ಧಾತುಕಣದಲ್ಲಿ ಉರಿಯನ್ನು ಸಕ್ರಮವಾಗಿ ಇರುವಂತೆ ಮಾಡಿ, ಅವನ ಆರೋಗ್ಯವನ್ನು ಕಾಪಾಡುತ್ತದೆ. ಆದ್ದರಿಂದ ಮನುಷ್ಯನನ್ನು ಸಾಯಿಸುವುದಕ್ಕಾಗಲಿ, ಬದುಕಿಸುವುದಕ್ಕಾಗಲಿ ಆತ್ಮ ಅಧಿಪತಿಯಾಗಿದೆ. ಇಲ್ಲಿ ಪ್ರಹ್ಲಾದ್‌ಜಾನೀ ಶರೀರದಲ್ಲಿ ಆಕ್ಸಿಜನ್ ಮಾತ್ರ ಧಾತುಕಣಕ್ಕೆ ಬಂದಿದೆ, ಗ್ಲೂಕೋಸ್ ಬರಲಿಲ್ಲ. ಆದರೂ ಶರೀರಕ್ಕೆ ಅಧಿಪತಿಯಾಗಿರುವ ಆತ್ಮ ಆಕ್ಸಿಜನ್‌ನನ್ನು ಮಾತ್ರ ಉರಿಯುವಂತೆ ಮಾಡಿದೆ. ಆತನ ಶರೀರವು ತಣ್ಣಗಾಗದಂತೆ ಬದುಕುವಂತೆ ಮಾಡಿದೆ. ಗ್ಲೂಕೋಸ್ ಉರಿಯುವ ಧಾತುಕಣಗಳಲ್ಲಿ ಬೂದಿಯಂತಹ ಕಾಲುಷ್ಯವು ಉಂಟಾಗುವು ದರಿಂದ ಅದು ಸರಿಯಾಗಿ ಹೊರಗೆ ಹೋಗದಿದ್ದರೆ ಮನುಷ್ಯನಿಗೆ ಅನಾರೋಗ್ಯ ಉಂಟಾಗಬಹುದು. ಆದರೆ ಪ್ರಹ್ಲಾದ್‌ಜಾನಿ ಶರೀರದಲ್ಲಿ ಗ್ಲೂಕೋಸ್ ಉರಿಯುತ್ತಿಲ್ಲ. ಗ್ಲೂಕೋಸ್ ಇಲ್ಲದಿದ್ದರೂ ಆತ್ಮ ಕೇವಲ ಪ್ರಾಣವಾಯುವನ್ನು

ಮಾತ್ರವೇ ಉರಿಸುವುದರಿಂದ ಆತನ ಶರೀರದಲ್ಲಿ ಕಾಲುಷ್ಯವು ಸ್ವಲ್ಪವೂ ಇರುವುದಿಲ್ಲ. ಆದ್ದರಿಂದ ಎಲ್ಲರಿಗಿಂತ ಆತನು ಆರೋಗ್ಯವಾಗಿದ್ದಾನೆ. ಇದನ್ನನುಸರಿಸಿ ಆತ್ಮ ಅನುಕೂಲಿಸಿದರೆ ಆಹಾರ ಇಲ್ಲದಿದ್ದರೂ ಬದುಕ ಬಹುದೆಂದು, ಅದು 83 ವರ್ಷಗಳ ಪ್ರಹ್ಲಾದ್ ಜಾನೀ ಹತ್ತಿರ ಆತ್ಮ ರುಜುವು ಮಾಡಿ ತೋರಿಸಿದೆ ಎಂದು ತಿಳಿಸುತ್ತಿದೆ. ಶರೀರದಲ್ಲಿ ಸರ್ವ ಅಧಿಕಾರಗಳಿರುವ ಆತ್ಮ ನಿನ್ನ ಶರೀರದಲ್ಲಿಯೂ ಸಹ ಇದೆ. ಶರೀರದಲ್ಲಿ ಆತ್ಮ ಪ್ರತ್ಯೇಕವಾಗಿ ಕೆಲಸಮಾಡಿ ಗ್ಲೂಕೋಜ್ ಇಲ್ಲದಿದ್ದರು ಆಕ್ಸಿಜನ್ ಒಂದರಿಂದಲೆ ಉರಿಸುತ್ತಿದೆ. ಆ ವಿಷಯವು ಪ್ರಹ್ಲಾದ್ ಜಾನಿಗೂ ಸಹ ತಿಳಿದಿಲ್ಲ. ಆತನು ಏನಾದರು ಸಾಧಿಸಿ ಆಹಾರ ತೆಗೆದುಕೊಳ್ಳಲಿಲ್ಲವೆಂದರೆ ಆತನು ಏನು ಸಾಧಿಸಲಿಲ್ಲ. ನಿಜಕ್ಕೆ ಆತನಿಗೆ ಏನು ತಿಳಿದಿಲ್ಲ. ಆತನು ಯೋಗಿಯಲ್ಲ, ಜ್ಞಾನಿಯಲ್ಲ, ಆತನ ಪ್ರತ್ಯೇಕತೆ ಏನು ಇಲ್ಲದಿದ್ದರು, ಆತನ ಶರೀರದಲ್ಲಿನ ಆತ್ಮದ ಪ್ರತ್ಯೇಕತೆಯೇ ಆತನನ್ನು ಹೆಸರುವಾಸಿ ಮಾಡಿದೆ.

ಯಾರ ಶರೀರದಲ್ಲಿಯಾದರು ಆತ್ಮೇ ಅಧಿಪತಿ. ಆತ್ಮ ಕುಂಟನನ್ನು ನಡೆಸಬಲ್ಲದು. ಮೂಗನನ್ನು ಮಾತನಾಡಿಸಬಲ್ಲದು. ಸತ್ತುಹೋಗಿದ್ದಾ ನೆಂದುಕೊಂಡ ವನನ್ನು ಬದುಕಿಸಬಲ್ಲದು. ಪ್ರಾಣದಿಂದಲೆ ಇದ್ದರೂ, ಎಲ್ಲರೂ ನೋಡುವುದಕ್ಕೆ ಸತ್ತುಹೋಗುವಂತೆ ಮಾಡಬಲ್ಲದು. ಎಲ್ಲರೂ ಸತ್ತುಹೋಗಿದ್ದಾನೆ ಎಂಬುವವನನ್ನು ಆಶ್ಚರ್ಯವಾಗಿ ಬದುಕಿ ಬರುವಂತೆ ಮಾಡುತ್ತದೆ. ಆತ್ಮ ಶರೀರದಲ್ಲಿ ಎಲ್ಲಾ ಅಧಿಕಾರಗಳಿಂದ ಏನಾದರು ಮಾಡಬಲ್ಲ ಸಾಮರ್ಥ್ಯ ಹೊಂದಿದೆ. ಅಂತಹ ಆತ್ಮವನ್ನು ಯಾರು ಗುರುತಿಸಲಿಲ್ಲ. ಕನಿಷ್ಟ ಶರೀರದಲ್ಲಿ ಆತ್ಮ ಎಂಬುವುದು ಒಂದಿದೆ ಎಂದು ಸಹ ಯಾರಿಗೂ ತಿಳಿಯದಂತೆಹೋಗಿದೆ. ಆತ್ಮವನ್ನು ಕುರಿತು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಭಗವಂತನೇ ಹೇಳಿದ್ದಾನೆ. ಪುರುಷೋತ್ತಮ ಪ್ರಾಪ್ತಿಯೋಗದಲ್ಲಿ **ಜೀವಾತ್ಮ, ಆತ್ಮ, ಪರಮಾತ್ಮ** ಎಂದು ಮೂರು ಆತ್ಮಗಳಿವೆಯೆಂದು, ಅವು **ಕ್ಷರನು, ಅಕ್ಷರನು, ಪುರುಷೋತ್ತಮನು** ಎನ್ನುವ ಮೂವರು ಪುರುಷರಾಗಿ ನಮ್ಮ ಶರೀರದಲ್ಲಿ ಇದ್ದಾರೆಂದು, ಅವುಗಳನ್ನೇ ನಾವು **ತ್ರೈತಸಿದ್ಧಾಂತ**ವಾಗಿ ಹೇಳುತ್ತಿದ್ದೇವೆಂದು ಹೇಳಿದ್ದೇವೆ. ಇಂದೂಗಳಿಗೆ

ಮುಖ್ಯ ಗ್ರಂಥವಾದ ಭಗವದ್ಗೀತೆಯನ್ನು ಆಧಾರ ಮಾಡಿಕೊಂಡು, ಗೀತೆಯಲ್ಲಿ ಹೇಳಿದ ಮೂರು ಆತ್ಮಗಳನ್ನು ತ್ರೈತಾಸಿದ್ಧಾಂತ ಎನ್ನುವ ಹೆಸರಿನಿಂದ ನಾವು ಹೇಳಿದರೆ, ಇಂದೂಮತದಲ್ಲಿನ ಮತ ಛಾಂದಸವಾದಿಗಳು ಸ್ವಲ್ಪವೂ ಆತ್ಮ ಜ್ಞಾನ ಇಲ್ಲದವರಾಗಿ, ನಮ್ಮನ್ನು ಕ್ರೈಸ್ತರೆಂದು, ನಾವು ಕ್ರೈಸ್ತರ ಬೋಧನೆಗಳನ್ನು ಹೇಳುತ್ತಿದ್ದೇವೆಂದು ಅಂದಿದ್ದಾರೆ. ಇದರಿಂದ ಒಂದು ಕಾಲದಲ್ಲಿ ದೈವಜ್ಞಾನದಲ್ಲಿ ಪ್ರಸಿದ್ಧಿಯಾದ ಇಂದೂಮತ ಈ ದಿನ ತಮ್ಮ ಮತಯಾವುದೋ, ಪರ ಮತಯಾವುದೋ ತಿಳಿಯದ ಸ್ಥಿತಿಯೊಳಗೆ ಬಂದಿದೆ ಎಂದು ಅರ್ಥವಾಗುತ್ತಿದೆ.


ಈ ದಿನ ಆತ್ಮ ಎಂದರೆ, ಏನೋ ಯಾರಿಗೂ ತಿಳಿಯದ ಸ್ಥಿತಿಯಲ್ಲಿ ಮನುಷ್ಯರಿದ್ದಾರೆ. ನಾಲ್ಕು ಮಹಿಮೆಗಳು ತೋರಿಸಿದರೆ ಬಾಬಾಗಳಾಗಿ, ಮೂರು ಹಾಡುಗಳು ಹಾಡಿ, ಎರಡು ಮಾತುಗಳು ಹೇಳಿದರೆ ಸ್ವಾಮೀಜಿಗಳಾಗಿ, ಒಂದು ಶ್ಲೋಕ ಹೇಳಿದರೆ ಪಂಡಿತನಾಗಿ ತಯಾರಾಗಿ ಹೋಗುತ್ತಿದ್ದಾರೆ. ಆದರೆ ಆತ್ಮ ವಿಷಯ ಸ್ವಾಮಿಗಳಿಗೂ, ಬಾಬಾಗಳಿಗೂ, ಪಂಡಿತರಿಗೂ ತಿಳಿಯದಂತೆ ಹೋಗಿದೆ. ಇಂತಹ ಅಜ್ಞಾನ ಪರಿಸ್ಥಿತಿಯನ್ನು ನೋಡಿದ ಆತ್ಮಕ್ಕೆ ಬೇಸರ ಬಂದಿದೆ. ಆತ್ಮಕ್ಕೆ ಬೇಸರ ಬಂದಿರುವುದಕ್ಕೇ ಮನುಷ್ಯರನ್ನು ಶಿಕ್ಷಿಸಿಯಾದರೂ ಜ್ಞಾನವನ್ನು ತಿಳಿಸಬೇಕೆಂದುಕೊಂಡಿದೆ. ಆದ್ದರಿಂದಲೆ ಬೆರ್ಮುಡಾ ಟ್ರಯಾಂಗಿಲ್‌ನಲ್ಲಿ ನಿವಾಸ ಏರ್ಪಡಿಸಿಕೊಂಡ ಆತ್ಮ, ಅಲ್ಲಿಗೆ ಹೋದ ಎಷ್ಟೋ ವಿಮಾನಗಳನ್ನು, ಎಷ್ಟೋ ನೌಕೆಗಳನ್ನು ಮಾಯ ಮಾಡಿದೆ. ತನ್ನ ಮೇಘಗಳಿಂದ ಇತರ ಗ್ರಹಗಳಿಗೆ ತೆರಳಿಸಿದೆ. ಅಲ್ಲಿಗೆ ಹೋದ ಮನುಷ್ಯರು ಈ ಲೋಕವನ್ನು ಮರೆತುಹೋಗಿ, ಆ ಲೋಕದಲ್ಲಿ ಬಿದ್ದುಹೋಗಿ, ಅಲ್ಲಿ ಜ್ಞಾನವನ್ನು ತಿಳಿದುಕೊಳ್ಳುವಂತೆ ಮಾಡಿದೆ. ಹಾಗೆ ಜ್ಞಾನವನ್ನು ತಿಳಿದುಕೊಂಡವರು ಮತ್ತೆ ಭೂಮಿಮೇಲೆ ಹುಟ್ಟಿ ಜ್ಞಾನದ ಮೇಲೆ ಆಸಕ್ತಿ ಹೊಂದಿ, ಜ್ಞಾನಿಗಳಾಗಿಯೇ ಜೀವಿಸುತ್ತಿದ್ದಾರೆ. ಹಾಗೆ ನಡೆಯುವು ದರಿಂದ ಭೂಮಿಮೇಲೆ ಪೂರ್ತಿ ಅಜ್ಞಾನ ಹೆಚ್ಚಾಗದಂತೆ ಸ್ವಲ್ಪಕ್ಕೆ ಸ್ವಲ್ಪವಾದರೂ ಜ್ಞಾನ ಇರುತ್ತದೆಂದು ಆತ್ಮ ಆ ವಿಧವಾಗಿ ಮಾಡಿದೆ. ಶ್ರದ್ಧೆಯಿಲ್ಲ ದವನಿಗೂ ಸಹ ಜ್ಞಾನವನ್ನು ತಿಳಿಸುವ ಪ್ರಯುಕ್ತ, ಬೆರ್ಮುಡಾ ಟ್ರಯಾಂಗಿಲ್‌ನಲ್ಲಿ ಎಷ್ಟೋ ಜನರನ್ನು ಮಾಯ ಮಾಡಿದ ಆತ್ಮ, ಆತ್ಮಶಕ್ತಿಯನ್ನು ಲೆಕ್ಕಿಸದ ಮನುಷ್ಯರನ್ನೂ

ಮತ್ತು ಆತ್ಮಶಕ್ತಿ ಇರುವ ಯೋಗಿಗಳನ್ನು, ಜ್ಞಾನಿಗಳನ್ನು ದೂಷಿಸಿದ ಮನುಷ್ಯರನ್ನೂ ಶಿಕ್ಷಿಸಬೇಕೆಂದುಕೊಂಡು, ಭೂಮಿಮೇಲೆ ತನ್ನ ಭೂತಗಳಿಂದ ಎಷ್ಟೋ ಪ್ರಕೃತಿ ವೈಪರೀತ್ಯಗಳನ್ನು ಉಂಟುಮಾಡುತ್ತಿದೆ. ಆದರೂ ಮನುಷ್ಯ ಮೊಂಡನಂತೆ ಅನುಭವಿಸುತ್ತಿದ್ದಾನೆ ಹೊರತು, ಪ್ರಕೃತಿ ವೈಪರೀತ್ಯಗಳ ಹಿಂದೆ ಯಾರ ಹಸ್ತವಿದೆ ಎಂದು ಆಲೋಚಿಸದೆ ಹೋಗುತ್ತಿದ್ದಾನೆ. ಎಷ್ಟೋ ವಿಧಗಳು ಮನುಷ್ಯನಿಗೆ ಕಣ್ತೆರೆಯುವಂತೆ ಮಾಡಿ ಮನುಷ್ಯನನ್ನು ಜ್ಞಾನಮಾರ್ಗ ದೊಳಗೆ ತರಬೇಕೆಂದುಕೊಂಡ ಆತ್ಮ, ಪ್ರಹ್ಲಾದ್ ಜಾನಿಯಂತವರನ್ನು ಹುಟ್ಟಿಸಿ, ವಿಚಿತ್ರವಾಗಿ ಕಾಣಿಸುವಂತೆ ಮಾಡಿ ಮೇಧಾವಿಗಳಾದವರಿಗೂ ಸಹ ಆತ್ಮ ಎಂದರೆ ಏನೋ ತಿಳಿಸಬೇಕೆಂದುಕೊಂಡಿದೆ. ಆದರೂ ಆತ್ಮ ಮಾಡುವ ಕೆಲಸಗಳಿಗೆ ವಿವರಣೆ ತಿಳಿಯದಂತೆ ಹೋದರೆ, ತಾನು ಆ ಕೆಲಸವನ್ನು ಮಾಡಿ ಪ್ರಯೋಜನೆ ಇಲ್ಲವೆಂದು ತಿಳಿದ ಆತ್ಮ, ನಮ್ಮಂತವರಿಂದ ಆತ್ಮಕ್ಕೂ, ಆತ್ಮ ಕೆಲಸಗಳಿಗೂ ವಿವರವನ್ನು ಹೇಳಿಸುತ್ತಿದೆ. ನಮ್ಮಿಂದ, ನಮ್ಮಲ್ಲಿನ ಆತ್ಮ ಎಷ್ಟೋ ವಿವರವಾಗಿ ಜ್ಞಾನವನ್ನು ಹೇಳಿಸಿದರೂ, ಕೇಳದವರನ್ನು ತಪ್ಪದೆ ತನ್ನ ಇಷ್ಟ ಬಂದ ಪದ್ಧತಿಯಲ್ಲಿ ಶಿಕ್ಷಿಸುತ್ತದೆ. ಹಾಗೆ ಆತ್ಮ ಶಿಕ್ಷೆಗೆ ಗುರಿಯಾಗಿ, ಎಷ್ಟೋ ದುಃಖಗಳನ್ನು ಅನುಭವಿಸುವುದಕ್ಕಿಂತ, ಆತ್ಮಜ್ಞಾನವನ್ನು ತಿಳಿದುಕೊಳ್ಳುವುದು ಒಳ್ಳೆಯದು. ಆದ್ದರಿಂದ ನಾನು ಹೇಳುವುದು ಏನೆಂದರೆ! **ನೀನು ಎಂತಹ ಪದವಿಯಲ್ಲಿ ಇದ್ದರೂ, ಅಧಿಕಾರದಲ್ಲಿ ಇದ್ದರೂ, ಧನಿಕನಾದರೂ, ಪಂಡಿತನಾದರೂ, ಪಾಮರನಾದರೂ ನೀನು ಮಾತ್ರ ಆತ್ಮ ಕೈಯಲ್ಲಿ ಕೀಲುಬೊಂಬೆಯೇ**. ಆದ್ದರಿಂದ ಈಗಿನಿಂದಾದರೂ ಆತ್ಮಜ್ಞಾನವನ್ನು ತಿಳಿದು ಕೊಳ್ಳುವುದಕ್ಕೆ ಪ್ರಾರಂಭಿಸೆಂದು ತಿಳಿಸುತ್ತಿದ್ದೇವೆ.

**ಅಸತ್ಯವನ್ನು ಸಾವಿರ ಜನ ಹೇಳಿದರೂ ಅದು ಸತ್ಯ ಆಗುವುದಿಲ್ಲ**
**ಸತ್ಯವನ್ನು ಸಾವಿರಜನ ಅಲ್ಲವೆಂದರೂ ಅದು ಅಸತ್ಯವಾಗುವುದಿಲ್ಲ.**

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರವು ಎಷ್ಟು ಅಗತ್ಯವೋ, ಹಾಗೇ ಒಂದು ವಿಷಯವನ್ನು ಖಂಡಿಸುವುದಕ್ಕೂ ಶಾಸ್ತ್ರ ಅಷ್ಟೇ ಅಗತ್ಯವಾಗುತ್ತದೆ.**

# ತ್ರೈತಾಕಾರ ರಹಸ್ಯ




Author :

The Only Guru of Three Religions

The Spiritual Emperor, Thraitha Theorem Originator

Sri Acharya Prabodhananda Yogeeshwarulu


www.thraithashakam.org